₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಶುಕ್ರವಾರ 02.08.2024 ಸಂಪುಟ: 09 ಸಂಚಿಕೆ: 221 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ಹೊಸ ವಿನ್ಯಾಸದಲ್ಲಿ

epaper.ವಿಶ್ವವಾಣಿ.news

ವಿಶ್ವಾಸವೇ ವಿಶ್ವ

'ಆ ಪೇಪರ್ ಇಲ್ಲದಿದ್ದರೆ ಇ ಪೇಪರ್' ಎಂಬ ಘೋಷವಾಕ್ಯದೊಂದಿಗೆ ನಿತ್ಯ ಲಕ್ಷಾಂತರ ಓದುಗರ ಮನೆ-ಮನ ತಲುಪುತ್ತಿರುವ ವಿಶ್ವವಾಣಿಯು ಕನ್ನಡ ಪತ್ರಿಕಾರಂಗದಲ್ಲಿಯೇ ಅತ್ಯಂತ ಜನಪ್ರಿಯ ಇ-ಪೇಪರ್. ದೇಶ-ವಿದೇಶದಲ್ಲಿ ಓದುಗರಿಗೆ ವಿನೂತನ ವಿನ್ಯಾಸ, ಓದಲು ಸುಲಭವಾಗುವ ಟೆಂಪ್ಲೆಟ್‌ನೊಂದಿಗೆ ವಿಶ್ವವಾಣಿಯ ನವೀಕೃತ ಇ ಪೇಪರ್ ನಿಮ್ಮ ಮುಂದೆ...

ಮುದ ನೀಡುವ ಅಕ್ಷರ
ಓದುಗರಿಗೆ ತ್ರಾಸದಾಯಕ ಫಾಂಟ್‌ಗಳಿಲ್ಲ; ಕಣ್ಣಿಗೆ ಮುದ ನೀಡುವ ಅಕ್ಷರಗಳಲ್ಲಿ ಸ್ಥಳೀಯದಿಂದ ಅಂತಾರಾಷ್ಟ್ರೀಯ ಸುದ್ದಿಗಳ ಬಿತ್ತರ

ಬಳಸಲು ಸುಲಭ
ಸ್ನೇಹಿತರೊಂದಿಗೆ ಇಷ್ಟದ ಸುದ್ದಿ, ಅಂಕಣಗಳನ್ನು ಕ್ರಾಪ್ ಮಾಡುವುದು ಸುಲಭ; ಕ್ರಾಪ್ ಮಾಡಿದ ಸುದ್ದಿಗಳನ್ನು ಹಂಚಿಕೊಳ್ಳುವುದು ಇನ್ನೂ ಸುಲಭ.

ಮೊಬೈಲ್ ಸ್ನೇಹಿ ಇ ಪೇಪರ್
ಸುದ್ದಿ ಓದುವಾಗ ಜಾಹೀರಾತಿನ ಕಿರಿಕಿರಿಯಿಲ್ಲ; ಇ-ಪೇಪರ್ ಓದುವುದಕ್ಕೆ ಕಂಪ್ಯೂಟರ್ ಮುಂದೆ ಕೂರಲೇಬೇಕೆಂಬ ನಿರ್ಬಂಧವಿಲ್ಲ; ಮೊಬೈಲ್ ಸ್ನೇಹಿ ಇ ಪೇಪರ್.

ಕಡಿಮೆ ಡೇಟಾದಲ್ಲಿ ದಿನದ ಸುದ್ದಿ
ವೇಗದ ನೆಟ್‌ವರ್ಕ್ ಇಲ್ಲದಿದ್ದರೂ ಕ್ಷಣ ಮಾತ್ರದಲ್ಲಿ ಇಡೀ ಪೇಪರ್ ನಿಮ್ಮ ಪರದೆಯ ಮೇಲೆ; ಕಡಿಮೆ ಡೇಟಾದಲ್ಲಿ ಓದುಗರಿಗೆ ಇಡೀ ದಿನದ ಸುದ್ದಿಯ ಅನಾವರಣ.

ರಾಜಭವನ ಬಳಸಿಕೊಂಡು ಸಿಎಂ ಮೇಲೆ ಕೇಂದ್ರದ ಒತ್ತಡ | ರಾಜ್ಯಪಾಲರ ನೋಟಿಸ್ ಹಿಂಪಡೆಯಲು ಸಚಿವ ಸಂಪುಟ ಒತ್ತಾಯ

ಸಿಎಂಗೆ ಸಚಿವ ಸಂಪುಟ ಸಾಥ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ನೋಟಿಸ್ ಜಾರಿಗೊಳಿಸಿದ್ದ ರಾಜ್ಯಪಾಲರ ನಡೆಯನ್ನು ತೀವ್ರವಾಗಿ ಖಂಡಿಸಿರುವ ಇಡೀ ಸಚಿವ ಸಂಪುಟವು ಸಿಎಂ ಬೆನ್ನಿಗೆ ನಿಂತಿದೆ.

ಟಿ.ಜೆ. ಅಬ್ರಹಾಂ ಅವರ ಖಾಸಗಿ ದೂರಿನ ಮೇರೆಗೆ ರಾಜ್ಯಪಾಲರು ವಿವರಣೆ ನೀಡುವಂತೆ ನೋಟಿಸ್ ಜಾರಿಗೊಳಿಸಿದ್ದರು. ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯ ವಿರುದ್ಧ ಅಭಿಯೋಜನೆ ಮಾಡುವ ಸಾಧ್ಯತೆಯೂ ಇದೇ ಎನ್ನುವ ಮಾತು ಕೇಳಿಬಂದಿತ್ತು. ಇದರ ಬೆನ್ನಲ್ಲೇ ಗುರುವಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನೋಟಿಸ್ ಹಿಂಪಡೆಯಲು ರಾಜ್ಯಪಾಲರಿಗೆ ಒತ್ತಡ ಹೇರಲು ತೀರ್ಮಾನಿಸಿದೆ.

ಸುದೀರ್ಘ ನಡೆದ ಸಚಿವ ಸಂಪುಟ ಸಭೆಯಲ್ಲಿ 'ನೋಟಿಸ್ ಹಿಂಪಡೆಯುವುದೊಂದೇ' ಅಜೆಂಡಾ ವಾಗಿತ್ತು. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆಯಿಂದ ದೂರ ಉಳಿದರು. ಆದ್ದರಿಂದ ಡಿಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಸಭೆ ನಡೆಯಿತು. ನಾಲ್ಕು ತಾಸಿಗೂ ಹೆಚ್ಚು ಕಾಲ ನಡೆದ ಸಭೆಯಲ್ಲಿ ಎಲ್ಲ ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೆಂಬಲ ಸೂಚಿಸಿದ್ದು, ರಾಜಕೀಯ ಕಾರಣಕ್ಕೆ ಕೈಗೊಂಡಿರುವ ಈ ನೋಟಿಸ್ ರದ್ದುಗೊಳಿಸಬೇಕು ಎಂದು ಆಗ್ರಹಿ ಸಲು ತೀರ್ಮಾನಿಸಲಾಗಿದೆ. ಸಭೆ ಬಳಿಕ ಜಂಟಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂವಿಧಾನ ಹಾಗೂ ಪ್ರಜಾಪ್ರಭುತ್ವಕ್ಕೆ ಮಾರಕವಾಗುವ ಪರಿಸ್ಥಿತಿ ಕೇಂದ್ರ ಸರಕಾರದಿಂದ ನಡೆಯುತ್ತಿದೆ. 136 ಸ್ಥಾನ ಗೆದ್ದು ಸರಕಾರ ರಚನೆ ಮಾಡಲಾಗಿದೆ. ಕಾನೂನು ಹಾಗೂ ಸಂವಿಧಾನಕ್ಕೆ ನಾವು ಗೌರವ ಕೊಡುತ್ತೇವೆ. ಆದರೆ ಕೇಂದ್ರ ಸರಕಾರವು ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಟಿ.ಜೆ.ಅಬ್ರಹಾಂ ಎಂಬ ವ್ಯಕ್ತಿಯ ಮೂಲಕ ದೂರು ಕೊಡಿಸಲಾಗಿದೆ. ಜುಲೈ 26ರಂದು ಸಿದ್ದರಾಮಯ್ಯ ವಿರುದ್ಧ ಅಬ್ರಹಾಂ ದೂರು ನೀಡುತ್ತಾರೆ. ಇದೇ ವೇಳೆ ಜುಲೈ 5ರಂದು ಮೂಡಾದಲ್ಲಿ ಹಗರಣ ಆಗಿದೆ ಎಂದು ರಾಜ್ಯಪಾಲರಿಂದ ನೋಟಿಸ್ ಕೊಡಲಾಗಿದೆ ಎಂದು ಹೇಳಿದರು.

ಜುಲೈ 15ರಂದು ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಗೆ ಮುಡಾದಲ್ಲಿ ಅಕ್ರಮವಾಗಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಪತ್ರ ಬರೆದಿದ್ದಾರೆ. ಈ ಹಿನ್ನೆಲೆಯಲ್ಲಿ ನ್ಯಾಯಾಂಗ ತನಿಖೆಗೆ ಸಿಎಂ ಸಿದ್ದರಾಮಯ್ಯ ಆದೇಶ ನೀಡಿದ್ದರು. ಆದರೆ, ಟಿ. ಜೆ.ಅಬ್ರಹಾಂ ದೂರು ಕೊಟ್ಟ ದಿನದಂದೇ ರಾಜ್ಯಪಾಲರು ಸಿದ್ದರಾಮಯ್ಯ ಅವರಿಗೆ ನೋಟಿಸ್ ನೀಡಿದ್ದಾರೆ. ನೋಟಿಸ್ ನೀಡಿ ಗುರುವಾರಕ್ಕೆ ಏಳು ದಿನಗಳು ಆಗಿವೆ. ಈ ಹಿನ್ನೆಲೆಯಲ್ಲಿ ಸಂಪುಟದಲ್ಲಿ ಕಾನೂನು ಸಾಧ್ಯತೆಗಳ ಬಗ್ಗೆ ಸುದೀರ್ಘ ಚರ್ಚೆ ಮಾಡಲಾಗಿದೆ. ನೋಟಿಸ್ ಹಿಂಪಡೆಯುವಂತೆ ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಗಿದೆ ಎಂದರು.

→ 4

ಸಿಎಂ ಅನುಪಸ್ಥಿತಿಯಲ್ಲಿ ಸಂಪುಟ ಸಭೆ

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, ಸಿದ್ದರಾಮಯ್ಯ ವಿರುದ್ಧ ನೋಟಿಸ್‌ಗೆ ಯಾವ ರೀತಿ ಪ್ರತಿಕ್ರಿಯಿಸಬೇಕು ಎನ್ನುವುದಷ್ಟೇ ಅಜೆಂಡಾ ವಾಗಿತ್ತು. ಆದ್ದರಿಂದ ತಮ್ಮ ಹೆಸರಿನ ಪ್ರಕರಣದ ಚರ್ಚೆಯ ನೇತೃತ್ವವನ್ನು ತಾವೇ ವಹಿಸುವುದು ಸರಿಯಲ್ಲ ಎನ್ನುವ ನೈತಿಕ ಕಾರಣಕ್ಕೆ ಸಭೆಯಿಂದ ಹೊರಗುಳಿದಿದ್ದರು. ಮುಖ್ಯಮಂತ್ರಿಗಳ ಅನುಪಸ್ಥಿತಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಸಭೆ ನಡೆದಿದೆ.

ಉಪಾಹಾರ ಸಭೆಯಲ್ಲಿಯೂ ಸಿಎಂಗೆ ಸಚಿವರ ಬೆಂಬಲ

ಸಚಿವ ಸಂಪುಟ ಸಭೆಗೂ ಮೊದಲು ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ನಡೆದ ಸಭೆಯಲ್ಲಿ ಕಾನೂನು ಹಾಗೂ ರಾಜಕೀಯ ಹೋರಾಟಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಿದರು. ಈ ವೇಳೆ ಎಲ್ಲ ಸಚಿವರು ಮುಖ್ಯಮಂತ್ರಿಗಳ ಬೆಂಬಲಕ್ಕೆ ನಿಲ್ಲುವುದಾಗಿ ಭರವಸೆ ನೀಡಿದ್ದಾರೆ. ಇದರೊಂದಿಗೆ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರನ್ನು ಕರೆಸಿಕೊಂಡು ಪ್ರಕರಣದ ಸಾಧಕ-ಬಾಧಕ, ರಾಜ್ಯಪಾಲರ ನೋಟಿಸ್‌ಗೆ ಉತ್ತರ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಡಿಸಿಎಂ ಹೇಳಿದ್ದೇನು?

- ಮುಖ್ಯಕಾರ್ಯದರ್ಶಿ ವಿವರಣೆ ನೀಡುವ ಮೊದಲೇ ನೋಟಿಸ್ ಕೊಟ್ಟಿದ್ದೇಕೆ?
- ಕಾಂಗ್ರೆಸ್ ವರಿಷ್ಠರಿಗೆ ಪ್ರಕರಣದ ಪೂರ್ಣ ಮಾಹಿತಿಯನ್ನು ನೀಡಿದ್ದೇವೆ
- ಮುಖ್ಯಮಂತ್ರಿಗಳ ಪತ್ನಿ ಎಂಬ ಕಾರಣಕ್ಕೆ ಜಾಗ ಬಿಟ್ಟುಕೊಡಬೇಕಾ?
- ನಾಲ್ಕು ದಶಕದಲ್ಲಿ ಎಂದಿಗೂ ಸಿಎಂ ಪತ್ನಿ ಪಾರ್ವತಿ ಅವರು ಅಧಿಕಾರ ದುರುಪಯೋಗಪಡಿಸಿಕೊಂಡಿಲ್ಲ
- ತನ್ನ ತವರಿನಿಂದ ಬಂದ ಆಸ್ತಿಯನ್ನು ಉಳಿಸಿಕೊಳ್ಳುವ ಹಕ್ಕು ಅವರಿಗಿದೆ

ಪೊನ್ನಣ್ಣ ಹೇಳಿದ್ದೇನು?

- ಶೋಕಾಸ್ ನೀಡಲು ರಾಜ್ಯಪಾಲರಿಗೆ ಅವಕಾಶವಿಲ್ಲ
- ದೂರು ನೀಡಿರುವ ಅಬ್ರಾಹಂ ರಾಜ್ಯಪಾಲರಿಗೆ ಕೇಳಲು ಬರುವುದಿಲ್ಲ
- ತನಿಖಾಧಿಕಾರಿ ವಿಚಾರಣೆಗೆ ಅನುಮತಿ ನೀಡುವಂತೆ ಕೇಳಬೇಕು
- ಅಭಿಯೋಜನೆಗೆ ಅನುಮತಿ ನೀಡುವಂತೆ ಕೇಳಿರುವುದೇ ಕಾನೂನು ಬಾಹಿರ

ದೆಹಲಿಗೆ ಗೆಹ್ಲೋಟ್

ಇತ್ತ ಬೆಂಗಳೂರಿನಲ್ಲಿ ರಾಜ್ಯಪಾಲರು ನೀಡಿರುವ ನೋಟಿಸ್ ತಿರಸ್ಕರಿಸಿ ಸಚಿವ ಸಂಪುಟ ಸಭೆ ನಿರ್ಣಯ ಕೈಗೊಂಡಿದ್ದರೆ, ಅತ್ತ ಥಾವರ್ ಚಂದ್ ಗೆಹ್ಲೋಟ್ ಅವರು ದೆಹಲಿಗೆ ತೆರಳಿರುವುದು ತೀವ್ರ ಕುತೂಹಲ ಮೂಡಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅಥವಾ ಬಿಜೆಪಿಯ ಪ್ರಮುಖ ನಾಯಕರನ್ನು ಭೇಟಿಯಾಗುವರೇ ಎನ್ನುವ ಕುತೂಹಲ ಅನೇಕರಲ್ಲಿದೆ.

ರಾಜ್ಯಪಾಲರಿಗೆ ಯಾವುದೇ ವ್ಯಕ್ತಿ ದೂರು ನೀಡುವ ಮುನ್ನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಬೇಕು. ನಂತರ ರಾಜ್ಯಪಾಲರ ಗಮನಕ್ಕೆ ಬರುತ್ತದೆ. ಆಗ ರಾಜ್ಯಪಾಲರು ಸಂಬಂಧಪಟ್ಟ ಸಚಿವರು ಅಥವಾ ಅಧಿಕಾರಿಗಳಿಂದ ವರದಿ ಪಡೆಯ ಬೇಕು. ಯಾವುದೇ ಉತ್ತರ ಪಡೆಯದೇ ಪ್ರಾಸಿಕ್ಯೂಷನ್ ಜಾರಿ ಮಾಡುವ ಅಧಿಕಾರ ಇಲ್ಲ.

– ಅಶೋಕ ಹಾರನಹಳ್ಳಿ ಹಿರಿಯ ವಕೀಲರು

ಪುಟ ತೆರೆದಂತೆ...

ಒಲಿಂಪಿಕ್ಸ್ - ನಮ್ಮದೇಕೆ ಕಂಚಿನ ತಗಡಿನ ತುತ್ತೂರಿ?
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಗುಡ್ಡ ಕುಸಿತದ ದುರಂತದಿಂದ ಕಲಿಯಬೇಕಿದೆ ಪಾಠ!
ಶತಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ಮಾತಂದ್ರೆ ಮಾತು

ಕಾಂಗ್ರೆಸ್ ಸಂಸದ ಮತ್ತು ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮದ್ಯ ಅಥವಾ ಮಾದಕವಸ್ತು ಸೇವಿಸಿ ಸಂಸತ್ತಿಗೆ ಬರುತ್ತಾರೆ. ಅವರನ್ನು ತಪಾಸಣೆಗೆ ಒಳಪಡಿಸಬೇಕು. ನಾನು ನೂತನ ಸದಸ್ಯೆಯೇ ಇರಬಹುದು. ಆದರೆ, ಅವರು ಸಂಸತ್ತಿಗೆ ಬರುವ ಸ್ಥಿತಿ ಮತ್ತು ನೀಡುವ ಹೇಳಿಕೆಗಳನ್ನು ನೋಡಿ ಸಂಪೂರ್ಣವಾಗಿ ಆಘಾತಗೊಂಡಿದ್ದೇನೆ.

ಕಂಗನಾ ರಾಣಾವತ್
ಸಂಸದೆ, ನಟಿ

ದಾರಿದೀಪೋಕ್ತಿ

ಕಬ್ಬಿಣವನ್ನು ಬೇರೇನೂ ಅಲ್ಲ, ಅದರ ತುಕ್ಕು ನಾಶ ಮಾಡಬಲ್ಲುದು. ನಮ್ಮ ಕೆಟ್ಟ ಮತ್ತು ನಕಾರಾತ್ಮಕ ಆಲೋಚನೆ, ವಿಚಾರಗಳು ನಮ್ಮನ್ನು ನಾಶಪಡಿಸಬಲ್ಲವು. ಕೆಲವು ಸಂದರ್ಭಗಳಲ್ಲಿ ನಮ್ಮನ್ನು ಬೇರಾರೂ ಅಲ್ಲ, ನಾವೇ ಸೋಲಿಸುತ್ತೇವೆ.

ವಕ್ರತುಂಡೋಕ್ತಿ

ಒಂದು ನಿಮಿಷಕ್ಕೆ ಎಷ್ಟು ಸೆಕೆಂಡ್ ಎಂಬುದು ನೀವು ಟಾಯ್ಲೆಟ್ಟಿನ ಯಾವ ಕಡೆಗೆ ಇದ್ದೀರಿ ಎಂಬುದನ್ನು ಅವಲಂಬಿಸಿರುತ್ತದೆ.

ದರ್ಶನ್ ನ್ಯಾಯಾಂಗ ಬಂಧನ ವಿಸ್ತರಣೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿ ಎಲ್ಲ ಆರೋಪಿಗಳ ನ್ಯಾಯಾಂಗ ಬಂಧನವನ್ನು ಆಗಸ್ಟ್ 14ರ ವರೆಗೆ ವಿಸ್ತರಿಸಿ ನ್ಯಾಯಾಲಯ ಆದೇಶ ನೀಡಿದೆ. ಎಲ್ಲ ಆರೋಪಿಗಳ ನ್ಯಾಯಾಂಗ ಬಂಧನದ ಅವಧಿ ಅಂತ್ಯವಾದ ಹಿನ್ನೆಲೆಯಲ್ಲಿ ಪವಿತ್ರಾ, ಗೌಡ, ದರ್ಶನ್ ಸೇರಿದಂತೆ ಪರಪ್ಪನ ಆಗ್ರಹಾರದಿಂದ 13 ಹಾಗೂ ತುಮಕೂರು ಜೈಲಿನಿಂದ ನಾಲ್ವರನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ 24ನೇ ಎಸಿಎಂಎಂ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು.

ಫನ್‌ತರಂಗ

– ರಘುಪತಿ ಶೃಂಗೇರಿ –

ಎಲ್ಲಾ ಸಚಿವರ ಜೊತೆ ಸಿಎಂ ಮನೆಯಲ್ಲಿ ಉಪಾಹಾರ ಕೂಟ
ಸುದ್ದಿ



ಕೆಲವು ಕುಟುಂಬಗಳೇ ಸಮಾಧಿ | ಕುಳಿತ ಸ್ಥಿತಿಯಲ್ಲೇ ಶವಗಳು ಪತ್ತೆ | ಸಾಮೂಹಿಕ ಅಂತ್ಯಸಂಸ್ಕಾರಕ್ಕೆ ಸಿದ್ಧತೆ

ವಯನಾಡು: ಸಾವಿನ ಸಂಖ್ಯೆ 295ಕ್ಕೆ ಏರಿಕೆ

ತಿರುವನಂತಪುರ: ವಯನಾಡು ಜಿಲ್ಲೆಯಲ್ಲಿ ಸಂಭವಿಸಿರುವ ಸರಣಿ ಭೂಕುಸಿತ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 295ಕ್ಕೆ ಏರಿದೆ. ಇನ್ನೂ 150 ಮಂದಿ ನಾಪತ್ತೆಯಾಗಿದ್ದು, ಹವಾಮಾನ ಪರಿಸ್ಥಿತಿ, ಕೆಸರು, ರಸ್ತೆ ಸಂಪರ್ಕ ಸಂಪೂರ್ಣ ಕಡಿತಗೊಂಡಿರುವುದು ರಕ್ಷಣಾ ಕಾರ್ಯಾಚರಣೆಗೆ ಸವಾಲಾಗಿವೆ.

ಬುಧವಾರ ರಾತ್ರಿ ವೇಳೆಗೆ 171 ಶವಗಳನ್ನು ಅವಶೇಷಗಳಡಿಯಿಂದ ಹೊರಗೆಳೆಯಲಾಗಿದೆ. ಅದರಲ್ಲಿ 97 ಶವಗಳ ಗುರುತು ಪತ್ತೆ ಹಚ್ಚಲಾಗಿದ್ದು, 51 ಪುರುಷರು ಮತ್ತು 46 ಮಹಿಳೆಯರು ಸೇರಿದ್ದಾರೆ. ನಾಪತ್ತೆಯಾಗಿರುವವರಲ್ಲಿ 58 ಮಹಿಳೆಯರಿದ್ದಾರೆ. ಸಾವಿನ ಸಂಖ್ಯೆ 288ಕ್ಕೇರಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಸಾಮೂಹಿಕ ಅಂತ್ಯ ಸಂಸ್ಕಾರಕ್ಕೆ ವಯನಾಡಿನಲ್ಲಿ ವ್ಯವಸ್ಥೆ ಮಾಡಲಾಗುತ್ತಿದೆ. ಭೂಕುಸಿತದ ಪ್ರದೇಶದಲ್ಲಿ ಸಿಲುಕಿದ್ದ 599 ಮಹಿಳೆಯರು, 299 ಮಕ್ಕಳು ಸೇರಿದಂತೆ ಒಟ್ಟು 1,386 ಮಂದಿಯನ್ನು ಸುರಕ್ಷಿತ ಪರಿಹಾರ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.

ಮತ್ತೊಂದು ಭೂಕುಸಿತದ ಆತಂಕ: ಮುಂಡಕ್ಕೈಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆ ಕುಸಿದಿದೆ. ಹೀಗಾಗಿ, ಭೂಕುಸಿತದ ಕೇಂದ್ರ ಪ್ರದೇಶದಲ್ಲಿ ಯಾಂತ್ರೀಕೃತ ರಕ್ಷಣಾ ಕಾರ್ಯಾಚರಣೆ ನಡೆಸಲಾಗಿದೆ. ರಕ್ಷಣಾ ಸಿಬ್ಬಂದಿ ನಿರ್ಮಿಸಿರುವ ತಾತ್ಕಾಲಿಕ ಮಾರ್ಗವೂ ಮುಳುಗಡೆಯಾಗಿದ್ದು, ಮತ್ತೊಂದು ಭೂಕುಸಿತದ ಆತಂಕ ಸೃಷ್ಟಿಸಿದೆ. ಬೈಲಿ ಬ್ರಿಡ್ಜ್ (ತಾತ್ಕಾಲಿಕ ಸೇತುವೆ) ನಿರ್ಮಿಸುವ ಕಾರ್ಯ ಭರದಿಂದ ಸಾಗಿದ್ದು, ನಂತರವಷ್ಟೇ ಪೂರ್ಣಪ್ರಮಾಣದ ಕಾರ್ಯಾಚರಣೆ ಸಾಧ್ಯವಾಗಲಿದೆ.

- ಪತ್ತೆಯಾಗಿರುವ ಮೃತದೇಹಗಳನ್ನು ಸಾಮೂಹಿಕ ಅಂತ್ಯಸಂಸ್ಕಾರ ಮಾಡಲು ವಯನಾಡಿನಲ್ಲಿ ವ್ಯವಸ್ಥೆ
- ಭೂಕುಸಿತದ ಪ್ರದೇಶದಲ್ಲಿ ಸಿಲುಕಿದ್ದ 1,386 ಮಂದಿಯನ್ನು ಸುರಕ್ಷಿತ ಶಿಬಿರಗಳಿಗೆ ಸ್ಥಳಾಂತರ
- ಹವಾಮಾನ ಪರಿಸ್ಥಿತಿ, ರಸ್ತೆ ಸಂಪರ್ಕ ಸಂಪೂರ್ಣ ಕಡಿತಗೊಂಡಿರುವುದರಿಂದ ರಕ್ಷಣಾ ಕಾರ್ಯಾಚರಣೆಗೆ ಅಡ್ಡಿ
- ವಯನಾಡು ಜಿಲ್ಲೆಯಲ್ಲೇ ಸರ್ವಪಕ್ಷಗಳ ಸಭೆ ನಡೆಸಿದ ಕೇರಳ ಸಿಎಂ ಪಿಣರಾಯಿ ವಿಜಯನ್
- ವಯನಾಡಿಗೆ ಭೇಟಿ ನೀಡಿದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ

ರಾಜ್ಯಗಳಿಗೆ ಉಪವರ್ಗ ರಚನೆ ಅಧಿಕಾರ: ಸುಪ್ರೀಂ

ದೆಹಲಿ: ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಗಳ ಮೀಸಲು ವಿಚಾರದಲ್ಲಿ ಉಪವರ್ಗ ರಚಿಸಿ ಒಳಮೀಸಲು ಹಂಚುವ ಅಧಿಕಾರ ರಾಜ್ಯ ಸರಕಾರಗಳಿಗೆ ಇದೆ ಎಂದು ಸುಪ್ರೀಂಕೋರ್ಟ್‌ನ 7 ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ ಗುರುವಾರ ಮಹತ್ವದ ತೀರ್ಪು ನೀಡಿದೆ. ಆ ಮೂಲಕ ಎಸ್‌ಸಿ-ಎಸ್‌ಟಿ ಸಮುದಾಯದೊಳಗೇ ಅತ್ಯಂತ ಹಿಂದುಳಿದ ಸಮುದಾಯಗಳಿಗೆ ಒಳಮೀಸಲು ಕಲ್ಪಿಸುವ ಅವಕಾಶ ನೀಡಲಾಗಿದೆ. ಉಪ ವರ್ಗ ರಚಿಸುವ ರಾಜ್ಯಗಳ ನಿರ್ಧಾರವನ್ನು ಪ್ರಮಾಣೀಕರಿಸಬಹುದಾದ ಹಾಗೂ ದಾಖಲೆಯಲ್ಲಿರುವ ದತ್ತಾಂಶಗಳಿಂದ ಸಮರ್ಥಿಸಬೇಕು. ರಾಜ್ಯಗಳು ತಮಗೆ ಬೇಕಾದ ಹಾಗೆಲ್ಲ ನಿರ್ಧಾರ ಕೈಗೊಳ್ಳುವಂತಿಲ್ಲ ಎಂದು ಪೀಠ ಸ್ಪಷ್ಟವಾಗಿ ಹೇಳಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ದೇಶಕ್ಕೆ 3ನೇ ಪದಕ

ಶೂಟಿಂಗ್‌ನಲ್ಲಿ ಸ್ವಪ್ನಿಲ್‌ಗೆ ಕಂಚು

ಪ್ಯಾರಿಸ್: ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ ಶೂಟಿಂಗ್ ವೈಯಕ್ತಿಕ 50 ಮೀಟರ್ ವಿಭಾಗದ ರೈಫಲ್ 3 ಪೊಸಿಷನ್‌ನಲ್ಲಿ ಭಾರತದ ಸ್ವಪ್ನಿಲ್ ಕುಸಾಲೆ ಕಂಚಿನ ಪದಕ ಗೆದ್ದಿದ್ದಾರೆ. ಈ ಮೂಲಕ ಭಾರತ ಈ ವರ್ಷ ಗೆದ್ದಿರುವ ಪದಕಗಳ ಸಂಖ್ಯೆ ಮೂರಕ್ಕೆ ಏರಿದೆ.

50 ಮೀಟರ್ ರೈಫಲ್ 3 ಪೊಸಿಷನ್‌ನಲ್ಲಿ ಪದಕ ಗೆದ್ದ ಮೊದಲ ಭಾರತೀಯ ಎನ್ನುವ ಹೆಗ್ಗಳಿಕೆ ಸ್ವಪ್ನಿಲ್ ಪಾಲಾಗಿದೆ. ಶತೋಹು ಶೂಟಿಂಗ್ ರೇಂಜ್‌ನಲ್ಲಿ ಬುಧವಾರ ನಡೆದ ಅರ್ಹತಾ ಸುತ್ತಿನ ಸ್ಪರ್ಧೆಯಲ್ಲಿ ಸ್ವಪ್ನಿಲ್ ಅವರು ಏಳನೇ ಸ್ಥಾನ ಗಳಿಸಿ ಫೈನಲ್ ಪ್ರವೇಶಿಸಿದ್ದರು. 8 ಮಂದಿ ಒಳಗೊಂಡಿದ್ದ ಫೈನಲ್ ಸುತ್ತಿನಲ್ಲಿ ಒಟ್ಟು 451.4 ಅಂಕಗಳನ್ನು ಕಲೆಹಾಕುವ ಮೂಲಕ ಕುಸಾಲೆ ಮೂರನೇ ಸ್ಥಾನ ಪಡೆದರು.

- ಈವರೆಗೂ ದೇಶಕ್ಕೆ ಲಭಿಸಿದ ಮೂರೂ ಪದಕಗಳು ಶೂಟಿಂಗ್ ವಿಭಾಗದಲ್ಲೇ ಎನ್ನುವುದು ವಿಶೇಷ
- ಭಾರತದ ಒಲಿಂಪಿಕ್ಸ್ ಇತಿಹಾಸದಲ್ಲಿ ಶೂಟಿಂಗ್‌ನಲ್ಲಿ 3 ಪದಕ ಗೆದ್ದಿರುವುದು ಇದೇ ಮೊದಲು

ಡೀಫ್ ಹತ್ಯೆ: ಇಸ್ರೇಲ್

ಜೆರುಸಲೇಂ: ಹಮಾಸ್ ಸೇನಾ ಮುಖ್ಯಸ್ಥ ಮೊಹಮ್ಮದ್ ಡೀಫ್‌ನನ್ನು ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ರಕ್ಷಣಾ ಪಡೆ ತಿಳಿಸಿದೆ. ಜುಲೈ 13ರಂದು ಮೊಹಮ್ಮದ್ ಡೀಫ್‌ನನ್ನು ಗುರಿಯಾಗಿಸಿ ಇಸ್ರೇಲಿ ಸೇನೆ ವೈಮಾನಿಕ ದಾಳಿ ನಡೆಸಿತ್ತು. ಈ ವೇಳೆ ಡೀಫ್ ಮೃತಪಟ್ಟಿದ್ದಾರಾ? ಇಲ್ಲವೇ? ಎಂಬುದು ಖಚಿತವಾಗಿರಲಿಲ್ಲ. ಇದೀಗ ಇಸ್ರೇಲ್ ಪಡೆ ಮೊಹಮ್ಮದ್ ಡೀಫ್ ಮೃತಪಟ್ಟಿದ್ದಾನೆ ಎಂದು ದೃಢಪಡಿಸಿದೆ. ಹಮಾಸ್ ನಾಯಕ ಇಸ್ಮಾಯಿಲ್ ಹನಿಯೆ ಹತ್ಯೆಗೆ ಪ್ರತೀಕಾರವಾಗಿ ಇಸ್ರೇಲ್ ಮೇಲೆ ದಾಳಿ ಮಾಡುವಂತೆ ಇರಾನ್‌ನ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಆದೇಶಿಸಿದ್ದಾರೆ.

ಬಿಎಸ್‌ವೈ ಬಂಧನ ಬೇಡ



ಬೆಂಗಳೂರು: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ಪೊಲೀಸರು ಅವರನ್ನು ಬಂಧಿಸಬಾರದು ಮತ್ತು ವಿಚಾರಣೆಗಾಗಿ ಅವರ ಖುದ್ದು ಹಾಜರಾತಿಗೆ ವಿನಾಯಿತಿ ನೀಡಲಾಗಿದೆ ಎಂಬ ಈ ಹಿಂದಿನ ಮಧ್ಯಂತರ ಆದೇಶವನ್ನು ಹೈಕೋರ್ಟ್ ಪುನಃ ವಿಸ್ತರಿಸಿದೆ. ಪ್ರಕರಣ ರದ್ದು ಕೋರಿ ಯಡಿಯೂರಪ್ಪ ಸಲ್ಲಿಸಿರುವ ಅರ್ಜಿಯನ್ನು, ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಪೀಠದಲ್ಲಿದ್ದ ನ್ಯಾ.ಎಂ.ನಾಗಪ್ರಸನ್ನ ಅವರು ಗುರುವಾರ ಈ ಕುರಿತಂತೆ ಆದೇಶಿಸಿದರು.

ಪ್ರಜ್ವಲ್ ವಿಡಿಯೊ ಅಸಲಿ

ಬೆಂಗಳೂರು: ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ ಆರೋಪದಡಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ವಿರುದ್ಧ ದಾಖಲಾಗಿದ್ದ ಪ್ರಕರಣದಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ವಿಡಿಯೊಗಳು ಅಸಲಿ ಎಂಬುದು ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ಪರೀಕ್ಷೆಯಲ್ಲಿ ದೃಢಪಟ್ಟಿದೆ. ವಿಡಿಯೊಗಳು ಅಸಲಿ ಎಂಬುದು ಗೊತ್ತಾಗಿದ್ದು, ಯಾವುದೇ ರೀತಿಯ ತಿರುಚುವಿಕೆಯು ನಡೆದಿಲ್ಲ. ವಿಡಿಯೊದಲ್ಲಿರುವ ವ್ಯಕ್ತಿ ಯಾರು ಎಂಬುದನ್ನು ತನಿಖೆಯಿಂದ ಪತ್ತೆ ಹಚ್ಚಬೇಕಿದೆ. ಅದರ ತನಿಖೆಯನ್ನು ಶೀಘ್ರದಲ್ಲೇ ಪೂರ್ಣಗೊಳಿಸಿ ಆರೋಪ ಪಟ್ಟಿ ಸಲ್ಲಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ತನಿಖೆ ಪೂರ್ಣಗೊಳಿಸುವ ಉದ್ದೇಶದಿಂದ ವರ್ಗಾವಣೆಗೊಂಡಿದ್ದ ಅಧಿಕಾರಿಗಳನ್ನು ಮತ್ತೆ ತನಿಖಾ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ ಎನ್ನಲಾಗಿದೆ.

ಮಳೆ ಅವಾಂತರಗಳಿಗೆ 30 ಮಂದಿ ಸಾವು, ಜನಜೀವನ ಅಸ್ತವ್ಯಸ್ತ

ಉತ್ತರ ಭಾರತಕ್ಕೆ ಜಲಗಂಡಾಂತರ

ದೆಹಲಿ: ಕೇರಳ ಜಲದುರಂತದ ಬೆನ್ನಲ್ಲೇ ರಾಷ್ಟ್ರ ರಾಜಧಾನಿ ದೆಹಲಿ, ಹಿಮಾಚಲಪ್ರದೇಶ, ಉತ್ತರಾಖಂಡ, ಜೈಪುರ ಮಳೆ ಆರ್ಭಟಕ್ಕೆ ತತ್ತರಿಸಿದೆ. ಸುಮಾರು 30 ಮಂದಿ ಮಳೆ ಅವಾಂತರಕ್ಕೆ ಸಾವನ್ನಪ್ಪಿದ್ದಾರೆ. ದೆಹಲಿಯ ನಗರಗಳೆಲ್ಲ ನೀರಿನಲ್ಲಿ ಮುಳುಗಿದ್ದು, ಸಂಚಾರ ದಟ್ಟಣೆಯಿಂದಾಗಿ ಜನ ಹೈರಾಣಾಗಿದ್ದಾರೆ. ಅನೇಕ ವಿಮಾನಗಳ ಮಾರ್ಗ ಬದಲಾವಣೆ ಮಾಡಲಾಗಿದೆ.

ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಪಧಾರ್ ಉಪವಿಭಾಗದ ರಾಜ್‌ಬನ್ ಗ್ರಾಮದಲ್ಲಿ ಹಾಗೂ ಶಿಮ್ಲಾದ ಸಮೇಜ್ ಖುದ್ ಗ್ರಾಮದಲ್ಲಿ ಗುರುವಾರ ಮೇಘಸ್ಫೋಟ ಸಂಭವಿಸಿದೆ. ಘಟನೆಯಲ್ಲಿ ಮೂವರು ಸಾವನ್ನಪ್ಪಿದ್ದು, 50ಕ್ಕೂ ಅಧಿಕ ಮಂದಿ ಕಣ್ಮರೆಯಾಗಿದ್ದಾರೆ.

→ 4

- ದೆಹಲಿ, ಹಿಮಾಚಲ, ಉತ್ತರಾಖಂಡ ತತ್ತರ
- ಹಿಮಾಚಲದ ಎರಡು ಕಡೆ ಮೇಘಸ್ಫೋಟ

ಯತ್ನಾಳ್, ಜಾರಕಿಹೊಳಿ, ಪ್ರತಾಪ್ ಸಿಂಹ ಭಾಗಿ | ವಿಜಯೇಂದ್ರ ವಿರುದ್ಧ ಚರ್ಚೆ ಮಾಡಿರುವ ಸಾಧ್ಯತೆ

ಕುಮಾರ ಬಂಗಾರಪ್ಪ ನಿವಾಸದಲ್ಲಿ ಬಂಡಾಯ ಸಭೆ

ಬೆಂಗಳೂರು: ಒಂದೆಡೆ ರಾಜ್ಯ ಸರಕಾರದ ವಿರುದ್ಧ ಪಾದಯಾತ್ರೆ ನಡೆಸಲು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಪ್ರತಿಪಕ್ಷ ನಾಯಕ ಅಶೋಕ ಸಿದ್ಧತೆ ನಡೆಸಿ ಕೊಂಡಿದ್ದರೆ, ಇದಕ್ಕೆ ಠಕ್ಕರ್ ನೀಡಲು ಸ್ವಪಕ್ಷದಲ್ಲಿಯೇ ಮತ್ತೊಂದು ಪಾದಯಾತ್ರೆಗೆ ಸಿದ್ಧತೆ ನಡೆದಿದೆ. ಈ ಸಂಬಂಧ ಬುಧವಾರ ಬಂಡಾಯ ಸಭೆ ನಡೆದಿರುವುದು ಇನ್ನಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಕೇವಲ ಪಾದಯಾತ್ರೆ ಮಾತ್ರವಲ್ಲದೇ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಯಡಿಯೂರಪ್ಪ ವಿರುದ್ಧ ದೂರು ನೀಡಲು ತೀರ್ಮಾನ ಕೈಗೊಂಡಿರುವುದು ಇದೀಗ ಭಾರಿ ಕುತೂಹಲಕ್ಕೆ ಕಾರಣ ವಾಗಿದೆ. ಇದಿಷ್ಟೇ ಅಲ್ಲದೇ, ಇಷ್ಟು ತಟಸ್ಥವಾಗಿದ್ದ ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಮಾಜಿ ಶಾಸಕ ಕುಮಾರ ಬಂಗಾರಪ್ಪ ಅವರು ಇದೀಗ ಯತ್ನಾಳ್ ತಂಡ ಸೇರ್ಪಡೆಯಾಗಿರುವುದು ಬಂಡಾಯ ತಂಡದ ಶಕ್ತಿ ಹೆಚ್ಚಿಸಿದೆ ಎನ್ನಲಾಗಿದೆ.

ಮಾಜಿ ಶಾಸಕ ಕುಮಾರ್ ಬಂಗಾರಪ್ಪ ನಿವಾಸದಲ್ಲಿ ಗುರುವಾರ ನಡೆದ ಸಭೆಯಲ್ಲಿ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ ಅವರೊಂದಿಗೆ ಪ್ರತಾಪ್ ಸಿಂಹ ಕಾಣಿಸಿಕೊಂಡಿದ್ದಾರೆ. ಇದರೊಂದಿಗೆ ಇನ್ನು ಕೆಲವು ಬಿಜೆಪಿ ಮುಖಂಡರು ಸಭೆಯಲ್ಲಿದ್ದರು ಎನ್ನಲಾಗಿದೆ. ಸಭೆಯಲ್ಲಿ ಪ್ರಮುಖವಾಗಿ ಯಡಿಯೂ ರಪ್ಪ ಕುಟುಂಬದ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.

→ 4

ಪ್ರತ್ಯೇಕ ಪಾದಯಾತ್ರೆಗೆ ಮನವಿ

ಮಾಜಿ ಸಚಿವ ರಮೇಶ್ ಜಾರಕಿಹೊಳಿ ಮಾತನಾಡಿ, ಪಾದಯಾತ್ರೆ ಸೇರಿದಂತೆ ಇತರ ಹಲವು ವಿಚಾರಗಳ ಚರ್ಚೆ ನಡೆದಿದೆ. ಪಾದಯಾತ್ರೆಗೆ ದೆಹಲಿ ವರಿಷ್ಠರ ಅನುಮತಿ ಕೇಳಲಾಗಿದೆ. ಅವರು ಒಪ್ಪಿಗೆ ನೀಡಿದರೆ ಬಳ್ಳಾರಿ ಪಾದಯಾತ್ರೆ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ. ಕುಮಾರ ಬಂಗಾರಪ್ಪ ಮಾತನಾಡಿ, ನಾವು ಬಿಜೆಪಿಯ ನಿಷ್ಠಾವಂತರು. ಎಲ್ಲವನ್ನೂ ಹೈಕಮಾಂಡ್ ನಿರ್ಧಾರ ಮಾಡುತ್ತದೆ ಎಂದು ಸ್ಪಷ್ಟಪಡಿಸಿದರು.

ಅಪ್ಪ, ಮಕ್ಕಳಿಂದ ಪಕ್ಷ ನಾಶವಾಗುತ್ತಿದೆ. ಆದ್ದರಿಂದ ಯಡಿಯೂರಪ್ಪ ಮತ್ತು ವಿಜಯೇಂದ್ರ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಲು ಅತೃಪ್ತರ ತಂಡ ತೀರ್ಮಾನಿಸಿದೆ. ವಿಜಯೇಂದ್ರ, ಯಡಿಯೂರಪ್ಪ ಮಾಡಿ ರುವ ಪಕ್ಷ ವಿರೋಧಿ ಕೆಲಸವನ್ನು ಹೈಕಮಾಂಡ್‌ಗೆ ತಿಳಿಸುತ್ತೇವೆ.

– **ಬಸನಗೌಡ ಪಾಟೀಲ್ ಯತ್ನಾಳ್** ಬಿಜೆಪಿ ಶಾಸಕ

ಸಮಾಚಾರ ಸಣ್ಣದಲ್ಲ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆ.3ಕ್ಕೆ

ಚಿತ್ರದುರ್ಗ: ಚಿತ್ರದುರ್ಗ ರೆಡ್ಡಿ ಜನ ಸಂಘದ ವತಿಯಿಂದ 2023-24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಇದೇ ಆಗಸ್ಟ್ 3 ರಂದು ಮಧ್ಯಾಹ್ನ 12ಕ್ಕೆ ಚಿತ್ರದುರ್ಗ ನಗರದ ಕಮ್ಮರೆಡ್ಡಿ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ದೇಶ ಸೇವೆಯ ಕರ್ತವ್ಯದಲ್ಲಿ ತೊಡಗಿಸಿಕೊಂಡು ಸಾರ್ಥಕ ಸೇವೆ ಸಲ್ಲಿಸಿ ನಿವೃತ್ತರಾದ ಮಾಜಿ ಸೈನಿಕರಿಗೆ ಅಭಿನಂದನಾ ಕಾರ್ಯಕ್ರಮ ಹಾಗೂ 2023ರ ಏಪ್ರಿಲ್ 1 ರಿಂದ 2024ರ ಜುಲೈ 31 ರವರೆಗೆ ಸರಕಾರಿ ಸೇವೆ ಸಲ್ಲಿಸಿ ನಿವೃತ್ತರಾದ ಮತ್ತು ರಾಷ್ಟ್ರಮಟ್ಟದ ವಿಶೇಷ ಪ್ರಶಸ್ತಿಗೆ ಭಾಜನರಾದ ಸಮುದಾಯದ ಅಧಿಕಾರಿಗಳು ಮತ್ತು ನೌಕರರಿಗೆ ಅಭಿನಂದನಾ ಕಾರ್ಯಕ್ರಮವನ್ನೂ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ರೆಡ್ಡಿ ಜನಸಂಘದ ಕಾರ್ಯಕಾರಿ ಸಮಿತಿ ಸದಸ್ಯರು, ಸಮುದಾಯದ ಮುಖಂಡರು, ವಿದ್ಯಾರ್ಥಿಗಳು, ಪೋಷಕರು, ಮಾಜಿ ಸೈನಿಕರ ಮತ್ತು ನೌಕರರ ಕುಟುಂಬವರ್ಗದವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಭೂ ಕಬಳಿಕೆ ಅಧಿನಿಯಮ ಕಾರ್ಯಾಗಾರ ನಾಳೆ

ದಾವಣಗೆರೆ: ಕರ್ನಾಟಕ ಭೂಕಬಳಿಕೆ ನಿಷೇಧ ನ್ಯಾಯಾಲಯಗಳು ಬೆಂಗಳೂರು, ಕಂದಾಯ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾಡಳಿತ ದಾವಣಗೆರೆ ಇವರ ಸಹಯೋಗದಲ್ಲಿ ಆಗಸ್ಟ್ 3 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ಮತ್ತು ಸಂಬಂಧಿಸಿದ ಕಾಯ್ದೆಗಳ ಬಗ್ಗೆ ಒಂದು ದಿನದ ಕಾರ್ಯಾಗಾರ ಏರ್ಪಡಿ ಸಲಾಗಿದೆ. ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಅಧ್ಯಕ್ಷರಾದ ನ್ಯಾಯಮೂರ್ತಿ ಬಿ.ಎ.ಪಾಟೀಲ್ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ಡಾ.ಗಂಗಾಧರಸ್ವಾಮಿ.ಜಿ.ಎಂ ಅಧ್ಯಕ್ಷತೆ ವಹಿಸುವರು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ವರಿ ಎನ್.ಹೆಗಡೆ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು.

ಸ್ಪರ್ಧಾತ್ಮಕ ಪರೀಕ್ಷೆ: ಅವಧಿ ವಿಸ್ತರಣೆ

ದಾವಣಗೆರೆ: ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ. ದಾವಣಗೆರೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ನೀಡಲು ಅರ್ಜಿ ಸಲ್ಲಿಸುವ ಅವಧಿಯನ್ನು ಆಗಸ್ಟ್ 31 ರವರೆಗೆ ವಿಸ್ತರಿಸಲಾಗಿದೆ ಎಂದು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

21ನೇ ವಾರ್ಷಿಕ ಸಾಮಾನ್ಯ ಸಭೆ ಆ.12ಕ್ಕೆ

ದಾವಣಗೆರೆ: ಜಿಲ್ಲಾ ಸಹಕಾರ ಒಕ್ಕೂಟದ ಸಾಮಾನ್ಯ ಸಭೆಯನ್ನು ಒಕ್ಕೂಟದ ಅಧ್ಯಕ್ಷರಾದ ಶ್ರೀಸಿರಿಗೆರೆ ರಾಜಣ್ಣರವರ ಅಧ್ಯಕ್ಷತೆಯಲ್ಲಿ ಆಗಸ್ಟ್ 12 ರಂದು ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ನಗರದ ಶ್ರೀಷಬ್ರ ಡಾ.ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಟ್ರಸ್ಟ್, ಶಿವಾಚಾರ್ಯ ನಿಕೇತನ ಹಿರೇಮಠ, ಎಂ.ಸಿ.ಸಿ ಬಿ ಬ್ಲಾಕ್, ಶಾಮನೂರು ರಸ್ತೆ, ಇಲ್ಲಿ ಕರೆಯಲಾಗಿದೆ ಎಂದು ಒಕ್ಕೂಟದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಲಪ್ಪ ಕೋಡಿಹಳ್ಳಿ ತಿಳಿಸಿದ್ದಾರೆ.

ಖೋಟಾ ನೋಟು: ಆರೋಪಿಗೆ ಜೈಲು ಶಿಕ್ಷೆ

ದಾವಣಗೆರೆ: ಹರಿಹರ ನಗರದ ತರಕಾರಿ ಮಾರುಕಟ್ಟೆಯಲ್ಲಿ ಖೋಟಾ ನೋಟು ಚಲಾವಣೆ ಮಾಡಿದ ಆರೋಪಿಗೆ ನ್ಯಾಯಾಲಯವು 5 ವರ್ಷ ಜೈಲು ಮತ್ತು 30 ಸಾವಿರ ದಂಡ ವಿಧಿಸಿದೆ. ಫಕ್ರುಸಾಬ್ ಎಂಬವರಿಂದ ತೆಂಗಿನಕಾಯಿ ಪಡೆದ ಹನುಮಂತಪ್ಪ ಖೋಟಾ ನೋಟು ನೀಡಿದ್ದರು. ಈ ಬಗ್ಗೆ ಹರಿಹರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನವಿಲೇಹಾಳ್ ಗ್ರಾಮದ ಹನುಮಂತಪ್ಪ ಎಂಬುಬವರು ತೆಂಗಿನ ಕಾಯಿ ತೆಗೆದುಕೊಂಡು 2 ಸಾವಿರ ರು. ಮುಖಬೆಲೆಯ ನೋಟನ್ನು ನೀಡಿದ್ದು, ತೆಂಗಿನ ಕಾಯಿ ವ್ಯಾಪಾರಿಗೆ ಅನುಮಾನ ಬಂದಿದ್ದರಿಂದ ಬೇರೆ ನೋಟು ಕೇಳದ್ದಾಗ 500 ರು. ಮುಖಬೆಲೆಯ ನೋಟನ್ನು ನೀಡಿದ್ದರು. ಈ ವಿಷಯವನ್ನು ಪೊಲೀಸರಿಗೆ ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷರೋಪಣೆ ಪಟ್ಟಿ ಸಲ್ಲಿಸಿದರು. ಆರೋಪ ಸಾಬೀತಾಗಿದ್ದರಿಂದ ಆರೋಪಿತರಿಗೆ 5 ವರ್ಷ ಸಾಧಾರಣ ಶಿಕ್ಷೆ ವಿಧಿಸಿದೆ.

{ಕೃಷ್ಣ ಭೈರೇಗೌಡ } ಸಚಿವ

ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಮಳೆಗೆ ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಪ್ರವಾಹ ಎದುರಾಗಿದೆ. ಮೂರು ದಿನದಲ್ಲಿ ಪ್ರವಾಹ ತಗ್ಗುವ ನಿರೀಕ್ಷೆಯಿದೆ. ಎಂತಹ ಸ್ಥಿತಿ ಎದುರಾದರೂ ಸರಕಾರ ಸಿದ್ಧತೆ ಮಾಡಿಕೊಂಡಿದೆ. ರಾಜ್ಯದಲ್ಲಿ 2,223 ಗ್ರಾಮಗಳು ನೆರೆಪೀಡಿತ ವಾಗಬಹುದು.

ರುದ್ರಭೂಮಿ ಮಂಜೂರಿಗೆ ಗುತ್ತೂರು ಗ್ರಾಮದ ಪರಿಶಿಷ್ಟ ಸಮಾಜ ಆಗ್ರಹ

ರಾಜ್ಯಪಾಲರು, ಮುಖ್ಯಮಂತ್ರಿಗಳಿಗೆ ತಹಸೀಲ್ದಾರ ಮುಖೇನ ಮನವಿ ಸಲ್ಲಿಕೆ

ಹರಿಹರ: ತಾಲೂಕಿನ ಗುತ್ತೂರು ಗ್ರಾಮದ ಪರಿಶಿಷ್ಟ ಸಮುದಾಯದ ರುದ್ರಭೂಮಿಗೆ ಆಗ್ರಹಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿ ಮಾನ್ಯ ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳಿಗೆ ತಹಸೀಲ್ದಾರರ ಮುಖಾಂತರ ಮನವಿ ಅರ್ಪಿಸಿದರು.

ನಗರದ ಎ.ಕೆ.ಕಾಲೋನಿಯ ಭಜನಾ ಮಂದಿರದಿಂದ ಗುರುವಾರ ನೂರಾರು ಜನ ನಿವಾಸಿಗಳು ಪ್ರತಿಭಟನಾ ಮೆರವಣಿಗೆ ಮೂಲಕ ಆಗಮಿಸಿ ಮನವಿ ಅರ್ಪಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖಂಡರುಗಳು, ಗುತ್ತೂರಿನ ಪರಿಶಿಷ್ಟ ಸಮುದಾಯದ ರುದ್ರಭೂಮಿ ಇಲ್ಲದಿರುವ ಕಾರಣ ಸುಮಾರು 70 ವರ್ಷಗಳಿಂದ ತುಂಗ ಭದ್ರಾ ನದಿಯ ದಡದಲ್ಲಿ ಶವಸಂಸ್ಕಾರ ಮಾಡುತ್ತಾ ಬಂದಿರುತ್ತೇವೆ. ಪರಿಶಿಷ್ಟ ಸಮುದಾಯದವರು ಯಾರಾದರೂ ಮರಣಿಸಿದರೆ ಶವವನ್ನು ಹೊತ್ತು ಸಾಗಲು ಸರಿಯಾದ ರಸ್ತೆ ಸಹ ಇಲ್ಲ. ಇದೇ ಕಾರಣಕ್ಕೆ ರೈತರ ಹೊಲಗದ್ದೆಗಳಲ್ಲಿ ಹಾದು ಹೋಗಿ ಮರಣಿಸಿದವರ ಶವವನ್ನು ಉಳುವುದು ನಮ್ಮ ಸಮುದಾಯದ ಗೋಳಿನ ಕಥೆ ಯಾಗಿದೆ. ಇನ್ನು ಮಳೆಗಾಲದಲ್ಲಿ ಬಹಳ ತೊಂದರೆಯಾಗುತ್ತಿದೆ ಪ್ರಸ್ತುತ ವರ್ಷದಲ್ಲಿ ಹೆಚ್ಚಿನ ಮಳೆಯಾಗುತ್ತಿದ್ದು ಜೀವ ಕೈಯಲ್ಲಿ ಹಿಡಿದು ಕೊಂಡು ಶವವನ್ನು ಹೆಗಲ ಮೇಲೆ ಹೊತ್ತುಕೊಂಡು ಅಂತ್ಯಕ್ರಿಯೆಗೆ ತೆರಳುವ ಸಮಸ್ಯೆಯಾಗಿದೆ.

ಈ ಕುರಿತು ಈಗಾಗಲೇ ಹಲವು ಬಾರಿ ಮನವಿ ಮಾಡಿಕೊಂಡರು ಜನಪ್ರತಿನಿಧಿಗಳು, ಸರಕಾರವಾಗಲಿ ನಮಗೆ ಸಹಕರಿಸಿಲ್ಲವೆಂದು ತಮ್ಮ ನೋವಿನ ಕಥೆಯನ್ನು ತೋಡಿಕೊಂಡ ಮುಖಂಡರು, ನಮ್ಮ ಗ್ರಾಮದ ಕೆಇಬಿ ಪಕ್ಕದಲ್ಲಿ ಸರ್ವೆ ನಂ,89/1,77/1 ಮತ್ತು 78/ರಲ್ಲಿ ಸರಕಾರಿ ಜಾಗ ಇದ್ದು ಇವುಗಳಲ್ಲಿ ಯಾವುದಾದರೂ ಒಂದನ್ನು ರುದ್ರಭೂಮಿಗೆ ಸ್ಥಳಾವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳಿದರು. ಈ ಸಮಯದಲ್ಲಿ ಗ್ರಾಮದ ಮುಖಂಡರುಗಳಾದ ಅಜ್ಜಪ್ಪ ದೊಡ್ಡ ಕೊಟ್ರಪ್ಪ ದೊಡ್ಡಮನಿ, ಅಂಜಿನಪ್ಪ ಜಂಬದುರ್ಗಪ್ಪ, ಹಾಲಪ್ಪ ಚಿಕ್ಕಳ್ಳರ, ನಾಗರಾಜ್, ಎಂ.ಬಿ.ಅವಿನಾಶ್,ಬಸವರಾಜ್ ಹರಪನ ಹಳ್ಳಿ, ಗುಂಡಪ್ಪ,ಕೆ.ಕೊಟ್ರಪ್ಪ ರಿಟೈರ್ಡ್ ಆರ್ಮಿ, ಎಂ.ಕೆ.ಡಿ. ಕೊಟ್ರಪ್ಪ ದೊಡ್ಡಮನಿ, ಮಾರ್ಕಂಡಪ್ಪ ಕಜ್ಜರಿ, ಮರಿದೇವಪ್ಪ, ಎನ್. ಕೆ.ಡಿ.ಕೊಟ್ರ ಪ್ಪ, ಜಿ.ಎಂ.ಎಚ್.ಪರಮೇಶ್,ರವಿ,ತಾಲೂಕ ಮಾದಿಗ ಸಮಾಜದ ನೂತನ ಅಧ್ಯಕ್ಷ ಎನ್.ರಜನಿಕಾಂತ್,ನಗರಸಭೆ ಸದಸ್ಯರಾದ ಪಿ. ಎನ್.ವಿರೂಪಾಕ್ಷ, ಹನುಮಂತಪ್ಪ ಆಟೋ, ಸಂತೋಷ್ ದೊಡ್ಡ ಮನಿ, ಮುಖಂಡರಾದ ಎಚ್ ನಿಜಗುಣ, ನಗರಸಭಾ ಮಾಜಿ ಸದ ಸ್ಯ ಎಂ.ಬಿ.ಅಣ್ಣಪ್ಪ, ಎಚ್.ಸುಧಾಕರ್,ಆರ್.ವಿಜಯ್ ಕುಮಾರ್, ಕೇಶವ, ವೈ.ಬಿ.ಪ್ರಭಾಕರ್ ಸೇರಿದಂತೆ ಗ್ರಾಮದ ನೂರಾರು ಪರಿಶಿಷ್ಟ ವರ್ಗದ ನಿವಾಸಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಗರದ ಎ.ಕೆ.ಕಾಲೋನಿಯ ಭಜನಾ ಮಂದಿರದಿಂದ ನೂರಾರು ಜನ ನಿವಾಸಿಗಳು ಪ್ರತಿಭಟನಾ ಮೆರವಣಿಗೆ ಮೂಲಕ ಆಗಮಿಸಿ ತಹಸೀಲ್ದಾರ್‌ಗೆ ಮನವಿ ಅರ್ಪಿಸಿ ಸುದ್ದಿಗಾರರೊಂದಿಗೆ ಮುಖಂಡರು ಮಾತನಾಡಿದರು.

> **ಗ್ರಾಮಸ್ಥರು ತಮ್ಮ ಮನವಿಯಲ್ಲಿ ಮೂರು ಸರ್ವೆ ನಂಬರ್‌ಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ ಅವುಗಳಲ್ಲಿ ಕೆಲವು ವಿವಾದಗಳಿದ್ದು ,ಇನ್ನು ಕೆಲವು ಮಾರ್ಪಾಡಿಗೆ ಒಳಪಟ್ಟಿರುತ್ತವೆ. ಆದಾಗ್ಯೂ ಈ ದಿನ ನಮ್ಮ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಗ್ರಾಮದ ಸುತ್ತಲೂ ಇರುವ ಸರ್ವೆ ನಂಬರ್‌ಗಳ ವೀಕ್ಷಣೆ ನಡೆಸಿ ವರದಿ ನೀಡಲು ತಿಳಿಸಿದ್ದೇನೆ. ಅವರು ವರದಿ ನೀಡಿದ ನಂತರ ವಿಸ್ತೃತವಾದ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗುವುದು ಮತ್ತು ಆದಷ್ಟು ಬೇಗನೆ ಅಲ್ಲಿನ ಪರಿಶಿಷ್ಟ ನಿವಾಸಿಗಳಿಗೆ ರುದ್ರಭೂಮಿಗೆ ಅನುಕೂಲ ಮಾಡಿಕೊಡುವ ಪ್ರಯತ್ನ ಮಾಡಲಾಗುವುದು.**
>
> – **ಕೆ.ಎಂ.ಗುರುಬಸವರಾಜ್**, ತಹಸೀಲ್ದಾರ್, ಹರಿಹರ

ವಿವೇಕಾನಂದರ ಆದರ್ಶ ದಾರಿ ದೀಪ: ಸೂಲಿಬೆಲೆ

ಪಟ್ಟಣದ ಶಾರದಶ್ರಮ, ರೋಟರಿ ಹಿರಿಯೂರು ಮತ್ತು ತೋಟಗಾರಿಕೆ ಮಹಾವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಗುರುವಾರ ಆಯೋಜಿಸಿದ್ದ ಯುವ ಸಮ್ಮೇಳನದಲ್ಲಿ ಚಿಂತಕ ಚಕ್ರವರ್ತಿ ಸೂಲಿಬೆಲೆ ಅವರು ಮಾತನಾಡಿದರು.

ಹಿರಿಯೂರು: ವಿವೇಕಾನಂದರ ಆದರ್ಶವನ್ನು, ರೂಢಿಸಿಕೊಳ್ಳಲು ಅಧ್ಯಯನ ಮಾಡುವ ಅಗತ್ಯವಿದೆ ಎಂದು ಚಿಂತಕ ಚಕ್ರವರ್ತಿ ಸೂಲಿಬೆಲೆ ಹೇಳಿದರು. ಪಟ್ಟಣದ ಶಾರದಶ್ರಮ, ರೋಟರಿ ಹಿರಿಯೂರು ಮತ್ತು ತೋಟಗಾರಿಕೆ ಮಹಾವಿದ್ಯಾಲಯ ಇವರ ಸಂಯುಕ್ತ ಆಶ್ರಯ ದಲ್ಲಿ ಗುರುವಾರ ಆಯೋಜಿಸಿದ್ದ ಯುವ ಸಮ್ಮೇಳನದಲ್ಲಿ ಅವರು ಮಾತನಾಡಿದರು. ಸ್ವಾಮಿ ವಿವೇಕಾನಂದರ ಸಮಗ್ರ ಜೀವನವೇ ಒಂದು ಆದರ್ಶ ಯುವ ಜನತೆ ಮೇಲೆ ಬಲವಾದ ನಂಬಿಕೆ, ವಿಶ್ವಾಸ ಇಟ್ಟಿದ್ದರು. ವಿಶ್ವಗುರು ಭಾರತ ಆಗಲು ನಮ್ಮ ದೇಶದ ಯುವಜನತೆ ಹೆಚ್ಚು ಅಧ್ಯಯನ ಮಾಡಿ ಅವರ ಆದರ್ಶಗಳನ್ನು ಜೀವನಕ್ಕೆ ಅಳವಡಿಸಿಕೊಳ್ಳುವ ಅಗತ್ಯ ಇದೆ ಎಂದರು. ಮೊಬೈಲ್ ಗೀಳಿಗೆ, ಸೌಂದರ್ಯ, ಮೋಜು ಮಸ್ತಿ ಗೆ ಬಿದ್ದಿರುವ ಯುವಜನತೆ ತಮ್ಮ ನಿಜವಾದ ಸಾಮರ್ಥ್ಯ ಮರೆತು ಬದುಕುತ್ತಿದ್ದಾರೆ. ಇಂತಹ ಯುವಜನತೆಯನ್ನು ಸ್ವಾಮಿ ವಿವೇಕಾನಂದರು ನಿರೀಕ್ಷಿಸಿರಲಿಲ್ಲ ಎಂದರು. ಕಾರ್ಯಕ್ರಮದಲ್ಲಿ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಲಕ್ಷ್ಮಿಕಾಂತ್, ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ. ಮಂಜಪ್ಪ, ರೋಟರಿ ಅಧ್ಯಕ್ಷರಾದ ಕಿರಣ್, ಕಾರ್ಯದರ್ಶಿ . ರಾಘವೇಂದ್ರಾಚಾರಿ, ರೋಟರಿಯ ಸದಸ್ಯರು, ಆಶ್ರಮದ ಭಕ್ತರು, ಸೇರಿದಂತೆ ಕಾಲೇಜು ವಿದ್ಯಾರ್ಥಿಗಳು ಇದ್ದರು.

ಶನೈಶ್ಚರಸ್ವಾಮಿ ದೇಗುಲ ಲೋಕಾರ್ಪಣೆಗೆ ಸಜ್ಜು

ಲೋಕಾರ್ಪಣೆಗೆ ಸಜ್ಜಾದ ಗುರುಶನೈಶ್ಚರಸ್ವಾಮಿ ದೇವಾಲಯ.

ಹೊಸದುರ್ಗ: ಪಟ್ಟಣದ ಹುಳಿಯಾರು ರಸ್ತೆಯ ಕೃಷಿ ಉತ್ಪನ್ನ ಮಾರುಕಟ್ಟೆ ಎದುರಿಗೆ ಅತ್ಯಾಕರ್ಷಕವಾಗಿ ನಿರ್ಮಿಸಿರುವ ನೂತನ ಗುರುಶನೈಶ್ಚರಸ್ವಾಮಿ ದೇವಾಲಯವು ಮಧುವಣಗಿತ್ತಿಯಂತೆ ಸಿಂಗಾರಗೊಂಡಿದ್ದು ಲೋಕಾರ್ಪಣೆಗೆ ಸಜ್ಜಾಗಿದೆ.

ಸಿ.ಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ 2 ದಶಕದ ಹಿಂದೆ ಆರಂಭವಾಗಿದ್ದ ಗುರುಶನೈಶ್ಚರಸ್ವಾಮಿ ಭಕ್ತ ಮಂಡಳಿಯು ಈ ದೇವಸ್ಥಾನ ನಿರ್ಮಾಣಕ್ಕಾಗಿ 2 ದಶಕದ ಹಿಂದೆ ಆರಂಭಿಸಿದ್ದ ಚೀಟಿ ವ್ಯವಹಾರದ ಆದಾಯ, ಶಾಸಕ ಬಿ.ಜಿ.ಗೋವಿಂದಪ್ಪನವರು ಹಾಗೂ ಮಾಜಿ ಸಚಿವ ಗೂಳಿಹಟ್ಟಿ ಶೇಖರ್ ಅವರು ನೀಡಿದ ಅನುದಾನ, ಭಕ್ತರ ಆರ್ಥಿಕ ನೆರವಿನೊಂದಿಗೆ 80 ಅಡಿ ಉದ್ದ, 100 ಅಡಿ ಅಗಲ ವಿಸ್ತೀರ್ಣ ಹೊಂದಿರುವ 2 ಕೋಟಿ ರು. ವೆಚ್ಚದ ಬೃಹತ್ ಈ ದೇಗುಲವು ದೇವಸ್ಥಾನ ಸಮಿತಿಯವರ 21 ವರ್ಷದ ಶ್ರಮದೊಂದಿಗೆ ನಿರ್ಮಾಣವಾಗಿದ್ದು, ಆ.5, 6, 7ರಂದು ಈ ನೂತನ ಗುರುಶನೈಶ್ಚರಸ್ವಾಮಿ ಹಾಗೂ ನವಗ್ರಹಗಳ ಲೋಕಾರ್ಪಣೆ ಧಾರ್ಮಿಕ ಸಮಾರಂಭದ ಪೂಜಾ ಕೈಂಕರ್ಯಗಳು ನಡೆಯಲಿವೆ.

ಆ.5ರ ಸೋಮವಾರ ಬೆಳಿಗ್ಗೆ 8.30ರಿಂದ ದೇವತಾ ಕಾರ್ಯ ಆರಂಭವಾಗಲಿದೆ. ಸಂಜೆ ಪಟ್ಟಣದ ಹಲವು ದೇವರು ಕೂಡುಭೇಟಿ ಹಾಗೂ ಆಗಮನದ ಅದ್ದೂರಿ ಮೆರವಣಿಗೆ ಗ್ರಾಮದೇವತೆ ದುರ್ಗಾಂಬಿಕಾ ದೇವಸ್ಥಾನದಿಂದ ಗುರುಶನೈಶ್ಚರ ದೇವಸ್ಥಾನದ ವರೆಗೂ ನಡೆಯಲಿದೆ.

ಮಂಗಳವಾರ ಬೆಳಿಗ್ಗೆ 8 ಗಂಟೆಯಿಂದ ಹಾಗೂ ಬುಧವಾರ ಬೆಳಿಗ್ಗೆ 5.30ರಿಂದ ಹೋಮಹವನ, ಪೂಜಾ ಕಾರ್ಯ ನಡೆದ ನಂತರದಲ್ಲಿ ಹುಣಸಘಟ್ಟದ ಗುರುಮೂರ್ತಿ ಶಿವಾಚಾರ್ಯ ಸ್ವಾಮೀಜಿ ಕಳಸ ಪ್ರತಿಷ್ಠಾಪಿಸಲಿದ್ದಾರೆ. ಆನಂದ ಗುರೂಜಿ ಸಾನ್ನಿಧ್ಯದಲ್ಲಿ 108 ಕುಂಭಾಭಿಷೇಕ ಮೆರವಣಿಗೆ ನಡೆಯಲಿದೆ.

ಗುರುಶನೈಶ್ಚರಸ್ವಾಮಿ ಭಕ್ತ ಮಂಡಳಿ ಅಧ್ಯಕ್ಷ ಸಿ.ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯದರ್ಶಿ ರಾಜಣ್ಣ ಉದ್ಘಾಟಿಸಲಿದ್ದಾರೆ ಕಾರ್ಯದರ್ಶಿ ರಾಜಣ್ಣ ಉದ್ಘಾಟಿಸಲಿದ್ದಾರೆ. ಈ ಧಾರ್ಮಿಕ ಸಭೆಗೆ ಹಲವು ಗಣ್ಯರು ಆಗಮಿಸಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ ನಡೆಯಲಿರುವ ಧಾರ್ಮಿಕ ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಹಾಗೂ ಆಹಾರ ಮತ್ತು ನಾಗರಿಕರ ಸರಬರಾಜು ನಿಗಮದ ಅಧ್ಯಕ್ಷ ಬಿ.ಜಿ.ಗೋವಿಂದಪ್ಪನವರು ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಉದ್ಘಾಟಿಸಲಿದ್ದಾರೆ. ಹಲವು ಮಠಾಧೀಶರು ನೇತೃತ್ವ ವಹಿಸಲಿದ್ದಾರೆ. ಮಾಜಿ ಸಚಿವ ಗೂಳಿಹಟ್ಟಿ ಶೇಖರ್, ಮಾಜಿ ಸಂಸದ ಬಿ.ಎನ್.ಚಂದ್ರಪ್ಪ ಸೇರಿ ಹಲವು ಗಣ್ಯರು, ಸಮಾಜದ ಮುಖಂಡರುಗಳು, ಅಧಿಕಾರಿ ವರ್ಗದವರು ಭಾಗವಹಿಸಲಿದ್ದಾರೆ ಎಂದು ಶ್ರೀಗುರುಶನೈಶ್ಚರಸ್ವಾಮಿ ದೇವಸ್ಥಾನ ಸಮಿತಿ ತಿಳಿಸಿದೆ.

ತೊರೆಸಾಲು ಕೆರೆಗಳಿಗೆ ಶೀಘ್ರವೇ ನೀರು: ಶಾಸಕ

ಜಗಳೂರು: ತೊರೆಸಾಲು ಭಾಗದ ಕೆರೆಗಳಿಗೆ ಶೀಘ್ರವೇ ನೀರು ಹರಿಸಲಾಗುವುದು ಎಂದು ಜಗಳೂರು ವಿಧಾನಸಭಾ ಕ್ಷೇತ್ರದ ಶಾಸಕ ಬಿ. ದೇವೇಂದ್ರಪ್ಪ ಭರವಸೆ ನೀಡಿದರು.

ಬುಧವಾರ ತೊರೆಸಾಲು ಭಾಗದ ಚಿಕ್ಕಮಲ್ಲನಹೊಳೆ, ಹಿರೇಮಲ್ಲನಹೊಳೆ, ಹುಚ್ಚವ್ವನಹಳ್ಳಿ ತಾಯಿಟೋಣಿ, ಭರಮಸಮುದ್ರ, ಸಿದ್ದಮನಹಳ್ಳಿ ಅಣಬೂರು, ಹೀಗೆ ಹಲವು ಗ್ರಾಮದ ರೈತರು ಶಾಸಕರಿಗೆ ತಮ್ಮ ಭಾಗಕ್ಕೆ ನೀರು ಹರಿಸಲು ಕೆರೆಗಳ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳ್ಳಿಸಲು ಮನವಿ ಮಾಡಲಾಯಿತು.

ಮನವಿಗೆ ಪ್ರತಿಕ್ರಿಯಿಸಿ ಮಾತನಾಡಿದ ಶಾಸಕ ದೇವೇಂದ್ರಪ್ಪನವರು 57 ಕೆರೆ ನೀರು ತುಂಬಿಸುವ ಯೋಜನೆಯಲ್ಲಿಯಡಿಯಲ್ಲಿ ಜಗಳೂರು ವಿಧಾನಸಭಾ ಕ್ಷೇತ್ರದಲ್ಲಿ 30 ಕ್ಕೂ ಹೆಚ್ಚು ಕೆರೆಗಳಿಗೆ ಈಗಾಗಲೇ ನೀರು ಕಂಡಿವೆ. ಶೀಘ್ರದಲ್ಲಿಯೇ ತೊರೆಸಾಲು ಭಾಗದ ಕೆರೆಗಳಿಗೆ ನೀರು ಹರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ತೊರೆಸಾಲು ಭಾಗದ ಕೆರೆ ಪೈಪ್‌ಲೈನ್ ಕಾಮಗಾರಿಗಳು ಶೇ.70ರಷ್ಟು ಕಾಮಗಾರಿ ಮುಗಿದಿದೆ ಅಲ್ಲದೆ ರಾಷ್ಟ್ರೀಯ ಹೆದ್ದಾರಿಯ ಅಡ್ಡಲಾಗಿ ಪೈಪ್‌ಲೈನ್ ಕ್ರಾಸಿಂಗ್ ಆಗುವುದು ಬಾಕಿ ಇದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಕಾಮಗಾರಿ ಮಾಡಲು ಅನುಮತಿ ನೀಡಲು ಪತ್ರ ರವಾನಿಸಲಾಗಿದೆ. ಅನುಮತಿ ಬಂದ ಬಳಿಕ ಕಾಮಗಾರಿ ಕೈಗೊಂಡು ತೊರೆಸಾಲು ಭಾಗದಲ್ಲಿ 57 ಕೆರೆ ನೀರು ತುಂಬಿಸುವ ಯೋಜನೆಯಲ್ಲಿರುವ ಅನುಮೋದನೆಗೊಂಡ ಚಿಕ್ಕಮಲ್ಲನಹೊಳೆ, ಯರೇಹಳ್ಳಿ, ತಾಯಿಟೋಣಿ ಸಾಲೇಹಳ್ಳಿ, ಹುಚ್ಚವ್ವನಹಳ್ಳಿ ಸೇರಿದ್ದಂತೆ ಅಣಬೂರು, ಭರಮಸಮುದ್ರ, ಸಿದ್ದಮ್ಮನ ಹಳ್ಳಿ ಕೆರೆಗಳಿಗೆ ನೀರು ಹರಿಸಲಾಗುವು ಎಂದು ರೈತರಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಪ್ರಗತಿಪರ ಹೋರಾಟಗಾರ ಮಹಾಲಿಂಗಪ್ಪ, ಗಂಗಾಧರಪ್ಪ, ಬಸವರಾಜಪ್ಪ, ಕುಮಾರ್ ಸೇರಿದಂತೆ ಹಲವು ರೈತರು ಉಪಸ್ಥಿತರಿದ್ದರು.

ಕೆರೆಗೆ ನೀರು ಹರಿಸಲು ಸೂಚನೆ

ಚಿಕ್ಕಮಲ್ಲನಹೊಳೆ ಕೆರೆ ಒತ್ತುವರಿಯಾಗಿರುವುದು ಗ್ರಾಮಸ್ಥರು ಗಮನಕ್ಕೆ ತಂದಿದ್ದು, 57 ಕೆರೆ ನೀರು ತುಂಬಿಸುವ ಯೋಜನೆಯಲ್ಲಿ ಚಿಕ್ಕಮಲ್ಲನಹೊಳೆ ಕೆರೆ ಅನುಮೋದನೆಗೊಂಡಿದೆ ಯಾವುದೇ ಕಾರಣಕ್ಕೂ ಅನುಮೋದನೆಗೊಂಡ ಕೆರೆಗಳಿಗೆ ನೀರು ತಪ್ಪಿಸಲು ಆಗುವುದಿಲ್ಲ ಕೆರೆಗೆ ನೀರು ಬಂದೆ ಬರುತ್ತದೆ ಯಾವುದೇ ಅನುಮಾನ ಬೇಡ ಎಂದು ಚಿಕ್ಕಮಲ್ಲನಹೊಳೆ ಗ್ರಾಮಸ್ಥರಿಗೆ ಶಾಸಕರು ಅಭಯ ನೀಡಿದರು.

> **ಕೆರೆಯ ಜಾಗವನ್ನು ಆಕ್ರಮವಾಗಿ ಪಟ್ಟಭದ್ರರರು ನೂರಾರು ವರ್ಷಗಳಿಂದ ಉಳಿಮೆ ಮಾಡಿಕೊಂಡು ಬಂದಿದ್ದಾರೆ ಗ್ರಾಮದಲ್ಲಿ ಕೆರೆ ಇರುವುದು 57 ಕೆರೆ ನೀರು ತುಂಬಿಸುವ ಯೋಜನೆಯಲ್ಲಿ ಅನುಮೋದನೆಗೊಂಡ ನಂತರ ಗ್ರಾಮಸ್ಥರಿಗೆ ಕೆರೆ ಇದೆ ಎಂಬುವುದು ಅರಿವಿಗೆ ಬಂದಿದೆ. ಖಚಿತವಾಗಿ ಚಿಕ್ಕಮಲ್ಲನಹೊಳೆ ಕೆರೆಗೆ ನೀರು ಬಂದೆ ಬರುತ್ತದೆ ಎಂದು ಶಾಸಕರು ಭರವಸೆ ನೀಡಿದ್ದಾರೆ.**
>
> – **ತಿಪ್ಪೇಸ್ವಾಮಿ ವಕೀಲರು,** ಚಿಕ್ಕಮಲ್ಲನಹೊಳೆ

ವ್ಯಸನ ಮುಕ್ತ ದಿನಾಚರಣೆ, ಸಂಯಮ, ಅರಿವು ಬೆಳೆಸಿಕೊಳ್ಳಿ

ವ್ಯಸನಗಳಿಂದ ಮನುಷ್ಯನ ಜೀವನ ಹಾಳು: ಎಡಿಸಿ

ಚಿತ್ರದುರ್ಗ: ಹಿಂದಿನ ದಿನಮಾನಗಳಲ್ಲಿ ದುಶ್ಚಟ ಎಂದರೆ ಕುಡಿತ, ಬೀಡಿ, ಸಿಗರೇಟ್, ಗುಟುಕಾ ಸೇವನೆಗೆ ಸೀಮಿತವಾಗಿತ್ತು. ಪ್ರಸ್ತುತ ದುಶ್ಚಟಗಳ ವ್ಯಾಪ್ತಿ ಎಲ್ಲೆ ಮೀರಿ ಹೋಗುತ್ತಿದೆ. ವಯಸ್ಸಿನ ಭೇದ ಭಾವಗಳಿಲ್ಲದೆ ಪ್ರತಿಯೊಬ್ಬರು ಸಂಯಮ ಹಾಗೂ ಅರಿವು ಬೆಳಸಿಕೊಳ್ಳುವ ಮೂಲಕ ದುಷ್ಚಟಗಳಿಂದ ದೂರವಿರುವಂತೆ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಶಿಕ್ಷಣ ಇಲಾಖೆ, ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಗುರುವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾದ ವ್ಯಸನಮುಕ್ತ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಮಹಾಂತ ಶಿವಯೋಗಿಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಯುವಜನತೆ ಮಾದಕ ವ್ಯಸನಗಳ ಕಡೆ ಆಕರ್ಷಣೆಯಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ವ್ಯಸನಗಳು ಮನುಷ್ಯನ ಜೀವನ ಹಾಳು ಮಾಡುವುದರ ಜೊತೆಗೆ, ಕುಟುಂಬ ಹಾಗೂ ಸಮಾಜದ ವ್ಯವಸ್ಥೆಯನ್ನು ಸಹ ಹಾಳುಗೆಡವುತ್ತವೆ. ಡಾ.ಮಹಾಂತ ಶಿವಯೋಗಿ ಸ್ವಾಮೀಜಿಗಳು ಮಹಾಂತ ಜೋಳಿಗೆ ಎಂಬ ಕಲ್ಪನೆ ರೂಪಿಸಿ, ದೇಶ ವಿದೇಶಗಳಲ್ಲಿ ಸಂಚರಿಸಿ, ಜನರ ದುಶ್ಚಟಗಳನ್ನು ತಮ್ಮ ಜೋಳಿಗೆ ತುಂಬಿಸಿಕೊಂಡು ವ್ಯಸನಮುಕ್ತರನ್ನಾಗಿಸಿ ಜನರ ಜೀವನ ಹಸನು ಮಾಡಿದರು ಎಂದರು.

ವಾರ್ತಾಧಿಕಾರಿ ಬಿ.ವಿ.ತುಕಾರಾಂರಾವ್ ಪ್ರಾಸ್ತಾವಿಕವಾಗಿ ಮಾತನಾಡಿ, ಡಾ.ಮಹಾಂತ ಶಿವಯೋಗಿ ಅವರ ಜನ್ಮದಿನವಾದ ಆಗಸ್ಟ್ 1 ದಿನವನ್ನು ರಾಜ್ಯ ಸರಕಾರ ವ್ಯಸನ ಮುಕ್ತ ದಿನವನ್ನಾಗಿ ಘೋಷಿಸಿದೆ. ಡಾ. ಮಹಾಂತ ಶಿವಯೋಗಿ ಸ್ವಾಮಿಗಳ ಪ್ರೇರಣೆಯಿಂದ ರಾಜ್ಯದ ಲಕ್ಷಾಂತರ ಜನ ವ್ಯಸನಗಳಿಂದ ಮುಕ್ತರಾಗಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ. ಸುಧೀರ್ಘ 42 ವರ್ಷಗಳ ಕಾಲ ನಾಡಿನಾದ್ಯಂತ ಸಂಚರಿಸಿ ಮಹಾಂತ ಜೋಳಿಗೆ ಹಿಡಿದು ಜನರಿಂದ ದುಶ್ಚಟಗಳ ಭಿಕ್ಷೆ ಪಡೆದು ಸ್ವಾಮೀಜಿಗಳು ಸಮಾಜದಲ್ಲಿ ಪರಿವರ್ತನೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದರು ಎಂದರು.

ಕಾರ್ಯಕ್ರಮದಲ್ಲಿ ಆಹಾರ ಇಲಾಖೆ ಸಹಾಯಕ ನಿರ್ದೇಶಕ ಎಸ್.ಕೆ.ಮಲ್ಲಿಕಾರ್ಜುನ್, ಡಾ.ಮಹಾಂತ ಶಿವಯೋಗಿಗಳ ಕುರಿತು ಉಪನ್ಯಾಸ ನೀಡಿದರು. ರಂಗಕರ್ಮಿ ಕೆ.ಪಿ.ಎಂ.ಗಣೇಶಯ್ಯ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ವ್ಯಸನ ಮುಕ್ತ ಸಮಾಜದ ನಿರ್ಮಾಣಕ್ಕಾಗಿ ಜಾಗೃತಿ ಜಾಥಾ: ವ್ಯಸನಮುಕ್ತ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಆಯೋಜಿಸಲಾದ ಜಾಗೃತಿ ಜಾಥಕ್ಕೆ ನಗರದ ಒನಕೆ ಓಬವ್ವ ವೃತ್ತದಲ್ಲಿ ಜಿ.ಪಂ. ಸಿಇಓ ಎಸ್.ಜೆ.ಸೋಮಶೇಖರ್ ಹಾಗೂ ಉಪವಿಭಾಗಧಿಕಾರಿ ಎಂ.ಕಾರ್ತಿಕ್ ಹಸಿರು ನಿಶಾನೆ ತೋರುವುದರ ಮೂಲಕ ಚಾಲನೆ ನೀಡಿದರು

ಮದ್ಯ ಮತ್ತು ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಕುರಿತು ಘೋಷಣೆ ಕೂಗುವುದರ ಜೊತೆಗೆ ಘೋಷವಾಕ್ಯಗಳ ಫಲಕಗಳನ್ನು ಹಿಡಿದು ವಿದ್ಯಾರ್ಥಿಗಳು ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳು ವ್ಯಸನ ಮುಕ್ತ ಸಮಾಜದ ನಿರ್ಮಾಣಕ್ಕಾಗಿ ಜಾಗೃತಿ ಜಾಥ ನಡೆಸಿದರು. ಒನಕೆ ಓಬವ್ವ ವೃತ್ತದಿಂದ ಆರಂಭವಾದ ಜಾಥಾ, ಮದಕರಿ ನಾಯಕ ವೃತ್ತ, ಅಂಬೇಡ್ಕರ್ ವೃತ್ತ, ಮಹಾವೀರ ವೃತ್ತ, ವಾಸವಿ ವೃತ್ತ ಮೂಲಕ ಪುನಃ ಒನಕೆ ಓಬವ್ವ ವೃತ್ತ ತಲುಪುವ ಮೂಲಕ ಸಂಪನ್ನಗೊಂಡಿತು. ಉಪವಿಭಾಗಧಿಕಾರಿ ಎಂ.ಕಾರ್ತಿಕ್, ಆಹಾರ ಇಲಾಖೆ ಸಹಾಯಕ ನಿರ್ದೇಶಕ ಎಸ್.ಕೆ.ಮಲ್ಲಿಕಾರ್ಜುನ್, ಪಿಆರ್‌ಇಡಿ ಇಲಾಖೆ ಎಇಇ ಹನುಮಂತಪ್ಪ, ರಂಗಕರ್ಮಿ ಕೆ.ಪಿ.ಎಂ.ಗಣೇಶಯ್ಯ ಸೇರಿದಂತೆ ಇತರೆ ಅಧಿಕಾರಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಡಾ.ಮಹಾಂತ ಶಿವಯೋಗಿಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಮಾತನಾಡಿದರು.

ಪಾಠದ ಜತೆಗೆ ಉತ್ತಮ ವ್ಯಕ್ತಿತ್ವ ರೂಢಿಸಿಕೊಳ್ಳಿ

ದಾವಣಗೆರೆ: ನಗರದ ಪ್ರತಿಷ್ಠಿತ ಜಿಎಂ ವಿಶ್ವವಿದ್ಯಾಲಯದ ಎಂಸಿಎ ವಿಭಾಗದ ಮೊದಲನೇ ವರ್ಷದ ವಿದ್ಯಾರ್ಥಿಗಳಿಗೆ ಮೂರು ದಿನದ ಜೀವನ ಕೌಶಲ್ಯತೆಗಳು ಮತ್ತು ಉದ್ಯೋಗ ಕೌಶಲ್ಯತೆಗಳ ಬಗ್ಗೆ ತರಬೇತಿ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಲಾಯಿತು.

ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕರಾದ ಶ್ರೀತೇಜಸ್ವಿ ಕಟ್ಟಿಮನಿ ಟಿ ಆರ್ ಮಾತನಾಡಿ, ಇಂದಿನ ಕೈಗಾರಿಕೆಗಳು ವಿದ್ಯಾರ್ಥಿಗಳಿಂದ ಉತ್ತಮ ಶೈಕ್ಷಣಿಕ ಶೇಕಡವಾರು ಜೊತೆಗೆ ಅತ್ಯುತ್ತಮ ವ್ಯಕ್ತಿತ್ವವನ್ನು ನಿರೀಕ್ಷಿಸುತ್ತಿದ್ದಾರೆ. ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವ ಕೌಶಲ್ಯ, ಶಿಸ್ತು, ಆಸಕ್ತಿ, ಬುದ್ಧಿವಂತಿಕೆ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ತಮ್ಮ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ಪಠ್ಯದ ಮಹತ್ವದ ಜೊತೆಗೆ ಉತ್ತಮ ವ್ಯಕ್ತಿತ್ವ ರೂಢಿಸಿಕೊಂಡಲ್ಲಿ ಕೈಗಾರಿಕೆಗಳಿಂದ ಉತ್ತಮ ಅವಕಾಶಗಳನ್ನು ಪಡೆಯಬಹುದಾಗಿದೆ ಎಂದು ತಿಳಿಸಿದರು.

ಈ ತರಬೇತಿ ಕಾರ್ಯಕ್ರಮವನ್ನು ಪುಣೆ ಮೂಲದ ಗ್ಲೋಬಲ್ ಟ್ಯಾಲೆಂಟ್ ಟ್ರ್ಯಾಕ್ ಸಂಸ್ಥೆಯ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಫ್ಯಾಕಲ್ಟಿ ಆಫ್ ಕಂಪ್ಯೂಟಿಂಗ್ ಅಂಡ್ ಐ ಟಿ ವಿಭಾಗದ ನಿರ್ದೇಶಕರು ಶ್ರೀರಾಜಶೇಖರ್ ಜಿ ಸಿ, ಬಿ ಸಿ ಎ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಉಷಾ ಎನ್, ಸಂಪನ್ಮೂಲ ವ್ಯಕ್ತಿಗಳಾದ ಶ್ರೀಧಾಮೋಧರನ್ , ವಿಭಾಗದ ಅಧ್ಯಾಪಕ ವರ್ಗದವರು ಮತ್ತು ವಿದ್ಯಾರ್ಥಿಗಳು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಶಾಲಾ ಕಟ್ಟಡಗಳ ದುರಸ್ತಿಗೆ ಶಾಸಕರ ಸೂಚನೆ

ಜಿಪಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವಿಧ ಇಲಾಖೆಗಳಿಂದ ಕೈಗೊಳ್ಳಲಾಗಿರುವ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನಾ ಸಭೆಯಲ್ಲಿ ಶಾಸಕರಾದ ಕೆ. ಎಸ್. ಬಸವಂತಪ್ಪ ಮಾತನಾಡಿದರು.

ದಾವಣಗೆರೆ: ಜಲಜೀವನ್ ಮಿಷನ್ ಯೋಜನೆಯಡಿ ಮುಕ್ತಾಯವಾಗಿರುವ ಕಾಮಗಾರಿಗಳಿಂದ ನೀರು ಸರಬರಾಜು ಮಾಡಲು ಮತ್ತು ಶಿಥಿಲಗೊಂಡಿರುವ ಅಂಗನವಾಡಿ ಹಾಗೂ ಶಾಲಾ ಕಟ್ಟಡ, ಶೌಚಾಲಯಗಳ ಕಾಮಗಾರಿಗಳನ್ನು ತಿಂಗಳಲ್ಲಿ ಪೂರ್ಣಗೊಳಿಸಿ ಜನರ ಬಳಕೆಗೆ ಮುಕ್ತವಾಗಿಸಬೇಕೆಂದು ಮಾಯಕೊಂಡ ಶಾಸಕರಾದ ಕೆ. ಎಸ್. ಬಸವಂತಪ್ಪ ಅಧಿಕಾರಿಗಳಿಗೆ ತಿಳಿಸಿದರು.

ಅವರು ಗುರುವಾರ ಜಿಲ್ಲಾ ಪಂಚಾಯತ್‌ನ ಎಸ್.ಎಸ್ ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವಿಧ ಇಲಾಖೆಗಳಿಂದ ಕೈಗೊಳ್ಳಲಾಗಿರುವ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಕ್ಷೇತ್ರದಲ್ಲಿ ವಿವಿಧ ಇಲಾಖೆಗಳಿಂದ ಅನುಷ್ಠಾನ ಮಾಡುತ್ತಿರುವ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಬಾಕಿ ಉಳಿಸಿಕೊಳ್ಳಲಾಗಿದೆ, ಕುಡಿಯುವ ನೀರು, ಚರಂಡಿ, ಶಾಲಾ ಕಟ್ಟಡ, ರಸ್ತೆ, ಅಂಗನವಾಡಿ ಸೇರಿದಂತೆ ಗ್ರಾಮಗಳಿಗೆ ಅಗತ್ಯವಿರುವ ಕಾಮಗಾರಿಗಳಿದ್ದು ಈ ಎಲ್ಲಾ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕಾಗಿದೆ ಎಂದರು.

ಮನೆಗಳಿಗೆ ನಲ್ಲಿ ಅಳವಡಿಸುವಾಗ ಪ್ರತಿಯೊಂದು ಮನೆಗಳ ಸರ್ವೆ ಮಾಡಿ ನಲ್ಲಿ ಸಂಪರ್ಕ ಕಲ್ಪಿಸಬೇಕು. ನಲ್ಲಿ ಅಳವಡಿಸುವಾಗ ಗುಣಮಟ್ಟದ ಪೈಪ್ ಅಳವಡಿಸಬೇಕು ಮತ್ತು ಪೈಪ್‌ಲೈನ್ ಮಾಡಿದ ನಂತರ ಗುಂಡಿಯನ್ನು ಸರಿಯಾಗಿ ಮುಚ್ಚಿ ಕಾಂಕ್ರೀಟ್ ರಸ್ತೆಗಳಾಗಿದ್ದಲ್ಲಿ ಪುನಃ ಕಾಂಕ್ರೀಟ್ ಹಾಕಬೇಕು. ಕಳಪೆ ಕಾಮಗಾರಿ ಕೈಗೊಂಡಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಮತ್ತು ಗುತ್ತಿಗೆದಾರರ ಮೇಲೆ ಕ್ರಮಕ್ಕೆ ಒತ್ತಾಯಿಸಲಾಗುತ್ತದೆ ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಉಪಕಾರ್ಯದರ್ಶೀ ಕೃಷ್ಣನಾಯ್ಕ, ಜಿಪಂ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ ಉಪಸ್ಥಿತರಿದ್ದರು.

> **ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆ, ಮನೆ ಮನೆಗೆ ಕಲ್ಪಿಸಿರುವ ನಲ್ಲಿ ನೀರು ಸಂಪರ್ಕದ ಬಗ್ಗೆ ಗ್ರಾಮೀಣ ನೀರು ಪೂರೈಕೆ ವಿಭಾಗದ ಇಂಜಿನಿಯರ್‌ರಿಂದ ಮಾಹಿತಿ ಪಡೆದು, ನರೇಗಾ ಯೋಜನೆಯಡಿ ಶಾಲೆಯಲ್ಲಿನ ಮಕ್ಕಳ ಭೋಜನಾಲಯ ಮತ್ತು ನೀರು ನಿರ್ವಹಣಾ ಕಾಮಗಾರಿಗಳನ್ನು ತೆಗೆದುಕೊಂಡು ಪೂರ್ಣಗೊಳಿಸಲು ಇಂಜಿನಿಯರ್‌ಗೆ ತಿಳಿಸಿದ್ದೇನೆ**
>
> – **ಕೆ.ಎಸ್ ಬಸವಂತಪ್ಪ,** ಶಾಸಕ

ಶಿಕ್ಷಣದಿಂದ ಸಾಮಾಜಿಕ ಪರಿವರ್ತನೆ ಸಾಧ್ಯ

ಹೊಳಲ್ಕೆರೆ: ಶಿಕ್ಷಣದಿಂದ ಸಾಮಾಜಿಕ ಪರಿವರ್ತನೆ ಸಾಧ್ಯ. ವಿದ್ಯಾರ್ಥಿಗಳು ಸತತ ಅಧ್ಯಯನ ಜತೆ ಮಾನವೀಯ ಮೌಲ್ಯಗಳನ್ನು ಬದುಕಿಗೆ ಅಳವಡಿಸಿಕೊಳ್ಳಬೇಕೆಂದು ಹೈಕೋರ್ಟ್ ವಿಶ್ರಾಂತ ನ್ಯಾಯಾಮೂರ್ತಿ ಹೆಚ್.ಬಿಲ್ಲಪ್ಪ ತಿಳಿಸಿದರು. ಅವರು ತಾಲೂಕು ದಲಿತ ಸಂಘರ್ಷ ಸಮಿತಿ ಬುಧವಾರ ಪಟ್ಟಣದ ಎಸ್.ಟಿ.ಹಾಸ್ಟೆಲ್ ಆವರಣದಲ್ಲಿ ಹಮ್ಮಿಕೊಂಡ ಡಾ.ಬಾಬಾ ಸಾಹೇಬ್ ಬಿ.ಆರ್. ಅಂಬೇಡ್ಕರ್ ಹೋರಾಟದ ಕರೆಗೆ ಶತಮಾನದ ಸಂಭ್ರಮ ಮತ್ತು ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಮಹನ್ ಸಾಧಕರು, ಅವರ ಸಾಧನೆ ನಮಗೇಲ್ಲ ದಾರಿ ದೀಪವಾಗಬೇಕು. ಪ್ರತಿಯೊಬ್ಬರು ಸಂವಿಧಾನವನ್ನು ಚನ್ನಾಗಿ ಓದಿಕೊಳ್ಳಬೇಕು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬದುಕು ಅಳವಡಿಸಿಕೊಂಡಾಗ ದೇಶದ ಉತ್ತಮ ಪ್ರಜೆಯಾಗಿಲು ಸಾಧ್ಯ ಎಂದು ಸಲಹೆ ನೀಡಿದರು. ತಾಲೂಕು ಸಂಚಾಲಕ ಡಿ.ರುದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ತಹಸೀಲ್ದಾರ್ ಬೀಬಿ ಫಾತೀಮಾ, ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್, ಸತ್ಯ ಭದ್ರಾವತಿ, ರಾಜ್ಯ ಸಮಿತಿ ಸದಸ್ಯ ಟಿ.ಕಸ್ತೂರಪ್ಪ, ಮಹಾಲಿಂಗಪ್ಪ ಕುಂಚಿಗನಾಳ್, ಶ್ರೀನಿವಾಸ್, ಕೆ.ರಾಜಣ್ಣ, ಮಲ್ಲಿಕಾರ್ಜುನ್, ಮಂಜುನಾಥ್, ಪುರಸಭೆ ಸದಸ್ಯರಾದ ವಸಂತರಾಜ್, ಬೊಮ್ಮನಕಟ್ಟೆ ಕುಮಾರ್, ವಕೀಲರಾದ ವಿಜಯಕುಮಾರ್, ಕೆಂಗಪ್ಪ, ಚನ್ನಬಸಪ್ಪ, ಪಿಎಸ್ಐ ಸುರೇಶ್, ರಾಜಪ್ಪ, ಚಂದ್ರಪ್ಪ, ವಾಲ್ಮೀಕಿ ಸಮಾಜದ ಅಧ್ಯಕ್ಷ ಸೂರೇಗೌಡ್ರು, ಎ.ಚಿತ್ತಪ್ಪ, ಮತ್ತೀತರರು ಪಾಲ್ಗೊಂಡಿದ್ದರು.

ಸಮಾಚಾರ ಸಣ್ಣದಲ್ಲ

ಪ್ರತಿಭಾವಂತ ಮಕ್ಕಳಿಗೆ ಪಾರಿತೋಷಕ ಆಹ್ವಾನ

ಶಿವಮೊಗ್ಗ: ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘವು ಪ್ರಸಕ್ತ ಸಾಲಿನಲ್ಲಿ ಸಂಘದ ಸದಸ್ಯರ ಮಕ್ಕಳಿಗೆ ಪಾರಿತೋಷಕವನ್ನು ನೀಡುತ್ತಿದ್ದು, ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಎಸ್.ಎಸ್.ಎಲ್.ಸಿಯಿಂದ ಹಿಡಿದು ಎಲ್ಲ ಬಗೆ ಪದವಿ ಕೋರ್ಸ್‌ಗಳಲ್ಲಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸುವರ್ಣ ಮಹೋತ್ಸವದ ಪಾರಿತೋಷಕವನ್ನು ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ವಜ್ರ ಮಹೋತ್ಸವ ಪಾರಿತೋಷಕವನ್ನು ಹಾಗೆಯೇ ರಾಜ್ಯ ಮಟ್ಟ, ರಾಷ್ಟ್ರ ಮಟ್ಟ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಪುರಸ್ಕಾರ ಪಡೆದ ಸದಸ್ಯರ ಮಕ್ಕಳಿಗೆ ಪಾರಿತೋಷಕವನ್ನು ಮಾಮ್ಕೋಸ್ ವತಿಯಿಂದ ನೀಡಲಾಗುವುದು. ಸೆಪ್ಟಂಬರ್ 30ರೊಳಗಾಗಿ ಅರ್ಜಿ ಮತ್ತು ಅಂಕಪಟ್ಟಿಯ ನಕಲನ್ನು ಸಂಘದ ಶಾಖೆಗಳಿಗೆ ಅಥವಾ ಕೇಂದ್ರ ಕಚೇರಿಗೆ ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಪದ್ಮಶ್ರೇಣಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಶಿವಮೊಗ್ಗ: ವಿಕಲಚೇತನರ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆಯ ವಿಕಲಚೇತನ ವ್ಯಕ್ತಿಗಳಿಗೆ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಅತ್ಯುತ್ತಮ ಸೇವೆ ಮಾಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಲ್ಲಿನ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಪದ್ಮಶ್ರೇಣಿ ಪ್ರಶಸ್ತಿಗಳನ್ನು ಕೇಂದ್ರ ಸರ್ಕಾರದಿಂದ ಕೊಡ ಮಾಡುತ್ತಿದ್ದು, ಅರ್ಹ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಆಸಕ್ತರು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಯಿಂದ ಅರ್ಜಿ ಪಡೆದು, ದಾಖಲೆಗಳನ್ನು ಲಗತ್ತಿಸಿ ಆಗಸ್ಟ್ 31ರೊಳಗಾಗಿ ಕಳುಹಿಸುವಂತೆ ತಿಳಿಸಿರುತ್ತಾರೆ. ಮಾಹಿತಿಗೆ ದೂ.08182-295234/251676 ಸಂಪರ್ಕಿಯಿಸಿ.

ಒಳ ಮೀಸಲು ತೀರ್ಪಿಗೆ ಸ್ವಾಗತ

ಶಿವಮೊಗ್ಗ: ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ರಾಜ್ಯ ಸರಕಾರಗಳು ಒಳಮೀಸಲಾತಿ ನೀಡಬಹುದು ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಮಾದಿಗ ಮೀಸಲಾತಿ ಹೋರಾಟ ಸಮಿತಿ ಸ್ವಾಗತಿಸಿದೆ. ಈ ಐತಿಹಾಸಿಕ ತೀರ್ಪಿನಿಂದಾಗಿ ಆಂಧ್ರ, ತೆಲಂಗಾಣ, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಿಗೆ ಸಂಪೂರ್ಣ ನ್ಯಾಯ ಸಿಕ್ಕಿದೆ. 30 ವರ್ಷಗಳ ಹೋರಾಟಕ್ಕೆ ನ್ಯಾಯ ಸಿಕ್ಕಿದೆ. ರಾಜ್ಯ ಸರಕಾರ ಸುಪ್ರೀಂ ಕೋರ್ಟ್ ಆದೇಶದಂತೆ ನ್ಯಾಯ ಕಲ್ಪಿಸಬೇಕೆಂದು ಸಂಘಟನೆಯ ಜಿಲ್ಲಾ ಗೌರವಾಧ್ಯಕ್ಷ ರಂಗನಾಥ್, ಜಿಲ್ಲಾಧ್ಯಕ್ಷ ವೆಂಕಟೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಬಾನುಪ್ರಸಾದ್, ಮುಖಂಡರಾದ ಗಂಗಾಧರ್ ತಿಳಿಸಿದ್ದಾರೆ.

ಅಗಲಿದ ಜೀವ

ರಮೇಶ ಗಜಾನನ ಶಾಸ್ತ್ರಿ

ಸೊರಬ: ಯಕ್ಷಗಾನ ಕಲಾವಿದ, ಕ್ರಿಯಾಶೀಲ ಶಿಕ್ಷಕ ರಮೇಶ ಗಜಾನನ ಶಾಸ್ತ್ರಿ (59) ಮಂಗಳವಾರ ಸಂಜೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಪತ್ನಿ ಶಿಕ್ಷಕಿ

ಉಷಾ, ಇಬ್ಬರು ಪುತ್ರರು ಸೇರಿದಂತೆ ಬಂಧುಗಳನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಯಕ್ಷಗಾನ ಬಳಗದ ಹರೀಶ ಭಟ್ಟ, ಪುರಸಭೆ ಮಾಜಿ ಉಪಾಧ್ಯಕ್ಷ ಮಧುರಾಯ್ ಶೇಟ, ಪ್ರಮುಖರಾದ ಡಾ.ಎಂ.ಕೆ.ಭಟ್, ಕಾಳಿಂಗ ರಾಜ್, ಮಹೇಶ ಗೋಖಲೆ, ಸತ್ಯನಾರಾಯಣ ರಾವ್, ದತ್ತಾತ್ರೆಯ ಪುರಾಣಿಕ್, ಸರಸ್ವತಿ ನಾವಡ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಕೋಟೆ ನಾಗರಾಜ ಗೌಡ

ಹೊಸನಗರ: ಹೊಸನಗರ ತಾಲೂಕು ಎಂ ಗುಡ್ಡೆಕೊಪ್ಪ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೋಟೆ ನಾಗರಾಜ್(46) ಅನಾರೋಗ್ಯದ ಕಾರಣ

ಶಿವಮೊಗ್ಗದ ಮೆಗಾನ್ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಇವರು ತಾಯಿ, ಪತ್ನಿ ಅಕ್ಕ ಹಾಗೂ ಸಣ್ಣ-ಸಣ್ಣ ಇಬ್ಬರು ಮಕ್ಕಳು ಹಾಗೂ ಅಪಾರ ಬಂಧು ಬಳಗದವರನ್ನು ಬಿಟ್ಟು ಆಗಲಿದ್ದಾರೆ. ಸಂತಾಪ: ಇವರ ನಿಧನಕ್ಕೆ ಎಂ ಗುಡ್ಡೆಕೊಪ್ಪ ಗ್ರಾಮ ಪಂಚಾಯತಿಯ ಅಧ್ಯಕ್ಷ ಓಂಕೇಶ ಗೌಡ ಸದಸ್ಯರಾದ ದಿವ್ಯ ಪ್ರವೀಣ್, ಮಹೇಂದ್ರ, ಕಾಲುಸಸಿ ಸತೀಶ್ ಇನ್ನೂ ಮುಂತಾದವರು ಇವರ ಮನೆಗೆ ತೆರಳಿ ಸಂತಾಪ ಸೂಚಿಸಿದ್ದಾರೆ.

{ಡಾ.ಅಶ್ವತ್ಥ್ ನಾರಾಯಣ್} ಮಾಜಿ ಉಪಮುಖ್ಯಮಂತ್ರಿ

ಮಳೆಹಾನಿ ಪರಿಸ್ಥಿತಿ ನಿಭಾಯಿಸುವಲ್ಲಿ ಸರಕಾರ ವಿಫಲವಾಗಿದೆ. ಕಾಳಜಿ ಕೇಂದ್ರಗಳನ್ನು ಆರಂಭಿಸಿರುವುದು ಬಿಟ್ಟರೆ ಬೇರೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಪ್ರವಾಹ ಮತ್ತು ಭೂಕುಸಿತದಿಂದ ಸಂಭವಿಸುವ ಸಮಸ್ಯೆಗಳಿಗೆ ಸರಕಾರ ಶಾಶ್ವತ ಪರಿಹಾರ ಸೂಚಿಸಬೇಕು. ಬೆಳೆ, ಮನೆ ಹಾನಿ ಪರಿಹಾರ ಶೀಘ್ರ ಬಿಡುಗಡೆ ಮಾಡಬೇಕು.

ಮಾದಕ ವಸ್ತುಗಳು ಸುಲಭ ಸಿಗುವುದೇ ವ್ಯಸನಕ್ಕೆ ಕಾರಣ

ದಿನಸಿ ಅಂಗಡಿಗಿಂತ ಮುಂಚೆ ಬಾಗಿಲು ತೆರೆಯುವ ಮದ್ಯದಂಗಡಿ : ಶಾಸಕ

ಶಿವಮೊಗ್ಗ: ಮಾದಕ ವಸ್ತುಗಳು ಸುಲಭವಾಗಿ ಮತ್ತು ಹತ್ತಿರದಲ್ಲೇ ಸಿಗುತ್ತಿರುವುದೇ ವ್ಯಸನಕ್ಕೆ ಹೆಚ್ಚಿನ ಶಕ್ತಿ ಬಂದಂತಾಗಿದೆ ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ವಿಷಾದ ವ್ಯಕ್ತಪಡಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಕ್ಷಣಾ ಇಲಾಖೆ ಹಾಗೂ ಹಲವು ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಮಾದಕ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಯಾವುದರಿಂದ ದೂರ ಇರಬೇಕು ಎಂದು ಹೇಳುತ್ತೇವೆಯೋ ಅವುಗಳೇ ಹತ್ತಿರದಲ್ಲಿ ಸಿಗುತ್ತಿರುವುದು ವಿಪರ್ಯಾಸ. ಮಾದಕ ವಸ್ತು ಸಿಗುವ ಅಂಗಡಿಗಳು ದಿನಸಿ ಅಂಗಡಿಗಳಿಗಿಂತ ಮುಂಚಿತವಾಗಿಯೇ ಬಾಗಿಲು ತೆರೆಯುತ್ತವೆ. ಗಾಂಧೀಜಿ ಯಾವುದನ್ನು ಬೇಡ ಎಂದರೋ ಅದನ್ನೇ ಸರ್ಕಾರ ವಿಶೇಷ ಮಳಿಗೆಗಳ ಮೂಲಕ ಮಾರಾಟ ಮಾಡುತ್ತಿರುವುದು ಅತ್ಯಂತ ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಶಾಲಾ ಕಾಲೇಜುಗಳ, ಧರ್ಮ ಮಂದಿರಗಳ ಸುತ್ತ 100 ಅಡಿ ಅಂತರದಲ್ಲಿ ಮಾದಕ ವಸ್ತುಗಳು ಸಿಗುವ ಅಂಗಡಿಗಳು ಇರುವಂತಿಲ್ಲ ಎಂಬ ನಿಯಮವಿದೆ. ಆದರೆ ಮಾದಕ ವಸ್ತುಗಳನ್ನು ಇಷ್ಟಪಡುವ ವ್ಯಕ್ತಿ 100 ಅಡಿ ಅಷ್ಟೇ ಅಲ್ಲ ಕಿಲೋಮೀಟ್ಟಲೆ ಹೋಗಬಲ್ಲ, ಆದ್ದರಿಂದ ಮಾದಕ ವಸ್ತುಗಳೇ ಸಿಗದಂತಾಗಬೇಕು, ಆಗ ಮಾತ್ರ ಇಂತಹ ಆಚರಣೆಗೆ ಅರ್ಥ ಬರುತ್ತದೆ ಎಂದು ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಹಲವು ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಮಾದಕ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮವನ್ನು ಶಾಸಕ ಎಸ್.ಎನ್.ಚನ್ನಬಸಪ್ಪ ಉದ್ಘಾಟಿಸಿದರು.

ನಮ್ಮ ಯೋಚನಾ ಶಕ್ತಿ ಬದಲಾಗಬೇಕು. ನಮಗೆ ಹಾಗೂ ನಮ್ಮ ಆರೋಗ್ಯಕ್ಕೆ ಯಾವುದು ಕೆಡುಕನ್ನು ಉಂಟು ಮಾಡುತ್ತದೋ ಅದನ್ನು ಕಾಲಿನಿಂದ ಒದೆಯುವಂತಾಗಬೇಕು.

ಮಾದಕ ವಸ್ತುಗಳಿಂದ ದೂರವಿರಬೇಕೆಂಬ ದೃಢ ಮನೋ ನಿರ್ಧಾರವನ್ನು ಹೊಂದಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಹೆಚ್ಚುವರಿ ರಕ್ಷಣಾಧಿಕಾರಿ ಅನಿಲ್‌ಕುಮಾರ ಭೂಮರೆಡ್ಡಿ ಮಾತನಾಡಿ, ಮಹಾಂತ ಶಿವಯೋಗಿಗಳ ಜನ್ಮ ದಿನದಂದು ಮಾದಕ ವ್ಯಸನ ಮುಕ್ತ ದಿನ ಆಚರಿಸುತ್ತಿದ್ದೇವೆ. ಆ ಮಹನೀಯರು ಪ್ರಾತಃಕಾಲ ಸ್ಮರಣೀಯರು. ಅವರು ತಮ್ಮ ಜೋಳಿಗೆಯ ಮೂಲಕ ತಿರುಗಿ ಜನರನ್ನು ಮಾದಕ ವಸ್ತುಗಳಿಂದ ಮುಕ್ತರನ್ನಾಗಿ ಮಾಡಿದರು ಎಂದು ಹೇಳಿದರು.

ಡಿಎಚ್‌ಒ ಡಾ.ನಟರಾಜ್, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಮಾರುತಿ, ಡಿಡಿಪಿಐ ಪರಮೇಶ್ವರ, ಡಾ.ಪ್ರಮೋದ್, ಡಾ. ಕಿರಣ್, ಉಮೇಶ್ ವಾರ್ತಾ ಇಲಾಖೆಯ ಭಾಗ್ಯ, ಸತೀಶ್ ಇತರರು ಉಪಸ್ಥಿತರಿದ್ದರು.

ಲಿಂಗನಮಕ್ಕಿಯಿಂದ ಶರಾವತಿಗೆ 10 ಸಾವಿರ ಕ್ಯು ಸೆಕ್ ಬಿಡುಗಡೆ

ಶಿವಮೊಗ್ಗ: ಜಿಲ್ಲೆಯ ಸಾಗರ ತಾಲೂಕಿನ ಶರಾವತಿ ನದಿ ಕಣಿವೆಯ ಲಿಂಗನಮಕ್ಕಿ ಜಲಾಶಯದಿಂದ ಗುರುವಾರ ನೀರು ಬಿಡುಗಡೆ ಮಾಡಲಾಗಿದೆ. ಸುಮಾರು 10 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿದ್ದು 3 ಗೇಟ್ ಗಳ ಮೂಲಕ ನೀರು ಹರಿಸಲಾಗಿದೆ.

1819 ಅಡಿ ಸಾಮರ್ಥ್ಯ ಹೊಂದಿರುವ ಜಲಾಶಯ, ಈಗಾಗಲೇ 1814 ಅಡಿ ಭರ್ತಿಯಾಗಿದ್ದು ಒಳ ಅರಿವು 5361 ಕ್ಯೂಸೆಕ್ ಇರುವ ಹಿನ್ನೆಲೆಯಲ್ಲಿ ನೀರಾವರಿ ಅಧಿಕಾರಿಗಳು ನೀರು ಹರಿಸಿದ್ದಾರೆ. ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಾಸಕ ಬೇಳೂರು ಗೋಪಾಲಕೃಷ್ಣ ಗೇಟ್ ಗಳಿಗೆ ಪೂಜೆ ಸಲ್ಲಿಸಿ ನೀರು ಬಿಡುಗಡೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕೆಪಿಸಿ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಗಿಡಮರ ಆರೈಕೆ, ರಕ್ಷಣೆ ನಮ್ಮ ಹೊಣೆ

ಸೊರಬ: ಗಿಡಮರಗಳು ಪರಿಸರದ ಸಮತೋಲನಕ್ಕೆ ಕಾರಣವಾಗಿದೆ. ಇವುಗಳ ಆರೈಕೆ ಮತ್ತು ರಕ್ಷಣೆ ನಮ್ಮೆಲ್ಲರ ಹೊಣೆ ಎಂದು ಯುವ ಬ್ರಿಗೇಡ್ ಜಿಲ್ಲಾ ಸಂಚಾಲಕ ಮಹೇಶ್ ಖಾರ್ ಹೇಳಿದರು.

ಪಟ್ಟಣದ ಬಡಾವಣೆಯಲ್ಲಿ ಕಾರ್ಗಿಲ್ ವಿಜಯೋತ್ಸವ 25 ವರ್ಷದ ನೆನಪಿಗಾಗಿ ಹಮ್ಮಿಕೊಂಡಿದ್ದ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕಾರ್ಗಿಲ್ ಯುದ್ಧದಲ್ಲಿ ನಮ್ಮ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ವೀರ ಸೈನಿಕರ ಹೆಸರಿನಲ್ಲಿ ಅವರ ಸ್ಮರಣೆಗಾಗಿ ಗಿಡಗಳನ್ನು ನೆಡಲಾಗಿದೆ. ನೆಟ್ಟ ಗಿಡಗಳನ್ನು ತಮ್ಮ ಮಕ್ಕಳಂತೆ ಪೋಷಿಸುವ ಜವಾಬ್ದಾರಿ ಯನ್ನು ಪ್ರತಿಯೊಬ್ಬ ನಾಗರಿಕ ಹೊರಬೇಕು ಎಂದರು. ಸಂಚಾಲಕ ರಂಗನಾಥ

ಮೊಗೇರ, ಹೊಸಪೇಟೆ ಬಡಾವಣೆ ಮತ್ತು ಬಸವೇಶ್ವರ ನಗರದಲ್ಲಿ ಹೊಂಗೆ, ಮಾವು, ರಾಮಫಲ, ಹಲಸು, ಹೀಗೆ ವಿವಿಧ ಜಾತಿಯ ಗಿಡಗಳನ್ನು ನೆಡಲಾಯಿತು. ಈ ಸಂದರ್ಭದಲ್ಲಿ ಯುವಾ ಬ್ರಿಗೇಡ್‌ನ ಕಿರಣ್, ಅರುಣ, ಹೃತಿಕ್ ಇದ್ದರು.

ಹೆಣ್ಣು ಮಕ್ಕಳಿಂದ ಸಂಸ್ಕಾರಯುತ ಸಮಾಜ



ಕಸ್ತೂರಬಾ ಕಾಲೇಜಿನ ವಿದ್ಯಾರ್ಥಿ ಸಾಂಸ್ಕೃತಿಕ ವೇದಿಕೆಯನ್ನು ಜಿ.ಎಸ್.ನಾರಾಯಣ ಉದ್ಘಾಟನೆ ಮಾಡಿದರು.

ಶಿವಮೊಗ್ಗ: ಪ್ರೌಢಿಮೆ ಮತ್ತು ಉತ್ತಮ ಶಿಕ್ಷಣದಿಂದ ಹೆಣ್ಣು ಮಕ್ಕಳು ಸಂಸ್ಕಾರಯುತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷರಾದ ಜಿ.ಎಸ್.ನಾರಾಯಣ ರಾವ್ ಅಭಿಪ್ರಾಯಪಟ್ಟರು.

ನಗರದ ರಾಷ್ಟ್ರೀಯ ಶಿಕ್ಷಣ ಸಮಿತಿಯ ಕಸ್ತೂರಬಾ ಬಾಲಿಕಾ ಪದವಿಪೂರ್ವ ಕಾಲೇಜಿನ ವತಿಯಿಂದ ಗುರುವಾರ ಕುವೆಂಪು ರಂಗಮಂದಿರಲ್ಲಿ ಏರ್ಪಡಿಸಿದ್ದ ಕಾಲೇಜು 2024-25 ನೇ ಸಾಲಿನ ವಿದ್ಯಾರ್ಥಿ ಸಾಂಸ್ಕೃತಿಕ ವೇದಿಕೆ, ಕ್ರೀಡಾ ವಿಭಾಗ ಸೇರಿದಂತೆ ವಿವಿಧ ಘಟಕಗಳ ಉದ್ಘಾಟನಾ ಸಮಾರಂಭ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಒಂದು ಮೊಟ್ಟೆಯನ್ನು ಒಡೆದಾಗ ಜೀವ ಹಾನಿಯಾಗುತ್ತದೆ, ಅದೇ ತಾನಾಗಿಯೆ ಒಡೆದರೆ ಜೀವಾಂಕುರವಾಗುತ್ತದೆ. ಅಂತಹ ಜೀವಾಂಕುರ ಹೊಂದಿದ ಅಂತಃ ಶಕ್ತಿ ನಿಮ್ಮದಾಗಲಿ. ರಾಷ್ಟ್ರೀಯ ಶಿಕ್ಷಣ ಸಮಿತಿ ಕಾರ್ಯದರ್ಶಿ ಎಸ್.ಎನ್.ನಾಗರಾಜ ಮಾತನಾಡಿ, ವೈಜ್ಞಾನಿಕ ಮನೋಭಾವದೊಂದಿಗೆ ಯಾವುದೇ ವಿಷಯಗಳಲ್ಲಿ ವಾಸ್ತವತೆಯ ವಿಮರ್ಶೆಯೊಂದಿಗೆ ಆಚರಣೆಗೆ ತರಲು ಪ್ರಯತ್ನಿಸಿ. ಇಲ್ಲವಾದಲ್ಲಿ ಅದು ಅಂಧ ಶ್ರದ್ಧೆಯಾಗಿ ಉಳಿದುಬಿಡುತ್ತದೆ. ನಮ್ಮ ಸಂಸ್ಕೃತಿ, ಆಚರಣೆ, ಕಲಿಕೆ ಎಲ್ಲವನ್ನು ಮುಕ್ತವಾಗಿ ವಿಮರ್ಶಿಸಿ ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲರಾದ ಎಸ್.ಆರ್.ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಕೆ.ಆರ್.ಉಮೇಶ್, ಶಾಯಿಸ್ತಾ ರಿಯಾಜ್, ಹೇಮಾವತಿ ಜಿ.ಡಿ, ಶಾಲಿನಿ, ಲಕ್ಷ್ಮೀ ಬಾಯಿ ಸೇರಿದಂತೆ ಉಪಸ್ಥಿತರಿದ್ದರು.

> **ಪರಿಪೂರ್ಣ ವ್ಯಕ್ತಿತ್ವಕ್ಕಾಗಿ ಸಂಸ್ಕಾರ ಮತ್ತು ಸಾಂಸ್ಕೃತಿಕ ನೆಲೆಗಟ್ಟುಗಳು ಬೇಕಿದೆ. ಅಂತಹ ನೆಲೆಗಟ್ಟುಗಳ ಮೂಲ ಬೇರು ಮನೆ ಕುಟುಂಬದ ಆಧಾರದ ಮೇಲೆ ನಿಂತಿದೆ. ಎಲ್ಲಿ ಒಳ್ಳೆಯ ಸಂಸಾರವಿರುತ್ತದೆ, ಅಲ್ಲಿ ಉತ್ತಮ ಸಂಸ್ಕಾರವಿರುತ್ತದೆ. ಭವಿಷ್ಯದ ಪ್ರಜೆಗಳಾಗಿ ಹೊರಹೊಮ್ಮುವ ನಿಮಗೆ ಸಂಸ್ಕಾರ ಆತ್ಮವಿಶ್ವಾಸ ನೀಡಲಿದೆ ಎಂದು ಹೇಳಿದರು.**
> - ಜಿ.ಎಸ್.ನಾರಾಯಣರಾವ್, ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷರಾದ

ಹೊಳೆಹೊನ್ನೂರು ಸುತ್ತ ಪ್ರವಾಹ ಪರಿಸ್ಥಿತಿ ವೀಕ್ಷಣೆ

ಹೊಳೆಹೊನ್ನೂರು ಸುತ್ತಲಿನ ಗ್ರಾಮಗಳಿಗೆ ಉಪ ವಿಭಾಗಾಧಿಕಾರಿ ಸತ್ಯನಾರಾಯಣ ಭೇಟಿ ನೀಡಿ ಪರಿಶೀಲಿಸಿದರು.

ಭದ್ರಾವತಿ: ತುಂಗಭದ್ರಾ ನದಿಗಳು ತುಂಬಿ ಹರಿಯುತ್ತಿರುವುದರಿಂದ ಹೊಳೆ ಹೊನ್ನೂರು ಪಟ್ಟಣ ಸುತ್ತಮುತ್ತಲಿನ ಗ್ರಾಮಗಳಲ್ಲಿ ಪ್ರವಾಹ ಸ್ಥಿತಿ ನಿರ್ಮಾಣ ವಾಗಿದೆ.

ಪಟ್ಟಣದ ಎಡಿ ಕಾಲೋನಿ ಯಲ್ಲಿ 13 ಮನೆಗಳಿಗೆ ನೀರು ನುಗಿದ ಪರಿಣಾಮ ತಡ ರಾತ್ರಿಯಲ್ಲಿ ಕುಟುಂಬ ಗಳನ್ನು ಸ್ಥಳಾಂತರ ಮಾಡಲಾಗಿದೆ. 10 ಕುಟುಂಬಗಳನ್ನು ಪಟ್ಟಣದ ಬಿಸಿಎಂ ಹಾಸ್ಟೆಲ್‌ನಲ್ಲಿ ನಿರಾಶ್ರಿತರ ಕೇಂದ್ರಗಳಲ್ಲಿ ಇರಿಸಲಾಗಿದೆ.

ಉಪ ವಿಭಾಗಾಧಿಕಾರಿ ಸತ್ಯನಾರಾ ಯಣ ಭೇಟಿ ನೀಡಿ ಪರಿಶೀಲಿಸಿದರು.

ವಡೇರಪುರ ಎಡಿ ಕಾಲೋನಿ ಬಳಿ ನದಿ ದಂಡೆಯಲ್ಲಿ ನಿರ್ಮಾಣ ಮಾಡಿರುವ ಚಿಕ್ಕ ತಡೆಗೋಡೆ ಯಿಂದ ಯಾವುದೇ ಪ್ರಯೋಜನವಿಲ್ಲ, ಗ್ರಾ. ಪಂ. ಅಭಿವೃದ್ಧಿ ಅಧಿಕಾರಿ ಕೂಡಲೆ ಸ್ಥಳ ಪರೀಶಿಲನೆ ನಡೆಸಿ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಬೇಕು. ನದಿ ಪಾತ್ರದ ಜನರಿಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಯೋಜನೆ ಗಳನ್ನು ರೂಪಿಸಬೇಕು ಎಂದರು.

ಪಿಜಿ ಸಿಇಟಿ ಪರೀಕ್ಷೆ ಸಿದ್ಧತೆಗೆ ಸೂಚನೆ

ಶಿವಮೊಗ್ಗ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಆ.4 ರಂದು ಪಿಜಿಯ ಸಿಇಟಿ ಪರೀಕ್ಷೆ ನಗರದ ಒಟ್ಟು 07 ಪರೀಕ್ಷಾ ಕೇಂದ್ರಗಳಲ್ಲಿ ನಡೆಯುತ್ತಿದ್ದು, ಪರೀಕ್ಷೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಡಳಿತ ಕಚೇರಿಯ ಕಚೇರಿ ಸಹಾಯಕರಾದ ಪ್ರದೀಪ್ ನಿಕ್ಕಂ ತಿಳಿಸಿದರು. ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಪರೀಕ್ಷಾ ಕೇಂದ್ರಗಳಲ್ಲಿ ಸೂಕ್ತ ಆಸನ ವ್ಯವಸ್ಥೆ, ಮೂಲ ಸೌಕರ್ಯ ಇರಲಿ. ಪರೀಕ್ಷೆ ಪಾರದರ್ಶಕವಾಗಿ ನಡೆಯಲು ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು. ಆ.04 ರಂದು ನಗರದ 7 ಕೇಂದ್ರಗಳಲ್ಲಿ ಬೆಳಿಗ್ಗೆ 10.30 ರಿಂದ 12.30 ರವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 4.30 ರವರೆಗೆ ಪರೀಕ್ಷೆಗಳು ನಡೆಯಲಿವೆ. ಬೆಳಗ್ಗೆ ಎಂಸಿಎ ಮತ್ತು ಮಧ್ಯಾಹ್ನ ಎಂಬಿಎಗೆ ಪಿಜಿ ಸಿಇಟಿ ಪರೀಕ್ಷೆಗಳು ನಡೆಯಲಿವೆ.

ಎಂಸಿಎ ಗೆ 1286 ಮತ್ತು ಎಂಬಿಎ ಗೆ 2421 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪ್ರಶ್ನೆ ಪತ್ರಿಕೆ ಸಾಗಣೆಗೆ ತ್ರಿಸದಸ್ಯ ಸಮಿತಿ ನೇಮಿಸಿ ಈಗಾಗಲೇ ಆದೇಶಿಸಲಾಗಿದೆ ಎಂದರು. ಡಿಡಿಪಿಯು ಚಂದ್ರಪ್ಪ ಗುಂಡೆಪಲ್ಲಿ ಮಾತನಾಡಿ, ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಸಿಸಿಟಿವಿ ಅಳವಡಿಸಲಾಗಿದ್ದು ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಅವಶ್ಯಕವಾದ ಸಕಲ ಸಿದ್ದತಗಳನ್ನು ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಖಜಾನಾಧಿಕಾರಿ ಸಾವಿತ್ರಿ, ವಿವಿಧ ಕಾಲೇಜು ಪ್ರಾಂಶುಪಾಲರು, ಅಧಿಕಾರಿಗಳು ಪಾಲ್ಗೊಂಡಿದ್ದರು.

ಡೆಂಘೀ ಮುನ್ನೆಚ್ಚರಿಕೆ ಕ್ರಮಕ್ಕೆ ಮನವಿ

ಶಿವಮೊಗ್ಗ: ನಗರದಲ್ಲಿ ಜಾಂಡೀಸ್ ಮತ್ತು ಡೆಂಘೀ ಕಾಯಿಲೆಗಳು ಹೆಚ್ಚಾಗಿದ್ದು, ಜಿಲ್ಲಾಡಳಿತ ತಕ್ಷಣವೇ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ವತಿಯಿಂದ ಇಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರಿನ ಸರಬರಾಜು ಆಗುತ್ತಿಲ್ಲ. ಸುಳ್ಳೆಗಳ ಕಾಟ ಹೆಚ್ಚಿದೆ. ನಗರದ ಬಹುತೇಕ ಭಾಗಗಳಲ್ಲಿ ಡೆಂಘೀ ಕಾಣಿಸಿಕೊಳ್ಳುತ್ತಿದೆ. ಅಷ್ಟೇ ಅಲ್ಲದೆ ಮಕ್ಕಳು ಮತ್ತು ವೃದ್ಧರಿಗೆ ಜಾಂಡೀಸ್ ಬೇಗ ಬರುತ್ತಿದೆ. ಚಿಕ್ಕಮಕ್ಕಳು ಜಾಂಡೀಸ್‌ನಿಂದ ಮೃತಪಟ್ಟಿರುವ ಘಟನೆಗಳು ಕೂಡ ನಡೆದಿವೆ ಎಂದು ಮನವಿದಾರರು ತಿಳಿಸಿದರು. ಜಿಲ್ಲಾ ಆರೋಗ್ಯಾಧಿಕಾರಿಗಳು ನಗರದಲ್ಲಿ ಉಲ್ಬಣವಾಗುತ್ತಿರುವ ಜಾಂಡೀಸ್ ಖಾಯಿಲೆ ಬಗ್ಗೆ ಹೆಚ್ಚರ ವಹಿಸಬೇಕು. ಮೆಗ್ಗಾನ್ ಆಸ್ಪತ್ರೆ ಸೇರಿದಂತೆ ಪಾಲಿಕೆ ವ್ಯಾಪ್ತಿಯಲ್ಲಿರುವ ಸರಕಾರಿ ಆಸ್ಪತ್ರೆಗಳಲ್ಲಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ

ಡೆಂಘೀಗೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊ ಳ್ಳಬೇಕು ಎಂದು ಒತ್ತಾಯಿಸಿ ವೀರಶೈವ ಲಿಂಗಾಯಿತ ಮಹಾಸಭಾದ ವತಿ ಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಜಾಂಡೀಸ್ ರೋಗಗಕ್ಕೆ ಸೂಕ್ತ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಡೆಂಘೀ ನಿಯಂತ್ರಣಕ್ಕೆ ಸಿಗುತ್ತಿಲ್ಲ. ಇದಲ್ಲದೆ ಜನಸಾಮಾನ್ಯರು ವಿವಿಧ ಸಾಂಕ್ರಮಿಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಜಿಲ್ಲಾಡಳಿತ ತಕ್ಷಣವೇ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಜಿಲ್ಲಾಧ್ಯಕ್ಷ ರುದ್ರಮುನಿ ಎನ್.ಸಜ್ಜನ್, ಪ್ರಮುಖರಾದ ಅನಿತಾ ರವಿಶಂಕರ್, ಗೀತಾ ರವೀಂದ್ರ, ಕೋಕಿಲಾ, ಪುಷ್ಪಾವತಿ, ಸೋಮನಾಥ್ ಕೆ. ಆರ್., ಮಲ್ಲಿಕಾರ್ಜುನ, ಪರಮೇಶ್, ಪಾರ್ವತಮ್ಮ ಮುಂತಾದವರು ಇದ್ದರು.



ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕಿನ ಜೋಗ ಜಲಪಾತದಲ್ಲಿ ಧುಮ್ಮಿಕ್ಕುತ್ತಿರುವ ಜಲರಾಶಿಯ ವೈಭವ ಗುರುವಾರ ಕಂಡು ಬಂದದ್ದು ಹೀಗೆ.

ಸರಕಾರಿ ಆಸ್ಪತ್ರೆಯಲ್ಲಿ ಸ್ತನ್ಯಪಾನ ಸಪ್ತಾಹ

ಭದ್ರಾವತಿ: ಹಳೇನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ, ಸಾರ್ವಜನಿಕ ಆಸ್ಪತ್ರೆ ಹಾಗು ರೋಟರಿ ಕ್ಲಬ್ ಸಂಯುಕ್ತ ಆಶ್ರಯ ದಲ್ಲಿ

ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಸೂತಿ ತಜ್ಞೆ ಡಾ. ವರ್ಷ, ಮಕ್ಕಳ ತಜ್ಞ ಡಾ. ಮಲ್ಲಿಕಾರ್ಜುನ್, ಡಾ. ಪ್ರೀತಿ, ತಾಯಂದಿರಿಗೆ ಎದೆ ಹಾಲಿನ ಮಹತ್ವ ಹಾಗು ಹಾಲುಣಿಸುವಾಗ ಪಾಲಿಸಬೇಕಾದ ಉತ್ತಮ ಹೊಂದಾಣಿಕೆ ಮತ್ತು ಭಂಗಿ, ಎದೆ ಹಾಲು ಉಣಿಸುವಿಕೆಗಾಗಿ ಗರ್ಭವಸ್ಥೆಯಿಂದಲೇ ಪೂರ್ವ ತಯಾರಿ, ಮಕ್ಕಳ ಪೋಷಣೆ ಕುರಿತು ಮಾಹಿತಿ ನೀಡಿದರು.

ತಾಯಂದಿರು ಹಾಗೂ ಪೋಷಕರಿಗೆ ವಿಶ್ವ ಸ್ತನ್ಯಪಾನ ಕುರಿತು ಪ್ರತಿಜ್ಞಾವಿಧಿ ಸ್ವೀಕಾರ ಮಾಡಿಸಲಾಯಿತು. ಆಸ್ಪತ್ರೆಯ ಆರೋಗ್ಯಾಧಿಕಾರಿ ಡಾ.ಶಂಕರಪ್ಪ ಅಧ್ಯಕ್ಷತೆ ವಹಿಸಿದ್ದರು. ರೋಟರಿ ಕ್ಲಬ್ ವತಿಯಿಂದ ತಾಯಂದಿರಿಗೆ ಹಣ್ಣುಗಳನ್ನು ವಿತರಿಸಲಾಯಿತು. ಡಾ.ಮಯೂರಿ, ಡಾ.ರಶ್ಮಿ ಹಾಗು ಟಿಎಚ್‌ಒ ಕಚೇರಿ ಸಿಬ್ಬಂದಿ ಹಾಜರಿದ್ದರು.

ಆರೋಗ್ಯ ಭಾಗ್ಯ ಸದ್ಬಳಕೆ ಆಗಲಿ

ಶಿವಮೊಗ್ಗ: ಸರಕಾರದ ಆರೋಗ್ಯ ಭಾಗ್ಯ ಯೋಜನೆ ಬಳಸಿಕೊಂಡು ಸಕಾಲದಲ್ಲಿ ಆರೋಗ್ಯ ಚೆನ್ನಾಗಿ ಕಾಪಾಡಿಕೊಳ್ಳಿ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ಅಭಿಮತ ವ್ಯಕ್ತಪಡಿಸಿದರು.

ಇಲಾಖೆಯಲ್ಲಿ 32 ವರ್ಷಗಳಿಂದ ಸತತ ಸೇವೆಗಳನ್ನು ಸಾಗರ, ಭದ್ರಾವತಿ, ದೊಡ್ಡಪೇಟೆ ಹಾಗೂ ಸಂಚಾರಿ ಠಾಣೆಗಳಲ್ಲಿ ಸೇವೆ ಸಲ್ಲಿಸಿದ ಎ.ವಜೀರಅಹಮದ್ ಹಾಗೂ ಶಿವಮೊಗ್ಗ ಕುಂಸಿ ಸೇರಿದಂತೆ ಹಲವಾರು ಕಡೆ ಸೇವೆ ಸಲ್ಲಿಸಿ ನಿವೃತ್ತರಾದ ಎಎಸ್‌ಐ ರಮೇಶ್ ಇವರಿಗೆ ಶಾಲು, ಹಾರ ಹಾಗೂ ಸಿಹಿ, ಫಲಪುಷ್ಪ, ಉಡುಗೊರೆ ನೀಡಿ, ತಮ್ಮ ಕಚೇರಿಯಲ್ಲಿ ಸನ್ಮಾನಿಸಿ ಗೌರವಿಸಿದರು.

ನಿವೃತ್ತಿಯ ನಂತರ ತಮ್ಮ ಬದುಕನ್ನು ಸುಂದರವಾಗಿ ಹಾಗೂ ಆರೋಗ್ಯಕರವಾಗಿ ರೂಪಿಸಿಕೊಳ್ಳಬೇಕು. ಇಲಾಖೆಗೆ ಗೌರವ ತರಬೇಕು. ಆರೋಗ್ಯ ಭಾಗ್ಯ ಯೋಜನೆ ಜಾರಿಯಲ್ಲಿದ್ದು, ಕುಟುಂಬದವರೆಲ್ಲ ಅದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ನಂತರ ವಜೀರ್‌ಅಹಮ್ಮದ್ ಮಾತನಾಡಿ, ಸೇವೆ ತೃಪ್ತಿ ತಂದಿದೆ. ಜೊತೆಗೆ ಸಾರ್ವಜನಿಕವಾಗಿ ಗೌರವ ನೀಡಿದೆ. ಇಲಾಖೆಯಲ್ಲಿ 32 ವರ್ಷ ಯಾವುದೇ ಕಳಂಕ ಬಾರದ ರೀತಿ ಸೇವೆ ಸಲ್ಲಿಸಿದ್ದೇನೆ. ಅದನ್ನು ಉಳಿಸಿಕೊಂಡು ಹೋಗುತ್ತೇವೆ ಎಂದು ನುಡಿದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಸಹ ಕಾರ್ಯದರ್ಶಿ ಜಿ.ವಿಜಯ್ ಕುಮಾರ, ಡಾ.ಸುಹಾನ, ಸುನೈನಾ, ಶಾಹಾನಬೇಗಂ, ನಿವೃತ್ತ ಎಎಸ್‌ಐ ವೀರೇಶಪ್ಪ, ಕುಟುಂಬ ವರ್ಗದವರು ಉಪಸ್ಥಿತರಿದ್ದರು.

ಬೈಂದೂರಿಗೆ ವಿಮಾನ ನಿಲ್ದಾಣಕ್ಕೆ ಮನವಿ

ಶಿವಮೊಗ್ಗ: ಬೈಂದೂರಿನಲ್ಲಿ ವಿಮಾನ ನಿಲ್ದಾಣ ಮಂಜೂರಾತಿಗೆ ಕೇಂದ್ರ ವಿಮಾನಯಾನ ಸಚಿವರಲ್ಲಿ ಸಂಸದ ರಾಘವೇಂದ್ರ ಮನವಿ ಮಾಡಿದ್ದಾರೆ. ಸಚಿವ ಕಿಂಜರಾಪು ರಾಮ ಮೋಹನ ನಾಯ್ಡು

ಅವರನ್ನು ಬುಧವಾರ ಭೇಟಿಯಾಗಿ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಬೈಂದೂರಿನ ಒತ್ತಿನೆಣೆಯಲ್ಲಿ ಮೂಕಾಂಬಿಕಾ ವಿಮಾನ ನಿಲ್ದಾಣ ಮಂಜೂರು ಮಾಡಲು ಸಂಬಂಧಪಟ್ಟಂತೆ ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಅವರೊಂದಿಗೆ ಮನವಿ ಸಲ್ಲಿಸಿದರು.

ಉಡುಪಿ ಜಿಲ್ಲೆಯ ಕೊಲ್ಲೂರಿನ ಶ್ರೀಮೂಕಾಂಬಿಕಾ ದೇವಸ್ಥಾನ ದಕ್ಷಿಣ ಭಾರತದ ಪ್ರಸಿದ್ಧ ಯಾತ್ರಾ ಕೇಂದ್ರಗಳಲ್ಲಿ ಒಂದು. ವಿವಿಧ ರಾಜ್ಯಗಳಿಂದ ಹಾಗೂ ಹೊರದೇಶಗಳಿಂದ ಪ್ರತಿದಿನ 10,000 ಕ್ಕೂ ಹೆಚ್ಚು ಯಾತ್ರಾರ್ಥಿಗಳು ಈ ದೇವಾಲಯಕ್ಕೆ ಭೇಟಿ ನೀಡುತ್ತಾರೆ. ಮೂಕಾಂಬಿಕಾ ವಿಮಾನ ನಿಲ್ದಾಣಕ್ಕೆ ಮಂಜೂರಾತಿ ನೀಡಿದರೆ ಅನುಕೂಲವಾಗುತ್ತದೆ ಎಂಬುದನ್ನು ಸಚಿವರಿಗೆ ವಿವರಿಸಿದರು.

ಅಲ್ಲಿ ಸುಮಾರು 500 ಎಕರೆಗೂ ಅಧಿಕ ಭೂಮಿ ಲಭ್ಯವಿದ್ದು ಅಲ್ಲಿ ವಿಮಾನ ನಿಲ್ದಾಣ ನಿರ್ಮಿಸಿದರೆ ಭಕ್ತಾದಿಗಳಿಗೆ ಸಾಕಷ್ಟು ಅನುಕೂಲವಾಗಲಿದೆ ಎಂಬುದನ್ನು ಸಚಿವರ ಗಮನಕ್ಕೆ ತಂದರು.

ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಸರ್ವಋತು ಪ್ರವಾಸಿ ತಾಣವಾಗಿ ಜೋಗ ಅಭಿವೃದ್ಧಿಗೆ ಒತ್ತು

ಶಿವಮೊಗ್ಗ: ಸರ್ವಋತು ಪ್ರವಾಸಿತಾಣವಾಗಿ ಜೋಗ ಜಲಾಶಯ ಅಭಿವೃದ್ಧಿ ಪಡಿಸಲಾಗುವುದು ಎಂದು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗ ಮದ ಅಧ್ಯಕ್ಷ ಹಾಗೂ ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ ತಿಳಿಸಿದರು. ಲಿಂಗನಮಕ್ಕಿ ಜಲಾಶಯಕ್ಕೆ ಗುರುವಾರ ಪೂಜೆ ಸಲ್ಲಿಸಿ ಮಾತನಾಡಿದ ಅವರು ಜೋಗ ಜಲಪಾತ ಸುಂದರ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕಾಮಗಾರಿಯನ್ನು ನಡೆಸಲಾಗುತ್ತಿದೆ. 183 ಕೋಟಿ ಯೋಜನೆಯ ಕಾಮಗಾರಿ ಚಾಲನೆಯಲ್ಲಿದ್ದು ಸರ್ಕಾರದಿಂದ 30 ಕೋಟಿ ಅನುದಾನ ಬಿಡುಗಡೆಯಾಗಿದ್ದು ಒಂದು ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು. ಜೋಗ ಜಲಾಶಯದ ವೀಕ್ಷಣೆ ಆಗಮಿಸುವ ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳ ಜೊತೆ ಮನರಂಜನೆ ನೀಡಲು ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಗೆ ಅಧ್ಯಯನ ಪ್ರವಾಸ ಕೈಗೊಳ್ಳಲಾಗುವುದು ಎಂದರು. ಈ ಭಾರಿ ಉತ್ತಮ ಮಳೆಯಾಗಿ ಶರಾವತಿ ಜಲಾಶಯ ಭರ್ತಿಯಾಗಿದೆ. 5 ವರ್ಷಗಳ ನಂತರ ಭರ್ತಿಯಾಗಿದ್ದು 3 ಗೇಟ್ ಗಳ ಮೂಲಕ 10 ಸಾವಿರ 50 ಸಾವಿರ ಕ್ಯುಸೆಕ್ ನೀರು ಬಿಡುಗಡೆಯಾದರೆ 400ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ ಎಂದು ಅಧಿಕಾರಿಗಳು ವರದಿ ಸಲ್ಲಿಸಿದ್ದಾರೆ ಎಂದರು.

ಭಕ್ತಿಯಿಲ್ಲದ ಜ್ಞಾನದಿಂದ ಅಹಂಕಾರ

ಬೆಳಗಾವಿ ಕಾರ್ಯಕ್ರಮದಲ್ಲಿ ಆರೆಸ್ಸೆಸ್ ಮುಖ್ಯಸ್ಥ ಭಾಗವತ್ ಅಭಿಮತ

ಬೆಳಗಾವಿ: ಬದುಕಿನಲ್ಲಿ ಪ್ರತಿಯೊಬ್ಬರಿಗೂ ಜ್ಞಾನ ಮತ್ತು ಭಕ್ತಿ ಬೇಕೇ ಬೇಕು. ರಾಮ ಮತ್ತು ರಾವಣ ಇಬ್ಬರಲ್ಲೂ ಜ್ಞಾನವಿತ್ತು. ಆದರೆ, ರಾಮನಲ್ಲಿ ಮಾತ್ರ ಭಕ್ತಿ ಇತ್ತು. ಹಾಗಾಗಿ, ಅವನನ್ನು ಪೂಜಿಸುತ್ತೇವೆ. ಭಕ್ತಿ ಇಲ್ಲದ ಜ್ಞಾನ ನಮ್ಮಲ್ಲಿ ಅಹಂಕಾರ ಹುಟ್ಟಿಸುತ್ತದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಸಂಚಾಲಕ ಮೋಹನ ಭಾಗವತ್ ಹೇಳಿದ್ದಾರೆ.

ಬೆಳಗಾವಿಯ ಅಕಾಡೆಮಿ ಆಫ್ ಕಂಪೇರೆಟಿವ್ ಫಿಲಾಸಫಿ ಆ್ಯಂಡ್ ರಿಲಿಜನ್(ಎಸಿಪಿಆರ್)ನ ಶತಮಾನೋತ್ಸವ ವರ್ಷಾಚರಣೆ ಹಾಗೂ ಗುರುದೇವ ರಾನಡೆ ರಚಿಸಿದ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವತ್ ಮಾತನಾಡಿದರು.

ಸಂಪ್ರದಾಯ ಪಾಲನೆ, ನಿತ್ಯಸಾಧನೆ

ಸಂಪ್ರದಾಯ ಸರಿಯಾದ ಮಾರ್ಗದಲ್ಲಿ ನಮ್ಮನ್ನು ಕೊಂಡೊಯ್ಯುತ್ತದೆ. ಇದು ಸಾಧನೆಯ ಪಥವೂ ಹೌದು. ಮಹಾತ್ಮರ ಪ್ರವಚನಗಳು ನಮ್ಮ ಗುರಿ ತಲುಪಲು ಸಹಕಾರಿ ಆಗುತ್ತವೆ. ನಮ್ಮ ಗುರಿ ಮರೆತರೆ, ನಮ್ಮನ್ನೇ ನಾವು ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಸಂಪ್ರದಾಯ ಪಾಲಿಸಿ ನಿತ್ಯಸಾಧನೆ ಮಾಡಬೇಕು. ಕರ್ಮ, ಅಕರ್ಮ ಮತ್ತು ವಿಕರ್ಮಗಳ ನಡುವಿನ ವ್ಯತ್ಯಾಸ ಸರಿಯಾಗಿ ತಿಳಿದುಕೊಳ್ಳಬೇಕು ಎಂದು ಮೋಹನ್ ಭಾಗವತ್ ಕಿವಿಮಾತು ಹೇಳಿದರು.

ಮಾನವೀಯತೆ ಮರೆಯಬಾರದು

ಫುಟ್‌ಪ್ರಿಂಟ್ಸ್ ಆನ್ ದಿ ಸ್ಯಾಂಡ್ಸ್ ಆಫ್ ಟೈಮ್ ಎಂಬ ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಹೈದರಾಬಾದ್‌ನ ರಾಮಚಂದ್ರ ಮಿಷನ್‌ನ ಕಮಲೇಶ್ ಪಟೇಲ್(ದಾಜಿ), ಭಾರತೀಯರಾದ ನಾವು ಮಾನವೀಯತೆ, ವಿನಯತೆ ಎಂದಿಗೂ ಮರೆಯಬಾರದು. ದೇಶದ ಹಿತಕ್ಕಾಗಿ ನಾವು ಎಂಥ ತ್ಯಾಗವನ್ನಾದರೂ ಮಾಡಲು ಸಿದ್ಧವಿರಬೇಕು. ಆದರೆ, ದೇಶಕ್ಕೆ ಅಪಮಾನ ಮಾಡುವ ಶಕ್ತಿಗಳನ್ನು ಯಾವುದೇ ಕಾರಣಕ್ಕೂ ಸಹಿಸಬಾರದು ಎಂದು ಹೇಳಿದರು.

ಇದಾದ ಬಳಿಕ ಎಸಿಪಿಆರ್ ಆವರಣದಲ್ಲಿ ಮೋಹನ್ ಭಾಗವತ್ ಮತ್ತು ಕಮಲೇಶ ಪಟೇಲ್ ಸಸಿ ನೆಟ್ಟರು. ಈ ವೇಳೆ ಎಸಿಪಿಆರ್ ಅಧ್ಯಕ್ಷ ಅಶೋಕ ಪೋತದಾರ, ಕಾರ್ಯದರ್ಶಿ ಎಂ.ಬಿ.ಝಿರಲಿ ಸೇರಿ ಮತ್ತಿತರರು ಇದ್ದರು. ಇದಕ್ಕೂ ಮೊದಲು ಆರತಿಪೂಜೆ ಮತ್ತು ಭಜನಾ ಕಾರ್ಯಕ್ರಮಗಳು ನೆರವೇರಿದವು.

ಡಾ. ಕೋರೆಯವರ 77ನೇ ಜನ್ಮದಿನಾಚರಣೆ

ಬೆಳಗಾವಿ: ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷ ಹಾಗೂ ಹಿರಿಯ ರಾಜಕಾರಣಿ ಡಾ. ಪ್ರಭಾಕರ ಕೋರೆ ಅವರ 77 ನೇ ಹುಟ್ಟುಹಬ್ಬದ ನಿಮಿತ್ತ ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡಲಾಯಿತು.

ಪ್ರಭಾಕರ ಕೋರೆಯವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ವನಮಹೋತ್ಸವ

ಆಚರಿಸಲಾಯಿತು. ನಂತರ ಬೆಳಗಾವಿಯ ಸ್ವಾಮಿ ವಿವೇಕಾನಂದ ಸೇವಾ ಪ್ರತಿಷ್ಠಾನದ ಗಂಗಮ್ಮ ಚಿಕ್ಕುಂಬಿಮಠ ಬಾಲಕರ ಕೇಂದ್ರಕ್ಕೆ ಭೇಟಿ ನೀಡಿ ಹಣ್ಣುಹಂಪಲು ಹಾಗೂ ಸಿಹಿತಿಂಡಿ ವಿತರಿಸಲಾಯಿತು. ಅಲ್ಲದೆ ಬಿ.ವಿ. ಬೆಲ್ಲದ ಕಾನೂನು ಮಹಾವಿದ್ಯಾಲಯದ ಎನ್‌ಎಸ್ ಎಸ್ ಘಟಕ ವಿದ್ಯಾರ್ಥಿಗಳಿಂದ ರಕ್ತದಾನ ಶಿಬಿರ ಆಯೋಜಿಸಲಾಯಿತು.

ರುದ್ರಾಭಿಷೇಕ: ತಮ್ಮ ಹುಟ್ಟು ಹಬ್ಬದ ನಿಮಿತ್ತವಾಗಿ ಡಾ. ಪ್ರಭಾಕರ ಕೋರೆಯವರು ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯ ಔಂದಾ ನಾಗನಾಥ ಜ್ಯೋತಿರ್ಲಿಂಗ ಹಾಗೂ ಭೀಡ್ ಜಿಲ್ಲೆಯ ಪರಳಿ ಶ್ರೀ ವೈಜನಾಥ ಜ್ಯೋತಿರ್ಲಿಂಗ ರುದ್ರಾಭಿಷೇಕ ನೆರವೇರಿಸಿದರು.

ಮಹಾರಾಷ್ಟ್ರದ ಭೀಡ್ ಜಿಲ್ಲೆಯ ಪರಳಿ ಶ್ರೀ ವೈಜನಾಥ ಜ್ಯೋತಿರ್ಲಿಂಗ ರುದ್ರಾಭಿಷೇಕ ನೆರವೇರಿಸಿದ ಡಾ. ಪ್ರಭಾಕರ ಕೋರೆ ಕುಟುಂಬ

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

ಅಪರ ನಿರ್ದೇಶಕರ ಕಛೇರಿ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತ ನಗರ, ಬೆಂಗಳೂರು–01
ದೂರವಾಣಿ ಸಂಖ್ಯೆ: 080–22207784

ಸಂಖ್ಯೆ: SWD-PETC0S-6(FS)/174/2024(1411009) ದಿನಾಂಕ: 01.08.2024

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮೂಲಕ ಮಾತ್ರ)

ಸಮಾಜ ಕಲ್ಯಾಣ ಇಲಾಖೆಯ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ದೈಹಿಕ ಸಾಮರ್ಥ್ಯ ತರಬೇತಿ ಜೊತೆಗೆ ಸ್ಪರ್ಧಾತ್ಮಕ PSI ನ ಹುದ್ದೆಗಳ ಪರೀಕ್ಷೆಗಳಿಗೆ (ಪುರುಷ ಮತ್ತು ಮಹಿಳೆ) ವಸತಿ ಸಹಿತ ತರಬೇತಿ ನೀಡುವ ಸಂಬಂಧ ಕರ್ನಾಟಕ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಪ್ರತ್ಯೇಕವಾಗಿ ಸೂಕ್ತ ತರಬೇತಿ ನೀಡಲು ಅರ್ಹ ಪ್ರತಿಷ್ಠಿತ ತರಬೇತಿ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕಟಣೆ ಸಂಖ್ಯೆ ಈ ಕೆಳಗಿನಂತಿವೆ. 1. No:SWD-PETC0S-6(FS)/174/2024(1411009)

ಹೆಚ್ಚಿನ ವಿವರಗಳಿಗೆ http://kppp.karnataka.gov.in ವೆಬ್ ಸೈಟನ್ನು ನೋಡಬಹುದಾಗಿದೆ.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು,
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ
ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/1145/ಎಸ್‌ಎಸ್‌ಸಿ/2024–25

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಯೋಜನಾ ಶಾಖೆ, ಚಾವಿಸನಿನಿ, ಮೈಸೂರು–570017, ದೂರವಾಣಿ: 0821–2544963
ಇ–ಮೇಲ್: gmproj@cescmysore.org, ವೆಬ್‌ಸೈಟ್: cescmysore.karnataka.gov.in

ಸಂಖ್ಯೆ: : ಚಾವಿಸನಿನಿ/ಪ್ರ.ವ್ಯ(ಯೋ)/ಉಪ್ರವ್ಯ–1/ಸಪ್ರವ್ಯ–4/2024–25/8957 ದಿನಾಂಕ: 31.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಚಾ.ವಿ.ಸ.ನಿ.ನಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಅಲ್ಪಾವಧಿ ಟೆಂಡರನ್ನು ಆಹ್ವಾನಿಸಿದೆ.

ವಿವರಗಳು	ವಿಚಾರಣೆ ಸಂಖ್ಯೆ
ಮೈಸೂರು ನಗರದ ಚಾಮುಂಡಿ ಬೆಟ್ಟದ ದೇವಸ್ಥಾನದ ಸುತ್ತ HT ಓವರ್‌ಹೆಡ್ ಲೈನ್ ಅನ್ನು HT ಅಂಡರ್‌ಗ್ರೌಂಡ್ ಕೇಬಲ್ ಮತ್ತು LT ಓವರ್‌ಹೆಡ್ ಲೈನ್ ಅನ್ನು LT ಅಂಡರ್‌ಗ್ರೌಂಡ್ ಕೇಬಲ್ ಆಗಿ ಪರಿವರ್ತಿಸುವ ಮತ್ತು ಪರ್ಯಾಯ 11 ಕೆ.ವಿ. ಅಂಡರ್‌ಗ್ರೌಂಡ್ ಕೇಬಲ್ ಮಾರ್ಗ ರಚಿಸುವ ಕಾಮಗಾರಿ.	CESC /Pr-4/ 2024-25/037

ಸದರಿ ಕಾಮಗಾರಿ ಮತ್ತು ಟೆಂಡರ್‌ನ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ https://kppp.karnataka.gov.in/ ನಲ್ಲಿ ದಿನಾಂಕ: 03–08–2024 ಅಥವಾ ನಂತರ ಪಡೆಯಬಹುದಾಗಿರುತ್ತದೆ. ಕೆ.ಪಿ.ಪಿ. ಪೋರ್ಟಲ್ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91–8046010000/ 8068948777 ಗೆ ಅಥವಾ ಇ–ಮೇಲ್ ವಿಳಾಸ support@eprochelpdesk.com ಗೆ ಸಂಪರ್ಕಿಸಬಹುದಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/–
ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು)
ಚಾವಿಸನಿನಿ, ಮೈಸೂರು

DIPR/MYS/KAVITA/354/2024-25

ಕರ್ನಾಟಕ ಸರ್ಕಾರ
ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ

ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸಂಘ, ದಾವಣಗೆರೆ

ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾಯೋಜನೆ ಕಛೇರಿ, ಜಿಲ್ಲಾ ನಗರಯೋಜನಾ ನಿರ್ವಹಣ ಘಟಕ, ಕೊಠಡಿ ಸಂಖ್ಯೆ:31, ಎಸ್.ಎಸ್. ಹೈಟೆಕ್‌ಆಸ್ಪತ್ರೆ ಹತ್ತಿರ, ಎನ್.ಸಿ.ಸಿ ಕ್ಯಾಂಪ್ ಪಕ್ಕ, ಶ್ರೀರಾಮ ನಗರರಸ್ತೆ, ದಾವಣಗೆರೆ–577 005.
ದೂ..ಸಂಖ್ಯೆ: 08192–263194 ಈ_ಮೇಲ್:cpmudavangere@gmail.com

ಸಂ:ಜಿನಿಫ/ದಾಗೆರೆ/ಎನ್.ಯು.ಹೆಚ್.ಎಂ/ನ.ಕ್ಲಿ.ನೇಮಕಾತಿ/46A /2024–25
ದಿನಾಂಕ:29–07–2024

ಸಂಕ್ಷಿಪ್ತ ನೇಮಕಾತಿ ಅಧಿಸೂಚನೆ

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ, 15 ನೇ ಹಣಕಾಸು ಆಯೋಗ ಮತ್ತು PM-ABHIM ಕಾರ್ಯಕ್ರಮದಡಿಯಲ್ಲಿ 2024–25 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮಂಜೂರಾಗಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ31–03–2025 ರವರೆಗೆ ಹಾಗೂ 2025–26 ನೇ ಸಾಲಿನ ಆರ್.ಓ.ಪಿ ಅನುಮೋದನೆ ನಿರೀಕ್ಷಿಸಿ ಹುದ್ದೆ ಮುಂದುವರೆಸುವ ಬಗ್ಗೆ ಮಾನ್ಯ ಅಭಿಯಾನ ನಿರ್ದೇಶಕರು ರಾಷ್ಟ್ರೀಯ ಆರೋಗ್ಯ ಅಭಿಯಾನ ಬೆಂಗಳೂರು ರವರು ನೀಡುವ ಆದೇಶದ ಷರತ್ತಿಗೊಳಪಟ್ಟು ಹಾಗೂ ರೋಸ್ಟರ್ ಮತ್ತು ಮೆರಿಟ್ ಅಧಾರದಲ್ಲಿ ನೇಮಕ ಮಾಡಲು ಆಸಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಪದನಾಮ:– ಕಿರಿಯ ಆರೋಗ್ಯ ಸಹಾಯಕರು, ಹುದ್ದೆಗಳ ಸಂಖ್ಯೆ:– 04 ಕಾರ್ಯಕ್ರಮ:– ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ, 15 ನೇ ಹಣಕಾಸು ಆಯೋಗ ಮತ್ತು PM-ABHIM ಕಾರ್ಯಕ್ರಮದಡಿಯಲ್ಲಿ. ವಿದ್ಯಾರ್ಹತೆ:– (1) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿವಿದೋದ್ದೇಶ ಮೂಲ ಆರೋಗ್ಯ ಕಾರ್ಯಕರ್ತರ ತರಬೇತಿಯನ್ನು ಪಡೆದಿರಬೇಕು. (2) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 3 ವರ್ಷಗಳ ಆರೋಗ್ಯ ನಿರೀಕ್ಷಕರ ಡಿಪ್ಲೋಮಾ ಹೊಂದಿರಬೇಕು. (3) ಪಿ.ಯು.ಸಿ (ವಿಜ್ಞಾನ) ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 2 ವರ್ಷಗಳ ಆರೋಗ್ಯ ನಿರೀಕ್ಷಕರ ಡಿಪ್ಲೋಮಾ ಹೊಂದಿರಬೇಕು. (4) ಗಣಕಯಂತ್ರತರಬೇತಿ ಹೊಂದಿರಬೇಕು.

ಅಸಕ್ತರು ಅರ್ಜಿಗಳನ್ನು ದಿನಾಂಕ:17–08–2024 ರಂದು ಬೆಳಗ್ಗೆ 10–30 ರಿಂದ 2–00 ಗಂಟೆವರೆಗೆ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ, ಶ್ರೀರಾಮನಗರ ರಸ್ತೆ, ದಾವಣಗೆರೆ ಎಸ್.ಎಸ್.ಆಸ್ಪತ್ರೆ ಹಿಂಬಾಗ, ಎನ್.ಸಿ.ಸಿ.ಕ್ಯಾಂಪ್ ಪಕ್ಕ, ದಾವಣಗೆರೆ ಇಲ್ಲಿ ಪಡೆಯತಕ್ಕದ್ದು, ಅರ್ಜಿದಾರರು ಸೂಕ್ತ ಅರ್ಜಿಗಳನ್ನು ಪಡೆದು ಸ್ವಯಂ ದೃಢೀಕರಣವಿರುವ ವಿದ್ಯಾರ್ಹತೆ, ಮೀಸಲಾತಿ ಮತ್ತು ಅನುಭವಕ್ಕೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳ ಜೆರಾಕ್ಸ್ ಪ್ರತಿ ಹಾಗೂ ಭಾವಚಿತ್ರದೊಂದಿಗೆ ಸ್ವಯಂ ಅಭ್ಯರ್ಥಿಯೇ ಹಾಜರಾಗಿಅದೇ ದಿನ ಸಂಜೆ 5–00 ಗಂಟೆಗೆಯೊಳಗೆ ಭರ್ತಿ ಮಾಡಿದ ಅರ್ಜಿಗಳನ್ನು ಹಿಂದಿರುಗಿಸತಕ್ಕದು , ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಸರ್ಕಾರದ/ಇಲಾಖೆಯ ನಿಯಾಮವಳಿಗಳಂತೆ ವಯೋಮಿತಿ ಮತ್ತು ಮೀಸಲಾತಿ ನಿಗದಿಪಡಿಸಲಾಗಿದೆ. ಯಾವುದೇಕಾರಣ ನೀಡದೇ ಈ ಆಯ್ಕೆ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದು ಪಡಿಸುವ ತೀರ್ಮಾನ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ವಾಸಾಇ/ಡಿವಿಜಿ/192/ ಕೆಎಸ್‌ಎಂಸಿಎ/2024–25

ಸಹಿ/– ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು, ದಾವಣಗೆರೆ.

ಮಕ್ಕಳಾಗಲಿಲ್ಲ ಎಂದು ಮಗುವನ್ನೇ ಕದ್ದ ಮಹಿಳೆ

ಚಿಕ್ಕಬಳ್ಳಾಪುರ: ಮಕ್ಕಳಾಗಲಿಲ್ಲ ಎಂದು ಮನನೊಂದ ಮಹಿಳೆಯೊಬ್ಬರು ಸರ್ಕಾರಿ ಆಸ್ಪತ್ರೆಯಿಂದ ಮಗುವನ್ನೇ ಕದ್ದು ಪರಾರಿಯಾದ ಘಟನೆ ತಮಿಳುನಾಡಿನ ವೆಲ್ಲೂರು ಆಸ್ಪತ್ರೆಯಲ್ಲಿ ನಡೆದಿದೆ.

ತಮಿಳುನಾಡಿನಲ್ಲಿ ಕದ್ದ ಮಗುವನ್ನು ತಂದು ಚಿಕ್ಕಬಳ್ಳಾಪುರದ ತನ್ನ ಸಂಬಂಧಿಕರ ಮನೆಯಲ್ಲಿ ತಂಗಿದ್ದ ಮಹಿಳೆಯನ್ನು ವೆಲ್ಲೂರು ಪೊಲೀಸರು ಗುರುವಾರ ಬಂಧಿಸಿ ಮಗುವನ್ನು ರಕ್ಷಣೆ ಮಾಡಿದ್ದಾರೆ.

ಏನಿದು ಕಳವಿನ ಕಥೆ: ತಮಿಳುನಾಡು ಮೂಲದ ಅಮ್ಮು ಎಂಬಾಕೆ ಮದುವೆಯಾಗಿ 8 ವರ್ಷ ಕಳೆದರೂ ಮಕ್ಕಳಾಗಿರಲಿಲ್ಲ. ಇದರಿಂದ ನೊಂದಿದ್ದ ಆಕೆ ವೆಲ್ಲೂರು ಸರ್ಕಾರಿ ಅಸ್ಪತ್ರೆಯಲ್ಲಿ ಜು. 28 ರಂದು ಜನಿಸಿದ್ದ ಗಂಡು ಮಗುವನ್ನು ಅಪಹರಿಸಿ ಚೀಲದಲ್ಲಿರಿಸಿಕೊಂಡು ಗಡಿದಾಟಿ ಕರ್ನಾಟಕಕ್ಕೆ ಪರಾರಿಯಾಗಿ ಬಂದಿದ್ದಳು.

ಹಾಗೆ ಬಂದವಳು ಚಿಕ್ಕಬಳ್ಳಾಪುರ ಸಿಎಂಸಿ ಬಡಾವಣೆಯ ಸಂಬಅಧಿಕರ ಮನೆಯಲ್ಲಿ ಮಗುವಿನೊಂದಿಗೆ ತಲೆಮರೆಸಿಕೊಂಡಿದ್ದಳು. ವೆಲ್ಲೂರು ಪೊಲೀಸರು ಮಹಿಳೆ ಹಾಗೂ ಕಾರು ಚಾಲಕನನ್ನು ವಶಕ್ಕೆ ಪಡೆದು ಮೂರು ದಿನದ ಗಂಡು ಮಗುವನ್ನು ಚಿಕ್ಕಬಳ್ಳಾಪುರ ತಾಯಿ ಹಾಗೂ ಮಕ್ಕಳ ಆಸ್ಪತ್ರೆಯಗೆ ದಾಖಲಿಸಿದ್ದಾರೆ. ಮಗುವಿನ ಆರೋಗ್ಯ ತಪಾಸಣೆ ಮಾಡಿರುವ ಮಕ್ಕಳ ತಜ್ಞ ರಚನ್ ರೆಡ್ಡಿ, ಮಗುವಿಗೆ ಸಣ್ಣ ಪ್ರಮಾಣದ ಜಾಂಡೀಸ್ ಇದ್ದು ಬಹುತೇಕ ಆರೋಗ್ಯವಾಗಿದೆ ಎಂದು ತಿಳಿಸಿದ್ದಾರೆ. ಇದಾದ ಬಳಿಕ ಮಗುವನ್ನು ಅಪಹರಿಸಿದ್ದ ಮಹಿಳೆಯನ್ನು ದಸ್ತಗಿರಿ ಮಾಡಿರುವ ಪೊಲೀಸರು ತಮಿಳುನಾಡಿಗೆ ತೆರಳಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸೋತ ಮೇಲೆ ಸುಮ್ಮನೆ ಕೂರಬೇಕು: ಶಾಮನೂರು

ಸಿದ್ದೇಶ್ವರ್‌ಗೆ ಕಾಂಗ್ರೆಸ್ ನಾಯಕನ ತಿರುಗೇಟು | ಬೊಮ್ಮಾಯಿ ಮುಂದೆ ಕಣ್ಣೀರು

ದಾವಣಗೆರೆ: ಸೋತ ಮೇಲೆ ಸುಮ್ಮನೆ ಕೂರಬೇಕು. ಅದನ್ನು ಬಿಟ್ಟು ಬಾಯಿಗೆ ಬಂದ ಹಾಗೆ ಮಾತನಾಡುವುದು ಸರಿಯಲ್ಲ ಎಂದು ಮಾಜಿ ಸಂಸದ ಜಿ.ಎಂ ಸಿದ್ದೇಶ್ವರ್ ವಿರುದ್ಧ ಶಾಸಕ ಶಾಮನೂರು ಶಿವಶಂಕರಪ್ಪ ಹರಿಹಾಯ್ದಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಸೋತ ಮೇಲೆ ಒಂದಲ್ಲಾ ಒಂದು ಪ್ರಲಾಪ ಮಾಡುತ್ತಿದ್ದಾರೆ ಎಂದು ಸಿದ್ದೇಶ್ವರ ವಿರುದ್ಧ ಶಾಮನೂರು ಶಿವಶಂಕರಪ್ಪ ಟೀಕಿಸಿದ್ದರು. ಇದಕ್ಕೆ ಪ್ರತಿಯಾಗಿ ಸಿದ್ದೇಶ್ವರ ಅವರು ನಿಮ್ಮ ಮಕ್ಕಳಿಗೆ ಸಂಸ್ಕಾರ ಕಲಿಸಿ, ಜಿಂಕೆ ಕೇಸ್ ವೇಳೆ ಯಾರ ಬಳಿ ಹೋಗಿ ಕಣ್ಣೀರು ಹಾಕಿದ್ದರು ಎಂದು ಟಾಂಗ್ ನೀಡಿದ್ದರು. ಇದಕ್ಕೆ ಕೆಂಡಾಮಂಡಲರಾದ ಶಿವಶಂಕರಪ್ಪ , ಸೋತಿದ್ದರಿಂದ ಬೇಸರವಾಗದೆ, ಅಳುತ್ತಾ ಕೂರದಿರುವಂತೆ ಬುದ್ಧಿವಾದ ಹೇಳುತ್ತೇನೆ ಎಂದು ಕಿಚಾಯಿಸಿದ್ದಾರೆ.

ಬಿಜೆಪಿ ನಾಲ್ಕು ಭಾಗ ಖಚಿತ

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್ ಗೆದ್ದ ಬಳಿಕ ಹತಾಶರಾಗಿದ್ದು, ಚುನಾವಣೆ ನಿಯಮ ಉಲ್ಲಂಘಿಸಿದ್ದಾರೆ ಎಂಬ ಕ್ಷುಲ್ಲಕ ಆರೋಪ ಮಾಡಿ ಕೇಸ್ ಹಾಕಿದ್ದಾರೆ. ಇದು ಕೋರ್ಟ್ ನಲ್ಲಿ ನಿಲ್ಲುವುದಿಲ್ಲ. ಸಿದ್ದೇಶ್ವರ ವಿರುದ್ಧವೇ ಹೆಚ್ಚಿನ ಮಂದಿ ಇದ್ದಾರೆ. ಈಗ ಬಿಜೆಪಿ ಎರಡು ಭಾಗ ಮಾಡಿರುವ ಸಿದ್ದೇಶ್ವರ, ಮುಂದಿನ ದಿನಗಳಲ್ಲಿ ನಾಲ್ಕು ಭಾಗ ಮಾಡುವುದು ಖಚಿತ ಎಂದು ಶಿವಶಂಕರಪ್ಪ ಎಚ್ಚರಿಕೆ ಕೊಟ್ಟರು.

ಬೊಮ್ಮಾಯಿ ಮುಂದೆ ಕಣ್ಣೀರು: ಸುದ್ದಿಗಾರರೊಂದಿಗೆ ಮಾತನಾಡಿದ ಶಾಮನೂರು ಶಿವಶಂಕರಪ್ಪ, ಜಿಂಕೆ ಪ್ರಕರಣ ಆದಾಗ ಆಗ ಸಿಎಂ ಆಗಿದ್ದ ಬಸವರಾಜ ಬೊಮ್ಮಾಯಿ ಮುಂದೆ ಯಾರು ಕಣ್ಣೀರು ಹಾಕಿದ್ದು ಎಂಬ ಸಿದ್ದೇಶ್ವರ ಹೇಳಿಕೆಗೆ ತಿರುಗೇಟು ನೀಡಿದ್ದಾರೆ.

ಬೊಮ್ಮಾಯಿ ಬಳಿ ನಾವೇನೂ ಕಣ್ಣೀರು ಹಾಕಿಲ್ಲ. ಬದಲಾಗಿ ನಾವು ಸಡ್ಡು ಹೊಡೆಯೋ ಜನ ಎಂದು ಎಸ್. ಎಸ್. ಕುಟುಕಿದರು. ಮಾಜಿ ಸಿಎಂ ಬಿ. ಎಸ್. ಯಡಿಯೂರಪ್ಪ ಬಿಜೆಪಿ ಕಟ್ಟಿ ಬೆಳೆಸಿದವರು. ಹಿರಿಯರು. ಅಂಥವರ ಬಗ್ಗೆಯೇ ಬೈದು ಈಗ ಬೈದಿಲ್ಲ ಎಂದು ಹೇಳಿದ್ದು, ಚುನಾವಣೆಗೆ ಐದು ಕೋಟಿ ರು. ತೆಗೆದುಕೊಂಡು ಬಂದಿಲ್ಲವೇಎಂದು ಪ್ರಶ್ನಿಸಿದರು.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್

ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು–560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆಗೆ ತಿದ್ದುಪಡಿ

ದಿನಾಂಕ 16.07.2024ರಂದು ಈ ಪತ್ರಿಕೆಯಲ್ಲಿ ಪ್ರಕಟವಾದ ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆಯನ್ನು ದಯವಿಟ್ಟು ಆಧಾರ ಮಾಡಿಕೊಳ್ಳಿ. ಇದಕ್ಕೆ ಸಂಬಂಧಿಸಿದಂತೆ ಈ ಕೆಳಗೆ ಹೆಸರಿಸಿರುವ ಸಾಲಗಾರರ ಮತ್ತು ಸಹ–ಸಾಲಗಾರರ ಹೆಸರಿನ ಅಂಕಣದಲ್ಲಿ ಹೆಸರಿಸಲಾದ ಅಡಮಾನ ಮಾಡಿರುವ ಆಭರಣಗಳ ಒಟ್ಟು ತೂಕದಲ್ಲಿ ಕಣ್ತಪ್ಪಿನಿಂದಾಗಿ ತಪ್ಪಾಗಿ ಮುದ್ರಿತವಾಗಿದ್ದು, ಅಡಮಾನ ಮಾಡಿದ ಆಭರಣಗಳ ಸರಿಯಾದ ಒಟ್ಟು ತೂಕವನ್ನು ಈ ಕೆಳಗೆ ನೀಡಲಾಗಿದೆ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ–ಸಾಲಗಾರರ ಹೆಸರು	ತಪ್ಪಾಗಿ ಮುದ್ರಿತವಾದ ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ	ಅಡಮಾನ ಮಾಡಿದ ಆಭರಣಗಳ ಸರಿಯಾದ ಒಟ್ಟು ತೂಕ
7	46448160004532	ಶಿವರಾಜು ಎಸ್ ಎ	73.8	36.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ–571313.			
15	46458730007230	ಸುನಿಲ್ ಕುಮಾರ	9.4	4.7
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ. 02, ಖಾನೇಶುಮಾರಿ ನಂ. 2434/2, ಎಸ್ ಎ ಕಾಂಪ್ಲೆಕ್ಸ್, ರಾಮಕೃಷ್ಣ ರಸ್ತೆ, ಎಂ ವಿ ಎಕ್ಸ್‌ಟೆನ್ಶನ್, ಹೊಸಕೋಟೆ–562114, ಭಾರತ			
21	45468730013714	ಧನರಾಜ್ ಹೆಚ್ ಕೆ	6.4	3.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಹಾಜೀ ಬಾಶಾ ಸಾಬ್ ಆರ್ಕೇಡ್–1, ನಂ.27, ಗಂಗೋತ್ರಿ ರಸ್ತೆ, ತುಮಕೂರು–572101.			
23	45358160000342	ಮಂಜುನಾಥ್ ಸಾಬಪ್ಪ ಸನ್ನೇಳ್ಳಿ	31	15.5
24	45358730014142	ಪ್ರತಿಭಾ ಪಿ	8	4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ ಬೆಂಗಳೂರು–560060.			
39	30948730017902	ಮಾಲತಿ ಕೆ ವಿ	26.8	13.4
40	30948730017881	ರಬಿಯ ಫಾತಿಮಾ ಅಬ್ದುಲ್ ಸಲಾಂ	7.8	3.9
43	30948730017750	ಕುಮಾರಿ ಮಹೇಶ್	6.8	3.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು–570009.			
44	30198730034286	ಮೋನಿಶಾ	7.6	3.8
46	30198730034391	ರೂಪಶ್ರೀ ವೈ	10.8	5.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 2/1, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು–560027.			
49	45398730003922	ಸಿದ್ದಾರ್ಥ ಚವನ್	6.8	3.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಯುನಿಕ್ ಟವರ್, ಬಿಗ್ ಬಜಾರ್ ಹತ್ತಿರ ಖಾನಾಪುರ ರಸ್ತೆ, ಬೆಳಗಾವಿ–590003.			
53	31888730023313	ಅರುಣ್ ಕುಮಾರ್ ಟಿ	32.4	16.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85–6–22 ಸರ್ವಜ್ಞನಗರ, #01 ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005.			
55	31768730015106	ಮಣಿಕಾ ತುಕಾರಾಂ	14	7
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಶಿವಶಕ್ತಿ ಟವರ್ ಕೆಳಭಾಗ ಶಿವನಗರ ಉತ್ತರ, ಬೀದರ್ – 585401			
62	31138730051857	ಮಂಜುನಾಥ್ ಎ ಹೊಸಕೋಟಿ	9.2	4.6
63	31138730051959	ಮಲ್ಲಿಕಾರ್ಜುನ್ ಸಿದ್ರಾಮಪ್ಪ ಅರ್ಕೆರಿ	10.2	5.1
66	31138730051308	ಪಾಂಡುರಂಗ ವಿಠಪ ಝುಮ್ಮಣ್ಣನವರ್	9.8	4.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಗಣಪತಿ ಚೌಕ ಹತ್ತಿರ, ಶಹಾಪೇಟೆ, ಬಿಜಾಪುರ–586101			
70	33818160003631	ರವಿ	25.6	12.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ–577004			
74	31988730029400	ಮೊಹಮ್ಮದ್ ಗೌಸ್	15.8	7.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 143, 1, ಮಹಡಿ, ಮೋಕಾ ರಸ್ತೆ, ಗಾಂಧಿನಗರ ಮಾರುಕಟ್ಟೆ, ಬಳ್ಳಾರಿ–583101.			
77	45458730021378	ರಿಜ್ವಾನ ಬೇಗಂ ಮೊಹಮ್ಮದ್ ಷರೀಫ್	10	5
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2–907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ– 590003, ಭಾರತ			

ಸ್ಥಳ: ಕರ್ನಾಟಕ
ದಿನಾಂಕ: 02.08.2024

ಸಹಿ/–ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ನಗರಸಭಾ ಕಾರ್ಯಾಲಯ, ಉಡುಪಿ. ಉಡುಪಿ ಜಿಲ್ಲೆ–576101

Phone: 0820-2520446/2520306 Fax: 0820-2524236
Web: www.udupicity.mrc.gov.in E-Mail: itstaff_ulb_udupi@yahoo.com

UCMC/HS/HEE-130/CR-106/2024-25 Date:31/07/2024

ಟೆಂಡರ್ ಪ್ರಕಟಣೆ–2ನೇ ಕರೆ

ಕೆ.ಟಿ.ಟಿ.ಪಿ. ಕಾಯ್ದೆ 1999 ಮತ್ತು ನಿಯಮಗಳು 2000 ರನ್ವಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂರ ಹೈಡ್ರಾಲಿಕ್ ಅರ್ಥ ಎಸ್ಕವೇಟರ್ ಮೆಷಿನ್ ವಾಹನವನ್ನು ಪೂರೈಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 16/08/2024 ಸಮಯ 5.00 ಗಂಟೆವರೆಗೆ ಅರ್ಹ ಪೂರೈಕೆದಾರರು / ಗುತ್ತಿಗೆದಾರರು / ಏಜನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ (https://kppp.karnataka.gov.in) ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

ಅನುದಾನದ ವಿವರ: ಎಸ್.ಬಿ.ಎಂ. 1.0 ಉಳಿತಾಯದ ಅನುದಾನ

ಕ್ರ. ಸಂ.	ಕೆಲಸದ ಹೆಸರು	ಟೆಂಡರ್ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ	ಇ.ಎಂ.ಡಿ ಮೊತ್ತ
1	Procurement of Hydraulic Earth Excavator Machine (130)	DMA/2024-25/ IND1870/ CALL-2	Rs. 49,39,100.00/-	Rs. 1,23,750.00/-

ಸಹಿ/–
ಪೌರಾಯುಕ್ತರು,
ನಗರಸಭೆ, ಉಡುಪಿ

ಕರ್ನಾಟಕ ಸರ್ಕಾರ
Govt of Karnataka

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ–587103

OFFICE OF THE DEPUTY COMMISSIONER, BAGALKOTE- 587103

Ph: 08354-235091 E-mail: dudc_bgk@yahoo.co.in, . Itstaff dudc_bagalkote@yahoo.co.in

ಸಂಖ್ಯೆ:ಜಿನಕೋಬಾ: ನಗರೋತ್ಥಾನ ಹಂತ–4:2024–25 ದಿನಾಂಕ: 01.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
E-Procurement portal ಮುಖಾಂತರ

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮಾನ್ಯ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಹಂತ–4 ರಲ್ಲಿಯ ಕಾಮಗಾರಿಗಳಿಗೆ e-protal: https://kppp.karnataka.gov.in ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಇಂಡೆಂಟ ನಂ. DMA/2024-25/OW/WORK_INDENT23234, 607, 598, 23470, 19060/CALL-2 ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 16.08.2024 at 04.30 pm, ಸೂಚನೆ ಟೆಂಡರನಲ್ಲಿ ದಿನಾಂಕ ಹಾಗೂ ಇತರೆ ತಿದ್ದುಪಡಿಗಳು/ಸೇರ್ಪಡೆಗಳು ಇದ್ದಲ್ಲಿ ಇ–ಪೋರ್ಟಲ್‌ನಲ್ಲಿ ತಿಳಿಸಲಾಗುವದು, ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವದಿಲ್ಲ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ, ಬಾಗಲಕೋಟೆ.

ವಾ.ಸಾ.ಇ/ಬಾಗಲಕೋಟ/154/ ದೇಶಪಾಂಡೆಪಬ್ಲಿಸಿಟಿ/2024–25

...ಇಡೀ ಸಚಿವ ಸಂಪುಟ

← ಮೊದಲಪುಟದಿಂದ

ಈಗಾಗಲೇ ಮುಖ್ಯ ಕಾರ್ಯದರ್ಶಿ (ಸಿಎಸ್) ರಾಜ್ಯಪಾಲರಿಗೆ ಸುದೀರ್ಘ ವಿವರ ಕೊಟ್ಟಿದ್ದಾರೆ. ಆದರೆ ಸಿಎಸ್ ವಿವರ ನೋಡುವುದರ ಮೊದಲೇ ಸಿಎಂಗೆ ಶೋಕಾಸ್ ನೋಟಿಸ್ ಕೊಡಲಾಗಿದೆ. ತರಾತುರಿಯಲ್ಲಿ ಏಕೆ ನೋಟಿಸ್ ಕೊಡಲಾಗಿದೆ? ಎಂದು ಪ್ರಶ್ನಿಸಿದರು.

ಸಂಪುಟ ಸಭೆಯ ನಿರ್ಣಯಗಳೇನು?: ಟಿ.ಜೆ.ಅಬ್ರಾಹಂ ಎಂಬ ವ್ಯಕ್ತಿ ಒಬ್ಬ ಅಪರಾಧ ಹಿನ್ನೆಲೆಯುಳ್ಳ ಮತ್ತು ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುವುದಕ್ಕೆ ಪ್ರಸಿದ್ಧವಾಗಿದ್ದು, ಈಗಾಗಲೇ ಸುಪ್ರೀಂಕೋರ್ಟ್ ಸಾರ್ವಜನಿಕ ಹಿತಾಸಕ್ತಿ ವೇದಿಕೆಯನ್ನು ದುರ್ಬಳಕೆಗೊಳಿಸಿರುವ ಹಿನ್ನೆಲೆಯಲ್ಲಿ 25 ಲಕ್ಷ ದಂಡ ವಿಧಿಸಿದೆ. ಈ ಹಿನ್ನೆಲೆಯ ವ್ಯಕ್ತಿಯ ಅರ್ಜಿಯ ಮೇಲೆ ರಾಜ್ಯಪಾಲರು ನೋಟಿಸ್ ನೀಡಿರುತ್ತಾರೆ. ಈ ನೋಟಿಸ್ ಸಂಪೂರ್ಣವಾಗಿ ಕಾನೂನು ಮತ್ತು ಸಂವಿಧಾನ ಬಾಹಿರವಲ್ಲದೆ ರಾಜಕೀಯ ಪ್ರೇರಿತವಾಗಿರುತ್ತದೆ. ಪಶ್ಚಿಮ ಬಂಗಾಳ, ಕೇರಳ, ದೆಹಲಿ, ತಮಿಳುನಾಡು ಮತ್ತು ಇತರ ಬಿಜೆಪಿಯೇತರ ಸರಕಾರ ಅಸ್ತಿತ್ವದಲ್ಲಿ ಇರುವ ರಾಜ್ಯಗಳ ಮಾದರಿಯಲ್ಲಿ ರಾಜಭವನಗಳನ್ನು ಬಿಜೆಪಿಯ ಪ್ರಾದೇಶಿಕ ಕಚೇರಿಗಳನ್ನಾಗಿ ಬಳಸಿ, ಈಗ ಅದೇ ಪ್ರವೃತ್ತಿ ಬೆಳೆಯುತ್ತಿರುವುದಕ್ಕೆ ಕರ್ನಾಟಕವು ಸಾಕ್ಷಿಯಾಗಿದೆ ಎಂದು ಸಚಿವ ಸಂಪುಟದಲ್ಲಿ ನಿರ್ಣಯಿಸಲಾಗಿದೆ.

ರಾಜ್ಯಪಾಲರ ಮುಂದೆ ಹಲವು ವರ್ಷಗಳಿಂದ ಇತ್ಯರ್ಥಗೊಳ್ಳದ ಬಿಜೆಪಿ ನಾಯಕರ ಅಭಿಯೋಜನಾ ಅರ್ಜಿಗಳು ಬಾಕಿಯಿವೆ. ಆದರೆ ಸಿಎಂ ವಿರುದ್ಧದ ದೂರಿಗೆ ಮಾತ್ರ ಕೆಲವೇ ಗಂಟೆಗಳಲ್ಲಿ ನೋಟಿಸ್ ಜಾರಿಗೊಳಿಸಿರುವುದು ಸಂವಿಧಾನ ಹುದ್ದೆಯ ದುರ್ಬಳಕೆ. ರಾಜ್ಯಪಾಲರ ತರಾತುರಿಯ ನಡೆ ಸಂವಿಧಾನಿಕ ತತ್ವಗಳನ್ನು ಗಾಳಿಗೆ ತೂರಿ ಕಾನೂನಿನ ವಿರುದ್ಧವಿದ್ದು, ಕನ್ನಡಿಗರ ಆಶೀರ್ವಾದವನ್ನು ಅವಮಾನ ಮಾಡುತ್ತಿದ್ದಾರೆ. ಕನ್ನಡಿಗರ ಆಶೀರ್ವಾದದಿಂದ ಆಯ್ಕೆಯಾದಂತಹ ಈ ಸರಕಾರವನ್ನು ಸಂವಿಧಾನದ ಆಶಯದಂತೆ ನಾವು ನಮ್ಮ ಜನರ ಹಿತಾಸಕ್ತಿ ಹಾಗೂ ಈ ಸರಕಾರದ ಅಸ್ತಿತ್ವನ್ನು ಕಾಪಾಡಲು ಕಾನೂನು ಹಾಗೂ ರಾಜಕೀಯ ಹೋರಾಟವನ್ನು ಮಾಡಲಿಕ್ಕೆ ಸಿದ್ಧರಿದ್ದೇವೆ ಎಂದು ನಿರ್ಣಯಿಸಲಾಗಿದೆ.

ರಾಜ್ಯಪಾಲರು ಪ್ರಕರಣವನ್ನು ಸೂಕ್ಷ್ಮವಾಗಿ ಪರಿಗಣಿಸಲಿದ್ದಾರೆ ಎನ್ನುವ ಭರವಸೆಯಿದೆ. ಈಗಾಗಲೇ ಎಲ್ಲ ಮಾಹಿತಿಯನ್ನು ನೀಡಿದ್ದೇವೆ. ಇಲ್ಲಿ ಕಾನೂನು, ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆ ಅಡಗಿದ್ದು, ರಾಜ್ಯಪಾಲರು ಬಹಳ ಲೆಕ್ಕಾಚಾರದಿಂದ ಹೆಜ್ಜೆ ಇಡಬೇಕಾಗುತ್ತದೆ. ಈಗಾಗಲೇ ಮುಖ್ಯಕಾರ್ಯದರ್ಶಿಗಳು ಈಗಾಗಲೇ ವಿಸ್ತೃತ ವರದಿ ನೀಡಿದ್ದು, ಮುಖ್ಯಮಂತ್ರಿಗಳೂ ವಿವರವಾದ ಉತ್ತರ ನೀಡಲಿದ್ದಾರೆ.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

...ನಿವಾಸದಲ್ಲಿ ಬಂಡಾಯ ಸಭೆ

← ಮೊದಲಪುಟದಿಂದ

ರಾಜ್ಯ ಬಿಜೆಪಿ ಒಂದು ಕುಟುಂಬದ ಹಿಡಿತದಲ್ಲಿರುವುದು ಸರಿಯಲ್ಲ. ಈ ಬಗ್ಗೆ ವರಿಷ್ಠ ಜತೆ ಚರ್ಚಿಸಬೇಕು ಎನ್ನುವ ತೀರ್ಮಾನಕ್ಕೆ ಬರಲಾಗಿದೆ ಎನ್ನಲಾಗಿದೆ.

ನಮ್ಮೊಂದಿಗೆ ಸೇರುವವರ ಸಂಖ್ಯೆ ದೊಡ್ಡದಿದೆ: ಯತ್ನಾಳ್: ಸಭೆಯ ಬಳಿಕ ಮಾತನಾಡಿರುವ ಬಸನಗೌಡ ಪಾಟೀಲ್ ಯತ್ನಾಳ್, ಅಪ್ಪ, ಮಕ್ಕಳಿಂದ ಬಿಜೆಪಿ ನಾಶವಾಗುತ್ತಿದೆ. ಅತೃಪ್ತರೆಲ್ಲಾ ಸೇರಿ ಹೈಕಮಾಂಡ್ ಗಮನಕ್ಕೆ ತರುತ್ತೇವೆ. ಕರ್ನಾಟಕದಲ್ಲಿ ಬಿಜೆಪಿ ಸರಿ ಹೋಗುತ್ತಿಲ್ಲ. ಅಪ್ಪ, ಮಕ್ಕಳ ಪಕ್ಷವಾಗಿರುವುದನ್ನು ಮುಕ್ತ ಮಾಡಬೇಕು. ಲೋಕಸಭಾ ಚುನಾವಣೆಯಲ್ಲಿ ವಿಜಯೇಂದ್ರ ಮತ್ತು ಯಡಿಯೂರಪ್ಪ ಪಕ್ಷ ವಿರೋಧಿ ಚಟುವಟಿಕೆ ಮಾಡಿರುವುದನ್ನು ಹೈಕಮಾಂಡ್ ಗಮನಕ್ಕೆ ತರಬೇಕು. ಅದಕ್ಕೆ ಸಮಾನ ಮನಸ್ಕರು, ಸೋತ ಅಭ್ಯರ್ಥಿಗಳು, ಗೆದ್ದವರು ಎಲ್ಲರೂ ಹೈಕಮಾಂಡ್‌ಗೆ ತಿಳಿಸಲು ನಿರ್ಧರಿಸಲಾಗಿದೆ. ಮೊದಲು ನಾವೆಲ್ಲರೂ ದೊಡ್ಡ ಸಭೆ ಮಾಡಲು ತೀರ್ಮಾನ ಮಾಡಿದ್ದೇವೆ. ನಮ್ಮೊಂದಿಗೆ ಸೇರುವವರು ಬಹಳ ದೊಡ್ಡ ಸಂಖ್ಯೆಯಲ್ಲಿದ್ದಾರೆ ಎಂದಿದ್ದಾರೆ.

ಉತ್ತರ ಭಾರತಕ್ಕೆ ಜಲ ಗಂಡಾಂತರ

← ಮೊದಲಪುಟದಿಂದ

ಕೇದಾರನಾಥ ಯಾತ್ರೆ ಸಂದರ್ಭದಲ್ಲಿ ಸುರಿದ ಭಾರಿ ಮಳೆಗೆ 12 ಜನ ಸಾವನ್ನಪ್ಪಿದ್ದಾರೆ. ಉತ್ತರಾಖಂಡದ ಹರಿದ್ವಾರದಲ್ಲಿ 6, ತೆಹ್ರಿಯಲ್ಲಿ 3, ಡೆಹ್ರಾಡೂನ್‌ನಲ್ಲಿ 2, ಚಮೋಲಿಯಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ. ಬುಧವಾರ ರಾತ್ರಿ ಸುರಿದ ಭಾರಿ ಮಳೆಗೆ ದೆಹಲಿಯಲ್ಲಿ 10 ಮಂದಿ ಸಾವನ್ನಪ್ಪಿದ್ದಾರೆ. ಬಿಹಾರದಲ್ಲಿ ಸಿಡಿಲು ಬಡಿದು ಐವರು ಮೃತಪಟ್ಟಿದ್ದಾರೆ. ಜೆಹಾನಾಬಾದ್ ಜಿಲ್ಲೆಯಲ್ಲಿ ಮೂವರು, ರೋಹ್ತಾಸ್ ಜಿಲ್ಲೆಯಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ.

ಯುವತಿ ಮೇಲಿನ ಹಲ್ಲೆ ಪ್ರಕರಣ: ಮಂಗಳಮುಖಿಯರ ಸೆರೆ

ವಿಜಯಪುರ: ನಗರದಲ್ಲಿ ಮಂಗಳಮುಖಿಯರ ಗುಂಪು ಯುವತಿ ಯೋರ್ವಳನ್ನು ವಿವಸ್ತ್ರಗೊಳಿಸಿ ಬೆತ್ತಲೆ ಮಾಡಿ ಗುಪ್ತಾಂಗಕ್ಕೆ ಖಾರದ ಪುಡಿ ಹಾಕಿ ಅಮಾನುಷವಾಗಿ ಹಲ್ಲೆ ಮಾಡಿರುವ ವಿಡಿಯೋ ವೈರಲ್ ಆಗಿದ್ದು, ಕಳೆದ 21–06–2024 ರಂದು ನಡೆದಿದ್ದ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಪುರುಷರಂತೆ ವೇಷಭೂಷಣ ತೊಟ್ಟಿದ್ದ ಯುವತಿ ಮೇಲೆ ಕೇಂದ್ರ ಬಸ್ ನಿಲ್ದಾಣದ ಬಳಿ ಹಲ್ಲೆ ನಡೆದಿದೆ. 6 ಮಂಗಳಮುಖಿಯರು ಯುವತಿಯನ್ನು ವಿವಸ್ತ್ರಗೊಳಿಸಿ ಗುಪ್ತಾಂಗಕ್ಕೆ ಖಾರದಪುಡಿ ಹಾಕಿ ಹಲ್ಲೆ ಮಾಡಿದ್ದರು. ಹಲ್ಲೆಯ ವಿಡಿಯೋ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತ ಪೊಲೀಸ್ ಇಲಾಖೆ ವಿಡಿಯೋ ವೈರಲ್ ಆದ 24 ಗಂಟೆಗಳಲ್ಲಿ ಐವರು ಮಂಗಳಮುಖಿಯರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ. ಹಲ್ಲೆಗೊಳಗಾದ ಯುವತಿ (ರೇಖಾ ರೆಡ್ಡಿ ಉರ್ಫ್ ಸಚಿವ ರೆಡ್ಡಿ) ಯಿಂದ 6 ಮಂಗಳಮುಖಿಯರ ಮೇಲೆ ನಗರದ ಗೋಲಗುಂಬಜ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಪುಣೆ ಮೂಲದ ಅಶ್ವಿನಿ, ಹುಲಿಗೆಮ್ಮಾ, ಕವಿತಾ, ದಾನಮ್ಮಾ ಹಾಗೂ ಮಾಹನಮ್ಮಾ ಬಂಧಿತ ಮಂಗಳಮುಖಿಯರು. ಹಲ್ಲೆಯ ಕುರಿತು ತನಿಖೆ ಮಾಡಲಾಗುತ್ತಿದೆ ಎಂದು ವಿಜಯಪುರ ಜಿಲ್ಲಾ ಎಸ್‌ಪಿ ಹೃಷಿಕೇಶ ಸೋನೆವಣೆ ಮಾಹಿತಿ ನೀಡಿದ್ದಾರೆ.

ಟ್ವೀಟೂ-ಖಾರಾ

ಅಮಿತ್ ಶಾ
ಕೇಂದ್ರ ಸಚಿವ

ವಯನಾಡಿನ ವಿನಾಶಕಾರಿ ಭೂಕುಸಿತ ಪರಿಸ್ಥಿತಿಯಲ್ಲಿ ಕೇರಳ ಜನತೆ ಪರ ಮೋದಿ ಸರಕಾರ ನಿಲ್ಲಲಿದೆ. ಕಳೆದ ಹತ್ತು ವರ್ಷಗಳಲ್ಲಿ ವಿಕೋಪದ ಮುನ್ನೆಚ್ಚರಿಕೆ ನೀಡುವ ಅತ್ಯಾಧುನಿಕ ವ್ಯವಸ್ಥೆಗಳನ್ನು ಕೇಂದ್ರ ಅಭಿವೃದ್ಧಿಪಡಿಸಿದೆ. ವಿಕೋಪದ ಬಗ್ಗೆ ಕೇರಳ ಸರಕಾರಕ್ಕೆ ಹಲವಾರು ಬಾರಿ ಎಚ್ಚರಿಕೆ ನೀಡಲಾಗಿತ್ತು.

ಶರ್ಫುದ್ದೀನ್ ಹೈದರ್
ತ್ರಿಶೂರ್

ದುರದೃಷ್ಟವಶಾತ್ ಸಾಮಾಜಿಕ ಮಾಧ್ಯಮಗಳಲ್ಲಿ ಕೆಲ ಬಿಜೆಪಿ ನಾಯಕರಿಂದ ಬೇಜವಾಬ್ದಾರಿಯುತ ಮತ್ತು ತಪ್ಪುಮಾಹಿತಿ ನೀಡುವ ವಿಷಯಗಳನ್ನು ಹರಡಲಾಗುತ್ತಿದೆ. ಸಿಎಂಡಿಆರ್‌ಎಫ್ ನಿಧಿಯನ್ನು ನೀಡಬಾರದೆಂದು ಈ ಮೂಲಕ ಒತ್ತಾಯಿಸಲಾಗುತ್ತಿದೆ. ಇದರಿಂದ ನೆರೆ ಪರಿಹಾರ ಕಾರ್ಯಗಳಿಗೆ ತೊಂದರೆಯಾಗುತ್ತದೆ.

ಸಮಾಚಾರ ಸಣ್ಣದಲ್ಲ

ಒಳಮೀಸಲಾತಿ : ಕೋರ್ಟ್ ತೀರ್ಪು ಸ್ವಾಗತಾರ್ಹ

ಚಿತ್ರದುರ್ಗ: ಆಂತರಿಕ ಮೀಸಲಾತಿಯನ್ನು ಎತ್ತಿಹಿಡಿಯುವ ಮೂಲಕ ಸುಪ್ರೀಂಕೋರ್ಟ್ ಏಳು ಸದಸ್ಯರ ಪೀಠ ನೀಡಿರುವ ತೀರ್ಪು ಸಾಮಾಜಿಕ ನ್ಯಾಯಕ್ಕೆ ಸಿಕ್ಕ ಅಭೂತಪೂರ್ವ ಗೆಲುವು ಎಂದು

ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಬಣ್ಣಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು, ಕೋರ್ಟ್ ಐತಿಹಾಸಿಕ ತೀರ್ಪು ಸಾಮಾಜಿಕ ನ್ಯಾಯಕ್ಕೆ ನವಶಕ್ತಿ ಹಾಗೂ ಭಾರತೀಯ ಸಂವಿಧಾನದ ಆಶಯಕ್ಕೆ ಇನ್ನಷ್ಟು ಬಲ ನೀಡಿದಂತಾಗಿದೆ. ಏಳು ನ್ಯಾಯಮೂರ್ತಿಗಳ ಪೀಠವು ಚಿನ್ನಯ್ಯ ತೀರ್ಪನ್ನು ರದ್ದುಗೊಳಿಸಿದ್ದು, ದೇವೀಂದ್ರ ಸಿಂಗ್ ಪ್ರಕರಣದ ತೀರ್ಪನ್ನು ಎತ್ತಿಹಿಡಿದಿದೆ. ಅಂದರೆ, ಭಾರತದ ಸಂವಿಧಾನವು ಎಸ್‌ಸಿಗಳಲ್ಲಿ ಆಂತರಿಕ ಮೀಸಲಾತಿಯನ್ನು ಅನುಮತಿಸುತ್ತದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸಿರುವುದು ನಿಜಕ್ಕೂ ಹೆಮ್ಮೆ ಪಡುವ ಸಂಗ. 30 ವರ್ಷಗಳ ನಿರಂತರ ಹೋರಾಟಕ್ಕೆ ಜಯ ದೊರಕಿದೆ ಎಂದು ಸಂಸದ ಕಾರಜೋಳ ಹೇಳಿದ್ದಾರೆ.

ಮಲೆ ಮಹದೇಶ್ವರನ ಹುಂಡಿ 2 ಕೋಟಿ ಕಾಣಿಕೆ

ಚಾಮರಾಜನಗರ: ಹನೂರು ತಾಲೂಕಿನ ಮಲೆಮಹದೇಶ್ವರ ಬೆಟ್ಟದಲ್ಲಿ ನಡೆದ ಹುಂಡಿ ಹಣ ಎಣಿಕೆಯಲ್ಲಿ ಈ ಬಾರಿ 32ದಿನಗಳ ಅವಧಿಯಲ್ಲಿ 2.28ಕೋಟಿ ರೂಪಾಯಿ ಸಂಗ್ರಹವಾಗಿದೆ. ಮಹದೇಶ್ವರ ಬೆಟ್ಟದ ವಾಣಿಜ್ಯ ಸಂಕೀರ್ಣದಲ್ಲಿ ಸಾಲೂರು ಬೃಹನ್ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಹಾಗೂ ಪ್ರಾಧಿಕಾರದ ಕಾರ್ಯದರ್ಶಿ ರಘುರವರ ಸಮ್ಮುಖದಲ್ಲಿ ದೇವರ ಹುಂಡಿ ತೆರೆಯಲಾಯಿತು. ಹುಂಡಿಯಲ್ಲಿ ಕೇವಲ 32 ದಿನಗಳಿಗೆ 2 ಕೋಟಿ, 28 ಲಕ್ಷ, 3 ಸಾವಿರದ 803 ರೂ.ಗಳು ಹಾಗೂ 59 ಗ್ರಾಂ ಚಿನ್ನ, 1.500 ಕೆಜಿ ಬೆಳ್ಳಿ ಸಂಗ್ರಹವಾಗಿದೆ. ವಿದೇಶದ 6ನೋಟು ಕೂಡ ಪತ್ತೆಯಾಗಿವೆ.

ವಿದ್ಯಾಶ್ರೀಶ ಶ್ರೀಗಳ ಚಾತುರ್ಮಾಸ್ಯ ವ್ರತ

ಮೈಸೂರು: ಸೋಸಲೆ ವ್ಯಾಸರಾಜರ ಮಠದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಅವರ ಎಂಟನೇ ಚಾತುರ್ಮಾಸ್ಯ ವ್ರತ ಟಿ.ನರಸೀಪುರ ಸಮೀಪದ ಸೋಸಲೆ ಗ್ರಾಮದಲ್ಲಿ ಶುಕ್ರವಾರ ಆರಂಭವಾಗಲಿದೆ. ಗುರುವಾರ ಬನ್ನೂರು ವೃತದಿಂದ ಸೋಸಲೆ ಗ್ರಾಮದ ವ್ಯಾಸರಾಜರ ಮಠದವರೆಗೆ ವೈಭವದ ಮೆರವಣಿಗೆ ಮೂಲಕ ಶ್ರೀಗಳ ಪುರ ಪ್ರವೇಶ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮೆರವಣಿಗೆಯಲ್ಲಿ ವಿವಿಧ ಭಜನಾ ಮಂಡಳಿಗಳಿಂದ ದಾಸ ಪದ ಸಂಕೀರ್ತನೆ, ಕೋಲಾಟ, ವಿದ್ವಾಂಸರಿಂದ ವೇದ ಘೋಷ, ವಿದ್ಯಾಪೀಠದ ವಿದ್ಯಾರ್ಥಿಗಳಿಂದ ಮಂತ್ರಘೋಷ ನಡೆಯಿತು. ಸಂಜೆ 6 ಗಂಟೆಗೆ ಮಠದಲ್ಲಿ ನಡೆದ ಸ್ವಾಗತ ಕಾರ್ಯಕ್ರಮದಲ್ಲಿ ಶ್ರೀಗಳು ಅನುಗ್ರಹ ಸಂದೇಶ ನೀಡಿದರು.

{ಎಚ್.ಡಿ. ಕುಮಾರಸ್ವಾಮಿ} ಕೇಂದ್ರ ಸಚಿವ

ನಾವು ಎಲ್ಲೇ ಇದ್ದರೂ ಕನ್ನಡಿಗರಾಗಿಯೇ ಉಳಿಯಬೇಕು. ನಮ್ಮ ಭಾಷೆ , ಸಂಸ್ಕೃತಿ, ನಾಡು-ನುಡಿಯನ್ನು ಬಿಟ್ಟು ಬದುಕಬಾರದು.ನಾಡು-ನುಡಿ ಪ್ರಶ್ನೆ ಬಂದಾಗ ರಾಜಿ ಪ್ರಶ್ನೆಯೇ ಇಲ್ಲ.ಎಲ್ಲರೂ ರಾಜ್ಯದ ಹಿತಕ್ಕಾಗಿ ಕೆಲಸ ಮಾಡುತ್ತೇವೆ.

ಸಂಪುಟ ಸಭೆ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಡಿಸಿಎಂ ಹೇಳಿಕೆ | ಮುಖ್ಯಮಂತ್ರಿ ಪತ್ನಿ ಎಂಬ ಕಾರಣಕ್ಕೆ ತಮ್ಮ ಹಕ್ಕನ್ನು ಕಳೆದುಕೊಳ್ಳಬೇಕಾ?

ನೋಟಿಸ್ ಹಿಂಪಡೆಯಲು ರಾಜ್ಯಪಾಲರಿಗೆ ಆಗ್ರಹ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಟಿ.ಜೆ. ಅಬ್ರಹಾಂ ಅವರ ದೂರಿನನ್ವಯ ಮುಖ್ಯಮಂತ್ರಿಗಳಿಗೆ ನೀಡಿರುವ ಶೋಕಾಸ್ ನೋಟಿಸ್ ಹಿಂಪಡೆಯಬೇಕು ಎಂದು ಸಚಿವ ಸಂಪುಟ ರಾಜ್ಯಪಾಲರಿಗೆ ಸಲಹೆ ನೀಡಲು ತೀರ್ಮಾನಿಸಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮುಡಾ ವಿಚಾರವಾಗಿ ಸಿಎಂ ಸಿದ್ದರಾಮಯ್ಯಗೆ ರಾಜ್ಯಪಾಲರು ನೋಟೀಸ್ ನೀಡಿರುವ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಲಾಯಿತು. ಸಂಪುಟ ಸಭೆಯಲ್ಲಿ ರಾಜ್ಯಪಾಲರ ನೋಟೀಸ್ ಹಿಂಪಡೆಯುವಂತೆ ಒತ್ತಾಯಿಸಿ ನಿರ್ಣಯ ಕೈಗೊಳ್ಳಲು ತೀರ್ಮಾನಿಸಲಾಗಿದೆ. ಇದರೊಂದಿಗೆ ಮುಡಾ ಸಂಬಂಧ ಕಾನೂನು ಹೋರಾಟ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಯ್ಕೆಯಾದ ಸಿಎಂಗೆ ಶೋಕಾಸ್ ನೋಟಿಸ್ ಜಾರಿ ಮಾಡಿದ್ದಾರೆ. ಪ್ರಜಾಪ್ರಭುತ್ವದ ಕಗ್ಗೊಲೆಯನ್ನು ಕೇಂದ್ರ ಸರಕಾರ ಮಾಡುತ್ತಿದೆ. ಕಾಂಗ್ರೆಸ್‌ಗೆ 136 ಸೀಟು ಕೊಟ್ಟು ಆಶೀರ್ವಾದ ಮಾಡಿದೆ. ಸಂವಿಧಾನಕ್ಕೆ ನಾವು ಗೌರವ ಕೊಡುತ್ತೇವೆ. ಕೇಂದ್ರ ಸರಾಜ್ಯಪಾಲರನ್ನು ಬಳಸಿ ಟಿ.ಜೆ.ಅಬ್ರಹಾಂ ಎಂಬ ವ್ಯಕ್ತಿಯ ಮೂಲಕ ಸಿಎಂ ಮೇಲೆ ಅಭಿಯೋಜನೆಗೆ ಯತ್ನಿಸುತ್ತಿದೆ ಎಂದು ಟೀಕಿಸಿದರು.

ಟಿ.ಜೆ.ಅಬ್ರಹಾಂ ಜು.26ಕ್ಕೆ ರಾಜ್ಯಪಾಲರಿಗೆ ದೂರು ಕೊಡುತ್ತಾರೆ. ಅದೇ ದಿನ ರಾಜ್ಯಪಾಲರು ಬರೆದು ನಿಮ್ಮ ವಿರುದ್ಧ ತನಿಖೆ ನಡೆಸಲು ಅನುಮತಿ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದಾರೆ. 200ಕ್ಕೂ ಅಧಿಕ ದಾಖಲೆಗಳುಳ್ಳ ಪುಟಗಳ ಅರ್ಜಿ ಸಲ್ಲಿಸಿದ ಕೆಲವೇ ನಿಮಿಷಗಳಲ್ಲಿ ರಾಜ್ಯಪಾಲರು ಶೋಕಾಸ್ ನೋಟಿಸ್ ಜಾರಿ ಮಾಡಿದ್ದಾರೆ. ಯಾರಾದರು ದೂರು ಕೊಟ್ಟರೆ ಏನಾದರು ಆರೋಪ ಸಾಬೀತಾಗಬೇಕು. ತನಿಖಾ ಸಂಸ್ಥೆ ಪ್ರಕರಣ ಸಂಬಂಧ ತನಿಖೆ ನಡೆಸಿ ಅನುಮತಿ ನೀಡುವಂತೆ ಕೋರಿರುತ್ತಾರೆ. ಈ ಬಗ್ಗೆ ಇನ್ನೂ ತನಿಖೆನೂ ಮಾಡಿಲ್ಲ. ಪ್ರಕರಣ ಬಗ್ಗೆ ನ್ಯಾಯಾಂಗ ತನಿಖೆ ನಡೆಯುತ್ತಿದೆ. ಅದಕ್ಕೂ ಮೊದಲು ತರಾತುರಿಯಲ್ಲಿ ಸಿಎಂಗೆ ನೋಟೀಸ್ ಕಳಹಿಸಿದ್ದಾರೆ. ಇದು ಪ್ರಜಾಪ್ರಭುತ್ವದ, ಸಂವಿಧಾನದ ಕಗ್ಗೊಲೆಯಾಗಿದೆ ಎಂದು ಡಿಕೆಶಿ ವಾಗ್ದಾಳಿ ನಡೆಸಿದರು.

ಸಂಪುಟದಲ್ಲಿ ಚರ್ಚೆ: ಶೋಕಾಸ್ ನೋಟಿಸ್ ನೀಡಿ ಗುರುವಾರಕ್ಕೆ ಏಳನೇ ದಿನವಾಗಿದೆ. ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿದ್ದೇವೆ. ಅನೇಕ ರಾಜ್ಯಗಳಲ್ಲಿ ರಾಜ್ಯಪಾಲರು ಯಾವ ರೀತಿ ನಡೆದುಕೊಂಡಿದ್ದಾರೆ. ಸಂವಿಧಾನ ಏನಿದೆ. ಸುಪ್ರೀಂ ಕೋರ್ಟ್ ನಲ್ಲಿ ಏನೆಲ್ಲಾ ತೀರ್ಪುಗಳು ಆಗಿವೆ ಎಂಬ ಬಗ್ಗೆ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ಮಾಡಿದ್ದೇವೆ. ಬಿಜೆಪಿ ಸರಕಾರ ಇದ್ದಾಗ ನಿವೇಶನ ಹಂಚಿಕೆ ಮಾಡಲಾಗಿದೆ. ಎಲ್ಲಾ ಪಕ್ಷದವರು ಸದಸ್ಯರಿರುವ ಮುಡಾ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಇದರಲ್ಲಿ ಯಾವ ಅಕ್ರಮವಾಗಿದೆ?. ಇದರಲ್ಲಿ ಸಿಎಂ ಪ್ರಭಾವ ಏನಿದೆ?. ಹೆಣ್ಣುಮಗಳು ಅಣ್ಣ ನೀಡಿದ ಆಸ್ತಿಯನ್ನು ಮುಡಾದವರು ಸ್ವಾಧೀನ ಮಾಡಿದ್ದಾರೆ. ನಮಗೆ ಬದಲಿ ನಿವೇಶನ ಕೊಡಿ ಎಂದು ಮುಡಾಗೆ ಮನವಿ ಮಾಡಿದ್ದರು. ಇದರಲ್ಲಿ ಸಿಎಂ ಪಾತ್ರ ಎಲ್ಲಿದೆ ಎಂದು ಉಪಮುಖ್ಯಮಂತ್ರಿ ಪ್ರಶ್ನಿಸಿದರು.

ಕಾನೂನಿನ ಚೌಕಟ್ಟಿನಲ್ಲೇ ನಾವು ಹೋಗಿದ್ದೇವೆ. ಈ ಸಂಬಂಧ ಕೋರ್ಟ್‌ಗಳ ಹಲವು ತೀರ್ಪುಗಳಿವೆ. ಅದನ್ನೆಲ್ಲಾ ರಾಜ್ಯಪಾಲರು ಪರಿಗಣಿಸುತ್ತಾರೆ. ಅವರು ಖಂಡಿತವಾಗಿ ಟಿ.ಜೆ.ಅಬ್ರಹಾಂ ಅರ್ಜಿಯನ್ನು ತಿರಸ್ಕರಿಸಿ, ಶೋಕಾಸ್ ನೋಟಿಸ್ ವಾಪಾಸು ಪಡೆಯುತ್ತಾರೆ ಎಂಬ ವಿಶ್ವಾಸ ಇದೆ. ಅವರು ಕಾನೂನು ಪ್ರಕಾರ ತೀರ್ಮಾನ ಕೈಗೊಳ್ಳುತ್ತಾರೆ ಎಂಬ ನಂಬಿಕೆಯಿದೆ ಎಂದರು.

ಶ್ರೇಷ್ಠ ಸಂಪ್ರದಾಯ ಎತ್ತಿ ಹಿಡಿಯಬೇಕು ಎನ್ನುವ ಕಾರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಸಂಪುಟ ಸಭೆಗೆ ಹಾಜರಾಗಿಲ್ಲ. ಆದ್ದರಿಂದ ಡಿಸಿಎಂ ನೇತೃತ್ವದಲ್ಲಿ ಸಂಪುಟ ಸಭೆ ನಡೆಯಿತು. ಸಭೆ ಸುದೀರ್ಘವಾಗಿ ನಡೆದಿದೆ. ಶೋಕಾಸ್ ನೋಟಿಸ್ ಬಗ್ಗೆ ವಿವರವಾಗಿ ಚರ್ಚೆ ಮಾಡಲಾಗಿದೆ.

-ಎಚ್.ಕೆ.ಪಾಟೀಲ್ ಕಾನೂನು - ಸಂಸದೀಯ ವ್ಯವಹಾರಗಳ ಸಚಿವ

ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯನವರು ಈಗಾಗಲೇ ರಾಜ್ಯಪಾಲರನ್ನು ಭೇಟಿಮಾಡಿ ಸುದೀರ್ಘ ವಿವರಣೆ ನೀಡಿದ್ದಾರೆ. ಆದರೂ ರಾಜ್ಯಪಾಲರು ನೋಟಿಸ್ ನೀಡಿರುವುದು ಪ್ರಶ್ನಾರ್ಹವಾಗಿದೆ. ಎಲ್ಲಿಂದ, ಯಾರ ಮೂಲಕ ಸ್ಕ್ರಿಪ್ಟ್‌ಗಳು ಬರುತ್ತಿವೆ ಎಂಬುದು ಪ್ರಶ್ನಾರ್ಹ. ಜನಾಭಿಪ್ರಾಯ ಪಡೆದು ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ರಾಜ್ಯಪಾಲರು ನೀಡಿರುವ ನೋಟಿಸ್‌ಗೆ ಸರಕಾರ ಉತ್ತರ ನೀಡಲಿದೆ. ಅದನ್ನು ಮೀರಿ ಅಭಿಯೋಜನೆಗೆ ಅನುಮತಿ ನೀಡಿದರೆ ಕಾನೂನು ಹೋರಾಟ ಮುಂದುವರಿಸಲಾಗುವುದು.

- ಪ್ರಿಯಾಂಕ್ ಖರ್ಗೆ ಸಚಿವ

ತನಿಖಾಧಿಕಾರಿಮಾತ್ರ ಅಭಿಯೋಜನೆಗೆ ಕೋರಬಹುದು

ಸಿಎಂ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಮಾತನಾಡಿ, ಸಿಎಂ ಮೇಲೆ ಅಭಿಯೋಜನೆ ಕೋರಿ ಅರ್ಜಿ ಬಂದಾಗ ರಾಜ್ಯಪಾಲರು ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ಚರ್ಚೆಯಾಗಿದೆ. ಆರ್ಟಿಕಲ್ 163 ಸಂಪುಟ ಸಭೆ ತೀರ್ಮಾನ ಆಧಾರಿಸಿ ರಾಜ್ಯಪಾಲರು ನಡೆದುಕೊಳ್ಳಬೇಕು. ಶೋಕಾಸ್ ನೋಟಿಸ್ ಕೊಡಲು ರಾಜ್ಯಪಾಲರಿಗೆ ಅವಕಾಶ ಇಲ್ಲ. 17ಎಯಲ್ಲಿ ಪೂರ್ವಾನುಮತಿಯನ್ನು ತನಿಖಾಧಿಕಾರಿ ಮಾತ್ರ ಕೋರಬೇಕು. ಯಾವುದೇ ಆಧಾರ ಇಲ್ಲದ ದೂರಿನ ಮೇರೆಗೆ ರಾಜ್ಯಪಾಲರು ಅಭಿಯೋಜನೆಗೆ ಅನುಮತಿ ನೀಡಲು ಬರುವುದಿಲ್ಲ. ಸಚಿವ ಸಂಪುಟ ಸಭೆಯಲ್ಲಿ ನಾಲ್ಕು ಪುಟುಗಳ ನಿರ್ಣಯ ತೆಗೆದುಕೊಳ್ಳಲಾಗಿದೆ. 50 ಪುಟದ ದಾಖಲೆಗಳನ್ನು ಹೊಂದಿರುವ ಸಮಗ್ರ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಯಾವುದೇ ಪ್ರಕರಣ ಸಂಬಂದರ ದೂರುದಾರ ಪೊಲೀಸರಿಗೆ ದೂರು ನೀಡಬೇಕು. ಅವರು ಈ ಬಗ್ಗೆ ತನಿಖೆ ಮಾಡಬೇಕೋ ಬೇಡವೋ ಎಂಬ ಬಗ್ಗೆ ತೀರ್ಮಾನಿಸುತ್ತಾರೆ. ದೂರದಾರರಿಗೆ ತನಿಖಾಧಿಕಾರಿಗಳ ಮೇಲೆ ವಿಶ್ವಾಸ ಇಲ್ಲದೇ ಹೋದ ಪಕ್ಷದಲ್ಲಿ ಅವರು ನ್ಯಾಯಾಲಯದ ಮೊರೆ ಹೋಗಬಹುದು ಎಂದು ವಿವರಿಸಿದರು.

ನೇರವಾಗಿ ರಾಜ್ಯಪಾಲರಿಗೆ ದೂರು ನೀಡೋದು ತಪ್ಪು

ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, ಒಬ್ಬ ಖಾಸಗಿ ವ್ಯಕ್ತಿ ನೇರವಾಗಿ ರಾಜ್ಯಪಾಲರಿಗೆ ದೂರು ನೀಡಿರುವುದು ಕಾನೂನಿಗೆ ವಿರುದ್ಧವಾಗಿದೆ. ಈ ಹಿಂದೆ ಯಡಿಯೂರಪ್ಪ ಮೇಲೆ ಪ್ರಕರಣ ದಾಖಲಿಸಲು ನಮಗೆ ರಾಜ್ಯಪಾಲರ ಅನುಮತಿ ಬೇಕು ಎಂದು ಮ್ಯಾಜಿಸ್ಟ್ರೇಟ್ ಕೋರಿದ್ದ ಹಿನ್ನೆಲೆ ಯಡಿಯೂರಪ್ಪ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದರು. ಶಶಿಕಲಾ ಜೊಲ್ಲೆ, ಮುರುಗೇಶ್ ನಿರಾಣಿ, ಜನಾರ್ದನ ರೆಡ್ಡಿ ಮುಂತಾದವರ ಮೇಲೆ ಅಭಿಯೋಜನೆಗೆ ಅನುಮತಿ ಕೋರಿ ವರ್ಷಗಳ ಹಿಂದೆ ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಲಾಗಿದೆ. ರಾಜ್ಯಪಾಲರ ಮುಂದೆ ಹಲವು ವರ್ಷಗಳಿಂದ ಇತ್ಯರ್ಥಗೊಳಿಸಿಲ್ಲ. ಆದರೆ ಈ ಪ್ರಕರಣದಲ್ಲಿ ಕೆಲವೇ ಗಂಟೆಗಳಲ್ಲಿ ಮುಖ್ಯಮಂತ್ರಿಗಳ ಮೇಲೆ ವಿಚಾರ ಕೇಳಿ ನೋಟೀಸು ಜಾರಿಗೊಳಿಸಿದ್ದಾರೆ ಎಂದು ದೂರಿದರು. ಕಾನೂನಾತ್ಮಕವಾಗಿ ಒಂದೊಂದಾಗಿ ಹೆಜ್ಜೆ ಇಡುತ್ತೇವೆ. ಮೊದಲ ಹೆಜ್ಜೆಯಾಗಿ ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ. ಒಂದು ವೇಳೆ ನ್ಯಾಯ ಸಿಗದಿದ್ದರೆ ಬಳಿಕ ಮುಂದಿನ ಕಾನೂನಾತ್ಮಕ ಹೆಜ್ಜೆ ಇಡುತ್ತೇವೆ ಎಂದು ಇದೇ ವೇಳೆ ಸ್ಪಷ್ಟಪಡಿಸಿದರು.

ಸಿಎಂ ಪತ್ನಿ ಎನ್ನುವ ಕಾರಣಕ್ಕೆ ಹಕ್ಕನ್ನು ಕಳೆದುಕೊಳ್ಳಬೇಕಾ?: ಮುಖ್ಯಮಂತ್ರಿಗಳ ಪತ್ನಿಯಾದ ಮಾತ್ರಕ್ಕೆ ಪಾರ್ವತಿ ಅವರು ತಮ್ಮ ಹಕ್ಕನ್ನು ಕಳೆದುಕೊಳ್ಳಬೇಕಾ? ತನ್ನ ಅಣ್ಣ ಕೊಟ್ಟ ಜಮೀನನ್ನು ಉಳಿಸಿಕೊಂಡು ತನ್ನ ಮಕ್ಕಳ ಭವಿಷ್ಯ ರಕ್ಷಣೆ ಮಾಡಿಕೊಳ್ಳುವುದು ತಪ್ಪಾ? ಸಿದ್ದರಾಮಯ್ಯ ಅವರು 40 ವರ್ಷಗಳ ರಾಜಕಾರಣ ಮಾಡಿದ್ದು, ಮಂತ್ರಿ, ಉಪಮುಖ್ಯಮಂತ್ರಿಯಾಗಿದ್ದಾರೆ, ಏಳು ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಆದರೂ ಅವರ ಪತ್ನಿ ಎಂದಿಗೂ ಸಾರ್ವಜನಿಕವಾಗಿ ಗುರುತಿಸಿಕೊಂಡಿಲ್ಲ. ತಮ್ಮ ಅಧಿಕಾರವನ್ನು ಬಳಸಿಕೊಂಡು ವೇದಿಕೆ ಹಂಚಿಕೊಂಡಿಲ್ಲ. ಅವರಿಗೆ ಅಧಿಕಾರ ಇದ್ದರೂ ಅದನ್ನು ಬಳಸಿಕೊಂಡಿಲ್ಲ. ನಾವು ಅವಕಾಶ ಸಿಕ್ಕಾಗ ನಮ್ಮ ಮನೆಯವರನ್ನು ಕರೆದುಕೊಂಡು ಹೋಗಿದ್ದೇವೆ. ಆದರೆ ಪಾರ್ವತಿ ಅವರು ಎಂದಿಗೂ ಅಧಿಕಾರವನ್ನು ಬಳಸಿಕೊಂಡವರಲ್ಲ. ಈ ವಿಚಾರವಾಗಿ ಆಕೆಯನ್ನು ಪ್ರತಿಯೊಬ್ಬರೂ ಪ್ರಶಂಸಿಸಬೇಕು. ಆಕೆ ತನ್ನ ತವರಿನಿಂದ ಬಂದ ಆಸ್ತಿಯನ್ನು ಉಳಿಸಿಕೊಳ್ಳುವ ಎಲ್ಲಾ ಹಕ್ಕು ಇದೆ ಎಂದು ತಿಳಿಸಿದರು.

ಟಿ.ನರಸೀಪುರ-ತಲಕಾಡು ಸಂಚಾರ ಬಂದ್; ಸುತ್ತೂರು ಸೇತುವೆ ಮುಳುಗಡೆ | ಇನ್ನೂ ಮೂರು ದಿನ ಮಳೆ ಮುನ್ಸೂಚನೆ

ರಾಜ್ಯದಲ್ಲಿ ನಿಲ್ಲದ ಮಳೆ ಕರಾವಳಿ, ಮಲೆನಾಡಿಗೆ ರೆಡ್ ಅಲರ್ಟ್

ಬೆಂಗಳೂರು: ರಾಜ್ಯದ ಕರಾವಳಿ ಮತ್ತು ಮಲೆನಾಡಿನಲ್ಲಿ ಬಿರುಸಿನ ಮಳೆ ಮುಂದುವರಿದಿದ್ದು, ಮುಂದಿನ 24 ಗಂಟೆಗಳ ಕಾಲ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ರೆಡ್ ಅಲರ್ಟ್ ನೀಡಲಾಗಿದೆ. ಎರಡು ದಿನ ನಂತರ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಅಲ್ಲದೆ ದಕ್ಷಿಣ ಕನ್ನಡ, ಶಿವಮೊಗ್ಗ , ಚಿಕ್ಕಮಗಳೂರು, ಕೊಡಗು ಮತ್ತು ಬೆಳಗಾವಿ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಬಹುತೇಕ ಕಡೆ ನದಿ-ತೊರೆಗಳು ತುಂಬಿ ಹರಿಯುತ್ತಿದ್ದು, ಪ್ರಮುಖ ಜಲಾಶಯಗಳ ಒಳಹರಿವಿನ ಪ್ರಮಾಣ ಹೆಚ್ಚಾಗಿದೆ.

ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಇನ್ನೂ ಮೂರು ದಿನಗಳ ಕಾಲ ಭಾರಿ ಮಳೆ ಬೀಳುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ಹೆಮ್ಮಿಗೆ ಸೇತುವೆ ಮುಳುಗಡೆ

ವ್ಯಾಪಕ ಮಳೆ ಹಿನ್ನೆಲೆಯಲ್ಲಿ ಕಬಿನಿ ಹಾಗೂ ಕೃಷ್ಣರಾಜಸಾಗರ ಜಲಾಶಯದ ಒಳಹರಿವು ಹೆಚ್ಚಾದ ಪರಿಣಾಮ ಅಪಾರ ಪ್ರಮಾಣದ ನೀರನ್ನು ಕಾವೇರಿ ನದಿಗೆ ಬಿಡುಗಡೆ ಆಗುತ್ತಿದೆ. ಹೀಗಾಗಿ ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲೂಕಿನ ತಲಕಾಡಿನ ಹೆಮ್ಮಿಗೆ ಸೇತುವೆ ಮುಳುಗಡೆಯಾಗಿದೆ. ಹೀಗಾಗಿ ಟಿ.ನರಸೀಪುರ -ತಲಕಾಡು ಸಂಚಾರ ಸ್ಥಗಿತಗೊಳಿಸಲಾಗಿದೆ. ಸೇತುವೆ ಮೇಲೆ ಎರಡು ಅಡಿಗಳಷ್ಟು ನೀರು ಹರಿಯುತ್ತಿದ್ದು, ಒಂದೇ ವಾರದ ಅಂತರದಲ್ಲಿ ಎರಡು ದೊಡ್ಡ ಸೇತುವೆಗಳು ಮುಳುಗಡೆಯಾಗಿವೆ. ಹೀಗಾಗಿ ಸೇತುವೆ ಎರಡೂ ಕಡೆ ಬ್ಯಾರಿಕೇಡ್ ಅಳವಡಿಕೆ ಮಾಡಲಾಗಿದೆ. ಕಂದಾಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ. ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಪ್ರವಾಹ ಭೀತಿ ಎದುರಾಗಿದೆ. ನರಸೀಪುರದ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮೆಟ್ಟಿಲುಗಳು ಮುಳುಗಡೆಯಾಗಿದೆ. ಶ್ರೀನಿವಾಸ ಕಲ್ಯಾಣ ಮಂಟಪ ಜಲಾವೃತವಾಗಿದ್ದು, ಸಂತೆಮಾಳ ಬಳಿಯ ಕಾಲೇಜಿನ ಆವರಣಕ್ಕೂ ನೀರು ನುಗ್ಗಿದೆ.

ವೆಲ್ಲೆಸ್ಲಿ ಸೇತುವೆಗೆ ಹಾನಿ

ಕೆಆರ್‌ಎಸ್ ನಿಂದ 1.70 ಲಕ್ಷ ಕ್ಯೂಸೆಕ್ ನೀರು ಬಿಡುಗಡೆಯಾದ ಹಿನ್ನೆಲೆಯಲ್ಲಿ ಮಂಡ್ಯ ಶ್ರೀರಂಗಪಟ್ಟಣದ ಐತಿಹಾಸಿಕ ವೆಲ್ಲೆಸ್ಲಿ ಸೇತುವೆ ಬಳಿ ಹಾನಿಯಾಗಿದೆ. ನೀರಿನ ರಭಸಕ್ಕೆ ತಡೆಗೋಡೆ ಕೊಚ್ಚಿ ಹೋಗಿದೆ. ಕಾವೇರಿ ನದಿ ಬಳಿಯ ಎರಡೂ ಬದಿಗಳಲ್ಲಿನ ತಡೆಗೋಡೆ ಕೊಚ್ಚಿ ಹೋಗಿದ್ದು, ವಿದ್ಯುತ್ ಕಂಬಗಳು ಪಳೆಯುಳಿಕೆಯಂತಾಗಿದೆ. ಚೆಸ್ಕಾಂ ಸಿಬ್ಬಂದಿ ಕಂಬಗಳು ಬೀಳದಂತೆ ಭದ್ರಪಡಿಸಿದ್ದಾರೆ. 1804 ರಲ್ಲಿ ಸಂಪೂರ್ಣ ಕಲ್ಲಿನಿಂದ ವೆಲ್ಲೆಸ್ಲಿ ಸೇತುವೆ ನಿರ್ಮಿಸಲಾಗಿದ್ದು, 2 ಶತಮಾನಗಳಿಂದಲೂ ಭದ್ರವಾಗಿ ನೆಲೆಯೂರಿದೆ. ಇತಿಹಾಸದಲ್ಲಿ ನಾಲ್ಕು ಬಾರಿ ಸೇತುವೆ ಮುಳುಗಡೆಯಾಗಿದೆ.

ಯಾದಗಿರಿ-ರಾಯಚೂರು ಸಂಪರ್ಕ ಕಡಿತ

ಯಾದಗಿರಿಯಲ್ಲಿ ನಾರಾಯಣಪುರ ಜಲಾಶಯದಿಂದ ಭಾರಿ ಪ್ರಮಾಣದ ನೀರು ಬಿಡುಗಡೆ ಮಾಡಲಾಗುತ್ತಿದ್ದು, ಕೃಷ್ಣಾ ನದಿ ಪ್ರವಾಹದಿಂದ ಈಗಾಗಲೇ ಕೊಳ್ಳುರು ಸೇತುವೆ ಹಾಗೂ ಗುರ್ಜಾಪುರ ಸೇತುವೆ ಸಂಪರ್ಕ ಕಡಿತಗೊಂಡಿದೆ. ವಡಗೇರಾ ತಾಲೂಕಿನ ಗುರ್ಜಾಪುರ ಸೇತುವೆ ಜಲಾವೃತಗೊಂಡಿವೆ. ಇದರಿಂದಾಗಿ ಯಾದಗಿರಿ-ರಾಯಚೂರು ಜಿಲ್ಲೆ ನಡುವೆ ಸಂಪರ್ಕ ಕಡಿತವಾಗಿದೆ.

ಹುಲಿಗೆಮ್ಮದೇವಿ ದೇವಸ್ಥಾನದ ಸ್ನಾನಘಟ್ಟ ಜಲಾವೃತ

ಭಾರಿ ಮಳೆ ಹಿನ್ನೆಲೆಯಲ್ಲಿ ತುಂಗಭದ್ರಾ ಜಲಾಶಯದಿಂದ ನದಿಗೆ ಅಪಾರ ಪ್ರಮಾಣದ ನೀರು ಬಿಡುಗಡೆ ಮಾಡಲಾಗುತ್ತಿದೆ. ಇದರ ಪರಿಣಾಮವಾಗಿ ಕೊಪ್ಪಳ ತಾಲೂಕಿನ ಹುಲಗಿ ಗ್ರಾಮದಲ್ಲಿರುವ ಸುಪ್ರಸಿದ್ಧ ಶ್ರೀ ಹುಲಿಗೆಮ್ಮದೇವಿ ದೇವಸ್ಥಾನದ ಸ್ನಾನ ಘಟ್ಟ ಜಲಾವೃತಗೊಂಡಿದೆ. ಕೇಶಮುಂಡನ ಮಾಡುವ ಕೋಣೆಯು ನೀರಿನಲ್ಲಿ ಮುಳುಗಿದೆ. ತುಂಗಭದ್ರಾ ನದಿ ದಡದಲ್ಲಿರುವ ದೇವಸ್ಥಾನ ಇದಾಗಿದ್ದು, ನೀರಿನ ಪ್ರಮಾಣ ಹೆಚ್ಚಾದರೆ ಅನೇಕ ಅಂಗಡಿಗಳು ಜಲಾವೃತಗೊಳ್ಳುವ ಭೀತಿಯಿದೆ ಮುನ್ನೆಚ್ಚರಿಕೆ ಕ್ರಮವಾಗಿ ನದಿ ಸಮೀಪ ಭಕ್ತರಿಗೆ ನಿಷೇಧಿಸಲಾಗಿದೆ.

ಕುಮಟಾ-ಶಿರಸಿ ರಸ್ತೆಯಲ್ಲಿ ಮತ್ತೆ ಗುಡ್ಡಕುಸಿತ

ಭಾರೀ ಮಳೆಗೆ ಕುಮಟಾ-ಶಿರಸಿ ರಸ್ತೆಯ ದೇವಿಮನೆ ಘಟ್ಟದಲ್ಲಿ ಮತ್ತೆ ಗುಡ್ಡಕುಸಿತ ಉಂಟಾಗಿದೆ. ಕುಮಟಾ-ಶಿರಸಿ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ವಾಹನಗಳ ಸಂಚಾರ ಅಸ್ತವ್ಯಸ್ತವಾಗಿದೆ. ಕಳೆದೆರಡು ವಾರಗಳ ಹಿಂದೆ ಗುಡ್ಡ ಕುಸಿದು 5 ದಿನ ಸಂಚಾರ ಬಂದ್ ಆಗಿತ್ತು. ಇದೀಗ ಮತ್ತೆ ಗುಡ್ಡ ಕುಸಿತದಿಂದ ವಾಹನ ಸವಾರರು ಆತಂಕದಲ್ಲಿದ್ದಾರೆ. ಹಿಟಾಚಿ ಮೂಲಕ ಗುಡ್ಡ ತೆರವುಗೊಳಿಸಲಾಗುತ್ತಿದೆ.

ಮಲಪ್ರಭಾ ತಟದಲ್ಲಿ ಪ್ರವಾಹ ಪರಿಸ್ಥಿತಿ

ಒಳಹರಿವು ಹೆಚ್ಚಳದಿಂದಾಗಿ ಮಲಪ್ರಭಾ ನದಿಯಲ್ಲೂ ಪ್ರವಾಹ ಭೀತಿ ಶುರುವಾಗಿದೆ. ಬೆಳಗಾವಿಯ ರಾಮದುರ್ಗ ತಾಲೂಕಿನ ಸುರೇಬಾನ ಬೆನ್ನೂರ ಗ್ರಾಮಕ್ಕೆ ಸಂಪರ್ಕಿಸುವ ಸೇತುವೆ ಜಲಾವೃತಗೊಂಡಿದೆ. ಸೇತುವೆ ಮುಳುಗಡೆಯಿಂದ ಚಿಕ್ಕತಡಸಿ, ಹಿರೇತಡಸಿ, ಬೆನ್ನೂರ ಗ್ರಾಮಗಳ ಸಂಪರ್ಕ ಕಡಿತವಾಗಿದೆ. 14 ಸಾವಿರ ಕ್ಯೂಸೆಕ್ ನಷ್ಟು ನವಿಲು ತೀರ್ಥ ಜಲಾಶಯದಿಂದ ನೀರು ಬಿಡುಗಡೆ ಮಾಡಲಾಗುತ್ತಿದೆ. ಇದರಿಂದ ಮಲಪ್ರಭಾ ನದಿ ತಟದಲ್ಲಿ ಪ್ರವಾಹದ ಪರಿಸ್ಥಿತಿ ಇದೆ. ಈಗಾಗಲೇ ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆದ ಬೆಳೆ ಜಲಾವೃತವಾಗಿದೆ.

ಕೃಷ್ಣಾ ನದಿ ಪ್ರವಾಹದಲ್ಲಿ ಪಲ್ಟಿ ಹೊಡೆದ ಬೋಟ್; ಎತ್ತುಗಳ ಮೇಲೆ ಕುಸಿದು ಬಿದ್ದ ಗೋಡೆ

ಚಿಕ್ಕೋಡಿ/ಬೆಳಗಾವಿ: ಭಾರಿ ಮಳೆಗೆ ಕೃಷ್ಣಾ ನದಿಯಲ್ಲಿ ಪ್ರವಾಹದ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರವಾಹದಲ್ಲಿ ಎನ್ಡಿಆರ್‌ಎಫ್ ಸಿಬ್ಬಂದಿ ಬೋಟ್ ಪಲ್ಟಿಯಾಗಿದೆ. ಚಿಕ್ಕೋಡಿಯ ರಾಯಬಾಗ ತಾಲೂಕಿನ ಕುಡಚಿ ಪಟ್ಟಣದ ಬಳಿ ಕೃಷ್ಣಾ ನದಿಯಲ್ಲಿ ಘಟನೆ ನಡೆದಿದೆ. ಒಂದು ವಾರದಿಂದ ಕುಡಚಿ ಪಟ್ಟಣಕ್ಕೆ ನೀರು ಬಾರದೇ ಸಮಸ್ಯೆಯಾಗಿತ್ತು. ಹೀಗಾಗಿ ಸಿಬ್ಬಂದಿ ಪಂಪ್ ಸೆಟ್ ಸರಿಪಡಿಸಲು ಹೋಗಿದ್ದ ವೇಳೆ ನೀರಿನ ಹರಿವು ಹೆಚ್ಚಾಗಿದ್ದರಿಂದ ನಿಯಂತ್ರಣ ತಪ್ಪಿ ಬೋಟ್ ಪಲ್ಟಿಯಾಗಿದೆ. ಘಟನೆಯಲ್ಲಿ ಎಲ್ಲರೂ ಪಾರಾಗಿದ್ದಾರೆ. ಸದ್ಯ ಜಾಕ್ವೆಲ್ ನಲ್ಲೇ ಇರುವ ಸಿಬ್ಬಂದಿ ಮತ್ತೊಂದು ಬೋಟ್ ತಂದಿದ್ದಾರೆ.

ಮಳೆಗೆ ಎತ್ತುಗಳ ಮೇಲೆ ಉರುಳಿ ಬಿದ್ದ ಗೋಡೆ

ನಿರಂತರ ಮಳೆಗೆ ಮನೆ ಗೋಡೆ ಉರುಳಿ ಬಿದ್ದಿದ್ದು, ಅಲ್ಲೇ ಸಮೀಪದಲ್ಲಿದ್ದ ಎತ್ತುಗಳು ಗಾಯಗೊಂಡಿವೆ. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲ ಗ್ರಾಮದಲ್ಲಿ ಘಟನೆ ನಡೆದಿದೆ. ಇಂಚಲ ಗ್ರಾಮದ ಯಶವಂತ ನಲವಡೆ ಎಂಬುವರ ಎತ್ತುಗಳು

ಗಾಯಗೊಂಡಿವೆ. ಯಂಕವ್ವ ಗಾಯಕವಾಡ ಅವರ ಮನೆ ಗೋಡೆ ಉರುಳಿ ಬಿದ್ದು ಅವಘಡ ಸಂಭವಿಸಿದೆ. ಯಶವಂತ ಹಾಗೂ ಯಂಕವ್ವ ಮನೆಗಳು ಅಕ್ಕ ಪಕ್ಕವೇ ಇದ್ದು, ಗೋಡೆ ಬೀಳುತ್ತಿದ್ದಂತೆ ಮಣ್ಣು ತೆಗೆದು ಎತ್ತುಗಳನ್ನು ಉಳಿಸಿಕೊಂಡಿದ್ದಾರೆ.

ಬಾಗಲಕೋಟೆಯ ಗೋವಿನಕೊಪ್ಪ ಸೇತುವೆ ಜಲಾವೃತ

ಬಾಗಲಕೋಟೆ ಜಿಲ್ಲೆಯಲ್ಲಿ ಮಲಪ್ರಭಾ ನದಿ ಅಬ್ಬರಕ್ಕೆ ಪ್ರವಾಹ ಭೀತಿ ಶುರುವಾಗಿದೆ. ಮಲಪ್ರಭಾ ನದಿಗೆ 12 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದೆ. ನದಿಗೆ ಅಡ್ಡಲಾಗಿರುವ ಗೋವಿನಕೊಪ್ಪ ಸೇತುವೆ ಜಲಾವೃತಗೊಂಡಿದೆ. ಹುಬ್ಬಳ್ಳಿ ಸೋಲ್ಲಾಪೂರ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಗೋವಿನಕೊಪ್ಪ ಹಳೆ ಸೇತುವೆ ಮೇಲೆ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ. ಹೀಗಾಗಿ ಹೊಸ ಸೇತುವೆ ಮೂಲಕ ವಾಹನಗಳು ಓಡಾಟ ನಡೆಸಿವೆ. ನದಿಯ ಇಕ್ಕೆಲದಲ್ಲಿರುವ ಹೊಲಗದ್ದೆಗಳಿಗೆ ನೀರು ನುಗ್ಗಿದೆ.

ಶಿರಾಡಿ ಭೂ ಕುಸಿತ ಭೀತಿ; ವಾಹನ ಸಂಚಾರ ಇಳಿಕೆ

ಶಿರಾಡಿ ಭೂಕುಸಿತದ ಬಳಿಕ ಚಿಕ್ಕಮಗಳೂರಿನಲ್ಲಿ ವಾಹನ ಸಂಚಾರ ಇಳಿಕೆಯಾಗಿದೆ. ಚಾರ್ಮಾಡಿಯಲ್ಲಿ ವಾಹನ ಸಂಚಾರಕ್ಕೆ ಪ್ರಯಾಣಿಕರು ಹಿಂದೇಟು ಹಾಕುತ್ತಿದ್ದಾರೆ. ಕಡೂರು-ದಕ್ಷಿಣ ಕನ್ನಡ ರಾಷ್ಟ್ರೀಯ ಹೆದ್ದಾರಿ 173ರಲ್ಲಿ ಗಣನೀಯ ಪ್ರಮಾಣದಲ್ಲಿ ವಾಹನ ಗಳ ಸಂಖ್ಯೆ ಇಳಿಕೆ ಕಂಡಿದೆ. ಚಾರ್ಮಾಡಿಯಲ್ಲಿ ಭಾರಿ ಮಳೆ ಹಿನ್ನೆಲೆಯಲ್ಲಿ ಪದೆ ಪದೇ ಕಲ್ಲು ಬಂಡೆಗಳು, ಮರಗಳು ಬಿದ್ದು ಅವಾಂತರವೇ ಸೃಷ್ಟಿಯಾಗುತ್ತಿದೆ. ನಿತ್ಯ 1500-2000 ವಾಹನಗಳು ಸಂಚಾರಿಸುತ್ತಿದ್ದವು. ಇದೀಗ ಗುಡ್ಡ ಕುಸಿತದ ಭಯಕ್ಕೆ ದಿನವೊಂದಕ್ಕೆ 500 ವಾಹನಗಳು ಓಡಾಟ ನಡೆಸುತ್ತಿವೆ. ಚಾರ್ಮಾಡಿ ಹೆದ್ದಾರಿ ಸಂಚಾರ ಮುಕ್ತ ಗೊಳಿಸಿದರು ಸವಾರರಲ್ಲಿ ಭಯ ಆವರಿಸಿದೆ.

ಹಾವೇರಿಯಲ್ಲಿ ಮಳೆ ಅವಾಂತರಕ್ಕೆ ಬೆಳೆ ನಾಶ

ಹಾವೇರಿ ತಾಲೂಕಿನ ಕೊರಡೂರು ಗ್ರಾಮದಲ್ಲಿ ಮಳೆ ಅಬ್ಬರಕ್ಕೆ ತರಕಾರಿ ಬೆಳೆ ನಾಶವಾಗಿದೆ. ಫಕ್ಕಿರೇಶ ಕೊಡಬಾಳ ಎಂಬುವವರು ಎರಡು ಎಕರೆ ಜಮೀನಿನಲ್ಲಿ ವಿವಿಧ ತರಕಾರಿ ಬೆಳೆ ಬೆಳೆದಿದ್ದರು. ಆದರೆ ವರದಾ ನದಿಯ ಅಬ್ಬರಕ್ಕೆ ಟೊಮೆಟೋ, ಮೆಣಸಿನಕಾಯಿ, ಬೆಂಡೆ ಮತ್ತು ಚವಳಿಕಾಯಿ ಸೇರಿದಂತೆ ವಿವಿಧ ತರಕಾರಿ ಬೆಳೆ ನೀರುಪಾಲಾಗಿದೆ.

ಪಂಪಾ ಸರೋವರಕ್ಕೆ ಹೋಗುವ ರಸ್ತೆ ಸ್ಥಗಿತ

ಕೊಪ್ಪಳದಲ್ಲಿ ತುಂಗಭದ್ರಾ ನದಿ ತುಂಬಿ ಹರಿಯುತ್ತಿದೆ. ಹೀಗಾಗಿ ಆನೆಗೊಂದಿ ಬಳಿಯ ಪಂಪಾ ಸರೋವರಕ್ಕೆ ಹೋಗುವ ರಸ್ತೆ ಸ್ಥಗಿತಗೊಂಡಿದೆ. ಭಾರತದ ವಿವಿಧ ಪ್ರದೇಶದಿಂದ ಭಕ್ತರು ಆಗಮಿಸುವ ಪಂಪಾಸರೋವರ ಇದೀಗ ಬಂದ್ ಆಗಿದೆ. ತುಂಗಭದ್ರಾ ನದಿಗೆ 1.70 ಲಕ್ಷ ಕ್ಯೂಸೆಕ್ ನೀರು ಬಿಟ್ಟ ಹಿನ್ನೆಲೆಯಲ್ಲಿ ನೀರು ರಸ್ತೆಗೆ ಬಂದಿದೆ. ನದಿಯಲ್ಲಿ ಇನ್ನಷ್ಟು ನೀರು ಬಂದರೆ ಅಂಜನಾದ್ರಿ ಸಂಪರ್ಕ ಕಡಿತವಾಗುವ ಸಾಧ್ಯತೆ ಇದೆ.

ನೀರುಪಾಲಾದ ಹುಂಡಿ ಹಣ

ಕೋಲಾರ ಜಿಲ್ಲೆಯ ಮುಳಬಾಗಿಲು ಪ್ರಸಿದ್ಧ ಕುರುಡುಮಲೆಯ ಹುಂಡಿ ಹಣ ನೀರು ಪಾಲಾಗಿದೆ. ಮುಜರಾಯಿ ಇಲಾಖೆ ಸಿಬ್ಬಂದಿ ನೋಟುಗಳನ್ನು ಬಿಸಿಲಲ್ಲಿ ಒಣಗಿಸಿದ್ದಾರೆ. ದೇವಸ್ಥಾನದ ಚಾವಣಿ ಕೆಲಸ ನಡೆಯುತ್ತಿದ್ದು, ಮಳೆ ಬಿದ್ದ ಪರಿಣಾಮ ನೀರುಪಾಲಾಗಿದೆ.

ಸುತ್ತೂರು ಸೇತುವೆ ಮುಳುಗಡೆ

ಕಬಿನಿ ಜಲಾಶಯದಿಂದ ಭಾರಿ ಪ್ರಮಾಣದ ನೀರು ನದಿಗೆ ಬಿಟ್ಟ ಹಿನ್ನೆಲೆಯಲ್ಲಿ ಮೈಸೂರಿನ ವರುಣಾ ಕ್ಷೇತ್ರ ವ್ಯಾಪ್ತಿಯ ಸುತ್ತೂರು ಸೇತುವೆ ಮುಳುಗಡೆಯಾಗಿದೆ. ಹೀಗಾಗಿ ಮೈಸೂರು- ಸುತ್ತೂರು ನಡುವೆ ಸಂಚಾರ ಬಂದ್ ಆಗಿದೆ. ಸುತ್ತೂರು ಸೇರಿದಂತೆ ಅನೇಕ ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಸೇತುವೆ ಅಕ್ಕ ಪಕ್ಕದ ತೆಂಗಿನ ತೋಟಕ್ಕೂ ನೀರು ನುಗ್ಗಿದೆ.

ಕಾಳಜಿ ಕೇಂದ್ರಕ್ಕೆ ಹೋಗಲು ನಕಾರ

ದಾವಣಗೆರೆ: ತುಂಗಭದ್ರಾ ನದಿಯ ಮಟ್ಟ ಹೆಚ್ಚಾದ ಕಾರಣ ದಾವಣಗೆರೆ ಜಿಲ್ಲೆಯ ಹರಿಹರದ ಗಂಗಾನಗರ ಸಂಪೂರ್ಣ ಜಲಾವೃತಗೊಂಡಿದೆ. 22ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ. ಜಿಲ್ಲಾಡಳಿತದಿಂದ ಕಾಳಜಿ ಕೇಂದ್ರ ತೆರೆದರೂ ನಿವಾಸಿಗಳು, ತಮ್ಮ ಮನೆ ಬಿಟ್ಟು ತೆರಳಲೂ ಒಪ್ಪುತ್ತಿಲ್ಲ. ಇಲ್ಲೇ ನೀರಿನಲ್ಲಿ ಸಾಯುತ್ತೇವೆ ವಿನಃ, ಕಾಳಜಿ ಕೇಂದ್ರಕ್ಕೆ ಹೋಗುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. ಪ್ರತಿ ಬಾರಿ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾದರೆ ಮನೆಗಳು ಮುಳುಗಡೆಯಾಗುತ್ತವೆ. ಕಾಳಜಿ ಕೇಂದ್ರಕ್ಕೆ ಸಾಮಗ್ರಿಗಳನ್ನು ಮಕ್ಕಳನ್ನು ಕಟ್ಟಿಕೊಂಡು ಹೋಗಬೇಕು. ಹಲವು ವರ್ಷಗಳಿಂದ ಇದೇ ಪರಿಸ್ಥಿತಿ ಅನುಭವಿಸು ತ್ತಿದ್ದೇವೆ. ಬೇರೆಡೆ ನಿವೇಶನ ನೀಡಿ ಅಲ್ಲಿ ಗುಡಿಸಲು ಹಾಕಿಕೊಂಡು ಇರುತ್ತೇವೆ ಎಂದು ಗಂಗಾನಗರ ವಾಸಿಗಳು ಒತ್ತಾಯಿಸಿದ್ದಾರೆ.

ಉಕ್ಕಿ ಹರಿಯುತ್ತಿರುವ ತುಂಗಭದ್ರಾ: ಸಂಕಷ್ಟದಲ್ಲಿ ಬಾಬಾಗಳು

ಗಂಗಾವತಿ: ಮಲೆನಾಡು ಪ್ರದೇಶದಲ್ಲಿ ಮಳೆ ಮುಂದುವರಿದಿದ್ದು, ತುಂಗಭದ್ರ ಜಲಾಶಯಕ್ಕೆ ಭಾರಿ ಪ್ರಮಾಣದ ನೀರು ಹರಿದು ಬರುತ್ತಿದೆ. ಈ ಹಿನ್ನೆಲೆ ತುಂಗಭದ್ರಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಕೆಲ ನಡುಗಡ್ಡೆಗಳು ಜಲಾವೃತಗೊಂಡಿವೆ. ಹನುಮನಹಳ್ಳಿ ಗ್ರಾಮದ ಬಳಿಯ ಋಷಿಮುಖ ಪರ್ವತ ನಡುಗಡೆ ಆಗಿದೆ. ತುಂಗಭದ್ರಾ ನದಿ ತಟದಲ್ಲಿದ್ದ ಋಷಿಮುಖ ಪರ್ವತ ಸದ್ಯ ನಡುಗಡ್ಡೆಯಾಗಿ ಪರಿವರ್ತನೆ ಆಗಿದ್ದು, ಹಲವು ಬಾಬಾಗಳು ಋಷಿಮುಖ ಪರ್ವತದಲ್ಲಿ ಸಿಲುಕಿಕೊಂಡಿದ್ದಾರೆ.

ಭಾರಿ ಪ್ರಮಾಣದ ನೀರು ನದಿಗೆ ಬಿಡುಗಡೆ ಮಾಡಿದ್ದರಿಂದ ಋಷಿಮುಖ ಪರ್ವತ ಸಂಪರ್ಕ ಕಡಿದುಕೊಂಡಿದೆ. ಇದರಿಂದ ಹರಿದಾಸ ಬಾಬಾ, ಆನಂದಗಿರಿ ಬಾಬಾ, ನೀಲಪ್ಪ ಹಾಗೂ ಶಿವಯೋಗಿ ಎಂಬುವರಿಗೆ ನಡುಗಡ್ಡೆಯಿಂದ ಹೊರಗೆ ಬರಲು ಸಾಧ್ಯವಾಗುತ್ತಿಲ್ಲ. ದಿನದಿಂದ ದಿನಕ್ಕೆ ತುಂಗಭದ್ರಾ ನದಿಗೆ ನೀರು ಹೆಚ್ಚುತ್ತಿದೆ. ಕಳೆದ 4 ದಿನದ ಹಿಂದೆ 1.50 ಲಕ್ಷ ಕ್ಯುಸೆಕ್ ನೀರು ನದಿಗೆ ಬಿಡುಗಡೆ ಮಾಡಲಾಗಿತ್ತು. ಗುರುವಾರ ಇದು 1.75 ಲಕ್ಷ ಕ್ಯುಸೆಕ್ ಗೆ ಏರಿಕೆ ಆಗಿದೆ. ಇದರಿಂದ ನಾಲ್ಕು ದಿನಗಳಿಂದ ಭೂ ಸಂಪರ್ಕ ಕಡಿದುಕೊಂಡ ಬಾಬಾಗಳು, ನದಿ ದಡದಲ್ಲಿ ಕಾಲ ಕಳೆಯುತ್ತಿದ್ದಾರೆ. ಈವರೆಲ್ಲ ಋಷಿಮುಖ ಪರ್ವತದ ರಾಮ -ಸೀತೆ ದೇವಸ್ಥಾನದ ಪೂಜೆ ಮಾಡುವವರಾಗಿದ್ದಾರೆ.

ಮೃತರ ಮನೆಗೆ ಭೇಟಿ, ವೈಯಕ್ತಿಕ ಆರ್ಥಿಕ ನೆರವು

ಕೆಆರ್ ಪೇಟೆ ಕುಟುಂಬಕ್ಕೆ ನಿಖಿಲ್ ಸಾಂತ್ವನ

ಕೆ.ಆರ್.ಪೇಟೆ: ವಯನಾಡ್ ಜಲಪ್ರಳಯ ದಲ್ಲಿ ಮೃತರಾದ ತಾಲೂಕಿನ ಕತ್ತರಘಟ್ಟದ ಲೀಲಾವತಿ ಹಾಗೂ ಚಿಕ್ಕ ಮಗು ನಿಹಾಲ್ ಮನೆಗೆ ರಾಜ್ಯ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ಶಾಸಕ ಎಚ್.ಟಿ. ಮಂಜು ಅವರು ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ.

ನಮಗೆ ಕುಟುಂಬದ ಆಧಾರಸ್ಥಂಭ ವಾಗಿದ್ದ ಲೀಲಾವತಿ ಹಾಗೂ ಇನ್ನೂ ಬಾಳಿ ಬದುಕುವ ಮುನ್ನವೇ ಜೀವ ಕಳೆದುಕೊಂಡ ಪುಟ್ಟ ಕಂದ ನಿಹಾಲ್ ಪಾರ್ಥಿವ ಶರೀರ ವನ್ನು ಕುಟುಂಬಕ್ಕೆ ಹಸ್ತಾಂತರಿಸಲು ಸಹಾಯ ಮಾಡುವಂತೆ ಕುಟುಂಬದವರು ನಿಖಿಲ್ ಬಳಿ ಕಣ್ಣೀರು ಹಾಕಿ ಮನವಿ ಮಾಡಿದರು.

ಮುಗಿಲುಮುಟ್ಟಿದ ಆಕ್ರಂದನ: ನಿಖಿಲ್ ಕುಮಾರಸ್ವಾಮಿ ಆಗಮಿಸುತ್ತಿದ್ದಂತೆ

ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಎರಡೂ ಕುಟುಂಬಗಳ ಸದಸ್ಯರ ಜತೆ ಮಾತನಾಡಿದ ನಿಖಿಲ್, ನಮ್ಮ ತಂದೆ ಕುಮಾರಸ್ವಾಮಿ ಅವರು ಕೇರಳ ವಯನಾಡು ಜಿಲ್ಲೆಯ ಡಿಸಿ ಜತೆ ಮಾತನಾಡಿದ್ದಾರೆ. ಪ್ರಕೃತಿ ವಿಕೋಪದಿಂದ ಸಾವು -ನೋವು ಆಗಿವೆ. ಇಂಥ ಸಂಕಷ್ಟ ಪರಿಸ್ಥಿತಿಯಲ್ಲಿ ನಾವೆಲ್ಲರೂ ಶಕ್ತಿಯಾಗಿ ನಿಲ್ಲುತ್ತೇವೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಜನರ ಸಹಭಾಗಿತ್ವ ಅಗತ್ಯ

ಕೇರಳದ ವಯನಾಡಲ್ಲಿ ಸಂಭವಿಸಿದ ಭೂಕುಸಿತದದಿಂದ ದೊಡ್ಡ ಪ್ರಮಾಣದಲ್ಲಿ ಜೀವಹಾನಿಯಾಗಿದೆ. ಜನರ ಮನೆ, ಆಸ್ತಿ-ಪಾಸ್ತಿ ಹೇಳಹೆಸರಿಲ್ಲದಂತೆ ನಾಶವಾಗಿವೆ. ಮೃತರ ಸಂಖ್ಯೆ 170 ದಾಟಿದೆ. ಹಲವರು ನಾಪತ್ತೆಯಾಗಿದ್ದಾರೆ. ಇಡೀ ಹಳ್ಳಿ, ಶಾಲಾ ಕಟ್ಟಡಗಳು, ರಸ್ತೆಗಳು, ಸೇತುವೆಗಳು, ಇತರ ಕಟ್ಟಡಗಳು ಪ್ರವಾಹ ಹಾಗೂ ಭೂಕುಸಿತಕ್ಕೆ ಸಿಲುಕಿ ಧ್ವಂಸಗೊಂಡಿವೆ. ಇಡೀ ಊರಿಗೆ ಊರೇ ಮಸಣವಾಗಿ, ಸಾವಿನ ಸಂಖ್ಯೆ ಲೆಕ್ಕಕ್ಕೇ ಸಿಗುತ್ತಿಲ್ಲ. ಇದು ಪ್ರಕೃತಿಯ ವಿಕೋಪವಾದರೂ ಪ್ರಕೃತಿಯ ಮೇಲಣ ಮನುಷ್ಯನ ವಿಕೃತಿಯೂ ಹೌದು. ಅರಣ್ಯನಾಶ, ಅತಿಕ್ರಮಣ, ಅನಿಯಂತ್ರಿತ ನಿರ್ಮಾಣ ಚಟುವಟಿಕೆಗಳು ಹಾಗೂ ಗಣಿಗಾರಿಕೆಯಿಂದಾಗಿ ಪಶ್ಚಿಮಘಟ್ಟ ಪ್ರದೇಶಕ್ಕೆ ಎದುರಾಗಿರುವ ಅಪಾಯಗಳ ಬಗ್ಗೆ ಮಾಧವ ಗಾಡ್ಗೀಳ್ ನೇತೃತ್ವದ ಸಮಿತಿಯು 2011ರಲ್ಲಿ ವರದಿ ಸಿದ್ಧಪಡಿಸಿದೆ. ಇಂತಹ ದುರಂತಗಳು ಸಂಭವಿಸಬಹುದು ಎಂಬುದನ್ನು ವರದಿಯು ಊಹಿಸಿತ್ತು, ವಿಕೋಪಗಳನ್ನು ತಡೆಯಲು ಕೆಲವು ಕ್ರಮಗಳನ್ನು ಸೂಚಿಸಿತ್ತು. ಗಾಡ್ಗೀಳ್ ಸಮಿತಿಯ ವರದಿಯನ್ನು ದುರ್ಬಲಗೊಳಿಸುವ ಉದ್ದೇಶದಿಂದ ಸರಕಾರವು ಕೆ.ಕಸ್ತೂರಿರಂಗನ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತು. ದುರ್ಬಲಗೊಳಿಸಿದ ಶಿಫಾರಸುಗಳನ್ನು ಕೂಡ ಅನುಷ್ಠಾನಕ್ಕೆ ತರುವ ಕೆಲಸ ಆಗಲಿಲ್ಲ. ಸರಕಾರವು ರಾಜಕೀಯ ಹಾಗೂ ಇತರ ಒತ್ತಡಗಳಿಗೆ ಮಣಿದು ಎಲ್ಲ ಶಿಫಾರಸುಗಳನ್ನು ನಿರ್ಲಕ್ಷಿಸಿತು. ಈಗ ಪಶ್ಚಿಮಘಟ್ಟ ಪ್ರದೇಶದ ಹಲವೆಡೆ, ಪರಿಸರ ನಾಶ ಹಾಗೂ ಹವಾಮಾನ ಬದಲಾವಣೆಯ ಕಾರಣದಿಂದಾಗಿ ಅವಘಡಗಳು ಸಂಭವಿಸುತ್ತಿವೆ. ವಯನಾಡ್ ದುರಂತವು ಇತರ ರಾಜ್ಯಗಳಿಗೂ ಒಂದು ಎಚ್ಚರಿಕೆಯಾಗಬೇಕು. ಸರಕಾರವಷ್ಟೇ ಈ ಕೆಲಸ ಮಾಡಲಿ ಎಂದು ಕಾಯದೆ, ಜನರ ಸಹಭಾಗಿತ್ವವೂ ಇದ್ದರೆ ಯಶಸ್ಸು ಸಾಧ್ಯ. ಪರಿಸರ ಸಂರಕ್ಷಣೆಯಂತಹ ಕೆಲಸಗಳಿಗೆ ಜನರನ್ನು ಪ್ರೇರೇಪಿಸಲು ಸರಕಾರಿ ಹುದ್ದೆಗಳಲ್ಲಿ ಭೂ ರಕ್ಷಕ, ಹಸಿರು ರಕ್ಷಕ ಎಂಬ ಪ್ರಮಾಣಪತ್ರಗಳನ್ನು ನೀಡುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ಆಗ ಜನಸಾಮಾನ್ಯರು ಕೂಡ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗಲಿದ್ದು, ಮುಂದಿನ ದಿನಗಳಲ್ಲಿ ಅನಾಹುತಗಳನ್ನು ತಡೆಯಲು ಸಾಧ್ಯವಾಗುತ್ತದೆ.

ಸೊಂಪಾದಕೀಯ

ಹಗ್ಗಕೊಟ್ಟು ಕಟ್ಟಿಸಿಕೊಳ್ಳೋದು ಇದೇನಾ?

ಪಾದಯಾತ್ರೆಗಳು ಆಗ್ಗಾಗ್ಗೆ ಟ್ರೆಂಡ್ ಆಗುವುದು ಸಾಮಾನ್ಯ. ಈ ಹಿಂದೆ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ಅವರು ಪಾದಯಾತ್ರೆ ನಡೆಸಿದ್ದರು. ಅದಾದ ಬಳಿಕ ಹತ್ತು ಹಲವು ಕಾರಣಕ್ಕೆ ನಾಯಕರು ಪಾದಯಾತ್ರೆ ನಡೆಸಿರೋದು ಗೊತ್ತಿದೆ. ಕೆಲವರು ಅಧಿಕಾರಕ್ಕಾಗಿ ಪಾದಯಾತ್ರೆ ಮಾಡಿದ್ದರೆ, ಇನ್ನು ಕೆಲವರು ದೇವರನ್ನು ಕಾಣಲು ಪಾದಯಾತ್ರೆ ಹೋಗುತ್ತಾರೆ. ಪ್ರತಿವರ್ಷ ಸಾವಿರಾರು ಮಂದಿ ನೂರಾರು ಕಿಮೀ ಪಾದಯಾತ್ರೆ ಮಾಡಿ ತಮ್ಮಿಷ್ಟದ ದೇವರನ್ನು ಕಾಣುತ್ತಾರೆ. ಆದರೆ ಆಧುನಿಕ ರಾಜಕೀಯದಲ್ಲಿ ಪಾದಯಾತ್ರೆಯನ್ನು ಪ್ರತಿಪಕ್ಷಗಳು ಸರಕಾರಗಳ ವಿರುದ್ಧ ಜನಾಂದೋಲನ ಮೂಡಿಸಲು ಅಸ್ತ್ರವಾಗಿ ಬಳಸಿಕೊಳ್ಳುತ್ತಿವೆ. ದೇಶವನ್ನು ಒಗ್ಗೂಡಿಸಲು ರಾಹುಲ್ ಗಾಂಧಿ ಮಾಡಿದ ಭಾರತ್ ಜೋಡೋ ಯಾತ್ರೆ ತೀರಾ ಇತ್ತೀಚಿನ ಬಹುದೊಡ್ಡ ಪಾದಯಾತ್ರೆ. ಇನ್ನು ಕರ್ನಾಟಕದ ಮಟ್ಟಿಗೆ ಪಾದಯಾತ್ರೆಗಳೆಂದರೆ ಇತ್ತೀಚಿನ ಜನರೇಷನ್‌ಗೆ ನೆನಪಿಗೆ ಬರೋದು ಸಿದ್ದರಾಮಯ್ಯ ಅವರ ಬಳ್ಳಾರಿ ಪಾದಯಾತ್ರೆ. ಅದನ್ನು ಬಿಟ್ಟರೆ ಕಾವೇರಿ ನೀರನ್ನು ಸಂಗ್ರಹಿಸಲು ಮೇಕೆದಾಟಿನಲ್ಲಿ ಡ್ಯಾಂ ನಿರ್ಮಿಸಲು, ರಾಜ್ಯ ಕಾಂಗ್ರೆಸಿಗರ ಮೇಕೆದಾಟು ಪಾದಯಾತ್ರೆ. ಕರೋನಾ ಟೈಂನಲ್ಲಿ ಬೇಡವೆಂದರೂ, ಮೇಕೆದಾಟಿನಿಂದ ಪಾದಯಾತ್ರೆ ಆರಂಭಿಸಿ ಒಂದು ಕಿಮೀ ಸಂಚರಿಸುವ ವೇಳೆಗೆ ಅನೇಕರ ಹಿರಿಯ ಕಾಂಗ್ರೆಸಿಗರು 'ದಮ್ಮಯ್ಯ-ದಪ್ಪಯ್ಯ' ಎಂದಿದ್ದರು ಅನ್ನೋದು ಬೇರೆ ಮಾತು. ಈ ಎಲ್ಲ ಪಾದಯಾತ್ರೆಯ ವೇಳೆ ಆಯೋಜಿಸಿದ ಪಕ್ಷಗಳಿಗೆ ಲಾಭವೇ ಆಗಿತ್ತು. ಆದರೀಗ ಮುಡಾ, ವಾಲ್ಮೀಕಿ ಹಗರಣಗಳನ್ನು ಮುಂದಿಟ್ಟುಕೊಂಡು ಬೆಂಗಳೂರು-ಮೈಸೂರು ಪಾದಯಾತ್ರೆಗೆ ಮುಂದಾದ ಬಿಜೆಪಿ ನಾಯಕರಿಗೆ ಇದೀಗ ಯಾಕಾದರೂ ಆರಂಭಿಸಿದೆವೋ ಅನ್ನೋ ಸ್ಥಿತಿಗೆ ಬಂದಿದೆಯಂತೆ. ಒಂದೆಡೆ ಪಾದಯಾತ್ರೆ ಮಾಡಿದ್ರೆ, ದೋಸ್ತಿ ಪಕ್ಷದವರು ಮುನಿಸಿಕೊಳ್ತಾರೆ. ಮಾಡದೇ ಮುಂದಕ್ಕೆ ಹಾಕಿದ್ರೆ, ಪಾದಯಾತ್ರೆ ಮಾಡ್ತೀವಿ ಅಂತಾ ಹೇಳ್ಕೊಂಡೆ ಕಿಮೀಗಟ್ಟಲೆ ಓಡಾಡಿಕೊಂಡಿರೋ ಬಿಜೆಪಿಗರಿಗೆ ಮುಜುಗರ. ಇಲ್ಲಿಗೆ ನಿಲ್ಲದೇ, ವಿಜಯೇಂದ್ರ ಯಾವಾಗ ಬೆಂಗ್ಳೂರಲ್ಲಿ ಪಾದಯಾತ್ರೆ ಆರಂಭಿಸುತ್ತಾರೋ ಅದೇ ದಿನ ಯತ್ನಾಳ್, ಜಾರಕಿಹೊಳಿ ಬಂಡಾಯ ಪಾದಯಾತ್ರೆಗೆ ಪ್ಲಾನ್ ಮಾಡಿಕೊಂಡಿದ್ದಾರೆ. ಈ ಎಲ್ಲವನ್ನು ನೋಡಿ ಅನೇಕರು 'ನಿಮಗಿತ್ತು ಬೇಕಿತ್ತಾ ಮಗನೇ' ಅನ್ನೋ ಸಾಂಗ್ ಹೇಳ್ತಾ ಇದ್ದಾರೆ. ಕಾಂಗ್ರೆಸಿಗರನ್ನು ಸಿಲುಕಿಸೋ ಧಾವಂತದಲ್ಲಿ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಂಡಿರೋ ರಾಜ್ಯ ಬಿಜೆಪಿ ಏನ್ ಮಾಡ್ಬೇಕು ಅನ್ನೋದು ಗೊತ್ತಾಗದೇ ಕೂತಿದ್ದಾರೆ!

ಸಂಪಾದಕರ ಸದ್ಯಶೋಧನೆ

ಎಡಿಸನ್ ನ ವಿಚಿತ್ರ ಸ್ವಭಾವ

ಥಾಮಸ್ ಅಲ್ವಾ ಎಡಿಸನ್ ಹೆಸರನ್ನು ಕೇಳದವರು ಯಾರಿದ್ದಾರೆ? ಲೈಟ್ ಬಲ್ಬನ್ನು ನೋಡಿದಾಗ ಆತನ ಹೆಸರು ಕಣ್ಮುಂದೆ ಹಾದು ಹೋಗುತ್ತದೆ. ಫೋನೋಗ್ರಾಫ್ ಮತ್ತು ಮೋಶನ್ ಪಿಕ್ಚರ್ ಕೆಮರಾವನ್ನು ಕಂಡು ಹಿಡಿದವನೂ ಅವನೇ. ಟೆಲಿಗ್ರಾಫ್ ಮತ್ತು ಟೆಲಿಫೋನ್‌ನ್ನು ಸುಧಾರಿಸಿದವನೂ ಅವನೇ. ನಾನು ಇತ್ತೀಚೆಗೆ ಥಾಮಸ್ ಎಡಿಸನ್ ಕುರಿತ ಪುಸ್ತಕವೊಂದನ್ನು ಓದುತ್ತಿದ್ದೆ. ಎಡಿಸನ್‌ನ ವಿಚಿತ್ರ ಸ್ವಭಾವ ನೋಡಿ ಆಶ್ಚರ್ಯವಾಯಿತು. ಆತ ಮಹಾ ಸೋಂಭೇರಿ. ಒಮ್ಮೊಮ್ಮೆ ಸತತ ಎರಡು ದಿನ ನಿದ್ದೆ ಮಾಡುತ್ತಿದ್ದ. ಕೋಣೆಯಿಂದ ಹೊರಗೇ ಬರುತ್ತಿರಲಿಲ್ಲ. ವಾರಗಟ್ಟಲೆ ಸ್ನಾನ ಮಾಡುತ್ತಿರಲಿಲ್ಲ. ಬಟ್ಟೆಯನ್ನೂ ಬದಲಿಸುತ್ತಿರಲಿಲ್ಲ. ಆತನ ಪತ್ನಿ ಆತನ ಕೋಣೆಗೆ ಆಹಾರಗಳನ್ನು ಕಳಿಸುತ್ತಿದ್ದಳು. ಒಮ್ಮೊಮ್ಮೆ ಅವನ್ನು ತಿನ್ನದೇ ಅಲ್ಲಿಯೇ ಬಿಟ್ಟುಬಿಡುತ್ತಿದ್ದ. ಆಗಾಗ ಆಹಾರ ಪದಾರ್ಥಗಳೆಲ್ಲ ನೆಲದ ಮೇಲೆ ಬಿದ್ದಿರುತ್ತಿದ್ದವು. ಅವನ್ನು ಗುಡಿಸಿ ಸ್ವಚ್ಛಗೊಳಿಸುವ ಗೋಜಿಗೂ ಹೋಗುತ್ತಿರಲಿಲ್ಲ. ಒಂದು ದಿನ ಎಡಿಸನ್ ಸರತಿ ಸಾಲಿನಲ್ಲಿ (ಕ್ಯೂ) ನಿಂತಿದ್ದ. ಯಾರೋ ಅವನನ್ನು ಗುರುತಿಸಿದರು. 'ನೀವು ಥಾಮಸ್ ಎಡಿಸನ್ ಅಲ್ಲವೇ? ಇಲ್ಲಿ ಯಾಕೆ ನಿಂತಿದ್ದೀರಿ?' ಎಂದು ಕೇಳಿದರು. ಅದಕ್ಕೆ ಎಡಿಸನ್, 'ನಿಜ, ನೀವು ಹೇಳಿದ್ದು ಸರಿ. ನಾನು ಥಾಮಸ್ ಎಡಿಸನ್. ನಾನು ಯಾರೆಂಬುದನ್ನು ಮರೆತೇ ಬಿಟ್ಟಿದ್ದೆ. ನಾನ್ಯಾರು ಎಂಬುದನ್ನು ನೆನಪಿಸಿದ್ದಕ್ಕೆ ನಿಮಗೆ ಧನ್ಯವಾದಗಳು' ಎಂದು ಹೇಳಿದ. ಆತ ಅಂಥ ಮರೆಗುಳಿ ಮತ್ತು ವಿಕ್ಷಿಪ್ತ ಸ್ವಭಾವದವನು. ಎಡಿಸನ್‌ನ ಕೋಣೆಯನ್ನು ಆತನ ಹೆಂಡತಿ ಕಾಲಕಾಲಕ್ಕೆ ಸರಿಯಾಗಿ ಜೋಡಿಸಿಡುತ್ತಿದ್ದಳು. ಇಲ್ಲದಿದ್ದರೆ ಅಲ್ಲಿ ಕಾಲಿಡಲು ಆಗುತ್ತಿರಲಿಲ್ಲ. ಇಡೀ ಕೋಣೆ ತುಂಬೆಲ್ಲ ಕಾಗದಗಳು, ಪುಸ್ತಕಗಳು, ಟಿಪ್ಪಣಿಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತಿದ್ದವು. ಹತ್ತಾರು ಪುಟಗಳನ್ನು ಬರೆದ ಬಳಿಕ ಅದನ್ನು ಆತ ಪಕ್ಕದಲ್ಲಿ ಇಡುತ್ತಿರಲಿಲ್ಲ. ಅವೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತಿದ್ದವು. ಒಂದೆರಡು ದಿನಗಳ ಬಳಿಕ, ಬರೆದ ಹಾಳೆಗಳಿಗೆ ಹುಡುಕುತ್ತಿದ್ದ. ಅವು ತಕ್ಷಣ ಸಿಗದಿದ್ದರೆ, ಎರಡು ದಿನಗಳ ಹಿಂದೆ ಬರೆದಿದ್ದನ್ನೇ ಮತ್ತೊಮ್ಮೆ ಬರೆಯುತ್ತಿದ್ದ. 'ನೀವು ಇವನ್ನೆಲ್ಲ ಈ ಮೊದಲು ಬರೆದಿದ್ದೀರಿ. ಈಗ ಮತ್ಯಾಕೆ ಬರೆಯುತ್ತೀರಿ?' ಎಂದು ಹೆಂಡತಿ ಕೇಳಿದರೆ, 'ಹೌದಾ? ನಾನು ಬರೆದಿದ್ದೆನಾ?' ಎಂದು ಕೇಳಿ ಅವಳನ್ನೇ ಬೇಸ್ತು ಬೀಳಿಸುತ್ತಿದ್ದ. ಮನಸ್ಸಿಗೆ ಯಾವುದೇ ಹೊಸ ವಿಚಾರ ಹೊಳೆದರೆ ಸಾಕು, ಎಡಿಸನ್ ತಕ್ಷಣ ಬಿಡಿ ಹಾಳೆಯಲ್ಲಿ ಬರೆದಿಡುತ್ತಿದ್ದ. ಆದರೆ ಆ ಬಿಡಿ ಹಾಳೆಗಳು ಎಲ್ಲೋ ಕಳೆದು ಹೋಗುತ್ತಿದ್ದವು. ಅವು ಸಿಗದೇ ಪೇಚಾಡುತ್ತಿದ್ದ. ಒಮ್ಮೆ ನೂರಕ್ಕೂ ಹೆಚ್ಚು ಪುಟಗಳನ್ನು ಗೊತ್ತಾಗದೇ ಕಸದಬುಟ್ಟಿಗೆ ಹಾಕಿಬಿಟ್ಟಿದ್ದ! ಗಂಡನ ಈ ಎಡವಟ್ಟುಗಳನ್ನು ಹೆಂಡತಿ ಚೆನ್ನಾಗಿ ಅರಿತಿದ್ದಳು. ಆತನ ಕೆಲಸಗಳ ಮೇಲೆ ಒಂದು ನಿಗಾ ಇಟ್ಟಿರುತ್ತಿದ್ದಳು. ಬಿಡಿ ಹಾಳೆಗಳ ಮೇಲೆ ಬರೆಯುವ ಗಂಡನ ಅಭ್ಯಾಸವನ್ನು ಹೇಗಾದರೂ ಮಾಡಿ ನಿಲ್ಲಿಸಬೇಕೆಂದು, ಒಂದು ದಿನ ಅಂಗಡಿಗೆ ಖುದ್ದಾಗಿ ಹೋಗಿ ನೋಟ್ ಬುಕ್ ಖರೀದಿಸಿ ತಂದಳು. 'ಇನ್ನು ಮುಂದೆ ನೀವು ಈ ನೋಟ್‌ಬುಕ್‌ನಲ್ಲಿಯೇ ಬರೆಯಿರಿ. ಬರೆದಿದ್ದೆಲ್ಲ ಒಂದೆಡೆ ಇರುತ್ತದೆ. ಯಾವಾಗ ಬೇಕಾದರೂ ತಕ್ಷಣ ಸಿಗುತ್ತದೆ' ಎಂದು ಹೇಳಿದಳು. ಅದಕ್ಕೆ ಎಡಿಸನ್, 'ಹೌದಲ್ವಾ? ಒಳ್ಳೆಯ ಯೋಚನೆ. ಇದೇಕೆ ನನಗೆ ಈ ಮೊದಲು ಹೊಳೆಯಲಿಲ್ಲ?' ಎಂದು ಹೇಳಿದ. ಅದಾಗಿ ಕೆಲ ದಿನಗಳಲ್ಲಿ ಆತ ಮೂರು ನೋಟ್‌ಬುಕ್‌ಗಳನ್ನು ಬರೆದು ತುಂಬಿಸಿದ. ಒಂದು ದಿನ ಏನಾಯಿತೆಂದರೆ, ಆತ ಟಿಪ್ಪಣಿ ಮಾಡಿಕೊಂಡ ಮೂರೂ ನೋಟ್‌ಬುಕ್‌ಗಳು ಕಾಣೆಯಾದವು. ಎಷ್ಟೇ ಹುಡುಕಿದರೂ ಸಿಗಲಿಲ್ಲ. 'ನೋಡಿದೆಯಾ, ನಾನು ನಿನ್ನ ಸಲಹೆಯನ್ನು ಪಾಲಿಸಿದೆ. ಬರೆದಿದ್ದೆಲ್ಲವನ್ನೂ ಕಳೆದುಕೊಂಡೆ. ಬಿಡಿ ಹಾಳೆಗಳಲ್ಲಿ ಬರೆಯುವುದೇ ವಾಸಿ. ಆಗೊಮ್ಮೆ-ಈಗೊಮ್ಮೆ ಕೆಲವು ಪುಟಗಳು ಮಾತ್ರ ಕಳೆದು ಹೋಗುತ್ತಿದ್ದವು, ಆದರೆ ಬರೆದಿದ್ದೆಲ್ಲವೂ ಕಳೆದು ಹೋಗುತ್ತಿರಲಿಲ್ಲ. ಈಗ ನೋಡು, ಎಲ್ಲವೂ ಹೋದವು. ಇನ್ನು ಮುಂದೆ ಬಿಡಿ ಹಾಳೆಗಳಲ್ಲೇ ಬರೆಯುತ್ತೇನೆ' ಎಂದ ಎಡಿಸನ್, ಸ್ವಲ್ಪವೂ ಬೇಸರಿಸಿಕೊಳ್ಳದೇ, ಬರೆದಿದ್ದನ್ನೇ ಮತ್ತೆ ಬರೆಯಲಾರಂಭಿಸಿದ. ಆತನ ಈ ಗುಣವೇ ಲೈಟ್ ಬಲ್ಬ್ ಕಂಡುಹಿಡಿಯಲು ಸಹಾಯಕವಾಯಿತು. ಆತ ಮಾಡಿದ್ದನು ಎಷ್ಟು ಸಲವಾದರೂ ಮತ್ತೊಮ್ಮೆ ಮಾಡಲು ಬೇಸರಿಸಿ ಕೊಳ್ಳುತ್ತಿರಲಿಲ್ಲ. ಪದೇ ಪದೆ ವಿಫಲನಾದರೂ, ಕೈ ಚೆಲ್ಲುತ್ತಿರಲಿಲ್ಲ.

ಒಲಿಂಪಿಕ್ಸ್ – ನಮ್ಮದೇಕೆ ಕಂಚಿನ ತಗಡಿನ ತುತ್ತೂರಿ!

ಶಿಶಿರ ಕಾಲ

ಶಿಶಿರ್ ಹೆಗಡೆ
shishirh@gmail.com

ಒಲಿಂಪಿಕ್ಸ್ ಪಂದ್ಯಾವಳಿ ಬಂತೆಂದರೆ ಮೆಡಲ್‌ಗಳ ಸುದ್ದಿ, ಸಂಭ್ರಮ, ಲೆಕ್ಕಾಚಾರ. ಇಂತಹ ಜಾಗತಿಕ ವೇದಿಕೆಯಲ್ಲಿ ಯಾವುದೇ ಮೆಡಲ್ ಪಡೆಯುವುದೂ ದೊಡ್ಡ ವಿಷಯವೇ. ಒಲಿಂಪಿಕ್ಸ್‌ನಲ್ಲಿ ಕಂಚು ಪಡೆಯುವುದೂ ಕಿರಿದಲ್ಲ, ಇಲ್ಲಿ ಕಂಚಿಗೂ ಬೆಳ್ಳಿ, ಬಂಗಾರಕ್ಕೂ ಇರುವ ಅಂತರ ತೀರಾ ಕೂದಲೆಳೆಯದು. ಒಂದೆರಡು ಮೈಕ್ರೊಸೆಕೆಂಡ್, ಒಂದೆರಡು ಮಿಲಿಮೀಟರ್‌ನಷ್ಟು ಅತಿ ಚಿಕ್ಕ ಅಂತರ. ಕಂಚಿಗೂ ಮತ್ತು ಮೆಡಲ್ ಪಡೆಯದ ನಾಲ್ಕು, ಐದಾರನೇ ಸ್ಥಾನಕ್ಕೂ ಇರುವ ವ್ಯತ್ಯಾಸ ಕೂಡ ಅಷ್ಟೇ ಚಿಕ್ಕದು. ಕಂಚು ಗೆದ್ದರೆ ಏನೋ ಒಂದು ಲೆಕ್ಕದ ಸಾಧನೆ, ಮರ್ಯಾದಿ. ಆದರೆ ಉಗುರಿನಂಚಿನ ಅಂತರದ ನಾಲ್ಕನೇ ಸ್ಥಾನಕ್ಕೆ ಬೆಲೆಯೇ ಇಲ್ಲ. ನಾಲ್ಕನೇ ಸ್ಥಾನಕ್ಕೂ ಕೊನೆಯ ಸ್ಥಾನಕ್ಕೂ ವ್ಯತ್ಯಾಸವಿಲ್ಲ. ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದರೆ ಹೇಳಿಕೊಳ್ಳುವ, ಸಂಭ್ರಮ ಪಡುವ ಕ್ರೀಡಾಪಟುಗಳು ನಾಲ್ಕನೇ ಸ್ಥಾನ ಪಡೆದಲ್ಲಿ ಅದನ್ನು ಹೇಳಿಕೊಳ್ಳುವ ಸ್ಥಿತಿಯಲ್ಲಿಯೂ ಇರುವುದಿಲ್ಲ.

ಮೆಡಲ್ ಪಡೆದಿಲ್ಲವೆಂದರೆ ಕ್ರೀಡಾಪಟು ಪೂರ್ಣ ಸೋತಂತೆ. ಆಡುವುದೇ ಮುಖ್ಯ, ಗೆಲ್ಲುವುದು ಮುಖ್ಯವಲ್ಲ ಎನ್ನುವುದು ಸುಮ್ಮನೆ ಬಾಯಿ ಮಾತಿಗೆ ಆಗಬಹುದು. ಆದರೆ ಒಲಿಂಪಿಕ್ಸ್‌ನಲ್ಲಿ ಎಲ್ಲರೂ ಭಾಗವಹಿಸುವುದು ಚಿನ್ನದ ಹೆಗ್ಗಳಿಕೆಗಾಗಿ. ಯಾರೇ ಭಾಗವಿಸುವಾಗಲೂ ಎಲ್ಲರೂ ಹರಸುವುದು Go for the gold! ಎಂದೇ. ಚಿನ್ನ, ಬೆಳ್ಳಿ, ಕಂಚು ಎಂಬುದು ಇಲ್ಲಿ ಕೇವಲ ಲೋಹದ ತುಂಡಲ್ಲ. ಚಿನ್ನ ಗೆದ್ದವನು ಆ ಆಟದಲ್ಲಿ ಜಗತ್ತಿನ ಅತ್ಯಂತ ಶ್ರೇಷ್ಠ. ಪದಕ ಗೆಲ್ಲದಿದ್ದರೆ ಆ ಕ್ರೀಡಾಪಟುವಿನ ಜೀವಮಾನದ ಎಲ್ಲ ತಯಾರಿಗಳು, ಅಷ್ಟು ಆಯುಷ್ಯ ಎಲ್ಲವೂ ನೀರಿನಲ್ಲಿ ಮಾಡಿದ ಹೋಮ. ಹಾಗಂತ ಕೇವಲ ತಾಲೀಮು ಹೆಚ್ಚು ನಡೆಸಿದ ಕಾರಣಕ್ಕೆ ಪದಕ ಬಂದುಬಿಡುವುದಿಲ್ಲ. ತಿನ್ನುವ ಆಹಾರದಿಂದ ಹಿಡಿದು ದೇಹದ ತೂಕ, ಅಂಗ ರಚನೆ, ಜೀನ್ಸ್ ಎಲ್ಲವೂ ಸಂಬಂಧಿತ ವಿಷಯವೇ ಆಗಿರುತ್ತದೆ. ಯಾವುದೇ ಆಟವಿರಬಹುದು, ಆಟಗಾರನಿರಬಹುದು, ಆತ ಹಿಂದಿನ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಪಡೆದ ಆಟಗಾರನಿಗಿಂತ ಹೆಚ್ಚಿನ ಸಾಮರ್ಥ್ಯವನ್ನು ಸಿದ್ಧಿಸಿಕೊಂಡಿದ್ದರೂ ಈ ಬಾರಿ ಕಂಚು ಗೆಲ್ಲಲೂ ಸಾಧ್ಯವಾಗದಿರಬಹುದು. ಸಾಮರ್ಥ್ಯ, ಶಕ್ತಿ, ಗಟ್ಟಿತನ, ಏಕಾಗ್ರತೆ ಇವೆಲ್ಲವೂ ಇದ್ದರೂ, ದಶಕ ಕಾಲ ಪ್ರಾಕ್ಟೀಸ್ ಮಾಡಿದ್ದರೂ ಆಟದ ಹಿಂದಿನ ದಿನದ ನಿದ್ರೆ ಸರಿಯಾಗಿಲ್ಲವೆಂದರೆ ಮಾರನೇ ದಿನ ಮೆಡಲ್ ಬದಲಿಗೆ ಚೊಂಬೇ ಗತಿ. ಆಟಗಾರ ಧರಿಸುವ ಬಟ್ಟೆ, ಶೂ, ಹೀಗೆ ಎಲ್ಲವೂ ಮುಖ್ಯವಾಗುತ್ತದೆ. ಸೇವಿಸಿದ ಆಹಾರದಿಂದ ಹಿಡಿದು ದೇಹದಲ್ಲಿನ ನೀರಿನ ಪ್ರಮಾಣ ಕೂಡ ಈ ಅತ್ಯಂತ ಚಿಕ್ಕ ಅಂತರಕ್ಕೆ ಕಾರಣವಾಗಿ ಮೆಡಲ್ ಗೆಲ್ಲುವಲ್ಲಿ ಸೋಲಾಗಬಹುದು.

ಇನ್ನು ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಲಾಗಲಿಲ್ಲ, ಮುಂದಿನ ಬಾರಿ ನೋಡಿಕೊಂಡರಾಯಿತು ಎನ್ನುವಂತೆಯೂ ಇಲ್ಲ. ಮುಂದಿನ ಬಾರಿ ಎಂದರೆ ಅದು ನಾಲ್ಕು ವರ್ಷದ ನಂತರದ ಪಂದ್ಯಾವಳಿ. ಆಗ ಇನ್ನೊಂದಿಷ್ಟು ಹೊಸ ಸಾಮರ್ಥ್ಯದ ಆಟಗಾರರು ಸ್ಪರ್ಧೆಗಿಳಿಸಿರುತ್ತಾರೆ. ಪಂದ್ಯ ಇನ್ನಷ್ಟು ಸ್ಪರ್ಧಾತ್ಮಕವಾಗಿರುತ್ತದೆ. ಆಗ ಆಟಗಾರನ ವಯಸ್ಸು ಕೂಡ ನಾಲ್ಕು ಹೆಚ್ಚಾಗಿರುತ್ತದೆ. ನಾಲ್ಕು ವರ್ಷದ ದೇಹ ಬದಲಾವಣೆಯೇನು ಎಂಬುದು ನಮಗೆಲ್ಲರಿಗೂ ಗೊತ್ತು. ನಾವು ನಾಲ್ಕು ವರ್ಷದ ಹಿಂದಿರುವಂತೆ ಈಗಿರುವುದಿಲ್ಲ. ಅದಕ್ಕೆ ಯಾವುದೇ ಕ್ರೀಡಾಪಟು ಕೂಡ ಹೊರತಲ್ಲ. ಪಂದ್ಯ ಯಾವುದೇ ಇರಲಿ ವಯಸ್ಸಾದಂತೆ ಸಾಮರ್ಥ್ಯ ಏರುವುದಕ್ಕಿಂತ ಇಳಿಯುವುದೇ ಜಾಸ್ತಿ. ಹಾಗಾಗಿ ಆಗ ಸ್ಪರ್ಧಿಸಬೇಕೆಂದರೆ ಇನ್ನಷ್ಟು ತಾಕತ್ತು, ತಾಲೀಮು ಎಲ್ಲವೂ ಅವಶ್ಯಕ. ಏನೇ ತಯಾರಿ ಮಾಡಿಕೊಂಡರು ವಯೋಸಹಜ ಬದಲಾವಣೆಗಳು ಸವಾಲನ್ನು ಇನ್ನಷ್ಟು ಕ್ಲಿಷ್ಟಗೊಳಿಸುತ್ತವೆ.

ಕಂಚೋ, ಬೆಳ್ಳಿಯೋ, ಬಂಗಾರವೋ, ಯಾವುದೇ ಮೆಡಲ್ ಗೆದ್ದರೂ ಅದು ಚಿಕ್ಕವಿಷಯವಲ್ಲ, ಜಗತ್ತಿನ 795 ಕೋಟಿ ಜನರಿದ್ದಾರೆ. ಅವರಲ್ಲಿ ಒಂದು ಆಟದಲ್ಲಿ ಶ್ರೇಷ್ಠತೆ ಪಡೆದು ಮೊದಲ ಸ್ಥಾನ ಪಡೆಯುವುದಕ್ಕೂ, ಮೂರನೇ ಸ್ಥಾನ ಪಡೆಯುವುದಕ್ಕೂ ಈ ಲೆಕ್ಕದ ಪ್ರಕಾರ ಅದೇನು ವ್ಯತ್ಯಾಸ. ಹಾಗೆ ನೋಡಿದರೆ ಹತ್ತನೇ ಸ್ಥಾನ ಪಡೆದವನ ಸಾಧನೆಯೂ ಅತಿ ದೊಡ್ಡ ಸಾಧನೆಯೇ ಹೌದು. ಅದನ್ನು ಸಂಭ್ರಮಿಸದಿರಲಿಕ್ಕೆ ಕಾರಣಗಳಿರಬಹುದು, ಹಾಗಂತ ಆತನ ಕ್ರೀಡೋತ್ಸಾಹವನ್ನು, ಪಟ್ಟ ಕಷ್ಟ ಕಾರ್ಪಣ್ಯವನ್ನು, ಆತ/ಆಕೆ ತನ್ನ ಜೀವನವನ್ನು ಕ್ರೀಡೆಗೆ ಮುಡುಪಾಗಿಟ್ಟ ದಿಟ್ಟತನವನ್ನು ಕಡೆಗಣಿಸುವುದು ಸರಿಯಲ್ಲ. ಹಾಗಾಗಿ ಒಂದು ಕಂಚನ್ನು ದೇಶ ಸಂಭ್ರಮಿಸಿದರೂ ಅದನ್ನು ಕನಿಷ್ಠವಾಗಿ ನೋಡಬೇಕಿಲ್ಲ. ಮನು ಭಾಕರ್ ಕಂಚು ಗೆದ್ದಾಗ ಖುದ್ದು ದೇಶದ ಪ್ರಧಾನಿ ಫೋನ್ ಮಾಡಿ ಖುಷಿಪಟ್ಟಿದ್ದು ನೋಡಿ ನಮ್ಮೆಲ್ಲರಿಗೂ ಖುಷಿಯಾಗಿದೆ. ಆಗೇ ಗೆದ್ದ ದಿನವಂತೂ ಎಲ್ಲ ಸೋಷಿಯಲ್ ಮೀಡಿಯಾದಲ್ಲಿ ಆಕೆಯ ಚಂದದ ನಗುವಿನ ಫೋಟೋಗಳು ಎಲ್ಲೆಂದರಲ್ಲಿ ಕಾಣಿಸಿಕೊಂಡವು. ಪ್ರತಿಯೊಂದು ಮೆಡಲ್ ಕೂಡ ಅಷ್ಟೇ ಸಂಭ್ರಮಕ್ಕೆ, ವಿಜಯೋತ್ಸಾಹಕ್ಕೆ ಅರ್ಹ. ಅದರಲ್ಲಿ ದೂಸ್ರಾ ಮಾತೇ ಇಲ್ಲ.

ಆದರೆ – ಒಂದು ದೇಶ ಪಡೆಯುವ ಒಟ್ಟೂ ಮೆಡಲ್‌ಗಳ ಸಂಖ್ಯೆಯನ್ನು ಮಾತ್ರ ಈ ಎಲ್ಲ ರೀತಿಗಿಂತ ವಿಭಿನ್ನವಾಗಿ, ಪ್ರತ್ಯೇಕವಾಗಿ ವಿಶ್ಲೇಷಿಸಬೇಕಾಗುತ್ತದೆ. ದೇಶ ಪಡೆಯುವ ಒಟ್ಟೂ ಮೆಡಲ್‌ಗಳ ಸಂಖ್ಯೆ ಎಂದರೆ ಅದು ದೇಶದ ಜನರ, ಕ್ರೀಡಾ ಹಿರಿಮೆಯ ಲೆಕ್ಕ. ಇದು ಸೂಕ್ಷ್ಮದಲ್ಲಿ ಅಲ್ಲಿನ ಜನರ ದೇಹ ಸಾಮರ್ಥ್ಯದ, ಸಾಧ್ಯತೆಯ ಲೆಕ್ಕವಲ್ಲ. ಬದಲಾಗಿ ಇದು ಒಂದು ದೇಶ ಕ್ರೀಡೆಗೆ ಕೊಡುವ ಮಹತ್ವ, ಅಲ್ಲಿನ ಕ್ರೀಡಾ ಇನ್‌ಫ್ರಾಸ್ಟ್ರಕ್ಚರ್, ಆಂತರಿಕ ರಾಜಕಾರಣ, ಸ್ಪರ್ಧಾತ್ಮಕ

ವ್ಯವಸ್ಥೆ ಇವೆಲ್ಲದಕ್ಕೆ ಹಿಡಿದ ಕನ್ನಡಿಯಾಗಿರುತ್ತದೆ. ಒಲಿಂಪಿಕ್ಸ್ ನಡೆದಾಗಲೆಲ್ಲ, ಮೆಡಲ್ಲುಗಳ ಸಂಖ್ಯೆಗಳನ್ನು ಕಂಡಾಗಲೆಲ್ಲ ಸಂತೋಷದ ಜೊತೆಜೊತೆಯಲ್ಲಿಯೇ ಎಲ್ಲಿಲ್ಲದ ಬೇಸರ ಕಾಡುತ್ತದೆ. ನಮ್ಮ ದೇಶ ಪಡೆಯುವ ಮೆಡಲ್ಲುಗಳ ಸಂಖ್ಯೆಯನ್ನು ಇನ್ನುಳಿದ ಚಿಕ್ಕಪುಟ್ಟ ದೇಶಗಳ ಸಂಖ್ಯೆಗೆ ಹೋಲಿಸಿಕೊಂಡಾಗ ಭಿನ್ನ ಭಾವ ಕಾಡುತ್ತದೆ.

ನಮ್ಮ ದೇಶ ಆರ್ಥಿಕವಾಗಿ ಐದನೇ ಗಟ್ಟಿ ದೇಶ. ನಮ್ಮಲ್ಲಿ ಹಣಕ್ಕೇನೂ ಕೊರತೆ ಇಲ್ಲ. ದೇಶದಲ್ಲಿ ಬಡವರ ಸಂಖ್ಯೆ ಹೆಚ್ಚಿರಬಹುದು ಆದರೆ ದೇಶ ಈಗ ಬಡವಾಗಿ ಉಳಿದಿಲ್ಲ, ನಮ್ಮಲ್ಲಿ ಅಮೆರಿಕ, ಚೀನಾ, ಜಪಾನ್, ಜರ್ಮನಿಯಷ್ಟು ಆರ್ಥಿಕತೆ ಇಲ್ಲದಿರಬಹುದು ಆದರೆ ನಾವು ಆರ್ಥಿಕವಾಗಿ ಫ್ರಾನ್ಸ್, ರಷ್ಯಾ, ಯುನೈಟೆಡ್ ಕಿಂಗ್‌ಡಮ್ ಮೊದಲಾದ ಘಟಾನುಘಟಿ ದೇಶಗಳನ್ನು ಹಿಂದಿಕ್ಕಿ ಐದನೇ ಜಾಗದಲ್ಲಿ ಬಂದು ಕುಳಿತಿದ್ದೇವೆ. ಆರ್ಥಿಕವಾಗಿ ನಾವು ಇಂದು ಹಿಂದುಳಿದ ದೇಶವಾಗಿಲ್ಲ, ಇನ್ನು ಜನಸಂಖ್ಯೆಯ ವಿಷಯಕ್ಕೆ ಬಂದರೆ ನಾವೇ ಕಿಂಗು, ಎಲ್ಲರಿಗಿಂತ ಮೊದಲು. ಇಷ್ಟಾಗಿಯೂ ಒಂದು ಕಂಚು ಬಂದರೆ ಪ್ರಧಾನಿಯಾದಿಯಾಗಿ ದೇಶಕ್ಕೆ ದೇಶವೇ ಸಂಭ್ರಮಿಸುವುದನ್ನು ನೋಡಿ ಖುಷಿ ಪಡಬೇಕೋ? ಅಥವಾ ಮರುಕ ಪಡಬೇಕೋ?

ಜಪಾನ್ ದೇಶ ಅಬ್ಬಬ್ಬಾ ಎಂದರೆ ಎಷ್ಟು ದೊಡ್ಡವಿರಬಹುದು? ನಮ್ಮ ಒಂದೆರಡು ರಾಜ್ಯಗಳನ್ನು ಸೇರಿಸಿದಷ್ಟು ವಿಸ್ತೀರ್ಣದ ದೇಶ ಅದು. ಅಲ್ಲಿನ ಒಟ್ಟೂ ಜನಸಂಖ್ಯೆ ಹನ್ನೆರಡು ಕೋಟಿ. ನಮಗೆ ಹೋಲಿಸಿದರೆ ಜಪಾನ್ ಒಂದು ವೃದ್ಧ ದೇಶ. ಒಲಿಂಪಿಕ್ಸ್ ಎಂದರೆ ಅದರಲ್ಲಿ ಭಾಗವಹಿಸುವ ಬಹುತೇಕರು 17 ರಿಂದ 27 ವಯಸ್ಸಿನವರು ಎಂದು ದೊಡ್ಡ ಹೊಡೆತದ ಲೆಕ್ಕಾಚಾರಕ್ಕೆ ಇಟ್ಟುಕೊಳ್ಳೋಣ. ಜಪಾನಿನ ಜನಸಂಖ್ಯೆಯಲ್ಲಿ ಶೇ. 9ರಷ್ಟು ಜನಸಂಖ್ಯೆ ಈ ವಯೋವರ್ಗದವರು. ಇದರರ್ಥ ಅಲ್ಲಿ ಸ್ಪರ್ಧಾ ಸಾಧ್ಯತೆಯುಳ್ಳ ಜನಸಂಖ್ಯೆ ಕೇವಲ ಒಂದರಿಂದ ಒಂದೂವರೆ ಕೋಟಿ. ಭಾರತ ಹಾಗಲ್ಲ, ನಮ್ಮಲ್ಲಿನ ಜನಸಂಖ್ಯೆ 140 ಕೋಟಿ. ನಮ್ಮದು ಯಂಗ್ ದೇಶ. ನಮ್ಮಲ್ಲಿನ 17 ರಿಂದ 27 ವಯಸ್ಸಿನವರ ಸಂಖ್ಯೆಯ ಪ್ರಮಾಣ ಶೇ. 20 ರಷ್ಟು. ಎಂದರೆ ಭಾರತದ ಈ ವಯೋಮಾನದವರ ಸಂಖ್ಯೆ ಸುಮಾರು 28 ಕೋಟಿ. ಇದು ಜಪಾನಿನ ಒಟ್ಟೂ ಜನಸಂಖ್ಯೆಯ ದುಪ್ಪಟ್ಟು. ಭಾರತದಲ್ಲಿ ಜನಸಾಂದ್ರತೆಯದ್ದೇ ಸಮಸ್ಯೆ ಎಂದರೆ ಜಪಾನಿನ ಜನ ಸಾಂದ್ರತೆಯೇ ಹೆಚ್ಚು, ದೇಹ ದಾರ್ಢ್ಯತೆಯ ಪ್ರಶ್ನೆ ಬಂದರೆ ಜಪಾನಿಯರು ಕುಬ್ಜರು. ಐತಿಹಾಸಿಕವಾಗಿ ಅವರೂ ಪೆಟ್ಟು ತಿಂದವರೇ. ನೀವು ಯಾವ ಮಾನದಂಡವನ್ನಾದರೂ ಇಟ್ಟು ನೋಡಿ, ಜಪಾನಿಗಿಂತ ನಾವು ಮುಂದಿರಬೇಕಿತ್ತು. ಆದರೆ ಹಿಂದಿನ ಪಂದ್ಯಾವಳಿಯ ಲೆಕ್ಕ ಬದಿಗಿಡಿ, ಈಗಿನ ಫ್ರಾನ್ಸ್ ಒಲಿಂಪಿಕ್ಸ್ ಪದಕಗಳ ಸಂಖ್ಯೆಯನ್ನು ತೆಗೆದುಕೊಂಡರೆ ಜಪಾನ್ ಇಲ್ಲಿಯವರೆಗೆ ಗೆದ್ದದ್ದು ಬರೋಬ್ಬರಿ ಹದಿನೈದು ಪದಕಗಳನ್ನು. ಅದರಲ್ಲಿ ಎಂಟು ಚಿನ್ನ, ಮೂರು ಬೆಳ್ಳಿ, ನಾಲ್ಕು ಕಂಚು. ನಮ್ಮದು ಒಂದು – ಅದೂ ಕಂಚು!

ಜಪಾನ್ ಬಿಡಿ. ಅವರ ಮೆಂಟಾಲಿಟಿ, ಶ್ರದ್ಧೆ, ಅವರು ದೇಶ ಕಟ್ಟಿದ ರೀತಿ ಇವೆಲ್ಲವೂ ಅನನ್ಯ ಎಂದು ಪುಕಾರಿಗೆ ಉತ್ತರಿಸಬಹುದು. ಜಪಾನೀಯರು ಗೌರವಾರ್ಹರೇ. ಹಾಗಾಗಿಯೇ ಹೋಲಿಸಿಕೊಳ್ಳಬೇಕು. ಆದರೆ ಪದಕಗಳ ಪಟ್ಟಿಯಲ್ಲಿ ಇಂದು ನಮ್ಮ ಸ್ಥಾನವೇನು? ನಮ್ಮದು 40 ನೇ ಸ್ಥಾನ. ಪದಕ ಗೆದ್ದಿರುವ ಒಟ್ಟೂ ದೇಶವೇ 43. ಅದರಲ್ಲಿ ನಾವು ಕೊನೆಯಿಂದ ಮೂರನೇ ಸ್ಥಾನ. ನೀವು ನಮ್ಮಿಂದ ಪದಕದಲ್ಲಿ ಮುಂದಿರುವ 39 ದೇಶಗಳಲ್ಲಿ ಕನಿಷ್ಠ ಹತ್ತು ದೇಶಗಳ ಹೆಸರೇ ಕೇಳಿರಲಿಕ್ಕಿಲ್ಲ, ಕ್ರೊಯೇಷಿಯಾ, ಅಜರ್ಬೈಜಾನ್, ಸ್ಲೊವೇನಿಯಾ, ಎಕ್ವಡಾರ್, ಕೊಸೊವೊ, ಫಿಜಿ, ಮಂಗೋಲಿಯಾ, ಸೆರ್ಬಿಯ, ಗ್ವಾಟೆಮಾಲಾ, ಉಜಬೆಕಿಸ್ತಾನ್, ಟ್ಯುನೇಷಿಯಾ – ಇಂತಹ ದೇಶಗಳು ನಮಗಿಂತ ಮೆಡಲ್ ಪಟ್ಟಿಯಲ್ಲಿ ಮೇಲಿವೆಯಲ್ಲ! ಈಗ ಹೇಳಿ. ನಾವು ಒಂದೆರಡು ಕಂಚಿಗೆ, ಮುಂದೆ ಬರಬಹುದಾದ ಇನ್ನೊಂದೆರಡು ಬೆಳ್ಳಿ, ಬಂಗಾರಕ್ಕೆ ಖುಷಿಪಡಬೇಕೋ? ಅಥವಾ ಈ ಖುಷಿಯ ನಡುವೆ ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕೋ? ಭಾರತೀಯರು ಆಟದಲ್ಲಿ ಅಷ್ಟು ದುರ್ಬಲರೇ ಅಥವಾ ಇದಕ್ಕೆ ಇನ್ನೇನೋ ಕಾರಣವಿದೆಯೇ?

ಹತ್ತಾರು ದೇಶಗಳನ್ನು ಕಂಡಾಗ ನನಗೆ ಕೆಲವೊಂದು ವಿಷಯಗಳು ಈ ನಿಟ್ಟಿನಲ್ಲಿ ಢಾಳಾಗಿ ಕಾಣಿಸುತ್ತವೆ. ಅದೆಲ್ಲದರ ಸಾಲಿನಲ್ಲಿ ಮೊದಲು ನಿಲ್ಲುವುದು ನಮ್ಮಲ್ಲಿನ ಕ್ರೀಡಾ ಮೂಲ ಸೌಕರ್ಯದ ಕೊರತೆ. ನಮ್ಮಲ್ಲಿ ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ಮಾತ್ರಏಇಅ (Sports Authority of India) ಅಂತಹ ತಕ್ಕಮಟ್ಟಿಗಿನ ಸುಸಜ್ಜಿತವೆನ್ನಬಹುದಾದ ಸೌಕರ್ಯಗಳಿವೆ. ಅಂತಹ ಸೌಕರ್ಯಗಳು ಇಡೀ ಭಾರತದಲ್ಲಿ ಇರುವುದು ಕೇವಲ ಹನ್ನೊಂದು. ಅವೆಲ್ಲ ಇರುವುದು ಮಹಾನಗರಗಳಲ್ಲಿ ಮಾತ್ರ. ಬೆಂಗಳೂರು, ಚೆನ್ನೈ, ಹೈದರಾಬಾದ್ ಇಂತಹ ದೊಡ್ಡ ನಗರಗಳಲ್ಲಿ, ಇನ್ನುಳಿದವು ಚಿಕ್ಕ ಪುಟ್ಟ 'ನಾಮ್ ಕೆ ವಾಸ್ತೆ' ಫೆಸಿಲಿಟಿಗಳು. ಇದರಿಂದಾಗಿ ಬಹು ದೊಡ್ಡ ರೂರಲ್ ಜನಸಂಖ್ಯೆ ಈ ಸೌಕರ್ಯದಿಂದ ವಂಚಿತವಾಗುತ್ತಿದೆ. ನಮ್ಮಲ್ಲಿ ಜನಸಂಪನ್ಮೂಲವಿರುವುದೇ ಹಳ್ಳಿಯಲ್ಲಿ, ಹಳ್ಳಿಯ ಕ್ರೀಡಾ ಪ್ರತಿಭೆಗಳಿಗೆ ಇವುಗಳಿಂದ ಎಂಟಾಣಿ ಪ್ರಯೋಜನವಿಲ್ಲ, ಕ್ರೀಡೆಯನ್ನೇ ನೆಚ್ಚಿಕೊಳ್ಳಬೇಕೆಂದರೆ ಊರುಬಿಡಬೇಕು. ನಮ್ಮಲ್ಲಿನ ಕ್ರೀಡಾ ಕೇಂದ್ರಗಳ ಸ್ಥಿತಿಗತಿಗಳ ಬಗ್ಗೆ ಔಟ್ ಲುಕ್ ಪತ್ರಿಕೆ ಈಗೊಂದು ವರ್ಷದ ಹಿಂದೆ ವಿವರವಾದ ವರದಿ ಮಾಡಿತ್ತು. ಆ ವರದಿಯನ್ನೇ ಆಧರಿಸಿ ಕಂಡರೆ ನಮ್ಮದು ಯಾವುದೇ ಕಾರಣಕ್ಕೂ ಅಂತಾರಾಷ್ಟ್ರೀಯ ಹೋಲಿಕೆಯ ಸೌಲಭ್ಯವಲ್ಲ. ಜನಸಂಖ್ಯೆಗೆ ಹೋಲಿಸಿ ನೋಡುವುದಾದರೆ ಇದು ಅರೆಕಾಸಿನ ಮಜ್ಜಿಗೆಗೆ ಸಮ. ಇನ್ನು ಜಪಾನ್ ಮೊದಲಾದ ದೇಶಗಳಲ್ಲಿ ಚಿಕ್ಕಂದಿನಲ್ಲೇ ಒಬ್ಬ ವಿದ್ಯಾರ್ಥಿಯ ಕ್ರೀಡಾ ಸಾಮರ್ಥ್ಯವನ್ನು ಗುರುತಿಸಿ, ಪೋಷಿಸಿ ಬೆಳೆಸುವ ವ್ಯವಸ್ಥಿತ ಮಾರ್ಗಗಳಿವೆ. ಅಮೆರಿಕಾ ಮೊದಲಾದ ದೇಶಗಳಲ್ಲಿ ಕ್ರೀಡೆಯಲ್ಲಿ ಮುಂದಿದ್ದರೆ ಆ ವಿದ್ಯಾರ್ಥಿಗೆ ಉನ್ನತ ಶಿಕ್ಷಣದಲ್ಲಿ ಮೊದಲ ಮಣೆ, ಸ್ಕಾಲರ್‌ಶಿಪ್ ಇತ್ಯಾದಿ. ಅಲ್ಲಿನ ಯೂನಿವರ್ಸಿಟಿಯಲ್ಲಿ ಸೀಟು ಪಡೆಯಲು ಕ್ರೀಡೆ ಒಂದೊಳ್ಳೆ ಮಾರ್ಗ. ಹಾಗಾಗಿಯೇ ಪಾಲಕರೇ ಕ್ರೀಡೆಯಲ್ಲಿ ತೊಡಗಿಕೊಳ್ಳುವಂತೆ ನೋಡಿಕೊಳ್ಳುತ್ತಾರೆ. ಆದರೆ ನಮ್ಮಲ್ಲಿ ಹೇಗೆಂದು ನಿಮಗೇ ಗೊತ್ತು. ಕ್ರೀಡೆಯಲ್ಲಿ ಯಾರೇ ಮುಂದುವರಿಯಲು ಮುಂದಾದರೆ ಖುದ್ದು ತಂದೆತಾಯಿಯರೇ ಅವರಿಗೆ ಮೊದಲು ಅಡ್ಡಲಾಗಿ ನಿಲ್ಲುತ್ತಾರೆ. ಏಕೆಂದರೆ ಕ್ರೀಡೆಯಿಂದ ಬದುಕು ಮಹಾ ಕಷ್ಟ. ಕ್ರೀಡಾ ಮೀಸಲಾತಿ ತೀರಾ ನಗಣ್ಯ.

ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕೆಂದರೆ ಬದುಕಿಗೆ, ಟ್ರೈನಿಂಗ್‌ಗೆ ಅತ್ಯವಶ್ಯಕ ಹಣದ ವ್ಯವಸ್ಥೆ. ಕಿಸೆಯಲ್ಲಿ ಬಿಡಿಕಾಸಿಲ್ಲದೆ ಸಾಧನೆ ತೀರಾ ಕಷ್ಟ. ಹವಾಯಿ ಚಪ್ಪಲಿ ಧರಿಸಿ ಆಟ ಆಡಲಿಕ್ಕಾಗುವುದಿಲ್ಲ, ಪ್ರಾಕ್ಟೀಸ್ ಮಾಡಲಾಗುವುದಿಲ್ಲ. ಪ್ರಯೋಜಕತ್ವವಿಲ್ಲದೆ ಕ್ರೀಡೆಯಲ್ಲಿ ತೊಡಗಿಕೊಳ್ಳಲಾಗುವುದಿಲ್ಲ, ಸಾಮರ್ಥ್ಯ ಒರೆಗೆ ಹಚ್ಚುವುದಕ್ಕೂ ಹಣ ಬೇಕು. ಗೆದ್ದ ಮೇಲೆ ಚಿಕ್ಕಾಸು ಬರಬಹುದು, ಆದರೆ ಆ ಗೆಲುವಿನ ಹಾದಿಯಲ್ಲಿ ಹಣವಿಲ್ಲದಿದ್ದರೆ ಅಲ್ಲಿಯೇ ಸೋಲುವವರೇ ಜಾಸ್ತಿ. ಕ್ರೀಡೆಯನ್ನೇ ನೆಚ್ಚಿಕೊಂಡು ಬದುಕು ಕಟ್ಟಿಕೊಳ್ಳಲಾಗುವುದಿಲ್ಲ, ನೀವು ಒಳ್ಳೆಯ ಓಟಗಾರ ಎಂದರೆ ನೀವು ಪದಕವನ್ನೆಲ್ಲ ಗೆದ್ದರೆ ಮಾತ್ರ ಏನೋ ನಾಲ್ಕಾಸು ಸಿಗಬಹುದು. ಅಲ್ಲಿಯವರೆಗೆ? ನಮ್ಮಲ್ಲಿ ಬಹುತೇಕ ಕ್ರೀಡೆಯನ್ನು ಸರಕಾರವೇ ಪ್ರಾಯೋಜಿಸಬೇಕು. ನಮ್ಮ ದೇಶದಲ್ಲಿ ಕ್ರಿಕೆಟ್ ಬಿಟ್ಟರೆ ಉಳಿದವಕ್ಕೆ ಪ್ರಯೋಜಕರೇ ಇಲ್ಲ. ಚೆಸ್ ಅಂತಾರಾಷ್ಟ್ರೀಯ ಮಾನ್ಯತೆ ಪಡೆದ ವಿಶ್ವನಾಥನ್ ಆನಂದ್‌ನಂಥವರೇ ಪ್ರಯೋಜಕತೆಗೆ ಕಷ್ಟಪಟ್ಟಿದ್ದಿದೆ. ಹೀಗಿರುವಾಗ ಕ್ರಿಕೆಟ್ ಬಿಟ್ಟು ಇನ್ನುಳಿದ ಕ್ರೀಡೆಯನ್ನು ಉದ್ಧರಿಸುವುದು ಅಸಾಧ್ಯ. ಹಾಗಾಗಿ ಸರಕಾರೀ ಪ್ರಯೋಜಕತೆ ಮಾತ್ರ ತಕ್ಕಮಟ್ಟಿಗೆ ಪೋಷಿಸಬಲ್ಲದು. ಅಲ್ಲೋ, ರಾಜಕೀಯ, ವಸೂಲಿತನ, ಜಾತಿ ಮೊದಲಾದ ಅಪಸವ್ಯಗಳು. ಇನ್ನು ಮೂಲಸೌಕರ್ಯದ ನವೀಕರಣಕ್ಕೂ ಹಣ ವ್ಯಯಿಸಬೇಕು. ಅಲ್ಲಿನ ಟೆಂಡರುಗಳ ಕಥೆಯ ಬಗ್ಗೆ ವಿವರಿಸುವುದು ಬೇಕಿಲ್ಲವೆನಿಸುತ್ತದೆ.

ನಮ್ಮಲ್ಲೇನಿದ್ದರೂ ಮಕ್ಕಳು ಡಾಕ್ಟರ್ ಆಗಬೇಕು, ಇಲ್ಲವೇ ಎಂಜಿನಿಯರ್ ಎಂದು ಕುಹಕ ಆಡುವವರನ್ನು ಕಂಡಿದ್ದೇನೆ. ಅದು ಅನಿವಾರ್ಯವೇ ಆಗಿಹೋಗಿದೆ. ಈ ವೃತ್ತಿಪರ ಶಿಕ್ಷಣಕ್ಕೆ ಸೇರಿಕೊಂಡರೆ ಅಲ್ಲಿ ಕ್ರೀಡೆ ಎಂಬುದೇ ಇಲ್ಲ. ನಮ್ಮ ಶಿಕ್ಷಣದಲ್ಲಿ ಕ್ರೀಡೆಗೆ ಎಷ್ಟು ಮಹತ್ವವಿದೆ ಎಂದು ಬಿಡಿಸಿ ಹೇಳಬೇಕಿಲ್ಲ. ಪಿಟಿ ಪೀರಿಯಡ್‌ನಲ್ಲಿ ಗಣಿತ, ವಿಜ್ಞಾನದ ಶಿಕ್ಷಕರು ಕ್ಲಾಸು ತೆಗೆದುಕೊಳ್ಳುತ್ತಾರೆ ಎಂದರೆ ಹೆಡ್ ಮಾಸ್ಟರ್ ಕೂಡ ಅದೇ ಸರಿ ಎಂದು ಪಿಟಿ ಮಾಸ್ಟರ್ ಅನ್ನು ಸುಮ್ಮನಾಗಿಸುತ್ತಾರೆ. ಪಿಟಿ ಪಿರಿಯೆಡ್‌ನಲ್ಲಿ ಅವರು ಆಟವನ್ನು ಕಲಿಯುವುದು ಎಂಬ ಕಲ್ಪನೆಯೇ ಅಪಥ್ಯ. ಬಯಲಿನಲ್ಲಿ ಸೊಕ್ಕಲೊಂದಿಷ್ಟು ಸಮಯ.

ಕರ್ನಾಟಕದಂತಹ ಒಂದು ರಾಜ್ಯದ ಒಬ್ಬ ಮುಖ್ಯಮಂತ್ರಿ ಸರಿಯಾಗಿ ಮನಸ್ಸು ಮಾಡಿದರೆ ರಾಜ್ಯದಿಂದಲೇ ಹತ್ತಾರು ಗೋಲ್ಡ್ ಮೆಡಲ್ ಪಡೆಯುವಷ್ಟು ಕ್ರೀಡಾಪಟುಗಳನ್ನು ತಯಾರಿಸಿಬಿಡಬಹುದು. ಏಕೆಂದರೆ ನಮ್ಮಲ್ಲಿ ಪ್ರತಿಭೆಗೆ, ಮಾನವ ಸಂಪನ್ಮೂಲಕ್ಕೆ ಕೊರತೆಯಿಲ್ಲ. ಒಬ್ಬ ರಾಜ್ಯದ ಕ್ರೀಡಾ ಮಂತ್ರಿ, ಇದನ್ನೊಂದು ಚಾಲೆಂಜ್ ಆಗಿ ಸ್ವೀಕರಿಸಿದಲ್ಲಿ ಇದೆಲ್ಲವೂ ಅಸಾಧ್ಯವೇನಲ್ಲ. ಆದರೆ ನಮ್ಮ ಇಂದಿನ ಕ್ರೀಡಾ ಮಂತ್ರಿ "One District One Game'ಅಂಬಿತ್ಯಾದಿ ಅವೈಜ್ಞಾನಿಕ ನಮೂನಾ ಕಾರ್ಯಕ್ರಮಗಳಲ್ಲಿಯೇ ಹಣ, ಸಮಯ ವ್ಯರ್ಥಮಾಡುತ್ತಿದ್ದಾರೆ. ಪ್ರತೀ ಬಾರಿ ಮಂತ್ರಿಮಂಡಲ ಬದಲಾದಾಗಲೂ ಯೋಜನೆ, ದಿಕ್ಕು ಬದಲಾಗುತ್ತದೆ. ಕ್ರೀಡಾ ಸ್ಟೈಫಂಡ್ ಪಡೆಯುವ ಕೆಲಸಕ್ಕೂ ಕೈಬಿಸಿಮಾಡಬೇಕಾದ ಸ್ಥಿತಿ. ಹಾಗಂತ ನಮ್ಮಲ್ಲಿ ಕ್ರೀಡೆಗೆ ಮೀಸಲಿಡುವ ಹಣವೇನು ಕಡಿಮೆಯಲ್ಲ, ಬರೋಬ್ಬರಿ ಮೂರು ಸಾವಿರ ಕೋಟಿಗೂ ಮಿಕ್ಕಿದ ಬಜೆಟ್ ಅದು!

ಅಯ್ಯೋ ಇದೆಲ್ಲ ಹೇಳುತ್ತಾ ಹೋದರೆ ಅದು ಅರಣ್ಯರೋದನ. ಹೀಗಿರುವಾಗ ಒಂದೇ ಕಂಚು ಗೆದ್ದರೂ ಅದು ಚಿನ್ನಕ್ಕಿಂತ ದೊಡ್ಡ ಸಾಧನೆ. ನಮ್ಮಲ್ಲಿರುವ ಏಕೈಕ ಕೊರತೆ ರಾಜಕೀಯ ಹಿತಾಸಕ್ತಿಯದು. ಆ ಕಾರಣಕ್ಕೇ ಒಂದೆರಡು ಕಂಚಿಗೆ ದೇಶದ ಪ್ರಧಾನಿಯಾದಿಯಾಗಿ ನಾವೆಲ್ಲ ಇಂದು ಇಷ್ಟು ಸಂಭ್ರಮಪಡಬೇಕಾದ ದಯನೀಯ ಸ್ಥಿತಿಗೆ ತಲುಪಿದ್ದೇವೆ. ಸಂಭ್ರಮದ ಭರದಲ್ಲಿ ಇದನ್ನು ಪ್ರಶ್ನಿಸಿದರೆ ಅದು ದೇಶದ್ರೋಹದ ಬಣ್ಣ ಪಡೆಯುತ್ತದೆ. ಒಟ್ಟಾರೆ ಬದುಕಿಗೆ ಕ್ರೀಡೆಯನ್ನು ನೆಚ್ಚಿಕೊಳ್ಳುವುದು ಇಂತಹ ವ್ಯವಸ್ಥೆಯಲ್ಲಿ ಮುರ್ಖತನವೆನಿಸಿಬಿಟ್ಟಿದೆ. ನಮ್ಮಲ್ಲಿ ಕ್ರೀಡೆ ಎಂದರೆ ಕ್ರಿಕೆಟ್. ಎರಡನೇ ದೊಡ್ಡ ಕ್ರೀಡೆ, ಮನರಂಜನೆ ಎಂದರೆ ರಾಜಕಾರಣ. ರಾಜಕಾರಣವನ್ನೇ ಒಂದು ಕ್ರೀಡೆಯಾಗಿ ಇಟ್ಟದ್ದರೆ ಎಲ್ಲಾ ಗೋಲ್ಡ್ ಮೆಡಲ್‌ಗಳು ನಮಗೇ ಪ್ರಾಪ್ತಿಯಾಗುತ್ತಿದ್ದವೇನೋ! ಛೇ.

ಕನ್ನಡ ಶಾಲೆಗಳಿಗೆ ಯಾಕಿಂತಹ ದುಸ್ಥಿತಿ?

ಹಳ್ಳಿಹಳ್ಳಿಗಳಲ್ಲಿ ಗಲ್ಲಿಗಲ್ಲಿಗಳಲ್ಲಿ ಖಾಸಗಿ ಇಂಗ್ಲೀಷ್ ಕಾನ್ವೆಂಟ್‌ಗಳು ತಲೆ ಎತ್ತಿರುವುದು ಹಾಗೂ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿ ಕಲಿತರಷ್ಟೇ ನಮ್ಮ ಮಕ್ಕಳು ವಿದ್ಯಾವಂತರು ಎನ್ನುವ ತೀರ್ಮಾನಕ್ಕೆ ಬಂದಿರುವ ಪೋಷಕರು ಸರಕಾರಿ ಕನ್ನಡ ಶಾಲೆಗಳನ್ನು ನಿರ್ಲಕ್ಷಿಸುತ್ತಿದ್ದಾರೆ.

ಅಭಿಮತ

ಮಿರ್ಲೆಚಂದ್ರಶೇಖರ
vveditoped@gmail.com

ನನ್ನದೊಂದು ಚಾಳಿ ಇದೆ, ಅದು ಕೆಟ್ಟದ್ದೆನ್ನಿಲ್ಲವೇ ಕೆಲವರಿಗೆ ಒಳ್ಳೆಯದು ಎನಿಸಬಹುದು, ಅದು ವಿದ್ಯೆ ಕಲಿತ ಶಾಲೆ ಅಥವಾ ಕರ್ತವ್ಯ ನಿರ್ವಹಿಸುತ್ತಿದ್ದ ಸರಕಾರಿ ಕಚೇರಿ ಇರಬಹುದು ಒಮ್ಮೆ ವರ್ಗಾವಣೆಯಾಗಿ ಅಲ್ಲಿಂದ ಹೊರಟರೆ ಮತ್ತೇ ಬೇಟಿ ಕೊಡುವುದೆಂದರೆ ನನಗೆ ಇಷ್ಟವಾಗದ ಕೆಲಸ. ವಿಶೇಷ ಸಂದರ್ಭಗಳಲ್ಲಿ ತೀರಾ ಅವಶ್ಯಕತೆ ಇದ್ದು ಹಳೆಯ ದಾಖಲೆಗಳನ್ನು ಪಡೆಯಲು ಹೋಗಲೇಬೇಕಿರುವಾಗ ಹೋಗಿದ್ದೇನೆ. ವಯೋನಿವೃತ್ತಿ ಆದ ನಂತರವಂತು ಕರ್ತವ್ಯ ನಿರ್ವಹಿಸಿದ ಕಚೇರಿಗಳಿಗೆ ಹೋಗೇ ಇಲ್ಲ, ಮುಂದೆಯೂ ಹೋಗುವುದೇ ಇಲ್ಲ, ಆದರೆ ಭವಿಷ್ಯದಲ್ಲಿ ನಡೆಯಬಹುದಾದ ಘಟನೆಗಳನ್ನು ಊಹಿಸಲಾಗದು ಏನುಬೇಕಾದರೂ ಆಗಬಹುದು.

ನನ್ನ ಪ್ರಾಥಮಿಕ ಶಾಲೆಯ ಓದು ನಡೆದದ್ದು ಊರಿನ ನಮ್ಮ ಮನೆಯ ಎದುರು ಇರುವ ಶಾಲೆಯಲ್ಲಿ. ಊರಿಗೆ ಆಗಾಗ್ಗೆ ಹೋಗುತ್ತಿರುತ್ತೇನೆ ಆದರೆ ಮನಸ್ಸಿನೊಳಗೆ ತುಡಿತವಿದ್ದರೂ ಒಮ್ಮೆಯೂ ಶಾಲಾ ಆವರಣಕ್ಕೆ ಹೋಗುವ ಮನಸ್ಸು ಮಾಡಿರಲಿಲ್ಲ, ಕಾಂಪೌಂಡ್ ಹೊರಗಿನ ದೃಶ್ಯವನ್ನು ಮಾತ್ರ ಜಗುಲಿಯ ಮೇಲೆ ಅಥವಾ ಶಾಲಾ ಕಾಂಪೌಂಡ್ ಮೇಲೆ ಕುಳಿತು ಬಾಲ್ಯದ ನೆನಪುಗಳನ್ನು ಮನಸ್ಸಿನ ಪರದೆಯಲ್ಲಿ ಕಟ್ಟಿಕೊಳ್ಳುತ್ತಾ ನೋಡುತ್ತಿದ್ದೆ. ಆವರಣದ ಸುತ್ತಲೂ ಮರಗಳು ಬೆಳದು ನಿಂತಿರುವುದರಿಂದ ಒಳಗಿನ ಕಟ್ಟಡಗಳು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ, ಒಮ್ಮೆ ಎಂದಿನಂತೆ ಊರಿಗೆ ಹೋಗಿದ್ದಾಗ ಸಂಜೆ ಸೂರ್ಯನ ಬೆಳಕನ್ನು ಕತ್ತಲೆಯು ನುಂಗುತ್ತಿದ್ದ ಸಮಯ, ನಾನು ಬಾಲ್ಯದಲ್ಲಿ ಆಟವಾಡುತ್ತಿದ್ದ ಶಾಲಾ ಮೈದಾನವನ್ನು ನೋಡಬೇಕೆನಿಸಿ ಒಳಹೊಕ್ಕಿದೆ, ಚಿಕ್ಕವನಿದ್ದಾಗ ದೊಡ್ಡದಾಗಿ ಕಾಣುತ್ತಿದ್ದ ಮೈದಾನ ನನಗೆ ಚಿಕ್ಕದಾಗಿ ಕಾಣತೊಡಗಿತು, ಕೊಕ್ಕೋ, ಸೂರ್‌ಚೆಂಡು, ಜೂಟಾಟ ಹಾಗೂ ಡ್ರಿಲ್ ಮಾಡುತ್ತಿದ್ದ ಜಾಗವದು, ಸಂಜೆ ಆಯಿತೆಂದರೆ ದೊಡ್ಡವರು ವಾಲಿಬಾಲ್ ಆಟವನ್ನು ರಾಜ್ಯ ಮಟ್ಟಕ್ಕೆ ಸಮನಾಗಿ ಅದ್ಭುತವಾಗಿ ಆಡುತ್ತಿದ್ದರು, ನಾನು ಗೆಳೆಯರ ಜತೆ ತಪ್ಪದೆ ಅದನ್ನು ನೋಡುತ್ತಿದ್ದೆ.

ನನ್ನ ಕಾಲದ ಶಾಲಾ ಕಟ್ಟಡಗಳು ಬದುಕಿನ ಅಂತ್ಯಕಾಲದಲ್ಲಿವೆ, ಇಂದೋ ನಾಳೆಯೋ ಬಿದ್ದುಹೋಗುವ ಸ್ಥಿತಿಯಲ್ಲಿವೆ. ಕಿರಿಯ ಪ್ರಾಥಮಿಕ ಶಾಲೆ 1904 ರ ಅವಧಿಯಲ್ಲಿ ಮತ್ತು ಹಿರಿಯ ಪ್ರಾಥಮಿಕ ಶಾಲೆಯು 1950ರಲ್ಲಿ ಕಟ್ಟಿರುವುದಾಗಿ ಕೇಳಿದ್ದೇನೆ. ಮನಸ್ಸು ತಡೆಯಲಾರದೆ ಕುತೂಹಲದಿಂದ ನಾನು ಕುಳಿತ ಕೊಠಡಿಗಳನ್ನು ಬಾಗಿಲುಗಳು ಇಲ್ಲದ ಮುರಿದ ಕಿಟಿಕಿ ಗಳಿಂದ ಇಣುಕುತ್ತಿದ್ದಂತೆ ನೆನಪುಗಳು ಚುಚ್ಚಲು ಪ್ರಾರಂಭಿಸಿ ದವು, ಅನಾಥ ಮಕ್ಕಳಂತೆ ಪಾಲನೆಪೋಷಣೆಗಳಿಲ್ಲದ ಕಟ್ಟಡಗಳನ್ನು ನೋಡುನೋಡುತ್ತಿದ್ದಂತೆ ನನ್ನ ಜೀವ ದಸಕ್ ಎಂದಿತು. ಕಿರಿಯ ಪ್ರಾಥಮಿಕ ಶಾಲೆ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದೆ, ಕಿಟಕಿಬಾಗಿಲುಗಳು ಮುರಿದು ಬಿದ್ದಿವೆ, ಬಾಗಿಲುಗಳಿದ್ದರೂ ಅವುಗಳು ಕರ್ತವ್ಯದಿಂದ ವಯೋನಿವೃತ್ತಿಗೊಂಡಿವೆ, ಮೆಲ್ಛಾವಣಿಯಲ್ಲಿ ಕೆಂಪನೆ ಚೆಂದವಾಗಿ ಕಾಣುತ್ತಿದ್ದ ಮಂಗಳೂರು ಹೆಂಚುಗಳು ಬಿದ್ದುಹೋಗಿವೆ, ಬಹುಶಃ ಮಳೆ ಬಂದರೆ ಮಕ್ಕಳು ಕೊಡೆ ಹಿಡಿದು ಕುಳಿತುಕೊಳ್ಳುತ್ತಿರಬಹುದು, ಕಟ್ಟಡವು ಸುಣಬಣ್ಣ ಕಂಡು ಎಷ್ಟು ಕಾಲವಾಗಿದೆಯೋ, ಕಿರಿಯ ತಮ್ಮನದು ಈ ರೀತಿಯಾದರೆ ಇನ್ನು ಹಿರಿಯಣ್ಣನ ಸ್ಥಿತಿ ಇದಕ್ಕಿಂತ ಭಿನ್ನವೇನು ಇಲ್ಲ, ಹಿರಿಯ ಪ್ರಾಥಮಿಕ ಶಾಲೆಯು ಆರ್‌ಸಿಸಿ ಕಟ್ಟಡವಾದರೂ ವಾರ್ಷಿಕ ನಿರ್ವಹಣೆ ಇಲ್ಲದೆ ಸೊರಗಿದೆ.

ಆ ನನ್ನ ಅಕ್ಷರದೇಗುಲದ ಆವರಣದ ಸುತ್ತಾ ನೋವಿನಿಂದ ಒಂದು ಸುತ್ತು ಪ್ರದಕ್ಷಿಣೆ ಹಾಕಿದೆ ಮೈ ಆಟೋಗ್ರಾಫ್ ಸಿನಿಮಾದ ನಾಯಕ ತನ್ನ ಬಾಲ್ಯ ಕಳೆದ ಸ್ಥಳಗಳಿಗೆ ಬೇಟಿ ನೀಡಿ ಅನುಭವಿಸಿದ ನೋವಿನ ಹಾಗೆ,

ಅದು ಸಿನಿಮಾದಲ್ಲಿನ ಕಲ್ಪನಾ ಲೋಕ, ಆದರೆ ಇಲ್ಲಿ ವಾಸ್ತವವಾಗಿ ಹೃದಯ ಹಿಂಡಿದ ನೋವನ್ನು ಅನುಭವಿಸಿದೆ. 'ಸವಿ ಸವಿ ನೆನಪು ಸಾವಿರ ನೆನಪು ಸಾವಿರ ಕಾಲಕು ಸವೆಯದ ನೆನಪು, ಎದೆಯಾಳದಲಿ ಬಚ್ಚಿಕೊಂಡಿರುವ ಅಚ್ಚಳಿಯದ ನೂರೊಂದು ನೆನಪು'ಗಳು ಕಾಡಿ ನನ್ನ ಕಣ್ಣಲಿ ಕಣ್ಣೀರು ಸುರಿದಿದ್ದು ಸುಳ್ಳಲ್ಲ.

ಐದು ದಶಕಗಳ ಹಿಂದೆ ಕಿರಿಯ ಪ್ರಾಥಮಿಕ ಶಾಲೆಯ ಹಿಂಭಾಗದಲ್ಲಿ ಅರ್ಧ ಎಕರೆಯಷ್ಟು ಜಾಗದಲ್ಲಿ ಸೊಪ್ಪು ತರಕಾರಿಗಳನ್ನು ಬೆಳೆಯಲಾಗುತ್ತಿತ್ತು, ನಮ್ಮಗಳಿಂದ ಗಿಡಗಳಿಗೆ ನೀರುಣಿಸುವುದರಿಂದ ಹಿಡಿದು ಎಲ್ಲಾ ಕೆಲಸಗಳನ್ನು ಟೀಚರ್‌ಗಳ ಮಾಡಿಸುತ್ತಿದ್ದರಲ್ಲದೆ ಸ್ವತಃ ಅವರೂ ಭಾಗಿಯಾಗುತ್ತಿದ್ದರು, ಹತ್ತಿರದ ಪಿಳಗಾಲುವೆ ಅಥವಾ ಶಾಲೆಯ ಆವರಣದಲ್ಲೇ ಇದ್ದ ತೆರೆದ ಬಾವಿಯಿಂದ ನೀರನ್ನು ಸೇದಿಸಿ ಗಿಡಗಳಿಗೆ ಹಾಕಿಸುತ್ತಿದ್ದರು. ಆ ಸಂಭ್ರವನ್ನು ಅನುಭವಿಸಿ ಕೈತೋಟದ ಸೊಬಗನ್ನು ನೋಡುವುದೇ ಆನಂದ, ಅಂದು ಅಂದಾಜು ಆರನೂರು ಮಕ್ಕಳವರೆಗೆ ಕಲಿಯುತ್ತಿದ್ದ ಕನ್ನಡ ಶಾಲೆಯಲ್ಲಿ ಈಗ ಒಂದರಿಂದ ಏಳನೇ ತರಗತಿಯವರೆಗೆ ಕೇವಲ ಅರವತ್ತು ಮಕ್ಕಳಿದ್ದಾರೆ ಎನ್ನುವುದನ್ನು ಕೇಳಿ ಆ ಕ್ಷಣಕ್ಕೆ ಬಹಳವೇ ಬೇಸರವಾಗಿ ಎದೆಗೆ ಗುಂಡು ಹೊಡೆದಂತಾಯಿತು, ಹತ್ತು ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹಾಗೂ ಕೆಲವೇ ಕಿಮೀ ದೂರದಲ್ಲಿ ಹಲವು ಹಳ್ಳಿಗಳನ್ನು ಸುತ್ತುವರಿದ ನನ್ನೂರು ಶಾಲೆ, ನಾ ಕಲಿತ ಶಾಲೆ ಕಳೆದುಹೋಗುವ ಸ್ಥಿತಿಯಲ್ಲಿ ಇರುವ ನೋವನ್ನು ಹೇಗೆ ಸಹಿಸುವುದು? ಕನ್ನಡ ಶಾಲೆಗಳಿಗೆ ಯಾಕಿಂತಹ ದುಸ್ಥಿತಿ?

ಹಳ್ಳಿಹಳ್ಳಿಗಳಲ್ಲಿ ಗಲ್ಲಿಗಲ್ಲಿಗಳಲ್ಲಿ ಖಾಸಗಿ ಇಂಗ್ಲೀಷ್ ಕಾನ್ವೆಂಟ್‌ಗಳು ತಲೆ ಎತ್ತಿರುವುದು ಹಾಗೂ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿ ಕಲಿತರಷ್ಟೇ ನಮ್ಮ ಮಕ್ಕಳು ವಿದ್ಯಾವಂತರು ಎನ್ನುವ ತೀರ್ಮಾನಕ್ಕೆ ಬಂದಿರುವ ಪೋಷಕರು ಸರಕಾರಿ ಕನ್ನಡ ಶಾಲೆಗಳನ್ನು ನಿರ್ಲಕ್ಷಿಸುತ್ತಿದ್ದಾರೆ. ಪೋಷಕರ ಜತೆಗೆ ಸರಕಾರದ ಆಡಳಿತವು ಕೂಡ ಪರೋಕ್ಷವಾಗಿ ಖಾಸಗಿ ಶಾಲೆಗಳನ್ನು ಪೋಷಿಸುತ್ತಿರವುದು ಸುಳ್ಳಲ್ಲ ಏಕೆಂದರೆ ಬಹುತೇಕ ಖಾಸಗಿ ಶಾಲೆಗಳು ರಾಜಕಾರಣಿಗಳ ಒಡೆತನದಲ್ಲಿವೆ. ಶಿಕ್ಷಣವು ಒಂದು ಲಾಭದಾಯಕ ಉದ್ಯಮವಾಗಿ ಬೆಳೆದಿರುವುದು ಬಹುದೊಡ್ಡ ದುರಂತ. ಭವಿಷ್ಯದಲ್ಲಿ ಉಳಿವಿಗಾಗಿ ದೊಡ್ಡ ಆಂದೋಲನವೇ ನಡೆಯಬೇಕಾಗುತ್ತದೆ, ಪುನಶ್ಚೇತನಗೊಳಿಸಲು ಆಗದಿದ್ದರೆ ಸರಕಾರ ಶಿಕ್ಷಣ ಇಲಾಖೆಯನ್ನು ಸಂಪೂರ್ಣವಾಗಿ ಮುಚ್ಚಿ ಎಲ್ಲವನ್ನೂ ಖಾಸಗೀಕರಣಗೊಳಿಸಿ ಆ ಶಾಲೆಗಳಿಂದ ವಾರ್ಷಿಕ ತೆರಿಗೆ ಕಟ್ಟಿಸಿಕೊಂಡು ಸುಮ್ಮನಿರುವುದು ಲೇಸು.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪ್ರಾಯಶ್ಚಿತ್ತಕ್ಕಾಗಿ ಪಾದಯಾತ್ರೆ

ಬಿಜೆಪಿ ಮತ್ತು ಜೆಡಿಎಸ್‌ನವರು ಆಗಸ್ಟ್ ಮೂರರಿಂದ ಬೆಂಗಳೂರಿನಿಂದ ಮೈಸೂರಿನ ತನಕ ಪಾದಯಾತ್ರೆ ನಡೆಸಲು ಉದ್ದೇಶಿಸಿರುವುದು 2008ರಿಂದ 2013ರ ತನಕ ಮತ್ತು 2019 ರಿಂದ 2023ರ ತನಕ ಅಧಿಕಾರ ನಡೆಸಿದಂತಹ ಬಿಜೆಪಿ ಸರಕಾರದ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ಪಾದಯಾತ್ರೆಯಾಗಿದೆ. ಇವರುಗಳು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ನಡೆದಂತಹ ಹಗರಣಗಳ ಸಂಖ್ಯೆ ಲೆಕ್ಕವಿಲ್ಲ. ಇವುಗಳಿಂದಾಗಿ ರಾಜ್ಯದ ಬೊಕ್ಕಸಕ್ಕೆ ಆದಂತಹ ನಷ್ಟ ಹೇಳುತ್ತಿರುವುದು ಇನ್ನು ಇವರುಗಳು ದೋಚಿರುವ ಹಣದ ಲೆಕ್ಕ ಇಲ್ಲಿಯ ತನಕ ಸಿಕ್ಕಿರುವುದಿಲ್ಲ. ಭ್ರಷ್ಟಾಚಾರವನ್ನು ಇವರ ಕಾಲದಲ್ಲಿ ಮುಗಿಲು ಮುಟ್ಟಿತ್ತು ಗಣಿ ಹಗರಣದಿಂದ ಹಿಡಿದು ಶೇ.40 ಕಮಿಷನ್ ಹಗರಣದ ತನಕ ಬಿಟ್ ಕಾಯಿನ್ ಹಗರಣ ಹೀಗೆ ಪಟ್ಟಿ ಮಾಡುತ್ತಾ ಹೋದರೆ ದೊಡ್ಡ ದೊಡ್ಡ ಪ್ರಕರಣಗಳ ಕಾಲದಲ್ಲಿ ನೆಲೆದಿರುತ್ತದೆ ಆದರೂ ಸಹ ಅತ್ಯಂತ ಪ್ರಾಮಾಣಿಕರು ಶುದ್ಧ ಹಸ್ತರು ಎಂಬ ರೀತಿಯಲ್ಲಿ ತಮ್ಮನ್ನು ತಾವೇ ಘೋಷಿಸಿಕೊಂಡು ಪಾದಯಾತ್ರೆ ಹೊರಟಿರುವುದು ಇವರಿಗೆ ನಾಚಿಕೆಯನ್ನು ತರಿಸಬೇಕಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೂಡಾ ಪ್ರಕರಣದಲ್ಲಿ ಪ್ರತಿಯೊಂದು ವಿಚಾರಕ್ಕೂ ಸ್ಪಷ್ಟೀಕರಣವನ್ನು ಕೊಟ್ಟು ಅಗತ್ಯವಾದ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ. ಯಾವುದೇ ರೀತಿಯಲ್ಲೂ ಅನ್ಯಾಯ ನಡೆದಿಲ್ಲ, ಅಕ್ರಮವೂ ಆಗಿಲ್ಲ, ಹೀಗಿದ್ದ ಮೇಲೆ ಈ ಪ್ರಕರಣವನ್ನು ಹಿಡಿದುಕೊಂಡು ಪಾದಯಾತ್ರೆ ಮಾಡುವುದು ಯಾವ ಪುರುಷಾರ್ಥಕ್ಕಾಗಿ? ಪಾದಯಾತ್ರೆ ಮಾಡಬೇಕಿರುವುದು ಕೇಂದ್ರ ಸರಕಾರದ ವಿರುದ್ಧ ಮತ್ತು ಅವರ ಧೋರಣೆಗಳ ವಿರುದ್ಧ ರಾಜ್ಯ ಸರಕಾರಕ್ಕೆ ನ್ಯಾಯ ಸಮ್ಮತವಾಗಿ ಬರಬೇಕಾದಂತಹ ಪಾಲನ್ನು ಕೊಡದೆ ಮಲತಾಯಿ ಧೋರಣೆ ಅನುಸರಿಸುತ್ತಿರುವ ಕೇಂದ್ರದ ವಿರುದ್ಧ ನಿಮ್ಮ ಪಾದಯಾತ್ರೆ ಯಾಗಲಿ. ರಾಜ್ಯ ಸರಕಾರದ ಅನೇಕ ನೀರಾವರಿ ಯೋಜನೆಗಳಿಗೆ ನಯಾ ಪೈಸೆ ಯನ್ನು ಬಿಡುಗಡೆ ಮಾಡದ ಮತ್ತು ರಾಜ್ಯಕ್ಕೆ ಮುಂಗಡಪ ತ್ರದಲ್ಲಿ ಯಾವುದೇ ರೀತಿಯ ಯೋಜನೆಗಳನ್ನು ಘೋಷಣೆ ಮಾಡದ ಕೇಂದ್ರ ಸರಕಾರದ ವಿರುದ್ಧ ನಡೆಯಲಿ ನಿಮ್ಮ ಪಾದಯಾತ್ರೆ. ಸಿದ್ದರಾಮಯ್ಯನವರ ಜನಪ್ರಿಯತೆ ಮತ್ತು ದಕ್ಷವಾದಂತ ಆಡಳಿತ ವೈಖರಿಯಿಂದ ಹತಾಶಗೊಂಡಿರುವ ಬಿಜೆಪಿ ಮತ್ತು ಅದರ ದೋಸ್ತಿ ಪಕ್ಷಗಳು ಹೊಟ್ಟೆಕಿಚ್ಚಿನಿಂದ ಸಿದ್ದರಾಮಯ್ಯನವರ ವಿರುದ್ಧ ಪಾದಯಾತ್ರೆ ಯನ್ನು ಮಾಡಿ ಅವರ ವರ್ಚಸ್ಸಿಗೆ ಮಸಿ ಬಳಿಯುವಂತಹ ಹುನ್ನಾರವನ್ನ ನಡೆಸುತ್ತಿದ್ದಾರೆ. ರಾಜ್ಯದ ಜನರಿಗೆ ಸಿದ್ದರಾಮ ಯ್ಯನವರ ವ್ಯಕ್ತಿತ್ವ ಮತ್ತು ವಿಚಾರ ತಿಳಿದಿರುತ್ತದೆ ಎಷ್ಟೇ ಸುಳ್ಳು ಹೇಳಿದರೂ, ಏನೇ ಅಪಪ್ರಚಾರ ಮಾಡಿದರೂ, ಸಿದ್ದರಾಮ ಯ್ಯನವರ ವ್ಯಕ್ತಿತ್ವಕ್ಕೆ ನಿಮ್ಮಿಂದ ಸಣ್ಣ ಪ್ರಮಾಣದಲ್ಲೂ ಸಹ ಮಸಿ ಬಳಿಯಲು ಸಾಧ್ಯವಿಲ್ಲ. ಹೋರಾಟಗಳು ಮತ್ತು ಪಾದಯಾ ತ್ರೆಗಳು ನಡೆಯುವ ಸಂದರ್ಭದಲ್ಲಿ ಸಂಘಟಕರು ಮತ್ತು ನಾಯಕರು ಎನಿಸಿ ಕೊಂಡವರು ಆ ವಿಚಾರಗಳ ಮಹತ್ವವನ್ನ ಅರಿತಿರಬೇಕು. ಇಲ್ಲದಿದ್ದರೆ ಬೆಟ್ಟವನ್ನು ಕಡಿದು ಇಲಿಯನ್ನು ಹಿಡಿದ ಸ್ಥಿತಿ ಬಿಜೆಪಿಯವರದಾಗುತ್ತದೆ. ಕೋವಿಡ್ ಸಂದರ್ಭದ ಲ್ಲಿನ ಭ್ರಷ್ಟಾಚಾರ ಒಂದೇ ಒಂದು ಸಾಕು ಬಿಜೆಪಿಯವರ ಮನಸ್ಥಿತಿಯನ್ನ ಮತ್ತು ಹಣದ ದಾಹವನ್ನ ತಿಳಿದುಕೊಳ್ಳಲು

-ಕೆಎಸ್ ನಾಗರಾಜ್

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

• **ಗುರುನಾರಾಯಣ ಪಾಡಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಬಿಜೆಪಿಯ ಪಾದಯಾತ್ರೆಗೆ ಕುಮಾರಣ್ಣ ಯಾವ ರೀತಿಯ ಬೆಂಬಲವನ್ನೂ ಕೊಡಲ್ಲ ಅಂತ ಹೇಳಿದರಲ್ಲ, ಯಾಕೆ?
- **ಬಾಲವೇ ನಾಯಿಯನ್ನು ಕುಣಿಸಿದರೆ ಏನಾಗುತ್ತೆ ಎಂಬುದನ್ನು ತೋರಿಸಬೇಕಲ್ವೇ?!**

• **ಉಲ್ಲಾಸ ಜಲೀಂದ್ರ, ಮಲ್ಲುಂಗೆರೆ**
ಭಟ್ರೇ, ಪ್ರೀತಿಯಲ್ಲಿರುವ ಹುಡುಗರು ವಿಚಿತ್ರವಾಗಿ ವರ್ತಿಸುತ್ತಾರಲ್ವಾ?
- **ಪ್ರೀತಿಯಲ್ಲಿ ಇಲ್ಲದಾಗಲೂ ಅವರು ಹಾಗೇ ವರ್ತಿಸುತ್ತಾರೆ!**

• **ಸಂದೀಪ ನಾಯಕ, ಬೆಂಗಳೂರು**
ಭಟ್ರೇ, ಕೆರೆಯ ನೀರನ್ನು ಕೆರೆಗೆ ಚೆಲ್ಲಿದ್ದನ್ನು ನೋಡಿದ್ರಾ?
- **ಇಲ್ಲ... ಅದರ ಕೊಟ್ಟ ಮುತ್ತನ್ನು ವಾಪಸ್ ಕೊಟ್ಟದ್ದನ್ನು ನೋಡಿದ್ದೇನೆ!**

• **ರಾಜಾ ಮಹೇಶ ನಾಯಕ, ಚಿತ್ರದುರ್ಗ**
ಭಟ್ರೇ, ನಿನ್ನ ಪ್ರೀತಿಯನ್ನು ಸಾಬೀತು ಮಾಡು ಅಂತಾಳಲ್ಲ?
- **ಅದಕ್ಕೂ ಕಾನೂನು ಪಂಡಿತರ ಮೊರೆ ಹೋಗಬೇಕು ಎಂದು ಭಾವಿಸಿದ್ದೀಯಾ?!**

• **ಕೆ.ರಮೇಶ, ವಿಜಯನಗರ**
ಭಟ್ರೇ, 'ಹೆಂಡತಿ ಬೇಕಾಗಿದ್ದಾಳೆ' ಎಂದು ಒಂದು ಜಾಹೀರಾತು ಕೊಡಲೇ?
- **ಬೇಕಾದ್ರೆ ನನ್ನವಳನ್ನು ಕರೆದುಕೊಂಡು ಹೋಗಿ ಅಂದಾರು!**

• **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಈ ವರ್ಷದ ಉತ್ತಮ ನಟ ಪ್ರಶಸ್ತಿಯನ್ನು ಕುಮಾರಣ್ಣನಿಗೆ ಕೊಟ್ಟರೆ ಹೇಗೆ?
- **ನಿರ್ದೇಶನ, ಸಂಭಾಷಣೆ, ಸ್ಕ್ರೀನ್ ಪ್ಲೇ, ಎಡಿಟಿಂಗ್‌ಗೂ ಅವರೇ ಆಯ್ಕೆಯಾಗಿದ್ದಾರಲ್ಲ?!**

• **ರೂಪಾ ಕೆ., ಗೋಕಾಕ**
ಭಟ್ರೇ, ತಂದೆ-ತಾಯಿ ದಿನ ಇದ್ದ ಹಾಗೆ ಅತ್ತೆಗೆ ದಿನಾಚರಣೆ ಏಕಿಲ್ಲ?
- **ಆಗ ನಮ್ಮ ದಿನಾಚರಣೆ ಏಕಿಲ್ಲ ಎಂದು ಸೊಸೆಯಂದಿರು ಕೇಳಬಹುದು!**

• **ಜಯರಾಜ ವಿ.ಪಿ., ಹಾಸನ**
ಭಟ್ರೇ, ಹೆಂಡತಿಗೆ ಆಗಾಗ ಒಡವೆ ಕೊಡಿಸಲೇಬೇಕಾ?
- **ತಿಳ್ಕೊ, ಅದು ನಿನ್ನ ಮಾನಸಿಕ ನೆಮ್ಮದಿಯ ಆಭರಣ!**

• **ಕೆ.ದತ್ತು, ಶಿವಮೊಗ್ಗ**
ಭಟ್ರೇ, ಶಾಸಕರ ಜತೆ ಶಾಸಕಿಯರೂ ರೆಸಾರ್ಟ್‌ಗೆ ಹೋಗುವುದಿಲ್ಲ ಏಕೆ?
- **ರೆಸಾರ್ಟ್‌ನಲ್ಲೇ ಸಮ್ಮಿಶ್ರ ಸರಕಾರ!**

• **ರವಿ ಶೆಟ್ಟಿ, ಬೆಂಗಳೂರು**
ಭಟ್ರೇ, ಮಾವ-ಅತ್ತೆ ಹೆಸರನ್ನು ಮನೆಗೇಕೆ ಇಡುವುದಿಲ್ಲ?
- **ಹೆಂಡತಿ ಹೆಸರನ್ನು ಇಟ್ಟರೆ ಇನ್ನೇನರ್ಥ?!**

ಗುಡ್ಡ ಕುಸಿತದ ದುರಂತದಿಂದ ಕಲಿಯಬೇಕಿದೆ ಪಾಠ!

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ಸಹ್ಯಾದ್ರಿ ಪರ್ವತ ಶ್ರೇಣಿಯ ಮಡಿಲಲ್ಲಿರುವ ವಯನಾಡು ಪ್ರದೇಶದಲ್ಲಿ ಜುಲೈ 30ರಂದು ನಡೆದ ಭೂಕುಸಿತದಿಂದಾಗಿ, ಮುಂಡಕ್ಕೈ, ಚೂರಲ್‌ಮಲ, ಮೇಪ್ಪಾಡಿ ಮೊದಲಾದ ಗ್ರಾಮಗಳೇ ಕೊಚ್ಚಿಹೋಗಿದ್ದು, ಮುನ್ನೂರಕ್ಕೂ ಹೆಚ್ಚು ಜನರು ಮೃತರಾಗಿದ್ದು ನಿಜಕ್ಕೂ ದುಃಖದ ಸಂಗತಿ. ರಾತ್ರಿ ಹೊತ್ತಿನಲ್ಲಿ ನುಗ್ಗಿಬಂದ ಪ್ರವಾಹದಿಂದಾಗಿ ಅಗಲಿದ ಜೀವಗಳಿಗೆ ನಮನಗಳು. ಕೇರಳದ ಈ ಭೂಕುಸಿತವನ್ನು ಮತ್ತು ನಮ್ಮ ರಾಜ್ಯದ ಶಿರಾಡಿ ಘಾಟಿಯಲ್ಲಿ ಕಳೆದ ವಾರ ಮತ್ತು ಈ ವಾರ ನಡೆದಿರುವ ಭೂಕುಸಿತವನ್ನು, 'ಪ್ರಕೃತಿಯ ಮುನಿಸು' ಎಂದು ಸಾರಾಸಗಟಾಗಿ ವರ್ಗೀಕರಿಸುವಂತಿಲ್ಲ. ನಿಜ, ಒಂದೆರಡು ದಿನಗಳ ಅಂತರದಲ್ಲಿ ಭಾರೀ ಪ್ರಮಾಣದ ಮಳೆ ಸುರಿದದ್ದರಿಂದ, ಸಡಿಲಗೊಂಡಿದ್ದ ಮಣ್ಣು ಕುಸಿದಿದೆ; ಬೆಟ್ಟದ ಭಿತ್ತಿಯ ಬೃಹತ್ ಭಾಗಗಳೇ ಜಾರಿಕೊಂಡು ಬಂದಿವೆ, ನದಿಯ ನೀರಿನೊಂದಿಗೆ ಕೆಸರು, ಕಲ್ಲು, ಮರದ ದಿಮ್ಮಿಗಳು ಹರಿದು ಬಂದು, ಮನೆಯಲ್ಲಿ ನಿದ್ರಿಸುತ್ತಿರುವವರನ್ನು ಚಿರನಿದ್ರೆಗೆ ಕಳಿಸಿವೆ. ಈ ದುರಂತದಲ್ಲಿ ವಿಶೇಷ ಮಳೆ ಸುರಿದ ವಿದ್ಯಮಾನವು, (ಎರಡು ದಿನಗಳಲ್ಲಿ ಸುಮಾರು 572 ಮಿ.ಮೀ. ಮಳೆ) ಪ್ರಕೃತಿಯ ಮುನಿಸನ್ನು ತೋರಿಸಿದರೂ, ಈ ಪ್ರಮಾಣದ ಭೂಕುಸಿತ ಉಂಟಾಗಲು, ಮನುಷ್ಯನ ವಿವೇಕರಹಿತ ಕೆಲಸಗಳೂ ಕಾರಣ ಎಂಬುದನ್ನು ಗಮನಿಸಬೇಕಾಗಿದೆ. ಕೇರಳದಲ್ಲಿ ನೂರಾರು ಜನರು ಮೃತಪಟ್ಟಿರುವ ಈ ದುಃಖಕರ ಸನ್ನಿವೇಶದಲ್ಲಿ, ಭೂಕುಸಿತದ ಕಾರಣಗಳನ್ನು ವಿಶ್ಲೇಷಿಸುತ್ತಾ ಹೋಗುವುದು ಅಷ್ಟೇನೂ ಸಮಂಜಸವಲ್ಲದೇ ಇರಬಹುದು. ಆದರೆ ಸಹ್ಯಾದ್ರಿಯ ಕಾಡುಗಳು, ಬೆಟ್ಟ, ಇಳಿಜಾರು, ನದಿ ಎಲ್ಲವೂ ಪಾರಿಸರಿಕವಾಗಿ, ಬಹು ಸೂಕ್ಷ್ಮ ಪ್ರದೇಶಕ್ಕೆ ಸೇರಿದೆ ಎಂಬ ಅರಿವು, ಕಳೆದ ಮೂರುನಾಲ್ಕು ದಶಕಗಳಿಂದಲೂ ಎಲ್ಲರಲ್ಲೂ ಇರುವಾಗ, ಅಂತಹ ಸೂಕ್ಷ್ಮ ಪ್ರದೇಶಗಳನ್ನು ರಕ್ಷಿಸುವುದು ಜನರ ಮತ್ತು ಸರಕಾರದ ಕರ್ತವ್ಯ ಎನಿಸಿತ್ತು, ಆಗಬೇಕಾಗಿತ್ತು. ಆದರೆ, ವಯನಾಡಿನಂತಹ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ, ಇಂತಹ ಒಂದು ಅರಿವನ್ನು ನಿರ್ಲಕ್ಷಿಸಿ, ತಜ್ಞರು ನೀಡಿದ ಎಚ್ಚರಿಕೆಯನ್ನು ತಿರಸ್ಕರಿಸಿ, ವಿಜ್ಞಾನಿಗಳು ಈ ಕುರಿತು ನೀಡಿದ ವರದಿಗಳನ್ನು ಕುಳಿತುಕೊಳ್ಳುವ ಕುರ್ಚಿಯ ದಿಂಬಿನ ಅಡಿಗೆ ಹಾಕಿಕೊಂಡು, ಪರಿಸರನಾಶವನ್ನು ಮುಂದುವರಿಸಿದ್ದರಿಂದಲೇ, ಇಷ್ಟೊಂದು ಭಾರೀ ಪ್ರಮಾಣದ ದುರಂತ ನಡೆದಿದೆ. ಒಂದು ಸಣ್ಣ ಅಂಕಿಅಂಶವನ್ನು ಉದಹರಿಸುವುದಾದರೆ, 1950 ಮತ್ತು 2018ರ ನಡುವೆ ವಯನಾಡಿನ ಹಸಿರು ಪ್ರದೇಶವು (ಕಾಡು) ಶೇ.62ರಷ್ಟು ಕುಸಿದಿದೆ; ಇದೇ ಅವಧಿಯಲ್ಲಿ ಟೀ ತೋಟದ ವ್ಯಾಪ್ತಿಯು ಶೇ.1800ರಷ್ಟು ಹೆಚ್ಚಿದೆ! ಇಂತಹ ಹಲವು ಅಂಕಿ ಅಂಶಗಳು, ಆ ಜಿಲ್ಲೆಯ ಪರಿಸರನಾಶವನ್ನು ಬಯಲುಮಾಡುತ್ತಿವೆ; ಆ ಅಂಕಿಅಂಶಗಳನ್ನು ಬದಿಗಿಡೋಣ. ಎರಡು ದಶಕಗಳ ಹಿಂದೆಯೇ (31.8.2001) ಗಾಡ್ಗೀಳ್ ವರದಿಯು ಸರಕಾರದ ಕೈ ಸೇರಿತ್ತು, ಪರಿಸರ ಸೂಕ್ಷ್ಮ ವಲಯಗಳಲ್ಲಿ ಯಾವುದೇ ದೊಡ್ಡ ಮಟ್ಟದ ಅಭಿವೃದ್ಧಿ ಕಾರ್ಯ ಮಾಡಬಾರದು ಮತ್ತು ಪ್ರಕೃತಿಯನ್ನು ಆಗ ಇರುವಂತೆಯೇ ಮುಂದುವರಿಸಿಕೊಂಡು ಹೋಗಬೇಕು ಮತ್ತು ಮುಖ್ಯವಾಗಿ ಕಾಡು, ಬೆಟ್ಟ, ಶೋಲಾ, ಹುಲ್ಲುಗಾವಲು, ಬಂಡೆ, ಪರಿಸರ ಸಂಪತ್ತು, ನೆಲದಾಳದ ಖನಿಜ, ತೊರೆ, ನದಿ ಎಲ್ಲವನ್ನೂ ರಕ್ಷಿಸಿಕೊಳ್ಳಬೇಕು, ಇದು ಜನಸಾಮಾನ್ಯರ ಬದುಕು ಸುಗಮವಾಗಲು ಅತಿ ಅಗತ್ಯ ಎಂದು ಆ ವರದಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿತ್ತು. ತನ್ನ ರಾಜ್ಯದ ಉದ್ದಕ್ಕೂ ಸಹ್ಯಾದ್ರಿಯ ಶ್ರೇಣಿಯನ್ನು ಹೊಂದಿದ್ದ ಕೇರಳ ರಾಜ್ಯವು, ಆ ವರದಿಯನ್ನು ಸಂತಸದಿಂದ ಸ್ವೀಕರಿಸಿ, ಕ್ರಿಯಾತ್ಮಕವಾಗಿ ಅಳವಡಿಸಿಕೊಳ್ಳಬೇಕಿತ್ತು – ತನ್ನ ರಾಜ್ಯದ ಸಂಪತ್ತನ್ನು ಕಾಪಾಡಲು ಆ ರಾಜ್ಯದ ಪ್ರಭುತ್ವಕ್ಕೆ ಗಾಡ್ಗೀಳ್ ವರದಿಯು ಒಂದು ಅಸ್ತ್ರವಾಗಬೇಕಿತ್ತು; ವರದಿಯ ಪ್ರಮುಖ ಅಂಶಗಳನ್ನು ಮುಂದಿಟ್ಟು ಜನರ ಮನವೊಲಿಸುವುದು ಸುಲಭವಾಗುತ್ತಿತ್ತು.

ಆದರೆ, ತನ್ನ ರಾಜ್ಯದ ಅರಣ್ಯ ಪ್ರದೇಶದಲ್ಲಿ, ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಸಾಕಷ್ಟು ದಟ್ಟವಾದ ಜನವಸತಿ ಇದೆ ಎಂಬ ಕಾರಣವೊಡ್ಡಿ, ಕೇರಳ ಸರಕಾರವೇ ಗಾಡ್ಗಿಲ್ ವರದಿಯನ್ನು ವಿರೋಧಿಸಿತ್ತು. ಕೊನೆಯ ಪಕ್ಷ ಅಲ್ಲಿನವರು ತಮ್ಮ ಪ್ರಾಕೃತಿಕ ಸಂಪತ್ತನ್ನು ಅಂದು ಇದ್ದ ಸ್ಥಿತಿಯಲ್ಲೇ ಕಾಪಾಡಿಕೊಂಡು, ಆ ಪ್ರಾಕೃತಿಕ ಸಂಪತ್ತಿನ ಸಹಜ ಶ್ರೀಮಂತಿಕೆಯನ್ನೇ

ಪ್ರವಾಸೋದ್ಯಮಕ್ಕೆ ಬಳಸುವ ಮನಸ್ಸನ್ನಾದರೂ ಆಗ, ಅಂದರೆ 2001ರ ದಶಕದಲ್ಲಿ ಮಾಡಬಹುದಿತ್ತು – ಜನವಸತಿ ಅದರ ಪಾಡಿಗೆ ಇರಲಿ, ಜತೆಯಲ್ಲೇ, ಸಹಜ ಕಾಡನ್ನು, ಕುರುಚಲು ಕಾಡನ್ನು ರಕ್ಷಿಸಿಕೊಂಡು, ಹಳೆಕಾಲದ ಮರಗಳನ್ನು ಕಾಪಾಡಿಕೊಂಡು, ಬೆಟ್ಟದ ಇಳಿಜಾರುಗಳನ್ನು ಜತನ ಮಾಡಿಕೊಂಡು, ಮಳೆ ಸುರಿದಾಗ ಮಣ್ಣಿನ ಸವಕಳಿಯನ್ನು ದಕ್ಷವಾಗಿ ತಡೆಯುವ ಮರಗಳ ಬೇರಿನ ಜಾಲವನ್ನು ಕಾಪಾಡಿಕೊಂಡು ಬಂದಿದ್ದರೆ, ಪ್ರಾಯಶಃ ಮೊನ್ನೆ ನಡೆದಂತಹ ಭೀಕರ ದುರಂತವನ್ನು ತಡೆಯಬಹುದಿತ್ತು; ಕೊನೆಯ ಪಕ್ಷ ದುರಂತದ ತೀವ್ರತೆಯನ್ನು ಬಹುವಾಗಿ ಕಡಿಮೆಮಾಡಬಹುದಿತ್ತು. ಗಾಡ್ಗಿಲ್ ವರದಿಯ ಪ್ರಮುಖ ಅಂಶಗಳನ್ನಾದರೂ ಗುರುತಿಸಿಕೊಂಡು, ಇದನ್ನು ಅನುಸರಿಸಿದರೆ ತಮ್ಮ ರಾಜ್ಯದ ಭವಿಷ್ಯಕ್ಕೆ, ಜನರ ಹಿತಕ್ಕ ಲಾಭವಿದೆ ಎಂಬ ಸೂತ್ರವನ್ನು ಅಳವಡಿಸಿಕೊಂಡು, ಸಹ್ಯಾದ್ರಿ ಶ್ರೇಣಿಯ ನಡುವೆ ವಾಸವಿದ್ದ ಜನರನ್ನು, ಹಳ್ಳಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಪರಿಸರವನ್ನು ಕಾಪಾಡಿಕೊಂಡು ಬಂದಿದ್ದರೆ, ಈ ಮಟ್ಟದ ದುರಂತ ಸಂಭವಿಸುತ್ತಿರಲಿಲ್ಲ. ಅಂತಹದ್ದೊಂದು ಎಚ್ಚರಿಕೆ ತೆಗೆದುಕೊಂಡಿದ್ದರೆ, ಈ ವಾರ ಒಮ್ಮೆಗೇ ಸುರಿದ ಅಪಾರ ಪ್ರಮಾಣದ ಮಳೆಯಿಂದಾಗಿ ಪ್ರವಾಹ ಬರುತ್ತಿತ್ತು ನಿಜ, ಮತ್ತು ನದಿ ತೀರದ ಹಳ್ಳಿಗಳನ್ನು ಪ್ರವಾಹ ಕಾಡುತ್ತಿತ್ತು ನಿಜ; ಆದರೆ, ಈಗ ನಡೆದಂತಹ ಭೀಕರ ಎನಿಸುವ ದುರಂತ ಸಂಭವಿಸುತ್ತಿರಲಿಲ್ಲ; ಜುಲೈ ಮೂವತ್ತರಂದು ನಡೆದ ಈ ಭೀಕರ ದುರಂತವನ್ನು ದೃಶ್ಯ ಮಾಧ್ಯಮಗಳು ವರದಿ ಮಾಡುವಾಗ, ನದಿಯಲ್ಲಿ ತೇಲಿ ಬಂದು ಹಲವು ಕಡೆ ರಾಶಿಬಿದ್ದ ಸಾವಿರಾರು ಮರಗಳನ್ನು ತೋರಿಸಿದವು; ಪರಿಸರವನ್ನು ಸಹಜವಾಗಿ ರಕ್ಷಿಸಿಕೊಂಡಿದ್ದರೆ, ಅಷ್ಟೊಂದು ಪ್ರಮಾಣದ ಮರದ ದಿಮ್ಮಿಗಳು, ಬೇರುಗಳು ತೇಲಿಬರುತ್ತಿರಲಿಲ್ಲ, ಸಾವಿರಾರು ಬಂಡೆಗಳು ನೀರಿನ ಜತೆ ಬಂದು ಮನೆಗಳಿಗೆ ಬಡಿಯುತ್ತಿರಲಿಲ್ಲ – ಏಕೆಂದರೆ, ಸಹಜ ಕಾಡಿನಲ್ಲಿ ಬೆಳೆದ ಮರಗಳು, ಗಿಡಗಳು, ಕುರುಚಲು ಪೊದೆಗಳು ಮಣ್ಣನ್ನು ಹಿಡಿದಿಡುತ್ತಿದ್ದವು, ದಟ್ಟವಾಗಿ ಬೆಳೆದಿರಬಹುದಾದ ಮರಗಿಡಗಳ ಬೇರಿನ ಜಾಲವು, ಮಳೆ ಸುರಿದಾಗ ಮಣ್ಣು ಕೊರೆಯದಂತೆ ದಕ್ಷವಾಗಿ ತಡೆಯುತ್ತಿದ್ದವು, ಬಂಡೆಗಳು ಜಾರಿ ತೇಲಿ ಹೋಗದಂತೆ ಹಿಡಿದಿಡುತ್ತಿದ್ದವು. ಆದರೆ, ಆ ಪ್ರವಾಹದ ಜತೆ ತೇಲಿಬಂದ ಸಾವಿರಾರು ಮರದ ಕಾಂಡಗಳನ್ನು, ದಿಮ್ಮಿಗಳನ್ನು, ಬೇರುಗಳನ್ನು, ಮರದ ತುಂಡುಗಳನ್ನು ಕಂಡಾಗ ಅನಿಸುವುದೆಂದರೆ, ಕೇರಳದ ಆ ಕಾಡುಪ್ರದೇಶದಲ್ಲಿ ಅವ್ಯಾಹತವಾಗಿ ಮರಗಳನ್ನು ಕಡಿದು ಹಾಕಲಾಗಿದೆ, ಕುರುಚಲು ಗಿಡಗಳನ್ನು ನಾಶಮಾಡಲಾಗಿದೆ, ಆದ್ದರಿಂದಲೇ ಬೇರುಗಳ ಜಾಲ ನಾಶವಾಗಿದೆ, ಮತ್ತು ಗುಡ್ಡ ಕುಸಿತದ ತೀವ್ರತೆ ಅಧಿಕಗೊಂಡು, ನೀರಿನ ಪ್ರವಾಹದ ಜತೆಯಲ್ಲೇ ಸಾವಿರಾರು ಮರಗಳು, ಬಂಡೆಗಳು ಕೊಚ್ಚಿಕೊಂಡು ಬಂದು, ಹಳ್ಳಿಯ ಮನೆಗಳಿಗೆ ನುಗ್ಗಿವೆ.

ಈಚಿನ ದಶಕಗಳಲ್ಲಿ 'ಅರಣ್ಯ ಬೆಳೆಸುವುದು' ಎಂಬ 'ಕಾಮಗಾರಿ'ಯಲ್ಲಿ ಅಕೇಶಿಯಾ ಮೊದಲಾದ, ಬೇರಿನ ಜಾಲವಿಲ್ಲದ ಮರಗಳನ್ನು ಬೆಳೆಸುವ ಖಯಾಲಿಯೂ, ಈ ಗುಡ್ಡ ಕುಸಿತಕ್ಕೆ ತನ್ನ ಪಾಲಿನ ಕೊಡುಗೆಯನ್ನು ನೀಡಿರಬಹುದು. ಬೇರೊಂದು ಕಡೆ ಗುಡ್ಡ ಕುಸಿತವನ್ನು ಅಧ್ಯಯನ ಮಾಡಿದ ತಜ್ಞರು ಇಂತಹ ವಿದ್ಯಮಾನವನ್ನು ದಾಖಲಿಸಿದ್ದಾರೆ – ಅಟೇಶಿಯಾ ಮೊದಲಾದ 'ಆಧುನಿಕ' (ಹಣ ತಂದುಕೊಡುವ) ಮರಗಳನ್ನು ಬೆಳೆಸಿದ್ದ ಜಾಗವು ಪ್ರವಾಹಕ್ಕೆ ಕುಸಿದು ಕೊಚ್ಚಿಹೋಗಿತ್ತು, ಅವುಗಳ ನಡುವೆ ನಿಂತಿದ್ದ ಒಂದು ಆಲ ಮರದ ಬುಡದಲ್ಲಿ ಮಣ್ಣು ಭದ್ರವಾಗಿತ್ತು, ಕುಸಿತ ಉಂಟಾಗಿರಲಿಲ್ಲ. ಏಕೆಂದರೆ, ಆಲದ ಮರದ ಬೇರುಗಳು ಮಣ್ಣನ್ನು ಗಟ್ಟಿಯಾಗಿ ತಡೆಹಿಡಿದಿದ್ದವು. ಇಂತಹ ಪಾಠಗಳು ಕೇರಳದ ಸರಕಾರಕ್ಕೆ ಮತ್ತು ಅಲ್ಲಿನ ಅರಣ್ಯ ತಜ್ಞರಿಗೆ ಗೊತ್ತಿಲ್ಲವೆಂದೇನಲ್ಲ – ಹೆಚ್ಚು ಮಳೆಯಾಗುವ ಕೇರಳ, ಕರ್ನಾಟಕದಂತಹ ಪ್ರದೇಶಗಳಲ್ಲಿ ಪರಿಸರ ಎಷ್ಟು ಸೂಕ್ಷ್ಮ ಮತ್ತು ಯಾವ ರೀತಿ ಆ ಪರಿಸರವನ್ನು ಕಾಪಾಡಿಕೊಳ್ಳಬಹುದು ಎಂಬುದಕ್ಕೆ ಸಿದ್ಧಸೂತ್ರಗಳೇ ಇವೆ, ಟೈಮ್ ಟೆಸ್ಟೆಡ್ ಉದಾಹರಣೆಗಳೂ ಇವೆ. ಅಂತಹ ಕ್ರಮಗಳನ್ನು ಅಳವಡಿಸಿಕೊಂಡಿದ್ದರೆ, ಕೇರಳದ ಮುಂಡಕ್ಕೈ ಗ್ರಾಮ ಇಂದು ಮುಕ್ಕಾಲು ಭಾಗವಾದರೂ ಉಳಿದಿರುತ್ತಿತ್ತು. ಅಂತಹ ಸಿದ್ಧ ಸೂತ್ರಗಳನ್ನು ಮತ್ತು ಗಾಡ್ಗಿಲ್ ವರದಿಯನ್ನು ಸಾರಾಸಗಟಾಗಿ ಅನುಸರಿಸಲು ಅಸಾಧ್ಯ ಎನಿಸಿದ್ದರೆ, ಕೊನೆಯ ಪಕ್ಷ ಅದರ ಪ್ರಮುಖ ಅಂಶಗಳನ್ನಾದರೂ ಅಳವಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದರೆ ಸಾಕಿತ್ತು, ಮೊನ್ನೆ ನಡೆದ ಗುಡ್ಡ ಕುಸಿತದ ತೀವ್ರತೆಯನ್ನು ಕಡಿಮೆ ಮಾಡಬಹುದಿತ್ತು, ದುರಂತದಿಂದಾದ ನಷ್ಟವನ್ನು ಕಡಿಮೆಮಾಡಬಹುದಿತ್ತು. ನಿಜ, ಕೇರಳದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದ್ದು, ಜನರಿಗೆ ಅದರಿಂದ ಸಾಕಷ್ಟು ಉದ್ಯೋಗಾವಕಾಶಗಳೂ ದೊರಕಿವೆ. ಗಾಡ್ಗಿಲ್ ವರದಿಯ ಶಿಫಾರಿಸಿನಂತೆ (ಅಥವಾ ಅದಕ್ಕಿಂತ ತುಸು ಕಡಿಮೆ ಬಿಗಿ ಎನಿಸಿದ ಕಸ್ತೂರಿ ರಂಗನ್ ವರದಿಯಲ್ಲಿನಂತೆ) ಕ್ರಮಗಳನ್ನು ಕೈಗೊಂಡಿದ್ದರೂ, ಮಿತ ಪ್ರಮಾಣದ ಕೃಷಿ ಮತ್ತು ಪ್ರವಾಸೋದ್ಯಮವನ್ನು ಸುಸಂಬದ್ಧವಾಗಿ, ದೀರ್ಘಕಾಲೀನ ಲಾಭದ ದೃಷ್ಟಿಯಲ್ಲಿ, ನಾಡಿನ ಹಿತದೃಷ್ಟಿಯಲ್ಲಿ ಮುಂದುವರಿಸಿಕೊಂಡು ಹೋಗುವ ಅವಕಾಶವಿದೆ. ಉದಾ: ರಕ್ಷಿತ ವಲಯದ ಹೊರಬಾಗದಲ್ಲಿ ಹೋಂಸ್ಟೇ, ಲಾಜ್, ರೆಸಾರ್ಟ್‌ಗಳಿಗೆ ಅವಕಾಶ ನೀಡಿ, ಅಲ್ಲಿ ತಂಗುವ ಪ್ರವಾಸಿಗರು ಸೂಕ್ತ ಗೈಡ್‌ಗಳ ಮಾರ್ಗದರ್ಶನದಲ್ಲಿ ನಿಗದಿತ ಜಾಗಗಳಿಗೆ ಭೇಟಿ ನೀಡಿ, ಪರಿಸರ ಸೌಂದರ್ಯವನ್ನು ಆಸ್ವಾದಿಸಲು, ಜಲಪಾತದ ನೀರಿಗೆ ಮೈಒಡ್ಡಲು ಅವಕಾಶ ನೀಡಬಹುದು ಮತ್ತು ಆ ಮೂಲಕ ಪರಿಸರಕ್ಕೆ ಹಾನಿಯಾಗದಂತೆ, ಪ್ರವಾಸೋದ್ಯವನ್ನು ಬೆಳೆಸಲು ಅವಕಾಶವಿದೆ. ಆದರೆ, ಕೇರಳದಂತಹ ರಾಜ್ಯದ ಜೀವಾಳ ಎನಿಸಿರುವ 'ಪರಿಸರ'ವನ್ನು ರಕ್ಷಿಸಲೆಂದೇ ಸಿದ್ಧವಾದ ಗಾಡ್ಗೀಳ್ ವರದಿಯ ಶಿಫಾರಸ್ಸುಗಳನ್ನು ತೀವ್ರವಾಗಿ ತಿರಸ್ಕರಿಸಿ, ತನ್ನ ರಾಜ್ಯದ ಅಮೂಲ್ಯ ಸಂಪತ್ತು ಎನಿಸಿರುವ ಕಾಡು, ಬೆಟ್ಟ, ಶೋಲಾ, ಹುಲ್ಲುಗಾವಲು, ಬಂಡೆಯ ಇಳಿಜಾರು, ಪರ್ವತ, ತೊರೆ, ನದಿಗಳನ್ನು 'ಮಿತಿ' ಮೀರಿ ಎಕ್ಸ್‌ಪ್ಲಾಯಿಟ್ ಮಾಡಲು ಸರಕಾರವೇ ಅವಕಾಶ ನೀಡುವುದಿದೆಯಲ್ಲಾ, ಅದು 21ನೆಯ ಶತಮಾನದ ಮತ್ತೊಂದು ದುರಂತ; ಮತ್ತು ರಾಜ್ಯವೊಂದು ತನ್ನ ಅಮೂಲ್ಯ ಪರಿಸರವನ್ನು ಸೂಕ್ತವಾಗಿ ರಕ್ಷಿಸಲು ವಿಫಲಗೊಂಡಾಗ, ಮೊನ್ನೆ ನಡೆದಂತಹ ಭೂಕುಸಿತಗಳು ಘಟಿಸಿ, ಆ ಸುತ್ತಲಿನ ಜನರ ಬದುಕನ್ನು ನಾಶಪಡಿಸಬಲ್ಲವು. ನಿಜ, ಒಂದೆರಡು ವಾರಗಳಲ್ಲಿ ಸುರಿಯಬಹುದಾದ ಮಳೆಯು ಎರಡೇ ದಿನದ ಅವಧಿಯಲ್ಲಿ (272 ಮಿಮೀ) ಸುರಿದರೆ, ಆ ನೀರನ್ನು ಸರಾಗವಾಗಿ ಸಾಗಿಸಲು ನದಿಗಳೂ ವಿಫಲಗೊಂಡು, ಪ್ರವಾಹ ಉಕ್ಕಿ ಬರುತ್ತದೆ, ಬೇರೆ ದಾರಿಯಿಲ್ಲ; ಆದರೆ, ಒಟ್ಟೂ ಪರಿಸರವನ್ನು ಆರೋಗ್ಯಕರವಾಗಿ ಕಾಯ್ದುಕೊಂಡಿದ್ದ ಪಕ್ಷದಲ್ಲಿ, ಪ್ರವಾಹದ ತೀವ್ರತೆ ಕಡಿಮೆ ಇರುತ್ತದೆ, ಭೂ ಕುಸಿತದ ತೀವ್ರತೆಯೂ ಕಡಿಮೆಯಾಗಿರುತ್ತದೆ, ಅದರಿಂದಾಗುವ ನಷ್ಟವೂ ಕಡಿಮೆಯಾಗಿರುತ್ತದೆ.

ನೂರಾರು ಜನರು ಗುಡ್ಡ ಕುಸಿತದಲ್ಲಿ ಮೃತಪಟ್ಟ ಈ ದುಃಖದ ಸನ್ನಿವೇಶದಲ್ಲಿ, ಆ ದುರಂತಕ್ಕೆ ಕಾರಣವೇನಿರಬಹುದು ಎಂದು ಚರ್ಚಿಸುತ್ತಾ ಕೂರುವುದು ಸರಿಯಲ್ಲ, ಆದರೆ, ಜುಲೈ 30ರಂದು ನಡೆದ ಆ ದುರಂತದ ಪ್ರಮಾಣ, ತೀವ್ರತೆ, ಅದು ತಂದ ಆಪತ್ತು, ನಷ್ಟ, ಜೀವಹಾನಿಯನ್ನು ಕಂಡು ಎನ್ನ ಮನ ಮರುಗಿದೆ; ಆ ದುರಂತದಲ್ಲಿ ಮಡಿದವರ ಕುರಿತು ತೀವ್ರ ಸಂತಾಪವಿದೆ, ಮನೆ ಕಳೆದುಕೊಂಡವರ ಸ್ಥಿತಿ ಕಂಡು ವ್ಯಥೆಯಿದೆ. ಕೇರಳದ ಈ ಭೀಕರ ಗುಡ್ಡ ಕುಸಿತದ ದುರಂತದ ಹಿನ್ನೆಲೆಯಲ್ಲಿ, ಕರ್ನಾಟಕದಂತಹ ರಾಜ್ಯಗಳಿಗೆ ಪಾಠವಿದೆ; ನಮ್ಮ ರಾಜ್ಯದಲ್ಲೂ ಸಹ್ಯಾದ್ರಿ ಶ್ರೇಣಿ ಉದ್ದಕ್ಕೆ ಸಾಗಿಹೋಗಿದೆ, ಇಲ್ಲೂ ಪಶ್ಚಿಮ ಘಟ್ಟಗಳ ಕಮರಿಗಳ ನಡುವೆ, ಬೆಟ್ಟದ ತುದಿಯಲ್ಲಿ, ಕಾಡಿನ ಕಿಬ್ಬದಿಯಲ್ಲಿ, ಕಾಡಿನ ಹಳ್ಳಗಳ ದಡದಲ್ಲಿ ಜನವಸತಿಯಿದೆ, ಹಳ್ಳಿಗಳಿವೆ, ಕೃಷಿಭೂಮಿ ಇದೆ, ಈಚಿನ ಒಂದೆರಡು ದಶಕಗಳಲ್ಲಿ ರೂಪುಗೊಂಡ ಸಾವಿರಾರು (ನಿಜ, ಸಾವಿರಾರು) ಹೋಂಸ್ಟೇಗಳಿವೆ, ಹಲವು ರೆಸಾರ್ಟ್‌ಗಳಿವೆ, ಇವು ಸಾವಿರಾರು ಜನರಿಗೆ ಆದಾಯದ ಮೂಲಗಳಾಗಿವೆ – ಇವೆಲ್ಲವೂ ಕೇರಳದ ವಯನಾಡಿನ ಸನ್ನಿವೇಶವನ್ನೇ ಬಹುವಾಗಿ ಹೋಲುತ್ತವೆ – ಈ ಸಂಕೀರ್ಣ ವ್ಯವಸ್ಥೆಯನ್ನು ಮತ್ತು ಜತೆ ಜತೆಗೇ ನಮ್ಮ ರಾಜ್ಯದ ಪರಿಸರವನ್ನು, ಅರಣ್ಯಗಳನ್ನು, ಶೋಲಾ ಪ್ರದೇಶವನ್ನು, ಬೆಟ್ಟಗಳ ಇಳಿಜಾರಿನ ಹುಲ್ಲುಗಾವಲನ್ನು ರಕ್ಷಿಸಿಕೊಳ್ಳುವ ಹೊಣೆ ನಮ್ಮ ಮೇಲಿದೆ, ನಮ್ಮನ್ನಾಳುವ ಪ್ರಭುತ್ವದ ಮೇಲಿದೆ. ಸಕಲೇಶಪುರ ಮತ್ತು ಶಿರಾಡಿ ಸರಹದ್ದಿನಲ್ಲಿ ದಟ್ಟ ಕಾಡಿನ ನಡುವೆ ನಡೆಯುತ್ತಿರುವ ಎತ್ತಿನ ಹೊಳೆ ಕಾಮಗಾರಿಯು (ಇದು ಒಂದು ನದಿ ತಿರುವು ಯೋಜನೆ), ನಮ್ಮ ನಾಡಿನ ಜನಸಾಮಾನ್ಯರ ಬದುಕಿನ ಮೇಲೆ ದುಷ್ಪರಿಣಾಮ ಬೀರದಂತೆ ಎಚ್ಚರಿಕೆ ವಹಿಸಬೇಕಾದ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮ ಸರಕಾರದ ಮೇಲಿದೆ. ಕೇರಳದಲ್ಲಿ ನಡೆದ ಭೀಕರ ಗುಡ್ಡ ಕುಸಿತದ ಹಿನ್ನೆಲೆಯಲ್ಲಿ, ಇಂದು ನಮ್ಮ ರಾಜ್ಯದ ಅರಣ್ಯ ಇಲಾಖೆ, ನೀರಾವರಿ ಇಲಾಖೆ ಮತ್ತು ಸಂಬಂಧಪಟ್ಟ ಇತರ ಇಲಾಖೆಗಳು, ಕಚೇರಿಗಳು ಸೂಕ್ತ ಕ್ರಮಗಳನ್ನು ತೆಗೆದುಕೊಂಡು, ರಾಜ್ಯದ ಹಿತ ಕಾಪಾಡಬೇಕಾದ ತುರ್ತು ಅವಶ್ಯಕತೆಯಿದೆ.

ಪ್ರಸ್ತುತ

ಮೋಹನದಾಸ ಕಿಣಿ, ಕಾಪು

ಯಾವುದೋ ವಿಷಯಕ್ಕೆ ಯಾರದೋ ಕ್ಯಾತೆ!

ಪ್ರಚಾರದ ತೆವಲಿಗೋ ಅಥವಾ ಇನ್ನಾವ ಕಾರಣಕ್ಕೋ ತನಗೆ ಯಾವುದೇ ರೀತಿಯಲ್ಲಿ ಸಂಬಂಧಪಡದೇ ಇದ್ದರೂ ಸಂವಿಧಾನ ನೀಡಿರುವ ವಾಕ್ ಸ್ವಾತಂತ್ರ್ಯವನ್ನು ಬೇಕಾಬಿಟ್ಟಿ ದುರುಪಯೋಗ ಪಡಿಸುವವರ ಸಂಖ್ಯೆ ಹೆಚ್ಚುತ್ತಿದೆ. ಇತ್ತೀಚಿನ ದಿನಗಳಲ್ಲಿ ಸ್ವಲ್ಪ ಕಡಿಮೆಯಾಗಿದೆಯಾದರೂ ರಾಜ್ಯದ ಬಹುತೇಕ ಸಚಿವರು ತಮ್ಮ ಖಾತೆಗೆ ಸಂಬಂಧಪಡದ ವಿಷಯದಲ್ಲಿ ಹೇಳಿಕೆ ನೀಡುವ, ಅಧಿಕಾರಿಗಳಿಗೆ ನಿರ್ದೇಶನ ನೀಡುವ ಪರಿಪಾಠವಿತ್ತು, ಕೆಲವರಲ್ಲಿ ಇನ್ನೂ ಇದೆ. ಅಧಿಕಾರಿಗಳಿಗೆ ಯಾರ ಮಾತು ಕೇಳಬೇಕು ಎಂಬ ಉಭಯ ಸಂಕಟ. ಈ ಸಾಲಿಗೆ ಸೇರುವ ಇನ್ನೊಂದು ಬೆಳವಣಿಗೆ ಹೀಗಿದೆ: ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರ ನಿರ್ಮಾಣ ಮತ್ತು ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಲು ಉನ್ನತ ಮಟ್ಟದ ಟ್ರಸ್ಟ್ ಇದೆ. ತಳ ಅಂತಸ್ತಿನ ಕಾಮಗಾರಿಯಷ್ಟೇ ಮುಗಿದಿದ್ದು, ಮೇಲಿನ ಹಂತದ ಕಾಮಗಾರಿ ನಡೆಯುತ್ತಿದೆ. ಕಾಲಕಾಲಕ್ಕೆ ಈ ಕುರಿತಾದ ಪ್ರಕಟಣೆಯನ್ನು ಟ್ರಸ್ಟಿನ ವಕ್ತಾರರು ನೀಡುತ್ತಲೂ ಇದ್ದಾರೆ. ಆದರೆ ತಟ್ಟನೆ ಒಂದು ದಿನ ದೇವಸ್ಥಾನದ ಪ್ರಧಾನ ಅರ್ಚಕರು ಒಂದು ಹೇಳಿಕೆ ನೀಡುತ್ತಾರೆ. ಅದೇನೆಂದರೆ, ದೇವಸ್ಥಾನದ ಮೇಲ್ಮಾಳಿಗೆ ಸೋರುತ್ತಿದೆ, ಶ್ರೀರಾಮಚಂದ್ರನ ದರ್ಶನಕ್ಕೆ ಬರುವ ಗಣ್ಯರು ನಿಲ್ಲುವ ವಿಭಾಗದಲ್ಲಿ ಅತಿ ಹೆಚ್ಚು ನೀರು ನಿಲ್ಲುತ್ತಿದೆ! ಮೇಲ್ನೋಟಕ್ಕೆ ಇದು ಸತ್ಯವೇ. ಆದರೆ ಹೇಳಿಕೆ ಬಂದೊಡನೆ ವಿಪಕ್ಷಗಳ ಹಾಹಾಕಾರ ಆರಂಭವಾಯಿತು. ಜಾಲತಾಣಗಳ ಪಂಡಿತ ಶಿಖಾಮಣಿಗಳು ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಕೇಂದ್ರ ಸರಕಾರದ ಕಳಪೆ ಕಾಮಗಾರಿ ಎಂದೆಲ್ಲ ಪ್ರಲಾಪಗಳು ಹರಿದಾಡತೊಡಗಿದವು.

ಅದಿರಲಿ, ಹೊಸ ಕಟ್ಟಡವು ನಿರ್ಮಾಣ ಹಂತದಲ್ಲಿ ಇರುವಾಗ, ಅದೂ ಕೂಡ ಕೆಳಗಿನ ಅಂತಸ್ತಿನ ಕಾಮಗಾರಿ ಮುಗಿದು, ಮೇಲಿನ ಅಂತಸ್ತಿನ ನಿರ್ಮಾಣ ಕಾರ್ಯ ನಡೆಯುತ್ತಿರುವಾಗ ಹಾಗೂ ತೀವ್ರ ಮಳೆಯು ಬರುತ್ತಿರುವಾಗ ಇದೆಲ್ಲವೂ ಸಹಜ ಎಂಬುದು ಸಾಮಾನ್ಯ ಜ್ಞಾನ. ಆದರೂ ಯಾವುದೇ ಹಾಗೊಮ್ಮೆ ಯಾವುದೇ ರೀತಿಯಲ್ಲಿ ಅನಾನುಕೂಲವಾದರೆ, ಅದರ ಬಗ್ಗೆ ಆಡಳಿತ ಮಂಡಳಿಯ ಗಮನಕ್ಕೆ ತರಬೇಕಾಗಿರುವುದು ಸಿಬಂದಿಯವರ ಕರ್ತವ್ಯ. ಆದರೆ, ಇಲ್ಲಿ ಅರ್ಚಕರು ಏಕಾಏಕಿ ಪತ್ರಿಕಾಗೋಷ್ಠಿಯಲ್ಲಿ ಇಂತಹ ಆಪಾದನೆ ಮಾಡುವುದು, ರಾಜಕೀಯ ಪಕ್ಷಗಳು, ಕಟ್ಟಡದ ನಿರ್ಮಾಣಕ್ಕೆ ಯಾವುದೇ ರೀತಿಯಲ್ಲಿ ಸಂಬಂಧಪಡದ ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಟೀಕಿಸುವುದು ಅಸಂಬದ್ಧತೆಯ ಪರಾಕಾಷ್ಠೆ! ಸಾಲದೆಂಬಂತೆ, ಇದೇ ಅರ್ಚಕರು, ಈ ಕಟ್ಟಡದ ನಿರ್ಮಾಣವೇ ದೋಷಪೂರಿತವಾಗಿರುವಾಗ ಕಾಶ್ಮೀರದಲ್ಲಿ ಕೇದಾರನಾಥ ದೇವಾಲಯವನ್ನು ನಿರ್ಮಿಸಲು ಮುಂದಾಗಿರುವುದು ತಪ್ಪು ಎನ್ನುತ್ತಾರೆ. ಅಷ್ಟಕ್ಕೂ ದೇವಸ್ಥಾನದ ಅರ್ಚಕರು ಅಲ್ಲಿನ ಓರ್ವ ಸಿಬ್ಬಂದಿ ಮಾತ್ರ; ಅಂತವರು ಆಡಳಿತಾತ್ಮಕ ವಿಷಯಗಳಲ್ಲಿ ತಲೆ ಹಾಕುವುದು, ಸಾರ್ವಜನಿಕ ಹೇಳಿಕೆ ನೀಡುವುದು ಎಷ್ಟು ಸಮರ್ಥನೀಯ?

ಇನ್ನೊಂದು ಬೆಳವಣಿಗೆಯಲ್ಲಿ ಶ್ರೀರಾಮ ಮಂದಿರದಲ್ಲಿ ಪ್ರಾಣ ಪ್ರತಿಷ್ಠೆ ಸಂದರ್ಭದಲ್ಲೇ ಪುರಿ ಶಂಕರಾಚಾರ್ಯರು ಅಪಸ್ವರ ಎತ್ತಿದ್ದರು. ಅದೇನಿದ್ದರೂ ಅವರವರ ಅಭಿಪ್ರಾಯ, ಇರಲಿ, ಆದರೆ ಅವರು ಕೇದಾರನಾಥ ದೇವಾಲಯದಲ್ಲಿ ಭಾರೀ ಪ್ರಮಾಣದ ಚಿನ್ನ ದುರುಪಯೋಗವಾಗಿದೆ ಎಂಬ ಹೇಳಿಕೆ ನೀಡಿದ್ದರು.ಕೇದಾರನಾಥ ದೇವಸ್ಥಾನವೂ ಅದರದೇ ಆದ ಆಡಳಿತ ವ್ಯವಸ್ಥೆ ಹೊಂದಿದ್ದು ಅಂತಹ ದುರುಪಯೋಗ ಆಗಿರುವುದೇ ನಿಜವಾದಲ್ಲಿ ಸೂಕ್ತ ದಾಖಲೆಗಳೊಂದಿಗೆ ಸಂಬಂಧಿಸಿದ ತನಿಖಾ ಪ್ರಾಧಿಕಾರಕ್ಕೆ ಅಥವಾ ನ್ಯಾಯಾಲಯದಲ್ಲಿ ದೂರು ಸಲ್ಲಿಸಬಹುದಾಗಿತ್ತು. ದೇವಸ್ಥಾನದ ಆಡಳಿತ ಮಂಡಳಿಯ ಮುಖ್ಯಸ್ಥರು ಈ ಕುರಿತು ಸಾರ್ವಜನಿಕ ಹೇಳಿಕೆ ನೀಡಿ ದಾಖಲೆ ರಹಿತ ಆಪಾದನೆ ಸರಿಯಲ್ಲ, ದಾಖಲೆ ಒದಗಿಸಿದರೆ ತನಿಖೆ ನಡೆಸಿ ಸಾರ್ವಜನಿಕರಿಗೆ ಸ್ಪಷ್ಟೀಕರಣ ನೀಡುವುದಾಗಿ ಹೇಳಿಕೆ ನೀಡಿದರೂ ಅದಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಒಟ್ಟಿನಲ್ಲಿ ಇಂತಹ ಅವಕಾಶಗಳಿಗಾಗಿಯೇ ಕಾದು ನಿಂತಿರುವ ವಿಘ್ನ ಸಂತೋಷಿಗಳಿಗೆ ಮೃಷ್ಟಾನ್ನ! ಎಲ್ಲವನ್ನು ತ್ಯಜಿಸಿರುವ ಮಠಾಧೀಶರುಗಳು ಧಾರ್ಮಿಕ ವಿಷಯಗಳ ಹೊರತಾದ, ಶುದ್ಧ ರಾಜಕೀಯ ವಿದ್ಯಮಾನಗಳ ಕುರಿತು ಹೇಳಿಕೆ ನೀಡುತ್ತಾರೆ. ಆದರೆ ಧರ್ಮಕ್ಕೆ ಸಂಬಂಧಿಸಿ ಯಾವುದೇ ಅವಘಡಗಳು ಸಂಭವಿಸಿದರೆ ಸುಮ್ಮನಿರುತ್ತಾರೆ, ಇದೆಂತಹ ದ್ವಂದ್ವ? ಹೀಗೆ ತನಗೆ ಸಂಬಂಧ ಪಡೆಯದಿದ್ದರೂ, ಗುದ್ದಿ ಓಡುವ ಮನಸ್ಥಿತಿ ಕೇವಲ ಪ್ರಚಾರಕ್ಕಾಗಿ ಎನ್ನುವುದು ನಿರ್ವಿವಾದ.

(ಲೇಖಕರು: ಹವ್ಯಾಸಿ ಬರಹಗಾರ)

ಪ್ರವಾಹದ ಬಳಿಕವೂ ಬರಗಾಲ ಬರಬಹುದು ಎಚ್ಚರ!

ವಿಶ್ಲೇಷಣೆ
ಸುರೇಂದ್ರ ಪೈ, ಭಟ್ಕಳ
vveditoped@gmail.com

ಮೊನ್ನೆ ಹತ್ತನೇ ತರಗತಿಗೆ ಪಾಠ ಮಾಡುತ್ತಿದ್ದಾಗ ಒಬ್ಬ ವಿದ್ಯಾರ್ಥಿನಿ ಸಾರ್ ಈ ಬಾರಿ ಸಿಕ್ಕಾಪಟ್ಟೆ ಮಳೆಯಾಗುತ್ತಿದೆ, ಹಾಗಾಗಿ ಮುಂದಿನ ವರ್ಷ ಬರಗಾಲ ಬರಲಿಕ್ಕಿಲ್ಲ ಬಿಡಿ ಸಾರ್ ಎಂದಳು. ಅದಕ್ಕೆ ಇಡೀ ತರಗತಿಯೇ ಹೌದೌದು ಎಂದು ಧ್ವನಿಗೂಡಿಸಿತು. ಪಾಪ ಅವರಿಗೇನು ಗೊತ್ತು ಇಂದಿನ ಪ್ರವಾಹಕ್ಕೆ ಬರಗಾಲವನ್ನು ತಡೆಯಲು ಸಾಧ್ಯವಿಲ್ಲವೆಂದು. ಅದಕ್ಕಾಗಿ ನೈಜ ಸಂಗತಿಯನ್ನು ವಿವರಿಸಬೇಕಾಯಿತು.

ಬೇಸಿಗೆಯ ಬೇಗೆಯಿಂದ ಬಳಲುತ್ತಿದ್ದ ನಮಗೆ ಮಳೆ ವರವಾಗಿ ಬಂದು ನಾವು ನಿರೀಕ್ಷಿಸಿದ ಮಟ್ಟಕ್ಕಿಂತ ಹೆಚ್ಚಾಗಿ ವರ್ಷಧಾರೆಯಾಗುತ್ತಿದೆ. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯದ ಎಲ್ಲ ಭಾಗಗಳಲ್ಲೂ ಮಳೆ ಶುರುವಾಗಿದೆ. ಈಗಾಗಲೇ ನಮ್ಮ ರಾಜ್ಯದ 8 ರಿಂದ 10 ಜಿಲ್ಲೆಗಳು ಪ್ರವಾಹದ ಭೀತಿಯನ್ನು ಎದುರಿಸುತ್ತಿದೆ. ಒಂದೆಡೆ ಭೂ ಕುಸಿತ, ಗುಡ್ಡ ಕುಸಿತ, ಮನೆಯೊಳಗೆ ನೀರು ಬರುವುದು ಇತ್ಯಾದಿ ಘಟನೆಗಳು ಸುದ್ದಿಯಾಗುತ್ತಿದ್ದರೆ, ಇನ್ನೊಂದೆಡೆ ರಾಜ್ಯದ ಬಹುತೇಕ ಜಲಾಶಯಗಳು ತುಂಬಿ ತುಳುಕುತ್ತಿದ್ದು, ಕೃಷ್ಣರಾಜಸಾಗರ ಮತ್ತು ಕಬಿನಿ ಜಲಾಶಯಗಳಿಗೆ ಬಾಗಿನಗಳನ್ನು ಸಮರ್ಪಣೆ ಮಾಡಲಾಗಿದೆ. ಅಷ್ಟೇ ಅಲ್ಲದೇ ಪಕ್ಕದ ಮಹಾರಾಷ್ಟ್ರದ ಕೃಷ್ಣಾ ಹಾಗೂ ಮಲಪ್ರಭಾ, ಹಿರಣ್ಯಕೇಶಿ, ವೇದಗಂಗಾ, ಮತ್ತು ಧೂದಗಂಗಾ ನದಿಗಳು ತುಂಬಿ ಹರಿದು 232 ಗ್ರಾಮಗಳಿಗೆ ಪ್ರವಾಹದ ಆತಂಕ ಒದಗಿದರೆ, ಇನ್ನೂ 40 ಸೇತುವೆಗಳು ಮುಳುಗಡೆಯಾಗಿವೆ. ಹಾಗಾಗಿ ಸಾಕಷ್ಟು ನೀರು ಭೂಮಿಗಿಳಿದಿದೆ ಹಾಗಾಗಿ ಮುಂದಿನ ವರ್ಷ ಬರಗಾಲ ಬರುವುದಿಲ್ಲ ಎಂಬ ಭ್ರಮೆ ನಮ್ಮನ್ನು ಆವರಿಸಿದಂತಿದೆ.

ಪ್ರವಾಹಗಳು ಬಂದಿರುವುದು ಇದೇ ಮೊದಲೇನಲ್ಲ, ಇಂತಹ ಪ್ರವಾಹದ ಪರಿಸ್ಥಿತಿಗಳನ್ನು ಕಳೆದ ಹಲವು ವರ್ಷಗಳಿಂದ ಎದುರಿಸುತ್ತಲೇ ಬಂದಿದ್ದೇವೆ. ನಮ್ಮ ರಾಜ್ಯದ ಹೊರತಾಗಿ ತಮಿಳುನಾಡು, ಕೇರಳ, ಮಹಾರಾಷ್ಟ್ರ, ಹಾಗೂ ಉತ್ತರ ಭಾರತದ ಹಲವು ಕಡೆ ಪ್ರವಾಹ ಆವರಿಸಿ, ಅಪಾರ ಹಾನಿಯಾಗಿದ್ದು ನೋಡುತ್ತಲೇ ಇದ್ದೇವೆ. ಇದರ ಜೊತೆ ಜೊತೆಗೆ ಪ್ರವಾಹ ಬಂದ ರಾಜ್ಯದಲ್ಲಿ ಮುಂದಿನ ವರ್ಷ ತಪ್ಪದೇ ಭೀಕರ ಬರಗಾಲ ಆವರಿಸಿದ್ದು ನೋಡಿದ್ದೇವೆ.

ಹವಾಮಾನ ಇಲಾಖೆಯ ಪ್ರಕಾರ ವಾರ್ಷಿಕ 1153 ಮಿಮೀ ಮಳೆ ಬರಬೇಕು. ಆದರೆ ಕಳೆದ ವರ್ಷ 24 ಪ್ರತಿಶತ ಹೆಚ್ಚು ಮಳೆಯಾದರೂ ಸಹ ಬೇಸಿಗೆಯಲ್ಲಿ ರಾಜ್ಯದ 16 ಜಿಲ್ಲೆಗಳನ್ನು ಬರಪೀಡಿತ ಪ್ರದೇಶವೆಂದು ಘೋಷಣೆಯಾದವು. ಈಗ ಒಮ್ಮೆ ಯೋಚಿಸಿ, ರಾಜ್ಯದಲ್ಲಿ ಪ್ರವಾಹದ ಸ್ಥಿತಿ ಎದುರಾದರೂ ಸಹ ಬರಗಾಲ ಏಕೆ ಬಂತು? ಉಕ್ಕಿ ಹರಿಯುವ ಪ್ರವಾಹದ ನೀರಿಗೆ ಬರಗಾಲವನ್ನು ತಡೆದು ನಿಲ್ಲಿಸುವ ಸಾಮರ್ಥ್ಯವಿಲ್ಲ ಕಣ್ರೀ. ಅದಕ್ಕಿರುವುದು ಒಂದೇ ಪರಿಹಾರ, ಅದುವೇ ಅರಣ್ಯೀಕರಣ. ಮೋಡಗಳು ಸುರಿಸುವ ಪ್ರತಿಯೊಂದು ಹನಿಗಳು ಸಹ ನಮ್ಮ ಬೇಸಿಗೆಯ ದಾಹವನ್ನು ತಣಿಸುವ ಜೀವಜಲವಾಗಬೇಕೆಂದರೆ ನಾವು ಪರಿಸರವನ್ನು ಉಳಿಸಬೇಕು ಹಾಗೂ ಸಾಕಷ್ಟು ಗಿಡಗಳನ್ನು ಮಳೆಗಾಲದಲ್ಲಿ ನೆಡಬೇಕು. ಆಗ ಮಾತ್ರ ಮಳೆಯ ನೀರು ಪ್ರವಾಹದ ರೂಪ ತಾಳುವ ಬದಲಾಗಿ ಅಮೃತಧಾರೆಯಾಗಿ ಭೂವಿಯನ್ನು ಹೊಕ್ಕು ಒಡಳೊಳಗಿನ ಬೇಗೆಯನ್ನು ತಣಿಸಿ ಬರಗಾಲವನ್ನು ಹಿಡಿಯುತ್ತದೆ.

ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ ಭಾರತದಲ್ಲಿ ಶೇಕಡಾ 33 ರಷ್ಟು ಅರಣ್ಯ ಇರಬೇಕಿತ್ತು. ಆದರೆ ನಮ್ಮ ದೇಶದಲ್ಲಿ ಪ್ರಸ್ತುತ 21 ಪ್ರತಿಶತ ಅಷ್ಟೇ ಅರಣ್ಯ ಉಳಿದಿದೆ. ಸಸ್ಯ ಸಂಪತ್ತು ಮಾತ್ರ ಪ್ರಕೃತಿಯ ಸಮತೋಲನವನ್ನು ಕಾಪಾಡಲು ಸಾಧ್ಯ. ಸಮಭಾಜಕ ವೃತ್ತ ಪ್ರದೇಶದಲ್ಲಿರುವ ಅತಿ ದೊಡ್ಡ ಅಮೆಜಾನ್ ಕಾಡಿನಲ್ಲಿ ಪ್ರತಿ ನಿತ್ಯವು ಮಳೆ ಬರುತ್ತದೆ ಎಂದು ಕೇಳಿರುತ್ತೇವೆ ಅಲ್ಲವೇ? ಅದಕ್ಕೆ ಕಾರಣ ಅರಣ್ಯ ಸಂಪತ್ತು. ಕಾಡಿನಲ್ಲಿ ಸಾವಿರಾರು ಮರಗಳು ಇರುತ್ತವೆ. ಪ್ರತಿಯೊಂದು ಸಸ್ಯಗಳ ಬೇರುಗಳು ಮಣ್ಣಿನಿಂದ ನೀರನ್ನು ಹೀರಿಕೊಳ್ಳುತ್ತದೆ. ಇದು ಸಸ್ಯಗಳಲ್ಲಿ ನಡೆಯುವ ಓಸ್ಮೋಸಿಸ್ ವಿಧಾನ. ತನಗೆ ಬೇಕಾದಷ್ಟು ನೀರನ್ನು ಹೀರಿಕೊಂಡು ನಂತರ ಸಸ್ಯಗಳು ಆ ನೀರನ್ನು ಚಯಪಚಯನ ಕ್ರಿಯೆಗಳಿಗೆ ಬಳಸಿಕೊಂಡು ಕ್ಸೈಲಂ ನಾಳಗಳ ಮೂಲಕ ಸಸ್ಯದ ವಿವಿಧ ಭಾಗಗಳಿಗೆ ಸಾಗಿಸಿ ನಂತರ ಎಲೆಯಲ್ಲಿರುವ ಸ್ಟೋಮಾಟಾದ ಮೂಲಕ ನೀರು ಅಂತಿಮವಾಗಿ ಆವಿಯಾಗಿ ವಾತಾವರಣಕ್ಕೆ ಬಿಡುಗಡೆಯಾಗುತ್ತದೆ. ಇದನ್ನೇ ಭಾಷ್ಪೀಕರಣ ಕ್ರಿಯೆ ಎನ್ನುವರು. ಸಸ್ಯವು ತನ್ನಲ್ಲಿ 90ರಷ್ಟು ನೀರನ್ನು ಶೇಖರಿಸಿಕೊಂಡಿರುತ್ತದೆ. ಆದರೆ ಅದು ತನ್ನ ಬೆಳವಣಿಗೆಗಾಗಿ ಹಾಗೂ ಎಲೆಗಳಲ್ಲಿ ಆಹಾರ ತಯಾರಿಸಲು ಕೇವಲ 1ಪ್ರತಿಶತ ನೀರನ್ನು ಬಳಸಿಕೊಳ್ಳುತ್ತದೆ.

ಸಸ್ಯಗಳು ನಡೆಸುವ ಈ ಭಾಷ್ಪೀಕರಣ ಕ್ರಿಯೆ ಅಗೋಚರವಾಗಿದ್ದು ಸಸ್ಯಗಳು ತನ್ನ ತೂಕಕ್ಕಿಂತ ಅನೇಕ ಪಟ್ಟು ಹೆಚ್ಚು ನೀರನ್ನು ಹೊರ ಹಾಕುತ್ತದೆ. ಉದಾಹರಣೆಗೆ ಒಂದು ಎಕರೆ ಜೋಳವು ಪ್ರತಿ ದಿನ ಸುಮಾರು 3000 ರಿಂದ 4000 ಗ್ಯಾಲನ್ ಹಾಗೂ ದೊಡ್ಡ ಓಕ್ ಮರವು 40,000 ಗ್ಯಾಲನ್ ನೀರನ್ನು ಹೊರಹಾಕುತ್ತದೆ. ಇವೆ ಲ್ಲವೂ ಆವಿಯ ರೂಪದಲ್ಲಿ ಘನೀಕರಿಸಿ ಮೋಡಗಳಾಗಿ ಮಳೆ ತರುತ್ತದೆ. ಹಾಗೂ ಸಸ್ಯದ ಬೇರುಗಳು ಭೂಮಿಯ ಆಳದ ಪದರಿನ ತನಕ ಚಾಚಿದ್ದು ನೀರಿನ ಹರಿವನ್ನು ಭೂ ಪದರಿಗೆ ಹರಿಸಲು ಸಹಕಾರಿಯಾಗಿದೆ. ಇದರಿಂದ ಅಂತರ್ಜಲ ಹೆಚ್ಚುತ್ತದೆ.

ಒಮ್ಮೆ ಯೋಚಿಸಿ ನೋಡಿ ಕಳೆದ 20–30 ವರ್ಷಗಳ ಹಿಂದೆ ಅತಿವೃಷ್ಟಿ ಹಾಗೂ ಅನಾವೃಷ್ಟಿಯಂತಹ ಸಮಸ್ಯೆ ಹೆಚ್ಚಾಗಿ ಭಾದಿಸುತ್ತಿರಲಿಲ್ಲ. ಏಕೆಂದರೆ ಕಾಡು ಯಥೇಚ್ಛವಾಗಿತ್ತು. ಇಂದು ಎಲ್ಲೆಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಿದೆಯೋ ಅದಕ್ಕೆಲ್ಲ ಮಾನವನ ಹಸ್ತಕ್ಷೇಪವೇ ಮೂಲ ಕಾರಣ. ಉದಾಹರಣೆಗೆ ಇಂದು ಪಶ್ಚಿಮ ಘಟ್ಟಗಳ ಸಾಲಿನಲ್ಲಿರುವ ಕರ್ನಾಟಕದ ಶಿರಾಡಿ ಘಾಟ್, ಚಾರ್ಮುಡಿ ಘಾಟ್ ಭೂ ಕುಸಿತ, ಕೇರಳದ ವಯನಾಡ್ ಸರಣಿ ಭೂ ಕುಸಿತ, ಚೂರಾಲ್ ಮಾಲ ಪಟ್ಟಣ ನಾಮಾವಶೇಷವಾಗಿವೆ. ಇದರ ಹಿಂದೆ ಅಭಿವೃದ್ಧಿ ಹೆಸರಿನಲ್ಲಿ ಆಗುತ್ತಿರುವ ಅವೈಜ್ಞಾನಿಕ ಕಾಮಗಾರಿಗಳಾದ ಎತ್ತಿನಹೊಳೆ ಯೋಜನೆ, ರಸ್ತೆ ಅಗಲೀಕರಣ, ಪ್ರವಾಸೋದ್ಯಮ, ಕೇರಳದಲ್ಲಿ ನೈಸರ್ಗಿಕ ಕಾಡು ಕಡಿದು ನೀಲಗಿರಿ ತೋಪು, ಟೀ ಎಸ್ಟೇಟ್ ಮಾಡಿರುವುದು ಇತ್ಯಾದಿ ಕಾರಣಗಳಿಂದಲೇ ಹೊರತು ನೈಸರ್ಗಿಕ ಕಾರಣದಿಂದಲ್ಲ ಎಂಬ ಸತ್ಯ ಅರಿಬೇಕಿದೆ. ನೀರು ಹೋಗಬೇಕಾದ ಜಾಗದಲ್ಲಿ ಮನೆ ಮಾಡಿ, ತೋಟ ಮಾಡುವುದನ್ನು ಬಿಟ್ಟಿದ್ದರೆ ಇಂತಹ ಮಾನವ ನಿರ್ಮಿತ ಪ್ರವಾಹಗಳು ಉಂಟಾಗುತ್ತಿರಲಿಲ್ಲ. ಪ್ರವಾಹ ಪೀಡಿತ ಪ್ರದೇಶಗಳ ಚಿತ್ರಗಳನ್ನು ಒಮ್ಮೆ ಸರಿಯಾಗಿ ಪರಿಶೀಲಿಸಿ, ಅಲ್ಲಿ ಸುತ್ತಮುತ್ತ ಬರಿ ಬೋಳು ಜಾಗ ಇಲ್ಲವೇ ಕಾಡು ಕೊರೆದು ನಾಡು ಮಾಡಿರುವ ದೃಶ್ಯಗಳೇ ಕಣ್ಣಿಗೆ ಬೀಳುತ್ತವೆ.

ಇನ್ನೂ ಜಲಾಶಯಗಳೇನೋ ಭರ್ತಿಯಾಗಿವೆ ಸರಿ ಆದರೆ, ಅಣೆಕಟ್ಟುಗಳು ನಿರ್ಮಾಣವಾಗುವ ಪೂರ್ವದಲ್ಲಿ ಬರಗಾಲವನ್ನು ತಡೆಯಲು ಹಾಗೂ ಪ್ರವಾಹದ ನೀರನ್ನು ಜೀವಧಾರೆಯಾಗಿ ಪರಿವರ್ತಿಸಲು ಅರಣ್ಯದ ಜೊತೆ ಜೊತೆಗೆ ಪುರಾತನ ಕಾಲದಲ್ಲಿ ನಮ್ಮ ಹಿರಿಯರು ಕೆರೆಗಳ ನಿರ್ವಹಣೆ ಬಗ್ಗೆ ಸಾಕಷ್ಟು ಕಾಳಜಿಯನ್ನು ಹೊಂದಿದ್ದರು. ನದಿಗಳಿಗೆ ಕೆರೆಗಳು ಆಸರೆ, ಕೆರೆಗಳಿಗೆ ಹಳ್ಳಗಳು ಆಸರೆ, ಹಳ್ಳಗಳು ಬತ್ತಿದರೆ ಕೆರೆಗಳು ಬತ್ತುತ್ತವೆ, ಕೆರೆಗಳು ಬತ್ತಿದರೆ ನದಿಗಳು ಬತ್ತುತ್ತವೆ, ಎಂಬ ಸತ್ಯವನ್ನು ಅವರು ಬಹಳ ಚೆನ್ನಾಗಿ ಅರಿತಿದ್ದರು. ಆದರೆ ಅಣೆಕಟ್ಟು ಬಂದ ಬಳಿಕ ಕೆರೆ ನಿರ್ವಹಣೆ ಮರೆತಿದ್ದು ಅತ್ಯಂತ ನೋವಿನ ಸಂಗತಿ. ರಾಜ್ಯದಲ್ಲಿ 39,173 ಕೆರೆ ಇರುವ ದಾಖಲೆಯಿದೆ. ಆದರೆ ಪ್ರಸ್ತುತ ಕೆರೆ ಗಣತಿ ಮಾಡಿದರೆ ಕೇವಲ ಮೂರನೇ ಒಂದು ಭಾಗದ ಕೆರೆಗಳು ಕಣ್ಣಿಗೆ ಬಿಳಬಹುದೇನೋ ಹಾಗೂ ಅವುಗಳು ಸಹ ಇನ್ನೆರಡು ವರ್ಷದಲ್ಲಿ ಚರಿತ್ರೆಯ ಪುಟ ಸೇರಿದರೂ ಆಶ್ಚರ್ಯವಿಲ್ಲ. ಕೆರೆಗಳಿಗೆ ಪುನರುಜ್ಜೀವನ ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಉತ್ತರ ಕನ್ನಡದ ಶಿವಾನಂದ ಕಳವೆಯವರು ಈ ವಿಷಯಕ್ಕೆ ಸಂಬಂಧಿಸಿದಂತೆ ಒಮ್ಮೆ ಮೇಜರ್ ಸ್ಯಾಂಕಿ ಬರೆದ 1866ರ ವರದಿ ಓದಬೇಕು. ಮೈಲಿಗೆ ಒಂದು ಕೆರೆಯಿದ್ದ ಪ್ರದೇಶ, ವಿಕೇಂದ್ರೀಕೃತ ನೀರಾವರಿಯ ಮೂಲಕ ವಿಶ್ವಕ್ಕೆ ಆಧಾರದವಾದ ವಿಶೇಷ ನೆಲೆಯನ್ನು ಹೇಗೆ ನಿರ್ಲಕ್ಷ್ಯ ಮಾಡಿದ್ದೇವೆಂದು ತಿಳಿಯುತ್ತದೆ. ಅದಕ್ಕಾಗಿಯೇ ಯಾವಾಗಲೂ ಹೇಳೋದು ಕೆರೆ ಹೂಳಿಗಿಂತ ಮುಂಚೆ ತಲೆಯ ಹೂಳು ತೆಗೆಯುವ ಕಾರ್ಯ ಮುಖ್ಯ ಎಂದು ಹೇಳುತ್ತಾರೆ.

ರಾಜಸ್ತಾನದ ರೂಪಾರೆಲ್ ಎಂಬ ನದಿಯೂ ಸೇರಿದಂತೆ, ಬತ್ತಿ ಹೋಗಿದ್ದ ಐದು ನದಿಗಳು ಮತ್ತೆ ಜೀವ ತುಂಬಿ ಹರಿಯುವಂತೆ ಮಾಡಿದ ಭಾರತದ ವಾಟರ್ ಮ್ಯಾನ್ ಖ್ಯಾತಿಯ ರಾಜೇಂದ್ರ ಸಿಂಗ್ ಕೂಡ ನದಿಗಳಿಗೆ ಮರುಜೀವ ನೀಡಿ ಬರಗಾಲ ಹಿಮ್ಮೆಟ್ಟಿಸಲು ಯಶಸ್ವಿಯಾಗಿದ್ದಾರೆ. ಭಾರತದ ಸರೋವರಗಳ ನಗರವಾದ ಉದಯಪುರವು 13ನೇ ಶತಮಾನದ ಮೊದಲು ನೀರಿನ ಕೊರತೆ ಎದುರಿಸುತ್ತಿದ್ದ ಈ ನಗರಕ್ಕೆ ಉದಯಪುರದ ಆಡಳಿತಗಾರರು ಪಿಚೋಲಾ ಸರೋವರ, ರಂಗ್ ಸಾಗರ್, ಸ್ವರೂಪ್ ಸಾಗರ್, ಫತೇ ಸಾಗರ್ ಮತ್ತು ಉದಯ್ ಸಾಗರ್ ಸೇರಿದಂತೆ ಏಳು ಕೃತಕ ಸರೋವರಗಳನ್ನು ನಿರ್ಮಿಸಿದರು. ಹಾಗೂ ಪ್ರತಿಯೊಂದು ಸರೋವರಗಳು ಪರಸ್ಪರ ಒಂದಕ್ಕೊಂದು ಸಂಪರ್ಕ ಹೊಂದುವಂತೆ ನಿರ್ಮಿಸಲಾಗಿದ್ದು, ಒಂದು ಕೆರೆ ತುಂಬಿದರೆ, ಉಳಿದ ಎಲ್ಲ ಕೆರೆಗಳಿಗೂ ಜೀವ ಬರುತ್ತಿತ್ತು. ಇದೇ ವ್ಯವಸ್ಥೆಯನ್ನು ಮೈಸೂರು ಸೀಮೆಯ ಭಾಗದಲ್ಲೂ ನಾವು ನೋಡಬಹುದು.

ಇನ್ನೂ ಹವಮಾನದ ಬದಲಾವಣೆಯಿಂದಾಗಿ ಭೂಮಿಯ ಚಲಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ದಕ್ಷಿಣ ಮತ್ತು ಉತ್ತರ ಧ್ರುವದಲ್ಲಿರುವ ಹಿಮಗಡ್ಡೆಗಳು ಜಾಗತಿಕ ತಾಪಮಾನ ಏರಿಕೆಯಿಂದಾಗಿ ಕರಗುತ್ತಿವೆ. ಅದರ ಪರಿಣಾಮ ಅಲ್ಲಿನ ನೀರುವ ಭೂಮಧ್ಯ ರೇಖೆಯತ್ತ ಹರಿಯಿತ್ತಿದೆ. ಇದು ಭೂಮಿಯ ಸಮತೋಲನವನ್ನು ತಪ್ಪಿಸುತ್ತಿದೆ. ಹೀಗಾಗಿ ಭೂಮಿಯ ಸುತ್ತುವಿಕೆ ನಿಧಾನವಾಗಿದ್ದು, ಭೂಮಿಯ ತಿರುಗುವ ಕಕ್ಷೆ ಕೂಡ ಬದಲಾವಣೆಯಾಗಿದೆ ಎಂದು ಸ್ವಿಟ್ಜರ್ಲೆಂಡ್ ಇಟಿಎಚ್ ಜೂರಿಚ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ನಡೆಸಿರುವ ಅಧ್ಯಯನದಲ್ಲಿ ಇಜ ಸಂಗತಿಗಳು ಬೆಳಕಿಗೆ ಬಂದಿದೆ. ವಿಜ್ಞಾನಿಗಳು ತಮ್ಮ ಶೋಧನೆಯನ್ನು ನೇಚರ್ ಜಿಯೋ ಸೈನ್ಸ್ ಮ್ಯಾಗಜಿನ್‌ನಲ್ಲಿ ಪ್ರಕಟಿಸಿದ್ದಾರೆ. ಹಸಿರುಮನೆ ಅನಿಲಗಳ ಬಿಡುಗಡೆಯನ್ನು ನಿಯಂತ್ರಿಸದಿದ್ದರೆ ಈ ಬದಲಾವಣೆ ಇನ್ನಷ್ಟು ತೀವ್ರಗೊಳ್ಳಲಿದೆ ಎಂಬುದು ವಿಜ್ಞಾನಿಗಳು ತಿಳಿಸುತ್ತಾರೆ.

ಕೊನೆಯದಾಗಿ ಈ ಭೂ ಗ್ರಹಕ್ಕೆ ವಿಶೇಷತೆಯನ್ನು ತಂದುಕೊಟ್ಟಿದ್ದೆ ಜೀವಜಲ ನೀರು. ನೀರು ಇಲ್ಲದಿದ್ದರೆ ಈ ಭೂಮಿ ವಾಸ ಯೋಗ್ಯವಾಗಲು ಸಾಧ್ಯವಾಗುತ್ತಿರಲಿಲ್ಲ. ನೀರು ಸಮೃದ್ಧಿಯ ಸಂಕೇತವೆಂಬುದು ನಮಗೆಲ್ಲ ತಿಳಿದಿದೆ. ಭೂಮಿಗೆ ಬೀಳುವ ಪ್ರತಿ ಹನಿಯು ಅಮೃತಧಾರೆಯಾಗಬೇಕಾದರೆ ಭೂಗರ್ಭಕ್ಕೆ ಕೈ ಹಾಕಿ ದೋಚುವ ಬುದ್ಧಿಯನ್ನು ಬಿಟ್ಟಾಗ ಪ್ರಕೃತಿದತ್ತವಾಗಿ ಯಾವ ಅನಾಹುತಗಳು ಸಂಭವಿಸುವುದಿಲ್ಲ. ಇದರ ಜೊತೆಗೆ ಕೆರೆಗಳ ಊಳು ತೆಗೆಯುವುದು, ಸಂರಕ್ಷಿತ ಅರಣ್ಯಗಳ ಸೂಕ್ತ ನಿರ್ವಹಣೆ ಇತ್ಯಾದಿ ಪುನಃಶ್ಚೇತನ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಸಸ್ಯ ಸಂಪತ್ತು ಅಗಾಧವಾಗಿದಷ್ಟು ಸುತ್ತಲೂ ಜೀವವೈವಿಧ್ಯತೆ ಸಮೃದ್ಧವಾಗಿರುತ್ತದೆ. ಹಾಗೂ ಸರಕಾರ ಮಾನವ ಸಹಕಾರಿ ವರದಿಗಳನ್ನು ಗಣನೆಗೆ ತೆಗೆದುಕೊಳ್ಳುವ ಬದಲು ಪರಿಸರ ಸಂರಕ್ಷಣಾ ವರದಿಗಳನ್ನು ಜಾರಿಗೆ ತರುವುದು ಮುಖ್ಯ. ಕಾಡು ಇದ್ದರೆ ಮಳೆ, ಮಳೆ ಇದ್ದರೆ ಬೆಳೆ ಎಂಬ ಸತ್ಯವನ್ನು ಅರಿತು ಪ್ರಕೃತಿಯನ್ನು ಉಳಿಸುವ ಕಾರ್ಯವಾಗಬೇಕಿದೆ. ಎಲ್ಲಿರವರೆಗೂ ವೈಜ್ಞಾನಿಕ ನೆಲೆಗಟ್ಟಿನಲ್ಲಿ ನಾವು ಚಿಂತಿಸುವುದಿಲ್ಲವೋ ಅಲ್ಲಿಯವರೆಗೂ ಬರಗಾಲಕ್ಕೆ ಪ್ರವಾಹ ಪರಿಹಾರವಾಗಲು ಸಾಧ್ಯವಿಲ್ಲ.

(ಲೇಖಕರು: ಶಿಕ್ಷಕರು ಹಾಗೂ ಹವ್ಯಾಸಿ ಬರಹಗಾರರು)



ನಾರದ ಸಂಚಾರ

ಕಲಹಪ್ರಿಯ
naadigru@gmail.com

ಛೇ ಹೀಗಾಗಬಾರದಿತ್ತು!

ಕಷ್ಟದ ಸಮಯದಲ್ಲಿ ಜನರು ನಮ್ಮ ಜತೆ ನಿಲ್ಲುವುದು ಸ್ವಲ್ಪ ಕಡಿಮೆಯೇ. ಆದಾಗ್ಯೂ, ಯಾರಾದರೂ ನಿಂತರೆ, ಅಂಥವರೇ ನಮ್ಮ ಜೀವನದ ಮುಖ್ಯ ಭಾಗವಾಗಿರುತ್ತಾರೆ. ಅಂಥದ್ದರಲ್ಲಿ ಜಾಲತಾಣಗಳಲ್ಲಿ ಇರುವ ಸ್ನೇಹಿತರ ಸಂಖ್ಯೆಯೇ ಹೆಚ್ಚು! ಈಗ ನೋಡಿ ಯಾರಾದರೂ ಫೇಸ್‌ಬುಕ್‌ನಲ್ಲಿ ಏನಾದರೂ ಕಷ್ಟ ಇದೆ ಅಂದರೆ ಅದಕ್ಕೆ ಕಾಮೆಂಟ್‌ಗಳ ಮೂಲಕ ಸಂತೈಸುವವರನ್ನು ನೋಡಿದ್ದೇವೆ. ಅದರ ಜತೆಗೆ ಇತ್ತೀಚೆಗೆ ಇನ್‌ಸ್ಟಾಗ್ರಾಮ್‌ನಲ್ಲಿ, ಒಂದು ಹುಡುಗಿಯೂ ಭಾರೀ ಸದ್ದು ಮಾಡುತ್ತಿದ್ದು. ಯಾರಾದರೂ ಕಷ್ಟದಲ್ಲಿದ್ದರೆ ಅವರಿಗೆ ತನ್ನ ಕೈಯಿಂದಾದ ಹಣ ಸಹಾಯವನ್ನು ಮಾಡುತ್ತಿದ್ದಳು. 'ಅಕ್ಕಾ, ಅಮ್ಮನಿಗೆ ಹುಷಾರಿಲ್ಲ, ಸ್ವಲ್ಪ ಸಹಾಯ ಮಾಡಿ', 'ಅಕ್ಕಾ, ಟಿಕ್ಕೆ ಕಷ್ಟ ಇದೆ, ಎಷ್ಟಾದರೂ ಹಣ ನೀಡಿ' ಅಂತ ಎಷ್ಟೋ ಜನ ಅವಳ ಹತ್ತಿರ ಹಣ ತೆಗೆದುಕೊಳ್ಳುತ್ತಿದ್ದರು. ಅದನ್ನು ಅವಳು ರೀಲ್ಸ್ ಮಾಡಿ ಪೋಸ್ಟ್ ಮಾಡುತ್ತಿದ್ದಳು. ಆದರೆ, ಅಲ್ಲಿಯೂ ಬಿಡದ ತರ್ಲೆಗಳು, 'ಅಕ್ಕಾ ನಂಗೆ ಲವ್ ಫೈಲ್ಯೂರ್ ಆಗಿದೆ, ಸ್ನೇಹಿತರೊಂದಿಗೆ ಗುಂಡು ಹಾಕಲು ಹಣ ಇಲ್ಲ, ಸಹಾಯ ಮಾಡಿ', 'ತುಂಬಾ ದಿನ ಆಯ್ತು ಗುಂಡು ಹೊಡೆದು, ಸ್ವಲ್ಪ ಸಹಾಯ ಮಾಡಿ', 'ಹುಡುಗಿಯೊಂದಿಗೆ ಡೇಟ್‌ಗೆ ತೆರಳಬೇಕು ಎಂದುಕೊಂಡಿದ್ದೀನಿ, ಸ್ವಲ್ಪ ಸಹಾಯ ಮಾಡಿ', ಹೀಗೆ ಹಲವಾರು ಜನರು ಕಾಮೆಂಟ್ ಮಾಡುವುದರ ಪರಿಣಾಮ ಅಕ್ಕ ಇತ್ತೀಚೆಗೆ ಸಹಾಯ ಮಾಡುವುದನ್ನೇ ನಿಲ್ಲಿಸಿಬಿಟ್ಟಿದ್ದಾಳೆ. ಆದರೂ ಹೀಗಾಗಬಾರದಿತ್ತು!

ವಿಧಾನಸೌಧ!

ವಿಧಾನಸೌಧಕ್ಕೆ ತನ್ನದೇ ಆದ ಗತ್ತಿದೆ. ಬೆಂಗಳೂರು ಅಂದ ತಕ್ಷಣ ಎಲ್ಲರ ಕಣ್ಣು ಮುಂದೆ ಬರುವುದು ವಿಧಾನಸೌಧ ಬಂದೇ ಬರುತ್ತದೆ. ಅದರ ಮುಂದೆ ನಿಂತು ಫೋಟೋ ತೆಗಿಸಿಕೊಳ್ಳುವುದೇ ಎಷ್ಟೋ ಜನರ ಆಸೆ! ಒಳಗೆ ಹೋದರಂತೂ ಅವರ ಖುಷಿಗೆ ಪಾರವೇ ಇಲ್ಲ! ಆದರೆ, ವಿಧಾನಸೌಧವೂ ಕೆಲವರಿಗೆ ದುಃಸ್ವಪ್ನವೂ ಆಗಿರುತ್ತೆ. ಒಂದು ದಿನ ವಿಧಾನಸೌಧದಲ್ಲಿ ಹ್ಯಾಪು ಮೋರೆ ಹಾಕಿಕೊಂಡು ಹೋಗುತ್ತಿದ್ದ ಒಬ್ಬ ಜವಾನನಿಗೆ ನಾರದರು ಏನಾಗಿದೆ? ಯಾಕೆ ಈ ರೀತಿ ಇದ್ದೀರಾ ಎಂದು ಪ್ರಶ್ನೆ ಕೇಳಿದರಂತೆ, ಅದಕ್ಕೆ; ನನ್ನ ಕೆಲಸ ನೀನು ಮಾಡು ಆಗ ಗೊತ್ತಾಗುತ್ತದೆ ಎಂದು ಒಂದೇ ವಾಕ್ಯದಲ್ಲಿ ಉತ್ತರಿಸಿ, ಹೋದನಂತೆ!

ಪಾದಯಾತ್ರೆ – ಪದಯಾತ್ರೆ!

ಇತ್ತೀಚೆಗೆ ಮುಡಾ ಹಗರಣವನ್ನು ವಿರೋಧಿಸಿ ಬಿಜೆಪಿ ಮತ್ತು ಜೆಡಿಎಸ್ ಪಾದಯಾತ್ರೆಯನ್ನು ಮಾಡುವ ಬಗ್ಗೆ ಮಾತನಾಡುತ್ತಿದ್ದಾರೆ. ಯಾರು ಎಷ್ಟು ನಡೆಯುತ್ತಾರೋ, ದೇವರಿಗೆ ಗೊತ್ತು! ಹೀಗೆ ನಡೆಯುವಾಗ ಮಾತಾಡುವುದಂತೂ ಸಾಮಾನ್ಯವೇ. ಅದರಲ್ಲೂ ರಾಜಕಾರಣಿಗಳ ಪಾದಯಾತ್ರೆಯಾಗಿದ್ದರಿಂದ, ಕಂಡಕಂಡಲ್ಲಿ ಭಾಷಣ, ಹರಟೆ, ಸುದ್ದಿಗೋಷ್ಠಿಯೂ ನಡೆಯುತ್ತಿರುತ್ತದೆ. ಆದರೆ, ಅಲ್ಲಿ ಯಾರನ್ನು ಹೇಗೆ, ವಿರೋಧಿಸುತ್ತಾರೆ ಎನ್ನುವುದೇ ದೊಡ್ಡ ಪ್ರಶ್ನೆ. ಏಕೆಂದರೆ, ಬಿಜೆಪಿ ಮತ್ತು ಜೆಡಿಎಸ್ ಮೊದಲಿನಿಂದಲೂ ರಾಜಕಾರಣದಲ್ಲಿ ಕಾಳಗವಾಡುಕೊಂಡೇ ಬಂದಿದ್ದಾರೆ. ಒಬ್ಬೊಬ್ಬರಿಗೆ ಒಬ್ಬೊಬ್ಬರೂ ಬಾಯಿಗೆ ಬಂದಹಾಗೆ ಮಾತನಾಡುತ್ತಿದ್ದಾರೆ. ಆದರೆ, ಈ ಬಾರಿ ಅವರಿಬ್ಬರೂ ಮೈತ್ರಿಯಾಗಿದ್ದಕ್ಕೆ, ವಿರೋಧ ಕಟ್ಟಿಕೊಳ್ಳಬಾರದು. ಹಾಗೆಂದು ಸುಮ್ಮನಿದ್ದರೆ, ಹಳೆ ಚಾಳಿಯಲ್ಲಿ ಹಳೆ ಮಾತುಗಳು ಬಂದರೆ ಹೇಗೆ ಎಂದು, ಒಬ್ಬ ಕಾರ್ಯಕರ್ತ ಚಿಂತಿಸುತ್ತಿದ್ದ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942, Printed at M/s Digantha Mudhrana Ltd. NT Road, Shivamogga - 577 201

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:221

ಸಮಾಚಾರ ಸಣ್ಣದಲ್ಲ

ಪೂಜಾಗೆ ನಿರೀಕ್ಷಣಾ ಜಾಮೀನು ನಕಾರ

ದೆಹಲಿ: ವಿವಾದಿತ ಮಾಜಿ ಪ್ರೊಬೆಷನರಿ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್‌ಗೆ(ಪೂಜಾ ಮನೋರಮಾ ದಿಲೀಪ್ ಖೇಡ್ಕರ್) ದೆಹಲಿ ನ್ಯಾಯಾಲಯ ನಿರೀಕ್ಷಣಾ ಜಾಮೀನು ನೀಡಲು ಗುರುವಾರ ನಿರಾಕರಿಸಿದೆ. ಪೂಜಾಗೆ ನಿರೀಕ್ಷಣಾ ಜಾಮೀನು ನಿರಾಕರಿಸಿದ ಪಟಿಯಾಲ ಹೌಸ್ ಕೋರ್ಟ್‌ನ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ದೇವೆಂದರ್ ಕುಮಾರ್ ಜಂಗಾಲ, 2022ರ ಕೇಂದ್ರ ನಾಗರಿಕ ಸೇವಾ ಪರೀಕ್ಷೆಗಾಗಿ ಯುಪಿಎಸ್‌ಸಿಗೆ ಸಲ್ಲಿಸಿದ ಅರ್ಜಿಯಲ್ಲಿ 'ಸುಳ್ಳು ಮಾಹಿತಿ-ನಕಲಿ ದಾಖಲೆ ನೀಡಿದ ಆರೋಪವಿದ್ದು, ಮತ್ತಷ್ಟು ಆಳ-ನ್ಯಾಯಯುತ ತನಿಖೆ ನಡೆಸುವಂತೆ ನಿರ್ದೇಶನ ನೀಡಿದರು.

ಯುಸಿಸಿ ಜಾರಿಗೆ ರಾಜಸ್ಥಾನ ಸಿದ್ಧತೆ

ಜೈಪುರ: ಉತ್ತರಾಖಂಡ ರಾಜ್ಯದ ಬಳಿಕ ಈಗ ರಾಜಸ್ಥಾನ ಸರಕಾರವೂ 'ಏಕರೂಪ ನಾಗರಿಕ ಸಂಹಿತೆ'(ಯುಸಿಸಿ) ಕಾನೂನು ಜಾರಿಗೆ ಸಿದ್ಧತೆ ನಡೆಸಿದೆ. ಈ ಬಗ್ಗೆ ಸಂಸದೀಯ ವ್ಯವಹಾರಗಳ ಸಚಿವ ಜೋಗರಾಮ್ ಪಟೇಲ್ ಗುರುವಾರ ರಾಜ್ಯ ವಿಧಾನಸಭೆಯಲ್ಲಿ ತಿಳಿಸಿದ್ದಾರೆ. ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡಬೇಕೆಂಬ ವಿಚಾರ ಸರಕಾರದ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಈ ಕಾನೂನಿನ ಎಲ್ಲಾ ವಿಚಾರಗಳನ್ನು ಪರಿಗಣಿಸಿ ಸೂಕ್ತ ಸಮಯದಲ್ಲಿ ಮಸೂದೆ ಮಂಡಿಸಿ ಕಾನೂನು ಜಾರಿಗೆ ತರಲಾಗುವುದು ಎಂದು ವಿವರಿಸಿದ್ದಾರೆ. ಆದರೆ ಮಸೂದೆ ಮಂಡನೆ ಯಾವಾಗ ಆಗಲಿದೆ ಎಂಬ ಬಗ್ಗೆ ಮಾಹಿತಿ ನೀಡಿಲ್ಲ. ಫೆಬ್ರುವರಿಯಲ್ಲಿ ಉತ್ತರಾಖಂಡ ಮೊದಲ ಬಾರಿಗೆ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೆ ತಂದಿದೆ. ಅಸ್ಸಾಂ ಕೂಡ ಯುಸಿಸಿ ಜಾರಿಗೆ ತರುವ ಬಗ್ಗೆ ಭರವಸೆ ನೀಡಿದೆ. ಈಗ ರಾಜಸ್ಥಾನ ಕೂಡ ಅದೇ ಹಾದಿ ಅನುಸರಿಸುತ್ತಿದೆ.

ವಿದ್ಯುದಾಘಾತಕ್ಕೆ ಐದು ಕನ್ವರ್ ಯಾತ್ರಿಕರ ಬಲಿ

ಜಾರ್ಖಂಡ್: ಜಾರ್ಖಂಡ್‌ನ ಲತೇಹಾರ್‌ನಲ್ಲಿ ಕನ್ವರ್ ಯಾತ್ರೆಯಲ್ಲಿ ಸಾಗುತ್ತಿದ್ದ ವಾಹನಕ್ಕೆ ಹೈಟೆನ್ಷನ್ ವಿದ್ಯುತ್ ತಂತಿ ತಗುಲಿದ್ದರಿಂದ ವಾಹನದಲ್ಲಿದ್ದ ಇಬ್ಬರು ಅಪ್ರಾಪ್ತರು ಸೇರಿದಂತೆ ಐವರು ಸ್ಥಳದಲ್ಲೇ ಅಸುನೀಗಿದ್ದಾರೆ. ವಾಹನದಲ್ಲಿದ್ದ ಮೂವರು ಭಕ್ತರು ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಗುರುವಾರ ಬೆಳಗಿನ ಜಾವ ದಿಯೋಘರ್‌ನ ಬಾಬಾ ಬೈದ್ಯನಾಥ ದೇವಸ್ಥಾನದಿಂದ ಹಿಂತಿರುಗುವಾಗ ವಾಹನ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದ್ದರಿಂದಲೇ ವಾಹನದ ಮೇಲೆ ಹೈಟೆನ್ಷನ್ ವಿದ್ಯುತ್ ತಂತಿ ಬಿದ್ದಿದೆ ಎಂದು ಬಾಲುಮತ ಉಪವಿಭಾಗ ಪೊಲೀಸ್ ಅಧಿಕಾರಿ ಅಶುತೋಶ್ ಕುಮಾರ್ ಸತ್ಯಂ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ಆಗಸ್ಟ್-ಸೆಪ್ಟೆಂಬರ್‌ನಲ್ಲಿ ವಾಡಿಕೆಗಿಂತ ಅಧಿಕ ಮಳೆ

ದೆಹಲಿ: ಆಗಸ್ಟ್-ಸೆಪ್ಟೆಂಬರ್‌ನಲ್ಲಿ ದೇಶದಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ ಬೀಳಲಿದೆ. ಸದ್ಯ 2 ತಿಂಗಳಲ್ಲಿ ಮಳೆ ಸರಾಸರಿ 422.8 ಮಿಮೀ ಸುರಿಯಲಿದೆ. ಅಂದರೆ, ಶೇ.6ರಷ್ಟು ಅಧಿಕ ಮಳೆಯಾಗಲಿದೆ. ಆಗಸ್ಟ್ ಮಾಸಾಂತ್ಯಕ್ಕೆ 'ಲಾ ನಿನಾ' ಚಂಡಮಾರುತ ಪರಿಸ್ಥಿತಿ ಮರುಕಳಿಸುವ ಸಾಧ್ಯತೆಯಿದೆ. ಶೇ.2ರಷ್ಟು ಹೆಚ್ಚುವರಿ ತೇವಾಂಶ ವಾತಾವರಣವಿರುತ್ತದೆ ಎಂದು ಭಾರತೀಯ ಹವಾಮಾನ ಇಲಾಖೆ ಗುರುವಾರ ಮುನ್ಸೂಚನೆ ನೀಡಿದೆ. ಈಶಾನ್ಯ ಭಾಗಗಳು, ಪೂರ್ವ ಭಾರತ, ಲಡಾಖ್, ಸೌರಾಷ್ಟ್ರ, ಕಚ್, ಮಧ್ಯ ಭಾರತ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆ ನಿರೀಕ್ಷಿಸಲಾಗಿದೆ. ಪಶ್ಚಿಮ ಹಿಮಾಲಯ ಭಾಗಗಳಲ್ಲಿ ಮಳೆ ಕೊರತೆ ಆಗಬಹುದು. ದೇಶದ ಬಹುತೇಕ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಗರಿಷ್ಠ ತಾಪಮಾನವನ್ನು ನಿರೀಕ್ಷಿಸಲಾಗಿದೆ ಎಂದು ಹವಾಮಾನ ಇಲಾಖೆ ಮುಖ್ಯಸ್ಥ ಮೃತ್ಯುಂಜಯ್ ಮೊಹಾಪಾತ್ರ ಆನ್‌ಲೈನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಜೂ.1ರಿಂದ ಈವರೆಗೆ 445.8 ಮಿಮೀ ವಾಡಿಕೆ ಮಳೆಯಾಗಬೇಕಿತ್ತು. ಆದರೆ 453.8 ಮಿಮೀ ಮಳೆಯಾಗಿದೆ ಎಂದು ಅವರು ಹೇಳಿದರು.

ಲೆಬನಾನ್ ದೇಶಕ್ಕೆ ಪ್ರಯಾಣಿಸದಿರಿ

ದೆಹಲಿ: ಹಮಾಸ್ ಮತ್ತು ಹೆಜ್ಬುಲ್ಲಾ ಉಗ್ರ ಸಂಘಟನೆಗಳ ನಾಯಕರನ್ನು ಇಸ್ರೇಲ್ ಸೇನಾಪಡೆಗಳು ಹತ್ಯೆ ಮಾಡಿದ ಬಳಿಕ ಯಹೂದಿ ಸೇನೆಯ ಮೇಲೆ ಲೆಬನಾನ್ ಆಕ್ರೋಶಗೊಂಡಿದೆ. ಪರಿಣಾಮ ಮುಸ್ಲಿಂ ರಾಷ್ಟ್ರದಲ್ಲಿ ದ್ವೇಷಮಯ ವಾತಾವರಣ ಉಂಟಾಗಿದೆ. ಭಾರತೀಯರು ಸದ್ಯ ಲೆಬನಾನ್‌ಗೆ ಪ್ರಯಾಣ ಮಾಡದಂತೆ ರಾಯಭಾರಿ ಕಚೇರಿ ಸೂಚನೆ ನೀಡಿದೆ. ಲೆಬನಾನ್‌ನಲ್ಲಿ 4 ಸಾವಿರ ಭಾರತೀಯರು ವಿವಿಧ ಸಂಸ್ಥೆ, ನಿರ್ಮಾಣ ಕ್ಷೇತ್ರ ಹಾಗೂ ಕೃಷಿ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಹೊರಗೆ ಹೆಚ್ಚು ಓಡಾಟ ನಡೆಸದೆ ಸುರಕ್ಷಿತವಾಗಿರುವಂತೆ ರಾಯಭಾರ ಕಚೇರಿ ಸಲಹೆ ನೀಡಿದೆ.

{ ಅಶ್ವಿನಿ ವೈಷ್ಣವ್ } ರೈಲ್ವೆ ಸಚಿವ

58 ವರ್ಷಗಳ ಸುದೀರ್ಘ ಆಡಳಿತಾವಧಿ ರೈಲ್ವೆಗೆ 1 ಕಿ.ಮೀ.ನಷ್ಟೂ ಸ್ವಯಂಚಾಲಿತ ರೈಲು ರಕ್ಷಣಾ ವ್ಯವಸ್ಥೆ ಅಳವಡಿಸಲು ಸಾಧ್ಯವಾಗದವರಿಗೆ ಈಗ ರೈಲ್ವೆ ಇಲಾಖೆ ಆಡಳಿತದ ಬಗ್ಗೆ ಪ್ರಶ್ನೆ ಮಾಡುವಷ್ಟು ಶಕ್ತಿ ಬಂದಿದೆ. ಲೋಕೊ ಪೈಲಟ್‌ಗಳ ಜತೆ 'ರೀಲ್ಸ್' ಮಾಡುವವರು ಅಧಿಕಾರ ಸಿಕ್ಕಾಗ ಏನೂ ಕೆಲಸ ಮಾಡಿಲ್ಲ. ನಾವು 'ರೀಲ್ಸ್'ನವರಲ್ಲ, ಶ್ರಮ ಜೀವಿಗಳು.

5 ರಾಜ್ಯಗಳಲ್ಲಿ 30 ಜೀವಹಾನಿ | ಉತ್ತರಾಖಂಡ ಸಂಪರ್ಕ ಕಡಿತ; 450 ಯಾತ್ರಿಕರಿಗೆ ಸಂಕಷ್ಟ | ದೆಹಲಿ, ಹಿ.ಪ್ರ, ಉ.ಖಂಡ ಶಾಲೆ-ಕಾಲೇಜುಗಳಿಗೆ ರಜೆ

ಮುಂಗಾರು ಬಲು ಜೋರು-ಉತ್ತರ ಭಾರತ ತತ್ತರ

ದೆಹಲಿ: ದಕ್ಷಿಣ ಭಾರತದ ಕೇರಳದ ವಯನಾಡಿನಲ್ಲಿನ ಭೂಕುಸಿತ ದುರಂತ ಒಂದೆಡೆಯಾದರೆ, ಅತ್ತ ಉತ್ತರ ಭಾರತದಲ್ಲಿ ಮುಂಗಾರು ಮಳೆ ಜೋರು ಆರ್ಭಟಿಸುತ್ತಿದೆ. ರಾಷ್ಟ್ರ ರಾಜಧಾನಿ ದೆಹಲಿ, ಹಿಮಾಚಲಪ್ರದೇಶ, ಉತ್ತರಾಖಂಡ, ರಾಜಸ್ಥಾನದ ಜೈಪುರದಲ್ಲಿ ಮಳೆ ಆರ್ಭಟಕ್ಕೆ ತತ್ತರಿಸಿದೆ. ಬಿಹಾರದಲ್ಲಿ ಸಿಡಿಲಿನಿಂದ ಐವರು ಸಾವಿಗೀಡಾಗಿದ್ದಾರೆ. ಐದೂ ರಾಜ್ಯಗಳಲ್ಲಿ ಮಳೆ-ಪ್ರವಾಹ-ಕಟ್ಟಡ ಕುಸಿತ- ಸಿಡಿಲಾಘಾತ ಅವಘಡಗಳಲ್ಲಿ ಒಟ್ಟು 30 ಜನರು ಜೀವ ಕಳೆದುಕೊಂಡಿದ್ದಾರೆ.

- ಹಿಮಾಚಲದ ಶಿಮ್ಲಾ ಸೇರಿ ಎರಡು ಪ್ರದೇಶ ಮೇಘಸ್ಫೋಟ
- ಜೈಪುರದಲ್ಲಿ ನೆಲಮಾಳಿಗೆಗೆ ನೀರು ನುಗ್ಗಿ ಮೂವರ ಮೃತ್ಯು
- ಬಿಹಾರದಲ್ಲಿ ಸರಣಿ ಸಿಡಿಲ ಆಘಾತಕ್ಕೆ ಐವರ ದುರ್ಮರಣ

ಉತ್ತರಾಖಂಡದಲ್ಲಿ ಬುಧವಾರ-ಗುರುವಾರದ ಮಳೆ ಆರ್ಭಟಕ್ಕೆ 12 ಮಂದಿ ಬಲಿಯಾಗಿದ್ದಾರೆ, ಹಿಮಾಚಲ ಪ್ರದೇಶದಲ್ಲಿ ಮಳೆ ಸಂಬಂಧಿತ ಅವಘಡಗಳಲ್ಲಿ ಮೂವರು ಸಾವಿಗೀಡಾಗಿ, 50 ಮಂದಿ ನಾಪತ್ತೆಯಾಗಿದ್ದಾರೆ.

ರಾಷ್ಟ್ರ ರಾಜಧಾನಿಯಲ್ಲಿ 1 ಗಂಟೆಯಲ್ಲಿ 100 ಮಿ.ಮೀ ಮಳೆಯಾಗಿದೆ. ಪ್ರಮುಖ ರಸ್ತೆಗಳೆಲ್ಲ ಹೊಳೆಯಂತಾಗಿದ್ದರಿಂದ ವಾಹನ ಸಂಚಾರ ಕಷ್ಟವಾಗಿದೆ. ಗುರುವಾರ ಶಾಲೆ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಕಟ್ಟಡ ಕುಸಿತ ಸೇರಿದಂತೆ ಮಳೆ ಅವಘಡಗಳಲ್ಲಿ 10 ಜೀವಹಾನಿಯಾಗಿದೆ. ದೆಹಲಿಯಲ್ಲಿ ಇಳಿಯಬೇಕಿದ್ದ 8 ವಿಮಾನಗಳನ್ನು ಜೈಪುರ ಹಾಗೂ ಲಖನೌಗೆ ಕಳುಹಿಸಿಕೊಡಲಾಗಿದೆ. ಆ.5ರವರೆಗೆ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ರಾಜಸ್ಥಾನದಲ್ಲಿ ಸತತ ಮಳೆಯಾಗುತ್ತಿದ್ದು ಹಲವು ಪ್ರದೇಶ ಜಲಾವೃತವಾಗಿವೆ. ಕರೌಲಿ ಪ್ರದೇಶದಲ್ಲಿ 80 ಮಿ.ಮೀ ಮಳೆಯಾಗಿದೆ. ಜೈಪುರದಲ್ಲಿ ಮಳೆ ನೀರು ಮನೆಗೆ ನುಗ್ಗಿ 4 ವರ್ಷದ ಬಾಲಕಿ ಸೇರಿ ಮೂವರನ್ನು ಬಲಿಪಡೆದಿದೆ.

ದೊಡ್ಡ ಮಟ್ಟದ ಹಾನಿ: ಸಿಎಂ ಸುಖು

ಮೇಘಸ್ಫೋಟ ಬಳಿಕ ಹಿಮಾಚಲ ಪ್ರದೇಶ ಸಿಎಂ ಸುಖ್ವಿಂದರ್ ಸುಖು ತುರ್ತು ಸಂಪುಟ ಸಭೆ ನಡೆಸಿ ಪರಿಸ್ಥಿತಿ ಕುರಿತು ಚರ್ಚಿಸಿದ್ದಾರೆ. ಶಿಮ್ಲಾ, ಕುಲು, ಮಂಡಿ ಪ್ರದೇಶದಲ್ಲಿ ಮೇಘಸ್ಫೋಟದಿಂದ ದೊಡ್ಡ ಮಟ್ಟದ ಹಾನಿಯಾಗಿದೆ. 50ಕ್ಕೂ ಅಧಿಕ ಮಂದಿ ಕಣ್ಮರೆಯಾಗಿದ್ದಾರೆ. ರಸ್ತೆ ಸಂಪರ್ಕ ಕಡಿತಗೊಂಡಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅಗತ್ಯ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ. ರಾಜ್ಯಕ್ಕೆ ಸೇನೆ ಮತ್ತು ವಾಯುಪಡೆ ತಂಡ ಆಗಮಿಸಿ ರಕ್ಷಣಾ ಕಾರ್ಯದಲ್ಲಿ ನೆರವಾಗುತ್ತಿವೆ. ಹೆಚ್ಚುವರಿಯಾಗಿ 2 ಎನ್‌ಡಿಆರ್‌ಎಫ್ ತಂಡಗಳು ರಕ್ಷಣಾ ಕಾರ್ಯದಲ್ಲಿ ಭಾಗವಹಿಸಿವೆ ಎಂದು ಸಿಎಂ ಸುಖು ಮಾಹಿತಿ ನೀಡಿದ್ದಾರೆ.

ಹಿಮಾಚಲ ಮೇಘಸ್ಫೋಟಕ್ಕೆ 3 ಬಲಿ

ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಪಧಾರ್ ಉಪ ವಿಭಾಗದ ರಾಜ್‌ಬನ್ ಹಾಗೂ ಶಿಮ್ಲಾದ ಸಮೇಜ್ ಖುದ್ ಗ್ರಾಮಗಳಲ್ಲಿ ಗುರುವಾರ ಮೇಘಸ್ಫೋಟವಾಗಿ, ಅದರಿಂದುಂಟಾದ ಪ್ರವಾಹದಲ್ಲಿ ಮೂವರು ಕೊಚ್ಚಿಕೊಂಡು ಹೋಗಿ ಸಾವಿಗೀಡಾಗಿದ್ದಾರೆ, 50ಕ್ಕೂ ಅಧಿಕ ಮಂದಿ ಕಣ್ಮರೆಯಾಗಿದ್ದಾರೆ.

ರಾಜ್ಯದ ವಿವಿಧೆಡೆ ಧಾರಾಕಾರ ಮಳೆಯಿಂದ ಉಂಟಾದ ಪ್ರವಾಹ ದಲ್ಲಿ ನೂರಾರು ಚಿಕ್ಕ ಅಂಗಡಿ, ಮನೆಗಳು ಕೊಚ್ಚಿಕೊಂಡು ಹೋಗಿವೆ. ಸೇತುವೆಗಳು ಕುಸಿದು ಬಿದ್ದ ಕಾರಣ ಹಲವೆಡೆ ಸಂಪರ್ಕ ಕಡಿತಗೊಂಡಿದ್ದು, ರಕ್ಷಣಾ ಕಾರ್ಯಕ್ಕೂ ಅಡ್ಡಿಯಾಗಿದೆ ಎಂದು ಶಿಮ್ಲಾ ಜಿಲ್ಲಾಧಿಕಾರಿ ಅನುಪಮ್ ಕಶ್ಯಪ್ ಮಾಹಿತಿ ನೀಡಿದ್ದಾರೆ.

ಕೇಂದ್ರದ ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ(ಎನ್‌ಡಿಆರ್‌ಎಫ್), ರಾಜ್ಯದ ಎಸ್‌ಡಿಆರ್‌ಎಫ್, ಅಗ್ನಿಶಾಮಕ ದಳ ಸಿಬ್ಬಂದಿ. ಇಂಡೋ-ಟಿಬೆಟನ್ ಗಡಿ ಪೊಲೀಸ್, ಹೋಂ ಗಾರ್ಡ್, ಪೊಲೀಸರು ರಕ್ಷಣಾ ಕಾರ್ಯ ನಡೆಸಿದ್ದಾರೆ. ಕಾಣೆಯದವರ ಪತ್ತೆ ಕಾರ್ಯ ಡ್ರೋನ್ ಮೂಲಕ ನಡೆಸಲಾಗುತ್ತಿದೆ. ಮೇಘಸ್ಫೋಟ ಬಳಿಕದ ಪ್ರವಾಹದಿಂದ ಉಂಟಾದ ಒತ್ತಡ ತಡೆಯಲಾರದೇ ಮಲಾನಾ ಅಣೆಕಟ್ಟೆ ಒಡೆದಿದೆ. ಜಲವಿದ್ಯುತ್ ಯೋಜನೆ ಸ್ಥಳದಲ್ಲಿ ಹಲವರು ಸಿಕ್ಕಿಬಿದ್ದಿದ್ದಾರೆ. ಕಟ್ಟಡದ ನೆಲಮಾಳಿಗೆಯಲ್ಲಿ ಸಿಲುಕಿದ್ದವರನ್ನು ಎನ್‌ಡಿಆರ್‌ಎಫ್ ತಂಡ ರಕ್ಷಿಸಿದೆ. ಕುಲು ಜಿಲ್ಲೆಯ ನಿರ್ಮಂದ ಬ್ಲಾಕ್‌ನಲ್ಲಿ 9 ಮನೆ ಕೊಚ್ಚಿಹೋಗಿವೆ. ಮನಾಲಿ -ಚಂಡೀಗಢ ರಾಷ್ಟ್ರೀಯ ಹೆದ್ದಾರಿಯ ಹಲವೆಡೆ ಭೂಕುಸಿತವಾಗಿದ್ದು, ವಾಹನ ಸಂಚಾರ ಬಂದ್ ಆಗಿದೆ. ಬೀಸ್ ನದಿ ಉಕ್ಕಿ ಹರಿಯುತ್ತಿದೆ ಎಂದು ಕುಲು ಜಿಲ್ಲಾಧಿಕಾರಿ ತೊರುಲ್ ಎಸ್.ರವೀಶ್ ಮಾಹಿತಿ ನೀಡಿದ್ದಾರೆ. ಶಿಮ್ಲಾ-ಜುಂಗಾ ರಸ್ತೆ ಮಾರ್ಗದಲ್ಲಿ ಕೂಡ ಭೂಕುಸಿತ ಸಂಭವಿಸಿದ್ದು , ಮಣ್ಣಿನಡಿ ವಾಹನಗಳು ಸಿಕ್ಕಿಬಿದ್ದಿವೆ. ಬುಧವಾರ ಸಂಜೆಯಿಂದ ಧಾರಾಕಾರ ಮಳೆಯಾಗುತ್ತಿದೆ. 24 ಗಂಟೆಗಳಲ್ಲಿ 212 ಮಿಮೀ ಮಳೆಯಾಗಿದೆ. ಚೌರಿ ಪ್ರದೇಶ 203 ಮಿ.ಮೀ, ಧರ್ಮಶಾಲಾ 183.2 ಜೋಗಿಂದರ್ ನಗರ್ 161 ಮಿ.ಮೀ ಮಳೆಯಾಗಿದೆ. ಧಾರಾಕಾರಣ ಮಳೆಯಿಂದಾಗಿ ರಾಜ್ಯಕ್ಕೆ 433 ಕೋಟಿ ರು. ನಷ್ಟವಾಗಿದೆ. ಜೂ.27ರಿಂದ ಆ.1ರವರೆಗೆ 65 ಜೀವಬಲಿಯಾಗಿವೆ ಎಂದು ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ ಅಂಕಿ ಅಂಶ ನೀಡಿದೆ.

ಉತ್ತರಾಖಂಡದಲ್ಲಿ 12 ಸಾವು

ಕೇದಾರನಾಥ: ಯಾತ್ರೆ ಸಂದರ್ಭದಲ್ಲೇ ಎದುರಾಗಿರುವ ಜಲಾಘಾತಕ್ಕೆ ಉತ್ತರಾಖಂಡ ತತ್ತರಿಸಿದೆ. ಬುಧವಾರ ಮತ್ತು ಗುರುವಾರ ಸುರಿದ ಭಾರಿ ಮಳೆಗೆ ಕಟ್ಟಡ ಕುಸಿತ ಸೇರಿದಂತೆ ಮಳೆ ಅವಘಡಗಳಲ್ಲಿ 12 ಜನ ಸಾವನ್ನಪ್ಪಿದ್ದಾರೆ. ಪ್ರವಾಹದ ನೀರಿಗೆ ಹಲವು ಮನೆಗಳು ಕುಸಿದಿವೆ. ಗುರುವಾರ ಮಧ್ಯಾಹ್ನದವರೆಗಿನ ಮಾಹಿತಿ ಪ್ರಕಾರ ಹರಿದ್ವಾರದಲ್ಲಿ 6 ಮಂದಿ, ತೆಹ್ರಿಯಲ್ಲಿ ಮೂವರು, ಡೆಹ್ರಾಡೂನ್‌ನಲ್ಲಿ ಇಬ್ಬರು, ಚಮೋಲಿಯಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆಂದ ವರದಿಯಾಗಿದೆ. ಹಲ್ವಾನಿ ಹಾಗೂ ಚಮೂಲಿ ಭಾಗದಲ್ಲಿ 7 ವರ್ಷದ ಮಗು ಸೇರಿ ಇಬ್ಬರು ನಾಪತ್ತೆಯಾಗಿದ್ದಾರೆ.

ಡೆಹ್ರಾಡೂನ್ ರಾಯಪುರ ಬಳಿ ತುಂಬಿ ಹರಿಯುತ್ತಿದ್ದ ಕಾಲುವೆಯಲ್ಲಿ ಇಬ್ಬರು ಕೊಚ್ಚಿಕೊಂಡು ಹೋಗಿದ್ದಾರೆ ಎಂದು ಡೆಹ್ರಾಡೂನ್ ಎಸ್‌ಎಸ್‌ಪಿ ಅಜಯ್ ಸಿಂಗ್ ಮಾಹಿತಿ ನೀಡಿದ್ದಾರೆ. ಹರಿದ್ವಾರದಲ್ಲಿ ಮನೆ ಕುಸಿದು ನಾಲ್ವರು ಸಾವನ್ನಪ್ಪಿದ್ದಾರೆ. ಇಬ್ಬರು ವಿದ್ಯುತ್ ಶಾಕ್‌ಗೆ ಬಲಿಯಾದರೆ, ಮೂವರು ಭೂಕುಸಿತಕ್ಕೆ ಸಾವನ್ನಪ್ಪಿದ್ದಾರೆ. ಹರಿದ್ವಾರದ ಸುಖಿ ನದಿ ದಡದಲ್ಲಿ12 ವಾಹನ ನೀರು ಪಾಲಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ರಕ್ಷಣಾ ಕಾರ್ಯ ಮುಂದುವರೆಸಿವೆ. ಗೌರಿಕುಂಡ- ಕೇದಾರನಾಥ ಮಾರ್ಗದಲ್ಲಿ 25 ಮೀ ರಸ್ತೆ ಕೊಚ್ಚಿಕೊಂಡು ಹೋಗಿದೆ. ಮಾರ್ಗ ಮಧ್ಯೆ ಗುಡ್ಡಗಳಿಂದ ದೊಡ್ಡ ಬಂಡೆಗಳು ಉರುಳಿ ಬಿದ್ದಿರುವುದರಿಂದ ವಾಹನ ಸಂಚಾರ ಸ್ಥಗಿತವಾಗಿದೆ. 450 ಯಾತ್ರಾರ್ಥಿಗಳು ಮಾರ್ಗ ಮಧ್ಯೆ ಸಿಕ್ಕಿಬಿದ್ದಿದ್ದಾರೆ.

ವಯನಾಡು ಭೂಕುಸಿದ ಸಾವಿನ ಸಂಖ್ಯೆ 295ಕ್ಕೆ ಏರಿಕೆ | 8 ಸಾವಿರ ಜನರ ರಕ್ಷಣೆ

ರಕ್ಷಣಾ ಕಾರ್ಯಕ್ಕೆ ತೊಡಕಾದ ಮಳೆ

ವಯನಾಡು: ಕೇರಳದ ವಯನಾಡಿನಲ್ಲಿ ಗುರುವಾರವೂ ಧಾರಾಕಾರ ಮಳೆ ಸುರಿಯುತ್ತಿದ್ದು, ರಕ್ಷಣಾ ಕಾರ್ಯಕ್ಕೆ ತೊಡಕಾಗಿದೆ. ಸುರಕ್ಷತೆ ದೃಷ್ಟಿಯಿಂದ ರಕ್ಷಣಾ ಕಾರ್ಯಾಚರಣೆಯನ್ನು ಗುರುವಾರ ತಾತ್ಕಾಲಿಕ ಸ್ಥಗಿತಗೊಳಿಸಲಾಯಿತು.

ರಕ್ಷಣಾ ಪಡೆಗಳ ತಂಡ ಗುರುವಾರ ಬೆಳಗ್ಗೆ ಕಾರ್ಯಾಚರಣೆ ಆರಂಭಿಸಿತ್ತು. ಮಳೆ ಮತ್ತೆ ಜೋರಾಗಿದ್ದರಿಂದ ಮತ್ತೆ ಗುಡ್ಡ ಕುಸಿಯುವ ಆತಂಕ ಎದುರಾಗಿದೆ. ಹಾಗಾಗಿ ಮುಂಜಾಗ್ರತಾ ಕ್ರಮವಾಗಿ ರಕ್ಷಣಾ ಕಾರ್ಯವನ್ನು ತಾತ್ಕಾಲಿಕ ನಿಲ್ಲಿಸಲಾಯಿತು ಎನ್ನಲಾಗಿದೆ. ಭೂಕುಸಿತವಾದ ಪ್ರದೇಶ ಚೂರಲ್‌ಮಲ ಮತ್ತು ಮುಂಡಕ್ಕೈನಲ್ಲಿ ಈವರೆಗೆ 1000ಕ್ಕೂ ಅಧಿಕ ಜನರ ರಕ್ಷಣೆ ಮಾಡ ಲಾಗಿದೆ. ಒಟ್ಟು ನಾಲ್ಕು ಗ್ರಾಮಗಳಿಂದ 250ಕ್ಕೂ ಅಧಿಕ ಮಂದಿ ಕಣ್ಮರೆಯಾಗಿದ್ದಾರೆ. ಭೂಕುಸಿತ ದಲ್ಲಿ ಮೃತರ ಸಂಖ್ಯೆ 295ಕ್ಕೆ ಏರಿಕೆಯಾಗಿದೆ. ದುರಂತ ಸಂಭವಿಸಿ 3 ದಿನಗಳೇ ಕಳೆದಿರುವಾಗ ಮಣ್ಣಿನಡಿ ಸಿಲುಕಿರುವವರು ಈಗಲೂ ಜೀವಂತ ವಿರುವರೇ? ಎಂಬ ಅನುಮಾನ ಮೂಡಿದೆ. ಭಾರಿ ಮಳೆ ಸುರಿಯುತ್ತಿರುವಾಗ ಮಣ್ಣು, ಕಟ್ಟಡ ಅವಶೇಷಗಳನ್ನು ಅಗೆದು ತೆಗೆದು ಹುಡುಕಾಟ ನಡೆಸುವುದು ಸವಾಲಿನಂತಾಗಿದೆ. ಭೂಕುಸಿತ , ಪ್ರವಾಹ ಆತಂಕ ಹೆಚ್ಚಾಗಿರುವ ಪ್ರದೇಶಗಳಿಂದ ಗುರುವಾರ ಸಂಜೆವರೆಗೆ 8 ಸಾವಿರ ಜನರನ್ನು 82 ಆಶ್ರಯ ಕೇಂದ್ರಗಳಲ್ಲಿ ಇರಿಸಲಾಗಿದೆ.

ವಿಜ್ಞಾನಿಗಳ ಭೇಟಿಗೆ ಸರಕಾರ ನಿರ್ಬಂಧ: ಈ ಮಧ್ಯೆ, ಭೂಕುಸಿತ ಪ್ರದೇಶದ ಬಗ್ಗೆ ಯಾವುದೇ ಮಾಧ್ಯಮ ಹೇಳಿಕೆ ನೀಡದಂತೆ ಹಾಗೂ ಭೂಕುಸಿತ ಪ್ರದೇಶಕ್ಕೆ ಭೇಟಿ ನೀಡದಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಕೇರಳ ಸರಕಾರ ಪತ್ರದ ಮೂಲಕ ಸೂಚನೆ ನೀಡಿದೆ. ದುರಂತ ಸಮಯದಲ್ಲಿ ಅನಗತ್ಯ ಸಿದ್ಧಾಂತ-ಪ್ರತಿ ಸಿದ್ಧಾಂತ, ಚರ್ಚೆ ತಪ್ಪಿಸಲು ಸರಕಾರ ಈ ನಿರ್ಧಾರ ಕೈಗೊಂಡಿದೆ ಎನ್ನಲಾಗಿದೆ.

ಸೇತುವೆ ನಿರ್ಮಿಸಿದ ಸೇನೆ

ಚೂರಲ್‌ಮಲ-ಮುಂಡಕ್ಕೈ ಗ್ರಾಮಗಳ ನಡುವೆ ಯಿದ್ದ ಸೇತುವೆ ಭೂಕುಸಿತ ಮತ್ತು ಪ್ರವಾಹದಲ್ಲಿ ಕೊಚ್ಚಿ ಹೋಗಿರುವುದರಿಂದ ಗ್ರಾಮಗಳ ನಡುವಿನ ಸಂಪರ್ಕ ಕಡಿತವಾಗಿತ್ತು. ಹಾಗಾಗಿ ಭಾರತೀಯ ಸೇನೆ ಧಾರಾಕಾರ ಮಳೆಯ ನಡುವೆಯೂ 110 ಅಡಿ ಉದ್ದದ ಬೈಲಿ ಮಾದರಿಯ ಸೇತುವೆ ನಿರ್ಮಾಣ ಮಾಡಿದೆ. ಸೇತುವೆ ಜೋಡಣೆ ಪೂರ್ಣಗೊಂಡ ಬಳಿಕ ಗುರುವಾರ ಸಂಜೆ 5ರ ವೇಳೆ ಮೊದಲ ವಾಹನ ಸೇತುವೆ ಮೇಲೆ ಸಂಚರಿಸಿದೆ. ಈ ಸೇತುವೆ ನಿರ್ಮಾಣದಿಂದಾಗಿ ಈಗ ವಾಹನಗಳನ್ನು ಭೂಕುಸಿತ ಪ್ರದೇಶಕ್ಕೆ ತೆಗೆದುಕೊಂಡು ಹೋಗಬಹುದಾಗಿದೆ. ಸೇನಾಪಡೆಗಳ ಸಿಬ್ಬಂದಿ ಕಾರ್ಯಕ್ಕೆ ಅಪಾರ ಶ್ಲಾಘನೆ ವ್ಯಕ್ತವಾಗಿದೆ.

ಅನಾಥ ಮಕ್ಕಳಿಗೆ ಎದೆ ಹಾಲು

ಭೂಕುಸಿತದಲ್ಲಿ ತಾಯಿ ಕಳೆದುಕೊಂಡು ಅನಾಥವಾಗಿದ್ದ ಪುಟ್ಟ ಕಂದಮ್ಮಗಳು ಅಮ್ಮನ ಎದೆಹಾಲಿಲ್ಲದೇ ಅಳುತ್ತಿರುವ ಸುದ್ದಿ ತಿಳಿದ ಬಳಿಕ ಇಡುಕ್ಕಿಯ 2 ಮಕ್ಕಳ ತಾಯಿಯೊಬ್ಬರು ಅನಾಥ ಶಿಶುಗಳಿಗೆ ತಮ್ಮ ಎದೆಹಾಲು ಕುಡಿಸಲು ಮುಂದಾದ ಮಾನವೀಯ ಘಟನೆ ಗುರುವಾರ ನಡೆದಿದೆ. 4 ವರ್ಷ ಮತ್ತು 4 ತಿಂಗಳ ಮಗುವಿನ ತಾಯಿಯಾಗಿರುವ ಭಾವನಾ, ಅನಾಥ ಮಕ್ಕಳ ಆರ್ತನಾದಕ್ಕೆ ಕರಗಿ ಎದೆಹಾಲು ನೀಡಲು ಮುಂದಾದವರು. ಭಾವನಾ ನಿರ್ಧಾರಕ್ಕೆ ಪತಿ ಯೂ ಬೆಂಬಲವಾಗಿದ್ದಾರೆ. ಇಡುಕ್ಕಿಯಿಂದ ವಯನಾಡಿಗೆ ಬಂದಿರುವ ಭಾವನಾ ಅನಾಥ ಶಿಶುಗಳಿಗೆ ಹಾಲುಣಿಸಿ ಮಾನವೀಯತೆ ಮೆರೆದಿದ್ದಾರೆ. 'ನಾನು 2 ಮಕ್ಕಳ ತಾಯಿ. ಎದೆಹಾಲು ವಂಚಿತ ಹಸುಗೂಸುಗಳ ನೋವು ಅರ್ಥವಾಗುತ್ತದೆ. ಅನಾಥ ಶಿಶುಗಳಿಗೆ ಹಾಲುಣಿಸಲು ಬಂದಿದ್ದೇನೆ' ಎಂದು ಭಾವನಾ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

'ಇಸ್ರೊ'ದಿಂದ ನಿಖರ ಉಪಗ್ರಹ ಚಿತ್ರ-ವಿಶ್ಲೇಷಣೆ ಪ್ರಕಟ | 1550 ಮೀಟರ್ ಎತ್ತರದಲ್ಲಿ ಮೊದಲಿಗೆ ಭೂಕುಸಿತ ಶುರು

ಭೂಕುಸಿತ ಆರಂಭವಾಗಿದ್ದೆಲ್ಲಿ?

ವಯನಾಡು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ಇಸ್ರೊ' ಕೇರಳದ ವಯನಾಡು ಜಿಲ್ಲೆಯಲ್ಲಿನ ಗುಡ್ಡಗಳ ಕುಸಿತ 2 ಗ್ರಾಮಗಳನ್ನು ಪೂರ್ಣ ಹಾಗೂ ಇನ್ನೆರಡು ಗ್ರಾಮಗಳನ್ನು ಭಾಗಶಃ ಹಾನಿಗೀಡು ಮಾಡಿರುವ ಚಿತ್ರಣವನ್ನು ಉಪಗ್ರಹದ ಮೂಲಕ ಚಿತ್ರೀಕರಿಸಿ ವಿಶ್ಲೇಷಣೆ ನಡೆಸಿ ಆಯ್ದ ಕೆಲವು ಚಿತ್ರಗಳನ್ನು ಗುರುವಾರ ಬಿಡುಗಡೆ ಮಾಡಿದೆ.

ಭೂ ಕುಸಿತವಾದ ಪ್ರದೇಶ ಮೊದಲಿಗೆ ಹೇಗಿತ್ತು, ಈಗ ಹೇಗಿದೆ, ಹೇಗೆಲ್ಲಾ ಭೂಕುಸಿತವಾಗಿದೆ ಎಂಬುದನ್ನೂ ಚಿತ್ರಗಳಲ್ಲಿ ಗುರುತಿಸಿ ತೋರಿಸ ಲಾಗಿದೆ. ಗುಡ್ಡ ಮೊದಲಿಗೆ ಎಲ್ಲಿ ಕುಸಿಯಲು ಪ್ರಾರಂಭಿಸಿತು, ಗುಡ್ಡದಿಂದ ಜರುಗಿದ ಮಣ್ಣು, ಬಂಡೆಗಳು ಹೇಗೆ ಕೆಳಮುಖ ಸಾಗಿಬಂದವು, ಅದೆಷ್ಟು ಹಾನಿ ಮಾಡಿದವು, ನದಿ ಪಾತ್ರ ಹೇಗೆ ಬದಲಾಗಿದೆ ಎಂಬ ಅಂಶಗಳನ್ನೂ ಚಿತ್ರಗಳಲ್ಲಿ ಗುರುತಿಸಿ ತೋರಿಸಲಾಗಿದೆ.

ವಯನಾಡಿನಲ್ಲಾಗಿರುವ ಭೂಕುಸಿತದಿಂದ ಆಗಿರುವ ಹಾನಿಯ ಪ್ರಮಾಣವನ್ನು ಅಂದಾಜು ಮಾಡಲೆಂದೇ ಹೈದರಾಬಾದ್‌ನಲ್ಲಿರುವ 'ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್'(ಎನ್‌ಆರ್‌ಎಸ್‌ಸಿ) ಇಸ್ರೋ ಸಂಸ್ಥೆಯ ಅತ್ಯಾಧುನಿಕ 'ಕಾರ್ಟೊಸ್ಯಾಟ್-3' ಆಪ್ಟಿಕಲ್ ಉಪಗ್ರಹ ಹಾಗೂ ಆರ್‌ಐಎಸ್‌ಎಟಿ ಉಪಗ್ರಹವನ್ನು ಬಳಸಿಕೊಂಡು ಹಾನಿ ಪ್ರದೇಶದ ಇಂಚಿಂಚೂ ದಾಖಲಾಗುವಂತೆ ಚಿತ್ರವನ್ನು ಸೆರೆಹಿಡಿದಿದೆ. ಗುಡ್ಡ ಪ್ರದೇಶದಲ್ಲಿ 1550 ಮೀಟರ್ ಎತ್ತರದಲ್ಲಿ ಭೂಕುಸಿತ ಪ್ರಾರಂಭವಾಗಿದೆ. ಅದಕ್ಕೆ ಧಾರಾಕಾರ ಮಳೆ ಸುರಿಯುತ್ತಿದ್ದುದೇ ಕಾರಣವಾಗಿದೆ ಎಂದು ಇಸ್ರೋ ವಿಶ್ಲೇಷಿಸಿದೆ.



ಗುಡ್ಡದ ನಂತರದ ಸ್ಥಿತಿ



ಎನ್‌ಆರ್‌ಎಸ್‌ಸಿ ವರದಿ ಪ್ರಕಾರ, ಚೂರಲ್‌ಮಲ ಪಟ್ಟಣದ ಸುತ್ತಲ ಪ್ರದೇಶದಲ್ಲಿ ಕುಂಭದ್ರೋಣದಂತಹ ಮಳೆ ಸುರಿದ ಕಾರಣದಿಂದಾಗಿಯೇ ಗುಡ್ಡ ಜರುಗಿದೆ. ಗುಡ್ಡದ ಮಣ್ಣು, ಬಂಡೆಗಳೆಲ್ಲಾ ಮಳೆತ ನೀರಿನೊಂದಿಗೆ ಜಾರುತ್ತಾ ಬಂದು ದೊಡ್ಡ ಭೂಕುಸಿತಕ್ಕೆ ಕಾರಣವಾಗಿವೆ. ವಯನಾಡಿನ ಚೂರಲ್‌ಮಲ ಪ್ರದೇಶದಲ್ಲಿ 86 ಸಾವಿರ ಚದರ ಮೀಟರ್‌ಗಳಷ್ಟು ವಿಸ್ತಾರವಾಗಿ ಭೂಕುಸಿತವಾಗಿದೆ.

ವಯನಾಡು ಭೇಟಿ -ರಾಹುಲ್ ಭಾವುಕ

ತಂದೆ ಸಾವಿನ ನೋವು ಕಾಡಿತು

ವಯನಾಡು: ಲೋಕಸಭೆ ಪ್ರತಿಪಕ್ಷ ನಾಯಕ, ರಾಯ್‌ಬರೇಲಿ ಸಂಸದ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ, ಗುರುವಾರ ವಯನಾಡಿನಲ್ಲಿ ಭೂಕುಸಿತವಾಗಿ 290ಕ್ಕೂ ಅಧಿಕ ಜನರನ್ನು ಬಲಿ ಪಡೆದ ಪ್ರದೇಶಕ್ಕೆ ಭೇಟಿ ನೀಡಿ ವೀಕ್ಷಿಸಿದರು.

ವಯನಾಡು ಚೂರಲ್‌ಮಲ ಭೂಕುಸಿತ ಪ್ರದೇಶಕ್ಕೆ ಭೇಟಿ ನೀಡಿದ ರಾಹುಲ್, ಪ್ರಿಯಾಂಕಾ ಅಲ್ಲಿನ ಅಧಿಕಾರಿಗಳಿಂದ ಭೂಕುಸಿತ ಹಾಗೂ ರಕ್ಷಣಾ ಕಾರ್ಯಾಚರನೆ ಬಗ್ಗೆ ವರಸಿ ಪಡೆದರು. ಬಳಿಕ ಮೆಪ್ಪಾಡಿಯ ಸರಕಾರಿ ಹಿರಿಯ ಪ್ರೌಢಶಾಲೆಯ ಆಶ್ರಯ ಕೇಂದ್ರಕ್ಕೆ ಭೇಟಿ ನೀಡಿದ ಅವರು ಸಂತ್ರಸ್ತರನ್ನು ಮಾತನಾಡಿಸಿ ಸಾಂತ್ವನ ಹೇಳಿದರು. 'ತಂದೆ ರಾಜೀವ್ ಗಾಂಧಿ ಮೃತಪಟ್ಟಾಗ ಅನುಭವಿಸಿದಷ್ಟೇ ನೋವು ಈಗ ಮತ್ತೆ ಕಾಡಿತು' ಎಂದು ಇದೇ ವೇಳೆ ರಾಹುಲ್ ಪ್ರತಿಕ್ರಿಯಿಸಿದರು.'ಕೇರಳಕ್ಕಷ್ಟೇ ಅಲ್ಲ, ದೇಶಕ್ಕೇ ದೊಡ್ಡ ದುರಂತವಿದು. ನೂರಾರು ಮಂದಿ ತಮ್ಮ ಕುಟುಂಬದವರನ್ನು ಕಳೆದುಕೊಂಡಿದ್ದಾರೆ. ಮನೆ-ಆಸ್ತಿ ನಷ್ಟ ಅನುಭವಿಸಿದ್ದಾರೆ. ಸಂತ್ರಸ್ತರಿಗೆ ಎಲ್ಲಾ ರೀತಿ ನೆರವು ನೀಡಲಾಗುವುದು. ಸಂಕಷ್ಟ ಸ್ಥಿತಿಯಲ್ಲಿ ನಾನು ಮತ್ತು ಪ್ರಿಯಾಂಕಾ ಜನರ ಜತೆ ನಿಲ್ಲುತ್ತೇವೆ. ಭೂಕುಸಿತದಂತಹ ವಿಪತ್ತು ತಡೆಗೆ ಸಮಗ್ರ ಕಾರ್ಯ ಯೋಜನೆ ಅಗತ್ಯ' ಎಂದು ರಾಹುಲ್ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಉಪವರ್ಗ ರಚನೆಗೆ ರಾಜ್ಯಗಳಿಗೇ ಅಧಿಕಾರ

ಎಸ್‌ಸಿ ಎಸ್‌ಟಿ ಒಳಮೀಸಲು: ಸಮ್ಮತಿಸಿದ ಸುಪ್ರೀಂಕೋರ್ಟ್

ದೆಹಲಿ: ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಗಳ ಮೀಸಲಾತಿ ವಿಚಾರದಲ್ಲಿ ಉಪವರ್ಗ ರಚಿಸಿ ಒಳ ಮೀಸಲು ಹಂಚುವ ಅಧಿಕಾರ ರಾಜ್ಯ ಸರಕಾರಗಳಿಗೆ ಇದೆ ಎಂದು ಸುಪ್ರೀಂ ಕೋರ್ಟ್‌ನ 7 ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ ಗುರುವಾರ ಮಹತ್ವದ ತೀರ್ಪು ನೀಡಿದೆ. ಆ ಮೂಲಕ ಎಸ್‌ಸಿ-ಎಸ್‌ಟಿ ಸಮುದಾಯದೊಳಗೇ ಅತ್ಯಂತ ಹಿಂದುಳಿದ ಸಮುದಾಯಗಳಿಗೆ ಒಳಮೀಸಲಾತಿ ಕಲ್ಪಿಸುವ ಅವಕಾಶ ನೀಡಲಾಗಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಮೀಸಲಾತಿಯಲ್ಲಿ ಉಪವರ್ಗ ರಚಿಸಿ ಒಳಮೀಸಲು ನೀಡುವ ವಿಚಾರದಲ್ಲಿ 6:1ರ ಅನುಪಾತದಲ್ಲಿ ಬಹುಮತದ ತೀರ್ಪು ನೀಡಿದೆ. 6 ನ್ಯಾಯಮೂರ್ತಿಗಳು ಪರವಾಗಿ ಪ್ರತ್ಯೇಕ ತೀರ್ಪು ನೀಡಿದರೂ ಆದೇಶ ಒಂದೇ ಆಗಿದೆ. ಒಬ್ಬರು ನ್ಯಾಯಮೂರ್ತಿ ಮಾತ್ರ ಭಿನ್ನ ತೀರ್ಪು ನೀಡಿದ್ದಾರೆ. ಉಪವರ್ಗ ರಚಿಸುವ ರಾಜ್ಯಗಳ ನಿರ್ಧಾರವನ್ನು ಪ್ರಮಾಣೀಕರಿಸಬಹುದಾದ ಹಾಗೂ ದಾಖಲೆಯಲ್ಲಿರುವ ದತ್ತಾಂಶಗಳಿಂದ ಸಮರ್ಥಿಸಬೇಕು. ರಾಜ್ಯಗಳು ತಮಗೆ ಬೇಕಾದ ಹಾಗೆಲ್ಲ ನಿರ್ಧಾರ ಕೈಗೊಳ್ಳುವಂತಿಲ್ಲ ಎಂದು ಪೀಠ ಸ್ಪಷ್ಟವಾಗಿ ಹೇಳಿದೆ. ಎಸ್‌ಸಿ-ಎಸ್‌ಟಿ ಸಮುದಾಯದೊಳಗೆ ಹಲವು ಉಪ ಜಾತಿಗಳಿದ್ದು ಶತಮಾನಗಳಿಂದ ಸೌಲಭ್ಯ ವಂಚಿತವಾಗಿವೆ. ರಾಜ್ಯಗಳು ಇಂಥ ಸಮುದಾಯಗಳನ್ನು ಪತ್ತೆ ಹಚ್ಚಿ ಅನುಕೂಲ ಮಾಡಿಕೊಡಬೇಕು ಎಂದು ನ್ಯಾ.ಬಿ.ಆರ್.ಗವಾಯಿ ಸಲಹೆ ನೀಡಿದರು.

2004ರಲ್ಲಿ ಮೀಸಲು ನೀತಿಯಲ್ಲಿ ಇದೇ ಉಪ ವರ್ಗ ರಚಿಸುವ ವಿಚಾರದಲ್ಲಿ ಇ.ವಿ.ಚಿನ್ನಯ್ಯ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠ, 'ಎಸ್‌ಸಿ-ಎಸ್‌ಟಿ ಏಕರೂಪದ ಗುಂಪುಗಳಾಗಿವೆ. ರಾಜ್ಯಗಳು ಈ ಗುಂಪನ್ನು ಮತ್ತೆ ವಿಂಗಡಿಸಿ ಮೀಸಲಾತಿಯಲ್ಲಿ ಮತ್ತೊಂದು ಮೀಸಲಾತಿ ಕಲ್ಪಿಸಲು ಸಾಧ್ಯವಿಲ್ಲ' ಎಂದು ತೀರ್ಪು ನೀಡಿತ್ತು.

ಪರಿಶಿಷ್ಟ ಜಾತಿಯಲ್ಲಿ ಉಪ ವರ್ಗ ಕಲ್ಪಿಸಿದರೆ ಅದು ಸಂವಿಧಾನದ ಆರ್ಟಿಕಲ್ 14(ಸಮಾನತೆಯ ಹಕ್ಕು) ಉಲ್ಲಂಘಿಸಿದಂತಾಗುತ್ತದೆ ಎಂದು ಹೇಳಿತ್ತು. ಈಗ 2024ರ ತೀರ್ಪು 20 ವರ್ಷಗಳ ಹಿಂದಿನ ಆದೇಶಕ್ಕೆ ಪೂರ್ಣ ವಿರುದ್ಧವಾಗಿದೆ ಎಂಬುದು ಗಮನಾರ್ಹ.

ಕೇಜ್ರಿವಾಲ್ ಸರಕಾರಕ್ಕೆ ಸುಪ್ರೀಂ ಛೀಮಾರಿ

ಸಂಸದೆ ಸ್ವಾತಿ ಮೇಲೆ ಹಲ್ಲೆ ಪ್ರಕರಣ ಆರೋಪಿ ಗೂಂಡಾ

ದೆಹಲಿ: ಆಮ್ ಆದ್ಮಿ ಪಕ್ಷದ ಸಂಸದೆ ಸ್ವಾತಿ ಮಲಿವಾಲ್ ಮೇಲೆ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಮನೆಯಲ್ಲೇ ಸಿಎಂ ಆಪ್ತ ಬಿಭವ್ ಕುಮಾರ್ ಮೇ 13ರಂದು ಹಲ್ಲೆ ನಡೆಸಿದ ಪ್ರಕರಣದಲ್ಲಿ ಜಾಮೀನು ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ರಾಜ್ಯ ಸರಕಾರಕ್ಕೆ ಛೀಮಾರಿ ಹಾಕಿತು. ಇಂಥ ಗೂಂಡಾನನ್ನು ಸಿಎಂ ಮನೆಯಲ್ಲಿ ಕೆಲಸ ಮಾಡಲು ಅವಕಾಶ ನೀಡಲಾಗಿತ್ತೇ? ಎಂದು ತ್ರಿಸದಸ್ಯ ಪೀಠ ಪ್ರಶ್ನಿಸಿತು.

ದೆಹಲಿ ಹೈಕೋರ್ಟ್ ಘಟನೆ ಕುರಿತು ದಾಖಲಿಸಿರುವ ವಿವರಗಳನ್ನು ಓದಿದರೆ ಆಘಾತವಾಗುತ್ತದೆ ಎಂದು ಪ್ರತಿಕ್ರಿಯಿಸಿದ ಪೀಠ, ಈ ಬಗ್ಗೆ ಅರ್ಜಿದಾರನ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರ ಗಮನ ಸೆಳೆಯಿತು. ನ್ಯಾ.ಸೂರ್ಯ ಕಾಂತ್, ನ್ಯಾ.ದೀಪಂಕರ್ ದತ್ತಾ ಮತ್ತು ನ್ಯಾ.ಉಜ್ವಲ್ ಭುಯಾನ್ ಅವರುಗಳ ತ್ರಿಸದಸ್ಯ ಪೀಠ ಬಿಭವ್ ಕುಮಾರ್ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿದೆ.

ಹಲ್ಲೆ ಪ್ರಕರಣ ಬಲು ಗಂಭೀರವಾಗಿದೆ ಎಂದು ಜು. 12ರಂದು ಅಭಿಪ್ರಾಯಪಟ್ಟಿದ್ದ ದೆಹಲಿ ಹೈಕೋರ್ಟ್, ಬಿಭವ್ ಕುಮಾರ್‌ಗೆ ಜಾಮೀನು ನಿರಾಕರಿಸಿತ್ತು. ಆ ಆದೇಶ ಪ್ರಶ್ನಿಸಿ ಆರೋಪಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಅಲ್ಲಿಯೂ ಹಿನ್ನಡೆಯಾಗಿದೆ. 'ನನ್ನ ವಿರುದ್ಧದ ಆರೋಪ ಸುಳ್ಳು. ಅಲ್ಲದೇ, ತನಿಖೆ ಪೂರ್ಣಗೊಂಡಿರು ವುದರಿಂದ ನ್ಯಾಯಾಂಗ ಬಂಧನದಲ್ಲಿಡುವ ಅಗತ್ಯವಿಲ್ಲ' ಎಂದು ಅರ್ಜಿದಾರ ವಾದಿಸಿದ್ದ. ಆರೋಪಿ ಬಿಭವ್ ಕುಮಾರ್ ಮುಖ್ಯ ಮಂತ್ರಿಯ ಅಧಿಕೃತ ನಿವಾಸಕ್ಕೆ 'ಗೂಂಡಾ'ನಂತೆ ನುಗ್ಗಿ ಒಬ್ಬ ಮಹಿಳೆ, ಅದೂ ಸಂಸದೆ ಮೇಲೆಯೇ ಹಲ್ಲೆ ನಡೆಸಿದ್ದಾರೆ ಎಂದು ಪೀಠ ಸಿಟ್ಟಿನಿಂದ ಪ್ರತಿಕ್ರಿಯಿಸಿದೆ. ಅಲ್ಲದೇ, ಸಿಎಂ ನಿವಾಸ ಎಂಬುದು ಖಾಸಗಿ ಬಂಗಲೆಯೇ? ಇಂತಹ 'ಗೂಂಡಾ'ಗಳು ಸಿಎಂ ನಿವಾಸದಲ್ಲಿ ಕೆಲಸ ಮಾಡಬೇಕಾ? ಎಂದು ವಕೀಲ ಸಿಂಘ್ವಿ ಅವರಿಗೆ ಪ್ರಶ್ನಿಸಿದ ಪೀಠ, ದೆಹಲಿ ಸರಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಸಮಾಚಾರ ಸಣ್ಣದಲ್ಲ

ಪೆರಾಜೆಯಲ್ಲಿ ಗುಡ್ಡ ಕುಸಿತ: ತೋಟಕ್ಕೆ ಹಾನಿ

ಸುಳ್ಯ: ಪೆರಾಜೆ ಗ್ರಾಮದ ಮಜಿಕೋಡಿಯಲ್ಲಿ ಗುಡ್ಡ ಕುಸಿತವಾಗಿ ಉಂಟಾಗಿ ವಿಶ್ವನಾಥ ಎಂಬವರ ಅಡಿಕೆ ತೋಟಕ್ಕೆ ಹಾನಿಯಾದ ಘಟನೆ ಸಂಭವಿಸಿದೆ. ಕೊಡಗು ಮತ್ತು ದಕ್ಷಿಣ ಕನ್ನಡ ಗಡಿ ಭಾಗದಲ್ಲಿ ಭಾರೀ ಮಳೆಯಾಗುತ್ತಿದ್ದು ಹಲವು ಕಡೆ ಬರೆ ಕುಸಿದು ಹಾನಿಯಾಗುತ್ತಿದೆ. ಗಡಿ ಗ್ರಾಮ ಪೆರಾಜೆಯಲ್ಲಿ ಹಲವು ಕಡೆಗಳಲ್ಲಿ ಹಾನಿ ಉಂಟಾಗಿದೆ, ಚಾಮಕಜೆ, ನಿಡ್ಯಮಲೆ ರಸ್ತೆ ಸಂಪರ್ಕ ಕಡಿತ ಉಂಟಾಗಿದೆ, ಚಾಮಕಜೆ ಕುಶಾಲಪ್ಪ ಎಂಬವರ ಮನೆಗೆ ಮಣ್ಣು ಕುಸಿದು ಹಾನಿಯಾಗಿದೆ. ನಿಡ್ಯಮಲೆ, ಮಜಿಕೋಡಿ ಭಾಗದಲ್ಲಿ ಗುಡ್ಡ ಕುಸಿದು ಪಂಪ್ ಶೆಡ್ ಸಂಪೂರ್ಣ ಹಾನಿಯಾಗಿದೆ, ಕೂರ್ನಡ್ಕದಿಂದ ಪೆರಾಜೆ ಸಂಪರ್ಕಿಸುವ ಕಾಲು ಸಂಕ ಮುಳುಗಡೆಯಾಗಿದ್ದು, ರಸ್ತೆ ಮಳೆ ನೀರಿಗೆ ಕೊಚ್ಚಿ ಹೋಗಿದ್ದು ಸಂಪರ್ಕ ಕಡಿತಗೊಂಡಿದೆ.

ಅಧ್ಯಕ್ಷರಾಗಿ ಹೂವಿನ ಮಂಡಿ ನಾಗರಾಜ್ ಆಯ್ಕೆ

ಕಡೂರು: ಪಟ್ಟಣದ ಶ್ರೀಪ್ರಸನ್ನ ಗಣಪತಿ ಸೇವಾ ಸಮಿತಿಯ 38ನೇ ವರ್ಷದ 2024–25ನೇ ಸಾಲಿನ ಸಮಿತಿಯ ಅಧ್ಯಕ್ಷರಾಗಿ ಹೂವಿನಮಂಡಿ ನಾಗರಾಜ್ ಆಯ್ಕೆಯಾದರು. ಪೆಂಡಾಲ್ ಆವರಣದಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ 2023–24ನೇ ಸಾಲಿನ ಸಮಿತಿಯ ಅಧ್ಯಕ್ಷರಾಗಿದ್ದ ಎನ್.ಎಚ್ .ನಂಜುಂಡಸ್ವಾಮಿ ಗಣೇಶ ಮಹೋತ್ಸವದ ಖರ್ಚು–ವೆಚ್ಚಗಳ ಲೆಕ್ಕ ಪತ್ರಗಳ ಮಂಡನೆ ಮಾಡಿದರು. ಬಳಿಕ ಸಮಿತಿಯ ನೂತನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು. ನೂತನ ಅಧ್ಯಕ್ಷ ಹೂವಿನ ಮಂಡಿಕೆ.ಎಂ. ನಾಗರಾಜ್ ಮಾತನಾಡಿ, ಸಮಿತಿಯ ಎಲ್ಲಾ ಸದಸ್ಯರ ಸಹಕಾರದೊಂದಿಗ 'ಅವಿರೋಧವಾಗಿ ಆಯ್ಕೆಗೊಳಿಸಿದ್ದಾರೆ. ಈ ಸಂದರ್ಭದಲ್ಲಿ ಸಮಿತಿಯ ಪದಾಧಿಕಾರಿಗಳಾದ ಕೆ.ಜಿ.ಪ್ರಹ್ಲಾದ್, ಕೆ.ಬಿ. ಸೋಮೇಶ್, ಟಿ. ರಂಗಪ್ಪ, ಕೆ.ಜಿ.ಲೋಕೇಶ್ವರ್, ಕೆ.ಜಿ.ಶ್ರೀನಿವಾಸ್‌ಮೂರ್ತಿ, ಜಿ.ಟಿ.ಬಸವರಾಜ್, ಕೆ.ಜಿ.ಕೃಷ್ಣಮೂರ್ತಿ, ಎನ್.ಎಚ್. ಚಂದ್ರಪ್ಪ, ಜಯಣ್ಣ, ಸೋಮಶೇಖರ್, ಭಿಮ್ಮಾಜೀ, ಹೋಳೆಯಪ್ಪ, ದೀಪು ಹೊಳೆಯಪ್ಪ, ತಿಪ್ಪೇಶ್ ದಳವಾಯಿ ಮತ್ತಿತರಿದ್ದರು.

ಪ್ರವಾಸಿಗರಿಗೆ ಕಿರುಕುಳ: ವ್ಯಕ್ತಿಯ ಬಂಧನ

ಚಿಕ್ಕಮಗಳೂರು: ನಿಷೇಧಿತ ಅರಣ್ಯ ಪ್ರದೇಶದಲ್ಲಿ ಪ್ರವಾಸಿಗರನ್ನು ಅಡ್ಡಗಟ್ಟಿ ಕಿರುಕುಳ ನೀಡುತ್ತಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ಎನ್ . ಜೆ.ಮಹೇಂದ್ರ ಎಂಬಾತ ಭದ್ರಾ ಅಭಯಾರಣ್ಯ ನಿಷೇಧಿತ ಪ್ರದೇಶದಲ್ಲಿ ತಾನೊಬ್ಬ ಅರಣ್ಯ ಸಿಬ್ಬಂದಿ ಎಂದು ಹೇಳಿಕೊಂಡು ಪ್ರವಾಸಿಗರಿಗೆ ಕಿರಿಕಿರಿ ಮಾಡುತ್ತಿದ್ದ ಆರೋಪ ಎದುರಾಗಿತ್ತು. ಜೀಪನ್ನು ನಿಷೇಧಿತ ಅರಣ್ಯ ಪ್ರದೇಶದಲ್ಲಿ ರಸ್ತೆಯ ಪಕ್ಕ ನಿಲ್ಲಿಸಿಕೊಂಡು ಪ್ರವಾಸಿಗರಿಗೆ ತೊಂದರೆ ನೀಡುತ್ತಿದ್ದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಗಿತ್ತು. ಸಂಬಂಧಪಟ್ಟ ಇಲಾಖೆಯವರು ಕ್ರಮವಹಿಸುವಂತೆ ಒತ್ತಾಯವು ಕೇಳಿ ಬಂದಿದ್ದು, ಲಿಂಗದಹಳ್ಳಿ ಪೊಲೀಸರು ವ್ಯಕ್ತಿಯನ್ನು ಬಂಧಿಸಿ ವಾಹನ ವಶಪಡಿಸಿಕೊಂಡಿದ್ದಾರೆ.

ಗೋಮಾಳ ಜಾಗ ನಿವೇಶನಕ್ಕೆ ಮೀಸಲಿಡಿ

ಚಿಕ್ಕಮಗಳೂರು: ಸರಕಾರಿ ಗೋಮಾಳ ಜಾಗವನ್ನು ನಿವೇಶನವನ್ನಾಗಿ ಮಂಜೂರುಗೊಳಿಸಿ ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಡಬೇಕು ಎಂದು ಬೆಟ್ಟದಮನೆ ಗ್ರಾಮಸ್ಥರು ಮೂಡಿಗೆರೆ ತಹಸೀಲ್ದಾರ್ ರಾಜಶೇಖರಮೂರ್ತಿಗೆ ಗುರುವಾರ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿದ ಕಿರುಗುಂದ ಗ್ರಾ.ಪಂ. ಉಪಾಧ್ಯಕ್ಷ ಪೂರ್ಣೇಶ್ ಬೆಟ್ಟದಮನೆ ಗ್ರಾಮದ ಸರ್ವೆ ನಂ.120ರಲ್ಲಿ 5.21 ಎಕರೆ ಜಾಗವನ್ನು ಪರಿಶಿಷ್ಟ ಜಾತಿ ಕಾಲೋನಿಯ ಗ್ರಾಮಸ್ಥರಿಗೆ ಮೀಸಲಿರಿಸಿ ನಿವೇಶನ ವನ್ನಾಗಿ ಮಾರ್ಪಾಡಿಸಿ ಹಂಚಬೇಕು ಎಂದು ಆಗ್ರಹಿಸಿದರು. ಗ್ರಾಮದ ಜಾಗವನ್ನು ಸ್ಥಳೀಯ ನಿವೇಶನ ರಹಿತರಿಗೆ, ಬಡವರಿಗೆ ಮೀಸಲಿಡಬೇಕು. ಈ ಜಾಗ ಹೊ ರತುಪಡಿಸಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬೇರ‍್ಯಾವ ಜಾಗವಿಲ್ಲ. ಹೀಗಾಗಿ ಗ್ರಾ.ಪಂ. ಆಡಳಿತ ಮಂಡಳಿ ಸರ್ವೆ ನಂ.120ರ 5.21 ಗುಂಟೆ ಜಾಗವನ್ನು ಪರಿಶಿಷ್ಟರಿಗೆ ಮೀಲಿಡಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಉಮೇಶ್, ಸುಂದರೇಶ್, ಕಿರಣ್, ಅರುಣಾ, ಜಯಪ್ಪ, ರಮೇಶ್, ರೇವಣ್ಣ, ಪರಮೇಶ್, ಪ್ರದೀಪ್, ಧರ್ಮ, ರಾಜು, ರಘು, ಶಿವರಾಜು, ಅರುಣ್, ಕುಮಾರ್, ಕೃಷ್ಣ, ಸಂದೀಪ್ ಮತ್ತಿತರರು ಹಾಜರಿದ್ದರು.

ವಿ+
ಸೋಮವಾರ

{ ಮಂಕಾಳ ಎಸ್. ವೈದ್ಯ } ಸಚಿವ

ಮಂಗಳೂರಿನ ಮೀನುಗಾರಿಕಾ ಕಾಲೇಜು ವಿಶ್ವವಿದ್ಯಾಲಯವಾಗುವ ಎಲ್ಲ ಅರ್ಹತೆ ಹೊಂದಿದೆ. 65 ಎಕರೆ ಜಾಗವನ್ನೂ ಹೊಂದಿದೆ. ಬೇರೆ ರಾಜ್ಯಗಳಿಗೆ ನಮ್ಮ ಕಾಲೇಜು ಮಾದರಿಯಾಗಿದ್ದು, ಇಲ್ಲಿ ಕಲಿತವರು ತಮ್ಮ ರಾಜ್ಯಗಳಿಗೆ ತೆರಳಿ ಹೊಸ ಕಾಲೇಜು, ವಿಶ್ವವಿದ್ಯಾಲಯಗಳನ್ನು ರಚಿಸಲು ಸಾಧ್ಯವಾಗಿದ್ದರೂ ರಾಜ್ಯದಲ್ಲಿ ಈ ಪ್ರಯತ್ನದಲ್ಲಿ ನಾವು ಹಿಂದುಳಿದಿದ್ದೇವೆ.

ಫಲ್ಗುಣಿ ನದಿಯಲ್ಲಿ ನೀರಿನ ಹರಿವು ಹೆಚ್ಚಳ | ಗ್ರಾಮಗಳಿಗೆ ನುಗ್ಗಿದ ನೀರು, ಜನಜೀವನ ಅಸ್ತವ್ಯಸ್ತ

ದಕ ಜಿಲ್ಲೆ ಘಟ್ಟ ಪ್ರದೇಶಗಳಲ್ಲಿ ಬಿಡದೆ ಸುರಿಯುತ್ತಿದೆ ಮಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರುವಾರ ಮುಂಜಾನೆಯಿಂದ ಮಳೆ ಕೊಂಚ ತಗ್ಗಿದೆ. ಆದರೂ ಘಟ್ಟ ಪ್ರದೇಶಗಳಲ್ಲಿ ಮಳೆ ಮುಂದುವರೆದಿದ್ದರಿಂದ ನದಿಗಳಲ್ಲಿ ನೀರಿನ ಮಟ್ಟ ಏರಿಕೆ ಕಂಡು ಅನೇಕ ಕಡೆ ನೆರೆ ನೀರು ನಿಂತು ಜನಜೀವನ ಅಸ್ತವ್ಯಸ್ತಗೊಂಡಿದೆ.

ಮಂಗಳೂರು ನಗರದಲ್ಲಿ ರಾತ್ರಿ ಸುರಿದ ಮಳೆ ಹೊರವಲಯದ ಗುರುಪುರ ಫಲ್ಗುಣಿ ನದಿ ಹರಿವಿನ ಮಟ್ಟದಲ್ಲಿ ಏರಿಕೆ ಕಂಡು ಸುತ್ತ ಮುತ್ತಲ ಗ್ರಾಮಗಳಿಗೆ ನೀರು ನುಗ್ಗಿತ್ತು. ಮೂಡುಶೆಡ್ಡೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಅರ್ಬಿ ದಿಡ್ಡೆ ಹೌಸ್ ಸಂಜೀವ್ ಅವರ ಮನೆಗೆ ನೀರು ನುಗ್ಗಿತ್ತು.ರಾತ್ರಿ ವೇಳೆ ಮನೆ ಒಳಗೆ ನೀರು ನುಗ್ಗಿತ್ತು. ಆದ್ರೆ ಗ್ರಾಮೀಣ ಪ್ರದೇಶವಾದ ಕಾರಣ ಕಾರ್ಯಾಚರಣೆ ನಡೆಸಲಾಗದೆ ಇಂದು ಬೆಳಿಗ್ಗೆ ಮಂಗಳೂರು ಪಾಂಡೇಶ್ವರ ಅಗ್ನಿ ಶಾಮಕ ದಳದ ಅಧಿಕಾರಿಗಳು ಭೇಟಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ.

ಅಗ್ನಿ ಶಾಮಕ ದಳದ ಅಧಿಕಾರಿ ಪ್ರವೀಣ್ ಕೆ ಎನ್, ಲೀಡಿಂಗ್ ಫೈಯರ್ ಮ್ಯಾನ್ ಗಿರಿಧರ್, ಸ್ಥಳೀಯ ಪಂಚಾಯತ್ ವಿ.ಎ ಸಂತೋಷ್, ಪಂಚಾಯತ್ ಅಧ್ಯಕ್ಷ ಅನೀಲ್, ಸ್ಥಳೀಯ ಪಂಚಾಯತ್ ಸದಸ್ಯರಾದ ಕಿರಣ್ ಶೆಟ್ಟಿ, ಸುಕೇಶ್ ಕೊಟ್ಟಾರಿ, ಸ್ಥಳೀಯ ನಿವಾಸಿಗಳ ಸಹಕಾರದೊಂದಿಗೆ ರಕ್ಷಣಾ ಕಾರ್ಯದಲ್ಲಿ ಭಾಗಿ ಬೋಟ್ ಮೂಲಕ ಮನೆಯಲ್ಲಿದ್ದವರನ್ನು ಸ್ಥಳಾಂತರ ಮಾಡಿದ್ದಾರೆ.

ತೀರ್ಥರಾಮ್ ಗೌಡ ಎಂಬವರಿಗೆ ಸೇರಿದ್ದ ಕೃಷಿ ತೋಟ ಕುಸಿದು ಮನೆ ಅಂಗಳಕ್ಕೆ ಬಿದ್ದಿದೆ. ಈ ವೇಳೆ ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಮಾಜಿ ಶಾಸಕ ಸಂಜೀವ ಮಠಂದೂರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕೆಪಿಸಿಸಿ ಕಾರ್ಯಧ್ಯಕ್ಷ ಮಂಜುನಾಥ ಭಂಡಾರಿ ಭೇಟಿ: ಕೆಪಿಸಿಸಿ ಕಾರ್ಯಧ್ಯಕ್ಷ ಮಂಜುನಾಥ ಭಂಡಾರಿಯವರು ಮಂಗಳೂರು ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾದ ಇನಾಯತ್ ಅಲಿ, ಗುರುಪುರ ಬ್ಲಾಕ್ ಅಧ್ಯಕ್ಷರಾದ ಸುರೇಂದ್ರ ಕಂಬಳಿ, ದಕ್ಷಿಣ ಕನ್ನಡ ಜಿಲ್ಲಾ ಆರ್‌ಜಿಪಿಆರ್‌ಎಸ್ ಘಟಕದ ಅಧ್ಯಕ್ಷರಾದ ಸುಭಾಶ್ಚಂದ್ರ ಕೊಳ್ನಡು , ದಕ್ಷಿಣ ಕನ್ನಡ ಜಿಲ್ಲಾ ಕಾರ್ಮಿಕ ಘಟಕದ ಅಧ್ಯಕ್ಷರಾದ ಲಾರೆನ್ಸ್ ಡಿಸೋಜಾ, ಬೆಂಗ್ರೆ ವಲಯ ಅಧ್ಯಕ್ಷರಾದ ಅಶ್ರಫ್ ಹಾಗೂ ಸ್ಥಳಿಯ ಕಾಂಗ್ರೆಸ್ ಪಕ್ಷದ ನಾಯಕರು ಕಾರ್ಯಕರ್ತರು ಉಪಸ್ಥಿತರಿದ್ದು ಅಧ್ಯಕ್ಷರಿಗೆ ಮಾಹಿತಿ ನೀಡಿದರು.

ಅಂಗಳಕ್ಕೆ ಗುಡ್ಡ ಕುಸಿತ

ಗುಡ್ಡದ ಮೇಲಿದ್ದ ಅಡಿಕೆ ತೋಟ ಕುಸಿದು ಮನೆಯಂಗಳದ ಮೇಲೆ ಬಿದ್ದ ಘಟನೆ ಪುತ್ತೂರಿನ ಪುಣಚ ಗ್ರಾಮದ ಬಾಲ ಕುಮೇರಿಯಲ್ಲಿ ನಡೆದಿದೆ.

ಗ್ಯಾರಂಟಿ ಹೆಸರಲ್ಲಿ ಕಾಂಗ್ರೆಸ್‌ನಿಂದ ಜನತೆಗೆ ವಂಚನೆ: ಶಾಸಕ ಯಶ್ಪಾಲ್

ಉಡುಪಿ: ಗ್ಯಾರಂಟಿ ಯೋಜನೆ ಮೂಲಕ ಜನರನ್ನು ಮೋಡಿ ಮಾಡಿ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಇದೀಗ ಇಡೀ ರಾಜ್ಯದ ಜನತೆಗೆ ಮೋಸ ಮಾಡಿದೆ. ರಾಜ್ಯದ ಅಭಿವೃದ್ಧಿ ಬಿಟ್ಟು ತಮ್ಮ ಕುಟುಂಬದ ಆಸ್ತಿ ವೃದ್ಧಿಸುವ ಕೆಲಸ ಮಾಡುತ್ತಿದೆ ಎಂದು ಶಾಸಕ ಯಶ್ಪಾಲ್ ಸುವರ್ಣ ಆರೋಪಿಸಿದರು.

ಅವರು ಬುಧವಾರ ರಾಜ್ಯ ಕಾಂಗ್ರೆಸ್ ಸರಕಾರದ ಮುಡಾ ಹಗರಣ ಹಾಗೂ ವಾಲ್ಮೀಕಿ ನಿಗಮದ ಹಗರಣವನ್ನು ಖಂಡಿಸಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ನೇತೃತ್ವದಲ್ಲಿ ಮಣಿಪಾಲ ರಜತಾದ್ರಿ, ಜಿಲ್ಲಾಧಿಕಾರಿಗಳ ಕಚೇರಿಯ ಮುಂಭಾಗದಲ್ಲಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು.

ನಿರಂತರ ಹಗರಣಗಳ ಸರದಾರ ಎಂಬ ಬಿರುದನ್ನು ಸಿದ್ದರಾಮಯ್ಯ ಸಂಪುಟದ ಸಚಿವರು ಪಡೆದುಕೊಂಡಿದ್ದಾರೆ. ಈಗಾಗಲೇ ಮುಡಾ ಹಗರಣ, ವಾಲ್ಮೀಕಿ ಹಗರಣದಿಂದ ಕಾಂಗ್ರೆಸಿನ ಸಚಿವರ ಭ್ರಷ್ಟಾಚಾರವು ಜಗಜ್ಜಾಹೀರಾಗಿದೆ ಎಂದರು.

ಬಹಿರಂಗ ಚರ್ಚೆಗೆ ಬನ್ನಿ: ಉಡುಪಿ ಜಿಲ್ಲೆಯಲ್ಲಿ ಬಹಳಷ್ಟು ಕಾಂಗ್ರೆಸ್ ನಾಯಕರು ವಿಸಿಟಿಂಗ್ ಕಾರ್ಡ್, ಮನವಿ ಹಿಡಿದು ಮಾಧ್ಯಮಗಳ ಮುಂದೆ ಹೋಗುತ್ತಿದ್ದಾರೆ. ಕಾಂಗ್ರೆಸ್ ರಚನೆಯಾದ 14 ತಿಂಗಳ ಅವಧಿಯಲ್ಲಿ ಉಡುಪಿ ಸಹಿತ ಕರಾವಳಿಯ ಮೂರು ಜಿಲ್ಲೆಗಳಿಗೆ ಕಾಂಗ್ರೆಸ್ ಸರಕಾರದಿಂದ ಯಾವುದೆಲ್ಲ ಅನುದಾನ ಬಂದಿದೆ ಎಂಬ ಬಹಿರಂಗ ಚರ್ಚೆಗೆ ಬನ್ನಿ, ನಾವು ಸಿದ್ದರಿದ್ದೇವೆ ಎಂದು ಸವಾಲೆಸ ಅವರು, ಕೇವಲ ಫೇಸ್ಬುಕ್, ಸಾಮಾಜಿಕ ಜಾಲತಾಣಕ್ಕೆ ಸೀಮಿತವಾಗದಿರಿ ಎಂದು ಗುಡುಗಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ಜಿಲ್ಲಾಧ್ಯಕ್ಷ ವಿಜಯ ಕುಮಾರ್ ಕೊಡವೂರು, ಬಿಜೆಪಿ ಮುಖಂಡರಾದ ಐರೋಡಿ ವಿಠಲ ಪೂಜಾರಿ, ರಾಜೇಶ್ ಕುಮಾರ್ ಕಾವೇರಿ, ಪೃಥ್ವಿರಾಜ್ ಹೆಗ್ಡೆ ಬಿಲ್ಲಾಡಿ, ಕಿರಣ್ ಕುಮಾರ್ ಬೈಲೂರು, ಸಂಧ್ಯಾ ರಮೇಶ್, ಪ್ರಕಾಶ್ ಶೆಟ್ಟಿ ಪಾದೆಬೆಟ್ಟು ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.

ರಾಜ್ಯ ಕಾಂಗ್ರೆಸ್ ಸರಕಾರದ ಮುಡಾ ಹಗರಣ ಹಾಗೂ ವಾಲ್ಮೀಕಿ ನಿಗಮದ ಹಗರಣವನ್ನು ಖಂಡಿಸಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ನೇತೃತ್ವದಲ್ಲಿ ಮಣಿಪಾಲ ರಜತಾದ್ರಿ, ಜಿಲ್ಲಾಧಿಕಾರಿಗಳ ಕಚೇರಿಯ ಮುಂಭಾಗದಲ್ಲಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಶಾಸಕ ಯಶ್ಪಾಲ್ ಸುವರ್ಣ ಮಾತನಾಡಿದರು.

ಶ್ರೀಗಳ ಜನ್ಮದಿನ ಹಿನ್ನೆಲೆ, ವ್ಯಸನ ಮುಕ್ತ ದಿನಾಚರಣೆ



ದಾವಣಗೆರೆ: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ದಾವಣಗೆರೆ ಹಾಗೂ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಆ.1 ರ ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮ.ನಿ.ಪ್ರ ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆ ಅಂಗವಾಗಿ ಆಚರಿಸುವ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಮಹಾಂತ ಶಿವಯೋಗಿಗಳ ಭಾವಚಿತ್ರಕ್ಕೆ ಪುಷ್ಪ ನಮನದ ಮೂಲಕ ಗೌರವ ಸಲ್ಲಿಸಲಾಯಿತು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿಯವರು ಪುಷ್ಪ ನಮನ ಸಲ್ಲಿಸಿದರು. ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಗ್ರಾಮ ಸ್ವರಾಜ್ ಅಭಿಯಾನದ ಅವರಗೆರೆ ರುದ್ರಮುನಿ, ಗ್ರಾಮ ಸೇವಾ ಸೇವಾಶ್ರಮ ಸಂಚಾಲಕರಾದ ಕಡ್ಲೆಬಾಳು ಪ್ರಕಾಶ್, ಕಸ್ತೂರಬಾಗಾಂಧಿ ಸಮಾಜದ ಮಹಿಳಾ ಸಂಚಾಲಕಿ ಉಷಾರಾಣಿ.ಆರ್, ಹಿರಿಯ ಸಹಾಯಕ ನಿರ್ದೇಶಕರಾದ ಧನಂಜಯ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ನೀರು ಸರಬರಾಜಿಗೆ ಶಾಸಕಿ ನಯನಾ ಸೂಚನೆ

ಕಳಸ: ಪಟ್ಟಣದಲ್ಲಿ ನಡೆದ ಕಳಸ ಮತ್ತು ಮೂಡಿಗೆರೆ ತಾಲೂಕುಗಳ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಶಾಸಕಿ ನಯನಾ ಮೋಟಮ್ಮ ಅವರು ಅಧಿಕಾರಿಗಳಿಗೆ ವಿವಿಧೆಡೆ ನಡೆಯುತ್ತಿರುವ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಿದರು.

ಸಭೆಯಲ್ಲಿ ಕೆಡಿಪಿ ಸದಸ್ಯ ಅಬ್ದುಲ್ ಶುಕೂರ್ ಮಾತನಾಡಿ, ತಿಂಗಳಿಗೆ 2 ಲಕ್ಷ ರೂಪಾಯಿ ನಿರ್ವಹಣಾ ವೆಚ್ಚವನ್ನು ಪಾವತಿಸಿದರೂ ಕಳಸಕ್ಕೆ ಹೊನ್ನೆಕಾಡು ನೀರು ತಲುಪುತ್ತಿಲ್ಲ ಎಂದು ದೂರಿದರು. ಆಗ ಶಾಸಕಿ ನಯನಾ ಮೋಟಮ್ಮ, ಕಳಸ ಪಟ್ಟಣಕ್ಕೆ ನೀರು ಪೂರೈಸುವ ಹೊನ್ನೆಕಾಡು ಯೋಜನೆಯ ನಿರ್ವಹಣೆ ಸಮಸ್ಯೆ ಸರಿಪಡಿಸಿ ಒಂದು ವಾರದೊಳಗೆ ನೀರು ಸರಬರಾಜು ಮಾಡಬೇಕು ಎಂದು ಜಿಲ್ಲಾ ಪಂಚಾಯಿತಿ ಎಂಜಿನಿಯರ್‌ಗೆ ತಾಕೀತು ಮಾಡಿದರು.

ಶಾಸಕಿಯ ಖಡಕ್ ಮಾತಿಗೆ ಎಂಜಿನಿಯರ್ ನಾಗರಾಜ್ ಮೂರು ದಿನದಲ್ಲಿ ಈ ಬಗ್ಗೆ ಕ್ರಮ ವಹಿಸುವ ಭರವಸೆ ನೀಡಿದರು. ಬರ ಪರಿಹಾರ ಕಾರ್ಯಕ್ರಮದ ಬೋರ್‌ವೆಲ್‌ಗಳ ಕೆಲಸವನ್ನೂ ಕೂಡ ಈವರೆಗೂ ಯಾಕೆ ಮುಗಿಸಿಲ್ಲ ಎಂದೂ ಶಾಸಕಿ ಇದೇ ಎಂಜಿನಿಯರ್ ಅವರಲ್ಲಿ ಅಸಮಾಧಾನ ಹೊರಹಾಕಿದರು.

ಮೂಡಿಗೆರೆ ಎಂಜಿಎಂ ಆಸ್ಪತ್ರೆಯ ಭೂಮಿ ಒತ್ತುವರಿ ಆದ ಬಗ್ಗೆ ಆಡಳಿತಾಧಿಕಾರಿ ಶಾಸಕಿಯ ಗಮನ ಸೆಳೆದರು. ಮೂಡಿಗೆರೆ ಪಟ್ಟಣದ ಪ್ರಮುಖ ಆಸ್ತಿ ಒತ್ತುವರಿ ಆಗಿದ್ದನ್ನು ಸಹಿಸುವುದಿಲ್ಲ ಎಂದ ಶಾಸಕಿ, ಕೂಡಲೇ ಆಸ್ಪತ್ರೆಯ ಭೂಮಿಯ ಒತ್ತುವರಿ ತೆರವು ಮಾಡುವಂತೆ ತಹಶೀಲ್ದಾರ್ ರಾಜಶೇಖರ್ ಅವರಿಗೆ ಸೂಚಿಸಿದರು.

ಮೂಡಿಗೆರೆ ಕ್ಷೇತ್ರದ 120 ಅಂಗನವಾಡಿ ಕೇಂದ್ರಗಳ ದುರಸ್ತಿ ಆಗಬೇಕಿದೆ, 19 ಕೇಂದ್ರಗಳಿಗೆ ವಿದ್ಯುತ್ ಸಂಪರ್ಕ ಇಲ್ಲ ಎಂಬುದನ್ನು ಶಿಶು ಕಲ್ಯಾಣ ಅಧಿಕಾರಿ ಶಾಸಕರ ಗಮನ ಸೆಳೆದರು.ಆಗ ಶಾಸಕಿ ಅಂಗನವಾಡಿಗಳ ದುರಸ್ತಿ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಮುಗಿಸಬೇಕು ಎಂದು ಎಂಜಿನಿಯರ್‌ಗೆ ಸೂಚಿಸಿದರು.

ಕೆಡಿಪಿ ಸದಸ್ಯ ರಫೀಕ್, ಈ ವರ್ಷದ ತಾಲ್ಲೂಕು ಪಂಚಾಯಿತಿಯ ಅನುದಾನ ವಾಪಸ್ ಹೋಗಿದೆ ಎಂದು ದೂರಿದರು. ಆಗ ಮಾತನಾಡಿದ ಶಾಸಕಿ ನಯನಾ ಮೋಟಮ್ಮ, ಈ ಅನುದಾನದ ಮೊದಲ ಕಂತಿಗೆ ನಮ್ಮ ಕಚೇರಿಯಿಂದಲೇ ಕ್ರಿಯಾ ಯೋಜನೆ ಮಾಡಿದ್ದೆವು. ಆದರೆ ಎರಡನೇ ಕಂತು ಬರುವಾಗ ವಿಳಂಬ ಆಗಿತ್ತು. ಮುಂದಿನ ಬಾರಿ ಯಾವುದೇ ಕಾರಣಕ್ಕೂ ಅನುದಾನ ವಾಪಸ್ ಹೋಗದಂತೆ ಎಚ್ಚರವಹಿಸಬೇಕಿದೆ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪಡಿತರ ಚೀಟಿ ತಿದ್ದುಪಡಿ ಮತ್ತಿತರ ಕೆಲಸಕ್ಕೆ ಕಳಸಕ್ಕೆ ವಾರದಲ್ಲಿ 2 ದಿನ ಫೂಡ್ ಇನ್ಸೆಕ್ಟರ್ ಬರಬೇಕು ಎಂಬ ಶುಕೂರ್ ಅವರ ಬೇಡಿಕೆಗೆ ಕೂಡಲೇ ಸ್ಪಂದಿಸಿದ ಶಾಸಕಿ ಈ ಬಗ್ಗೆ ತಹಶೀಲ್ದಾರ್‌ಗೆ ಸೂಚನೆ ನೀಡಿದರು.

ನೆರೆ ಪೀಡಿತ ಪ್ರದೇಶಗಳಿಗೆ ಬಿಜೆಪಿ ಶಾಸಕರ ಭೇಟಿ

ಚಿಕ್ಕಮಗಳೂರು: ಶಾಸಕರುಗಳಾದ ಡಾ.ಅಶ್ವಥ್ ನಾರಾಯಣ, ವಿ. ಸುನೀಲ್ ಕುಮಾರ್ ಮತ್ತು ಭೈರತೀ ಬಸವರಾಜು ನೇತೃತ್ವದ ತಂಡ ಜಿಲ್ಲೆಯ ನೆರೆ ಪೀಡಿತ ಪ್ರದೇಶಗಳಿಗೆ ಆ.2 ರಂದು ಭೇಟಿ ನೀಡಿ ಪರಿಶೀಲಿಸಲಿದೆ.

ಆ.1ರಂದು ರಾತ್ರಿ 8 ಗಂಟೆಗೆ ಮೂಡಿಗೆರೆ ಪಟ್ಟಣಕ್ಕೆ ಆಗಮಿಸಲಿದ್ದು, ಕಾಫಿಕೋರ್ಟ್‌ನಲ್ಲಿ ವಾಸ್ತವ್ಯ ಮಾಡಲಿದೆ. ಆ.2 ರಂದು ಬೆಳಗ್ಗೆ 9 ಗಂಟೆಗೆ ಕಸಬಾ ಹೋಬಳಿ ಕುನ್ನಹಳ್ಳಿ ಗ್ರಾಮದಲ್ಲಿ ಮನೆ ಕುಸಿದಿರುವುದನ್ನು ವೀಕ್ಷಣೆ ಮಾಡಲಿದೆ. ಬೆಳಗ್ಗೆ 10 ಗಂಟೆಗೆ ಗೋಣಿಬೀಡು ಹೋಬಳಿಯಲ್ಲಿ ಕಾಫಿ ತೋಟ ಕುಸಿದಿರುವ ಪ್ರದೇಶಕ್ಕೆ ಭೇಟಿ ವೀಕ್ಷಣೆ, ಬೆಳಗ್ಗೆ 11 ಗಂಟೆಗೆ ಬಣಕಲ್ ಹೋಬಳಿ ತ್ರಿಪುರ ಸೇತುವೆ ತುಂಡಾಗಿ ಗದ್ದೆ ಮತ್ತು ಬೈಲಿನಲ್ಲಿ ನೀರು ಹರಿಯುತ್ತಿರುವ ಪ್ರದೇಶಕ್ಕೆ ತಂಡ ಭೇಟಿ ನೀಡಲಿದೆ.

ಅದೇ ದಿನ ಬೆಳಗ್ಗೆ 11.45 ಗಂಟೆಗೆ ಕೊಟ್ಟಿಗೆ ಹಾರದಲ್ಲಿ ವಾಸದ ಮನೆ ಕುಸಿದಿರುವುದ ವೀಕ್ಷಣೆ, ಮಧ್ಯಾಹ್ನ 3.30 ಗಂಟೆಗೆ ಬಸರವಳ್ಳಿ ಗ್ರಾಮ ಪಂಚಾಯಿತಿ ತುಂಬಳ್ಳಿಪುರದಲ್ಲಿ ದನ ಹುಡುಕಲು ಹೋಗಿದ್ದಾಗ ಕಾಲು ಜಾರಿ ಬಿದ್ದು ಟ್ರ್ಯಾಕ್ಟರ್ ಡ್ರೈವರ್ ಕುಮಾರ ಸಾವನಪ್ಪಿದ್ದು, ಮೃತರ ಮನೆಗೆ ಭೇಟಿ ನೀಡುವ ತಂಡ ಸಾಂತ್ವನ ತಿಳಿಸಲಿದೆ.

ಅಂದು ಸಂಜೆ 4 ಗಂಟೆಗೆ ಚಿಕ್ಕಮಗಳೂರು ತಾಲೂಕಿನ ಅಲ್ಲಂಪುರ ಗ್ರಾಮದಲ್ಲಿ ಮನೆ ಕುಸಿದು ಹಾನಿ ಸಂಬವಿಸಿರುವುದರ ವೀಕ್ಷಣೆ, ಆನಂತರ ಕರ್ತಿಕೆರೆ ಗ್ರಾಮದಲ್ಲಿ ಮನೆ ಕುಸಿದು ಹಾನಿಯಾಗಿರುವುದರ ವೀಕ್ಷಣೆಯನ್ನು ತಂಡ ಮಾಡಲಿದೆ. ಸಂಜೆ ನಗರದಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡುವ ತಂಡ ನೆರೆಪೀಡಿತ ಪ್ರದೇಶಗಳ ಕುರಿತು ಚರ್ಚಿಸಿದ ನಂತರ ಸಂಜೆ 5 30 ಗಂಟೆಗೆ ಬೆಂಗಳೂರಿಗೆ ತೆರಳಿದೆ ಎಂದು ಬಿಜೆಪಿ ಜಿಲ್ಲಾ ವಕ್ತಾರ ಹಿರೇಮಗಳೂರು ಪುಟ್ಟಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸದಾಶಿವ ಶೆಟ್ಟಿಗಾರ್ ಸಿದ್ಧಕಟ್ಟೆಗೆ ಭ್ರಾಮರೀ ಯಕ್ಷಮಣಿ ಪ್ರಶಸ್ತಿ

ಪುರಭವನದಲ್ಲಿ ಭ್ರಾಮರಿ ಯಕ್ಷ ವೈಭವ ನಾಳೆ

ಮಂಗಳೂರು: ಭ್ರಾಮರಿ ಯಕ್ಷಮಿತ್ರರು ಮಂಗಳೂರು ಟ್ರಸ್ಟ್ ವತಿಯಿಂದ ಏಳನೇ ವರ್ಷದ ಭ್ರಾಮರಿ ಯಕ್ಷವೈಭವ 2024, ಯಕ್ಷ ಛಾಯಾಚಿತ್ರ ಪ್ರದರ್ಶನ, ಪ್ರಶಸ್ತಿ ಪ್ರದಾನ ಮತ್ತು ಉಚಿತ ಯಕ್ಷಗಾನ ಪ್ರದರ್ಶನ ಆ.3 ರಂದು ಸಂಜೆ 4 ಗಂಟೆಯಿಂದ ನಗರದ ಕುದ್ಮುಲ್ ರಂಗರಾವ್ ಪುರಭವನದಲ್ಲಿ ನಡೆಯಲಿದೆ.

ಸಂಜೆ 7 ಗಂಟೆಯಿಂದ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ. ಚಿನ್ನಪ್ಪ ಗೌಡ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಡಿ. ವೇದವ್ಯಾಸ ಕಾಮತ್, ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿರ್ದೇಶಕ ಟಿ.ಜಿ. ರಾಜಾರಾಮ್ ಭಟ್, ದೇರಳಕಟ್ಟೆ ವಿದ್ಯಾರತ್ನ ಆಂಗ್ಲ ಮಾಧ್ಯಮ ಶಾಲೆ ಸಂಸ್ಥಾಪಕ ರವೀಂದ್ರ ಶೆಟ್ಟಿ ಉಳಿದೊಟ್ಟು, ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ ಕುಮಾರ್ ಕಲ್ಕೂರ ಅವರು ಭಾಗವಹಿಸಲಿದ್ದಾರೆ.

ಶ್ರೀಗೋಪಾಲಕೃಷ್ಣ ಯಕ್ಷಗಾನ ಸಂಘ ಕೈರಂಗಳ ಮತ್ತು ಮನೋಹರ ಎಸ್. ಕುಂದರ್, ಎರ್ಮಾಳ್ ಬಡಾ ಅವರಿಗೆ ಭ್ರಾಮರಿ ಯಕ್ಷಸೇವಾ ಪುರಸ್ಕಾರ ಪ್ರದಾನ ಮಾಡಲಾಗುತ್ತದೆ. ಸದಾಶಿವ ಶೆಟ್ಟಿಗಾರ್ ಸಿದ್ಧಕಟ್ಟೆ ಅವರಿಗೆ ಭ್ರಾಮರೀ ಯಕ್ಷಮಣಿ ಪ್ರಶಸ್ತಿ ತೆಂಕುತಿಟ್ಟಿನ ಹಿರಿಯ ಬಣ್ಣದ ವೇಷಧಾರಿ ಸದಾಶಿವ ಶೆಟ್ಟಿಗಾರ್ ಸಿದ್ಧಕಟ್ಟೆ ಅವರಿಗೆ ಭ್ರಾಮರೀ ಯಕ್ಷಮಣಿ ಪ್ರಶಸ್ತಿಯನ್ನು ಪ್ರದಾನಿಸಲಾಗುತ್ತದೆ.

ಬಣ್ಣದ ವೇಷದ ಪರಂಪರೆಯ ನಡೆ ಹಾಗೂ ಕ್ರಮಗಳನ್ನು ಅರಿತ ಕೆಲವೇ ಮಂದಿಯ ಪೈಕಿ ಅಗ್ರಣಿಯಾಗಿ ತೆಂಕುತಿಟ್ಟಿನ ಇತಿಹಾಸದಲ್ಲಿ ಛಾಪು ಮೂಡಿಸಿದ ಹಿರಿಯ ಕಲಾವಿದ ಸದಾಶಿವ ಶೆಟ್ಟಿಗಾರ್ ಅವರು ಹಿರಿಯ ಕಲಾವಿದ ರೆಂಜಾಳ ರಾಮಕೃಷ್ಣ ರಾವ್‌ರಿಂದ ಹೆಜ್ಜೆಗಾರಿಕೆ ಅಭ್ಯಸಿಸಿ, ಮಹಾನ್ ಕಲಾವಿದ ದಿ.ಬಣ್ಣದ ಮಹಾಲಿಂಗರಿಂದ ಬಣ್ಣದ ವೇಷದ ಕಲೆಯನ್ನು ಕರಗತ ಮಾಡಿಕೊಂಡವರು.

ಯಕ್ಷ ವೈಭವ ತೆಂಕುತಿಟ್ಟಿನ ಪ್ರಸಿದ್ಧ ಕಲಾವಿದರ ಕೂಡುವಿಕೆಯಲ್ಲಿ ರಾತ್ರಿ 9 ಗಂಟೆಯಿಂದ ಮರುದಿನ ಬೆಳಗ್ಗೆ 6 ಗಂಟೆಯವರೆಗೆ ಯಕ್ಷ ವೈಭವ ನಡೆಯಲಿದ್ದು, ರಾತ್ರಿ 9 ರಿಂದ 11ರವರೆಗೆ ಪಂಚವಟಿ ಪ್ರಸಂಗ, 11 ರಿಂದ 2ಗಂಟೆಯವರೆಗೆ ಕಂಸ ವಿವಾಹ, 2 ರಿಂದ 3.30ರವರೆಗೆ ಸುದನ್ವ ಮೋಕ್ಷ ಮತ್ತು 3.30 ರಿಂದ ಬೆಳಗ್ಗೆ 6 ಗಂಟೆಯವರೆಗೆ ಮಹಿರಾವಣ ಕಾಳಗ ಯಕ್ಷಗಾನ ಉಚಿತವಾಗಿ ಪ್ರದರ್ಶನಗೊಳ್ಳಲಿದೆ.

ಯಕ್ಷ ಛಾಯಾಚಿತ್ರ ಪ್ರದರ್ಶನ

ಐದು ಲಕ್ಷಕ್ಕೂ ಅಧಿಕ ಛಾಯಾಚಿತ್ರಗಳ ಸಂಗ್ರಹಣೆಯನ್ನು ಹೊಂದಿರುವ ಸಂಪನ್ಮೂಲ ವ್ಯಕ್ತಿ ಬಡಾ ಎರ್ಮಾಳ್ ಮನೋಹರ ಕುಂದರ್ ಅವರ ಅಪೂರ್ವ ಯಕ್ಷಛಾಯಾಚಿತ್ರಗಳ ಪ್ರದರ್ಶನ ಸಂಜೆ 4 ರಿಂದ ಪುರಭವನದಲ್ಲಿ ಜರಗಲಿದೆ.

ವಿವಿಯಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನೆ

ಮಂಗಳೂರು: ನಗರದ ಕೊಡಿಯಾಲಬೈಲಿನ ಶಾರದಾ ವಿದ್ಯಾಲಯದಲ್ಲಿ ನಡೆಯಲಿರುವ ಶಾರದಾ ಮಹೋತ್ಸವ ಆಚರಣೆಯ ಪ್ರಯುಕ್ತ ಆಯೋಜಿಸಲಾದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲಾ ಮಟ್ಟದ ಅಂತರ್ ಶಾಲಾ ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನಾ ಸಮಾರಂಭವು ವಿದ್ಯಾಲಯದ ಮುಖ್ಯ ಸಭಾಂಗಣದಲ್ಲಿ ಇಂದು ನೆರವೇರಿತು.

ಕನ್ನಡ, ತುಳು ರಂಗಭೂಮಿ ಮತ್ತು ಚಲನಚಿತ್ರ ರಂಗದ ಖ್ಯಾತ ಸಾಹಿತಿ, ನಾಟಕ ರಚನೆಕಾರ, ಗೀತೆ ರಚನಕಾರ, ನಿರ್ದೇಶಕ, ಕಲಾವಿದ ಹಾಗೂ ನಗರದ ಖ್ಯಾತ ವಕೀಲರಾದ ಶ್ರೀಶಶಿರಾಜ ಕಾವೂರು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಸ್ಪರ್ಧಾಕೂಟವನ್ನು ಉದ್ಘಾಟಿಸಿದರು. ಶಾರದಾ ಸಮೂಹ ವಿದ್ಯಾ ಸಂಸ್ಥೆಗಳ ಅಧ್ಯಕ್ಷರಾದ ಡಾ.ಎಂ.ಬಿ.ಪುರಾಣಿಕರು ಸಭಾಧ್ಯಕ್ಷತೆಯನ್ನು ವಹಿಸಿದ್ದರು.

ಇಂದು ಯುವ ಜನಾಂಗವನ್ನು ಮತ್ತು ವಿದ್ಯಾರ್ಥಿ ಸಮೂಹ 'ವನ್ನು ವಿವಿಧ ಅಮಿಷಗಳ ಮೂಲಕ ತಪ್ಪು ದಾರಿಗೆಳೆಯುತ್ತಿರುವ ಸಮಾಜ ವಿರೋಧಿ ಶಕ್ತಿಗಳಿಂದ ಪಾರು ಮಾಡಲು ಬಾಲ್ಯದಿಂದಲೇ ಅವರಿಗೆ ಉತ್ತಮ ಸಂಸ್ಕಾರಭರಿತ ಶಿಕ್ಷಣ ಅಗತ್ಯ. ಕೇವಲ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ವಿತರಿಸುವ ಜವಾಬ್ದಾರಿಯನ್ನಷ್ಟೇ ಹೊಂದಿದ ಶಿಕ್ಷಣ ಸಂಸ್ಥೆಗಳಿಂದ ಶಿಕ್ಷಣದ ನಿಜವಾದ ಉದ್ದೇಶ ಈಡೇರದು. ಭಾರತೀಯ ಸಂಸ್ಕೃತಿ ಆಧಾರಿತ ಉತ್ತಮ ಸಂಸ್ಕಾರಭರಿತ ಶಿಕ್ಷಣ ನೀಡುತ್ತಿರುವ ಶಾರದಾ ವಿದ್ಯಾ ಸಂಸ್ಥೆಗಳ ಕಾರ್ಯಚಟುವಟಿಕೆಗಳೂ ಇತರರಿಗೂ ಮಾದರಿಯಾಗಿದ್ದು ಸದ್ಗುಣ ಸಂಪನ್ನ ಸತ್ಪ್ರಜೆಗಳನ್ನು ನಿರ್ಮಿಸುವಲ್ಲಿ ಮಹತ್ವ ಪಾತ್ರವನ್ನು ವಹಿಸುತ್ತಿವೆ ಎಂಬುದಾಗಿ ಶ್ರೀ ಶಶಿರಾಜ್ ಕಾವೂರ್ ತಮ್ಮ ಅತಿಥಿ ಭಾಷಣದಲ್ಲಿ ನುಡಿದರು.

ಶಾರದಾ ಸಮೂಹ ವಿದ್ಯಾ ಸಂಸ್ಥೆಗಳ ಆಡಳಿತ ಮಂಡಳಿಯ ಕಾರ್ಯದರ್ಶಿಗಳಾದ ಶ್ರೀಪ್ರದೀಪ ಕುಮಾರ ಕಲ್ಕೂರ ಅವರು ಮಾತನಾಡಿದರು. ಶಾರದಾ ಸಮೂಹ ವಿದ್ಯಾ ಸಂಸ್ಥೆಗಳ ಆಡಳಿತ ಮಂಡಳಿಯ ವಿಶ್ವಸ್ಥರಾದ ಶ್ರೀಸುಧಾಕರ ರಾವ್ ಪೇಜಾವರ, ವಿಶ್ವಸ್ಥರೂ ಆಡಳಿತ ನಿರ್ದೇಶಕರೂ ಆದ ಸಮೀರ್ ಪುರಾಣಿಕ್, ಶಾರದಾ ವಿದ್ಯಾಲಯದ ಹಿರಿಯ ಪ್ರಾಂಶುಪಾಲೆ ಸುನೀತಾ ವಿ. ಮಡಿ, ಶಾರದಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ನ್ಯಾಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಸಂಸ್ಕಾರ ಭರಿತ ಶಿಕ್ಷಣದಿಂದ ಭವಿಷ್ಯದ ಜೀವನ ಉಜ್ವಲ

ಬೆಳೆಯುವ ಗುಣ ಮೊಳಕೆಯಲ್ಲಿ ಎಂಬ ಗಾದೆಯ ನುಡಿಯಂತೆ ಬಾಲ್ಯದಲ್ಲಿ ದೊರೆತ ಉತ್ತಮ ಸಂಸ್ಕಾರಭರಿತ ಶಿಕ್ಷಣದಿಂದ ಭವಿಷ್ಯದ ಜೀವನ ಉಜ್ವಲವಾಗುತ್ತದೆ. ನಮ್ಮ ವಿದ್ಯಾ ಸಂಸ್ಥೆಯಲ್ಲಿ ಭಾರತೀಯ ಸಂಸ್ಕೃತಿ ಮತ್ತು ಜೀವನ ಪದ್ಧತಿಯ ಪರಿಚಯವನ್ನು ಮಾಡಿಕೊಡುವ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕಲ್ಪಿಸಲಾಗಿದೆ ಎಂದು ಶಾರದಾ ಸಮೂಹ ವಿದ್ಯಾ ಸಂಸ್ಥೆಗಳ ಅಧ್ಯಕ್ಷರಾದ ಡಾ.ಎಂ.ಬಿ.ಪುರಾಣಿಕರು ತಿಳಿಸಿದರು.

ದೂರದರ್ಶನಕ್ಕೆ ಅಯನಾ ಆಯ್ಕೆ

ಮಂಗಳೂರು: ಬಹುಮುಖ ಪ್ರತಿಭೆಯ ಹೆಸರಾಂತ ಕಲಾವಿದೆ ಅಯನಾ. ವಿ. ರಮಣ್ ಮೂಡುಬಿದಿರೆ, ದೂರದರ್ಶನ ಕಲಾವಿದೆಯಾಗಿ ಆಯ್ಕೆಯಾಗಿದ್ದಾರೆ. ಮಂಗಳೂರಿನ ಸನಾತನ ನಾಟ್ಯಾಲಯದ ಕರ್ನಾಟಕ ಕಲಾಶ್ರೀ ವಿದುಷಿ ಶಾರದಾ ಮಣಿ ಶೇಖರ್ ಮಾರ್ಗದರ್ಶನದಲ್ಲಿ, ಬೆಂಗಳೂರು ದೂರದರ್ಶನ ಕೇಂದ್ರದ ಆಯ್ಕೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಎದುರಿಸಿದ್ದ ಅವರು ಬಿ ಗ್ರೇಡ್ ಮಾನ್ಯತೆ ಪಡೆದಿದ್ದಾರೆ. ಬೆಂಗಳೂರಿನ ಕರ್ನಾಟಕ ಕಲಾಶ್ರೀ ವಿದ್ವಾನ್ ಸತ್ಯನಾರಾಯಣ ರಾಜು ಅವರಲ್ಲಿ ವಿಶೇಷ ತರಬೇತಿ ಪಡೆಯುತ್ತಿರುವ ಅಯನಾ ಸಾಧನೆಗೆ ಉಡುಪಿ ಶ್ರೀಕೃಷ್ಣ ಮಠ–ಪರ್ಯಾಯ ಶ್ರೀಪುತ್ತಿಗೆ ಮಠದ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಆಶೀರ್ವಾದ ಪೂರ್ವಕವಾಗಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮೂಡಬಿದರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವರು, ಅಯನಾ.ವಿ. ರಮಣ್ ನಡೆಸುವ ನೃತ್ಯ ಸಂಸ್ಥೆ ನಾಟ್ಯಾಯನ ಮೂಡುಬಿದಿರೆ ಮತ್ತು ನೃತ್ಯ ಗುರುವಾಗಿರುವ ರಂಗಭಾರತಿ ಕಲಾಮಂದಿರಮ್, ಕುಶಾಲನಗರ, ಸಂಸ್ಥೆಗಳ ಪದಾಧಿಕಾರಿಗಳು, ವಿದ್ಯಾರ್ಥಿಗಳು, ಹೆತ್ತವರು ಅಭಿನಂದಿಸಿದ್ದಾರೆ.

ಮೈಸೂರು ವಿವಿ ಯಲ್ಲಿ ಆಂಗ್ಲ ಭಾಷೆಯ ಸ್ನಾತಕೋತ್ತರ ಪದವಿ ಪಡೆಯುತ್ತಿದ್ದಾರೆ.

ಬೆಂದೂರ್‌ವೆಲ್ ನೀರಿನ ಕೊಳವೆ ಬಾವಿ ಪರಿಶೀಲನೆ

ಮಂಗಳೂರು: ಬಂಟ್ವಾಳದ ತುಂಬೆಯಿಂದ ಬೆಂದೂರ್‌ವೆಲ್‌ಗೆ ಬರುವ ಕುಡಿಯುವ ನೀರಿನ ಕೊಳವೆಯು ಹಾನಿ ಉಂಟಾಗಿದ್ದು, ಮಂಗಳೂರು ಮಹಾನಗರ ಪಾಲಿಕೆ ವಿಪಕ್ಷ ನಾಯಕ ಪ್ರವೀಣ್ ಚಂದ್ರ ಆಳ್ವಾ ಹಾಗೂ ಕಾಂಗ್ರೆಸ್ ನಿಯೋಗ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಗೇಲ್ ಕಂಪನಿಯ ಅವಂತಾರದಿಂದ ಕುಡಿಯುವ ನೀರಿನ ಕೊಳವೆ ಬಾವಿ ಹಾನಿಯಾಗಿದ್ದು, ಪಾಲಿಕೆ ವ್ಯಾಪ್ತಿಯ 20 ವಾರ್ಡ್‌ಗಳಿಗೆ ನೀರಿಲ್ಲದೇ ಸಮಸ್ಯೆ ಎದುರಾಗಿದೆ.

ತುಂಬೆಯಿಂದ ಮಂಗಳೂರಿನ ಬೆಂದೂರ್‌ವೆಲ್‌ಗೆ ಬರುವ ಕುಡಿಯುವ ನೀರಿನ ಕೊಳವೆಯು ಹಾನಿ ಉಂಟಾಗಿದ್ದು, ಗೇಲ್ ಕಂಪನಿಯ ಕಾಮಗಾರಿಯಿಂದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸಮಸ್ಯೆ ಆಗ್ತಾ ಇದೆ, ಮಂಗಳೂರು ಮಹಾನಗರ ಪಾಲಿಕೆ ವಿಪಕ್ಷ ನಾಯಕ ಪ್ರವೀಣ್ ಚಂದ್ರ ಆಳ್ವಾ ಹಾಗೂ ಕಾಂಗ್ರೆಸ್ ನಿಯೋಗ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ವಿಪಕ್ಷ ನಾಯಕ ಪ್ರವೀಣ್ ಚಂದ್ರ ಆಳ್ವಾ, ಕಳೆದ ರಾತ್ರಿ ಗೇಲ್ ಕಂಪನಿಯ ಅವಂತಾರದಿಂದಾಗಿ ಪೈ ಲೈನ್ ಹೊಡೆದು ಹೋಗಿದೆ. ಈ ಬಗ್ಗೆ ಪಾಲಿಕೆ ಅಧಿಕಾರಿಗಳಿಗೆ ಮಾಹಿತಿ ನೀಡದೇ ಕಾಮಗಾರಿ ಆರಂಭಿಸಿದ್ದಾರೆ. ಇದರಿಂದಾಗಿ ಮಂಗಳೂರು ನಗರಕ್ಕೆ ಮೂರು ದಿನ ಕುಡಿಯುವ ನೀರು ಇಲ್ಲದಂತಾಗಿದೆ ಎಂದು ಹೇಳಿದರು.

ಮಾಜಿ ಮೇಯರ್ ಶಶಿಧರ್ ಹೆಗ್ಡೆ ಮಾತನಾಡಿ, ನೀರು ಸರಬರಾಜು ಹಾನಿಯಾಗಿದೆ. ಇದನ್ನು ಸರಿಪಡಿಸಲು 3ರಿಂದ 4 ದಿನಗಳ ಆಗುವ ಸಾಧ್ಯತೆ ಇದೆ. ಈ ಬಗೆ ಪಾಲಿಕೆ ಆಯುಕ್ತರ ಹತ್ತಿರ ಚರ್ಚೆ ಮಾಡಿದ್ದೇನೆ, ಹಾಗಾಗಿ ಮುಂದಿನ ದಿನಗಳಲ್ಲಿ ಇಂತಹ ಘಟನೆ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದರು.

ಪಾಲಿಕೆ ಸದಸ್ಯ ನವೀನ್ ಡಿಸೋಜಾ ಮಾತನಾಡಿ, ಗೇಲ್ ಗ್ಯಾಸ್ ಕಂಪನಿಯು ರಸ್ತೆಯನ್ನು ಅಗೆದು ಕುಡಿಯುವ ಪೈ ಲೈನ್ ಹೊಡೆದು ಹೋಗಿದ್ದು, ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 20 ವಾರ್ಡ್‌ಗಳಿಗೆ ನೀರು ಸರಬರಾಜು ಸ್ಥಗಿತವಾಗಿದೆ. ಪಾಲಿಕೆ ಆಯುಕ್ತರು ಹಾಗೂ ಅಧಿಕಾರಿಗಳ ಮುತುವರ್ಜಿಯಿಂದ ತ್ವರಿತ ರೀತಿಯಲ್ಲಿ ಕಾಮಗಾರಿ ಆಗ್ತಾ ಇದೆ. ಗೇಲ್ ಕಂಪನಿಯು ಮಂಗಳೂರು ಮಹಾನಗರ ಪಾಲಿಕೆಗೆ ಸಾಕಷ್ಟು ತೊಂದರೆ ಕೊಡುತ್ತಿದ್ದಾರೆ. ಹೀಗಾಗಿ ಇವರ ಮೇಲೆ ಸೂಕ್ತ ಕ್ರಮತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು, ಈ ಸಂದರ್ಭ ಆಯುಕ್ತರಾದ ಕೆ.ಅನಂದ್, ಪಾಲಿಕೆ ಸದಸ್ಯ ಲಾನ್ಸಿಲೋಟ್ ಪಿಂಟೋ, .ಆಶ್ರಫ್ ಬಜಲ್, ಅಬ್ದುಲ್ ರವೂಫ್ ಉಪಸ್ಥಿತರಿದ್ದರು.

ದುರ್ಘಟನೆ ತಡೆಗೆ ಎಚ್ಚರಿಕೆ ಅಗತ್ಯ: ಖಾದರ್

ಉಡುಪಿ: ಕೇರಳದ ವಯನಾಡಿನಲ್ಲಾದ ದುರಂತ ನೋವು ತಂದಿದೆ. ಪ್ರಾಕೃತಿಕ ವಿಕೋಪಗಳಾಗದಂತೆ ಮಾನವನಿಂದಾಗುವ ಸಮಸ್ಯೆ ದುರ್ಘಟನೆಗಳ ತಡೆಗೆ ಮುನ್ನೆಚ್ಚರಿಕೆ ಅತ್ಯಗತ್ಯ ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.ಬುಧವಾರ ಮಣಿಪಾಲದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಕೃತಿಗೆ ಪೂರಕವಾಗಿ ಮನುಷ್ಯರು ಬದುಕಬೇಕು. ಭವಿಷ್ಯದ ಪೀಳಿಗೆಯ ನೆಲೆಯಲ್ಲಿ ನಿಸರ್ಗಕ್ಕೆ ವಿರುದ್ಧವಾಗಿ ಸರಕಾರದ ರೀತಿ ನೀತಿಗಳು ಸಲ್ಲದು ಎಂದರು. ಪ್ರಕೃತಿ ವಿಕೋಪದಂತಹ ದುರ್ಘಟನೆ ಸಂಭವಿಸದಂತೆ ಎಚ್ಚರಿಕೆ ಅಗತ್ಯ. ಮಾನವರ ತಪ್ಪಿನಿಂದ ಆಗುವ ದುರ್ಘಟನೆಗಳನ್ನು ತಪ್ಪಿಸಬಹುದಾಗಿದ್ದು, ಜನರು, ಅಧಿಕಾರಿಗಳು ಈ ಕುರಿತು ಚಿಂತಿಸಬೇಕು. ಇಂತಹ ದುರ್ಘಟನೆ ತಪ್ಪಿಸಲು ಸರಕಾರ ಕೆಲ ನಿಯಮಗಳನ್ನು ಜಾರಿಗೆ ತರಬೇಕು. ಸರಕಾರ ನಿಯಮ ಮಾಡಿದ್ದನ್ನು ಜನರು ಅನುಸರಿಸಬೇಕು ಎಂದರು. ಈ ಭೂಮಿ ಕೇವಲ ನಮ್ಮ ಸ್ವತ್ತಲ್ಲ, ಇನ್ನೂ ಹುಟ್ಟಿ ಬೆಳೆಯುವವರಿಗೂ ಭೂಮಿಯನ್ನು ಚೆನ್ನಾಗಿಟ್ಟಿರಬೇಕಾದ ಅಗತ್ಯವಿದೆ. ಮಣ್ಣಿನ ಗುಣಕ್ಕೆ ವಿರುದ್ಧವಾಗಿ ಕಟ್ಟಡ ಕಟ್ಟಬಾರದು. ಎತ್ತರದಲ್ಲಿ ಕಟ್ಟಡ ಕಟ್ಟುವವನಿಗೆ ಕೆಳಗೆ ಇರುವ ಜನರ ಬಗ್ಗೆ ಗೊತ್ತಿರುವುದಿಲ್ಲ, ಕೆಳಗೆ ಮನೆ ಕಟ್ಟುವವರಿಗೆ ಎತ್ತರದ ಕಟ್ಟಡಗಳ ಮಾಹಿತಿ ಇರುವುದಿಲ್ಲ. ನೀರು ಎಲ್ಲಿ ಹರಿಯುತ್ತೆ ಅನ್ನೋದೇ ಗೊತ್ತಿರುವುದಿಲ್ಲ. ಭೂಮಿಗೆ ಬಿದ್ದ ನೀರು ಹರಿದು ಹೋಗಬೇಕು, ಸಂಗ್ರಹವಾದ ನೀರು ಭಾರ ಆದಾಗ ಈ ರೀತಿಯ ದುರ್ಘಟನೆ ಆಗುತ್ತದೆ ಎಂದರು.

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಶುಕ್ರವಾರ
02 | 08 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಆಸೆಗಳಿಗೆ ಮಿತಿಯಿರಲಿ

ಬದುಕಲು ಅಗತ್ಯವಾದ ಎಲ್ಲ ಸಂಗತಿಗಳು ನಮ್ಮ ಜೊತೆಗೆ ಇದ್ದರೂ ಮನಸ್ಸು ತೃಪ್ತಗೊಳ್ಳುವ ಸಂಭವ ಕಡಿಮೆಯೇ. ಅದು ಬೇಕು, ಇದು ಬೇಕು ಎನ್ನುವ ಹಪಾಹಪಿ ನಮ್ಮ ನೆಮ್ಮದಿಯನ್ನು ವಿಕಾರಗೊಳಿಸುತ್ತದೆ. ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ, ಬದುಕಾದರೆ ಕೇಡಿನ ಚಿಂತೆ ಎಂಬ ಶರಣರ ಮಾತಿನಂತೆ ನಮ್ಮ ಬಯಕೆಗಳು ಹನುಮಂತನ ಬಾಲದಂತೆ ಬೆಳೆಯುತ್ತಲೇ ಹೋಗುತ್ತವೆ. ಬೇಕೆಂಬ ಬೆಂಕಿಯಲ್ಲಿ ಬೇಯುವಂತೆ ಮಾಡುತ್ತವೆ. ನಾವು ನಮ್ಮ ಆಯುಷ್ಯವನ್ನೆಲ್ಲ ಇಂತಹ ಭೌತಿಕ ಸಂಪತ್ತಿನ ಅರ್ಚನೆಯಲ್ಲಿಯೇ ಕಳೆದು ಬಿಡುತ್ತೇವೆ ಒಂದಷ್ಟು ಪುರುಸೊತ್ತು ನಮಗೆ ಸಿಗುವುದೇ ಇಲ್ಲ. ಯಾವುದಕ್ಕೂ ಸಮಯವೇ ಇಲ್ಲ ಎಂದು ಗೋಣಗುವಂತಾಗುತ್ತದೆ. ವಿರಾಮ ಎಂಬುದು ನಮ್ಮ ಮುಂದೆ ಧಾರಾಳವಾಗಿ ಕಾಲು ಮುರಿದುಕೊಂಡು ಬಿದ್ದಿದ್ದರೂ ಅದು ನಮ್ಮ ಹಿಡಿತಕ್ಕೆ ಸಿಗುವುದೇ ಇಲ್ಲ. ನಮ್ಮ ಭೌತಿಕ ಅವಶ್ಯಕತೆಗಳ ಬಯಕೆ ನಮ್ಮ ಮನಸ್ಸಿನ ಕೊರಗುವಿಕೆಗೆ ನೇರ ಅನುಪಾತವನ್ನು ಹೊಂದಿದೆ ಎಂಬುದು ನಮಗೆ ಬಹುತೇಕ ಬಾರಿ ಅನುಭವಕ್ಕೆ ನಿಲುಕದೇ ಹೋಗುತ್ತದೆ. ಕೇವಲ ನಾನು ಮತ್ತು ನನ್ನ ಅವಶ್ಯಕತೆಗಳು ಎಂಬ ಪರಿಧಿಯಲ್ಲಿ ಗಿರಕಿ ಹೊಡೆಯುತ್ತಿದ್ದರೆ ನಮ್ಮ ಸುತ್ತಲಿನ ಎಲ್ಲವೂ ನಮಗೆ ವೈರಿಯಂತೆ ತೋರುತ್ತದೆ. ಎಲ್ಲ ಸಂಬಂಧಗಳು ತೀರ ನಿರಸವೆನಿಸತೊಡಗುತ್ತವೆ. ಬದುಕಿನಲ್ಲಿ ಹೇರಳವಾಗಿ ಸಿಗುವ ಸಣ್ಣ ಸಣ್ಣ ಆನಂದಗಳನ್ನು ನಾವು ಪಡೆಯುವಲ್ಲಿ, ಇಲ್ಲವೇ ಇತರರಿಗೆ ಹಂಚುವಲ್ಲಿ ಸೋಲುಂಟಾಗುತ್ತದೆ. ಬದುಕು ತೀರ ವ್ಯವಹಾರಿಕವಾದರೆ ಮಾನವೀಯ ಸಂಬಂಧಗಳು ಸಡಿಲಗೊಳ್ಳುತ್ತವೆ. ನಾವು ಮಾಡುವ ಕೆಲಸಗಳಿಗೆ ಮತ್ತು ನಮ್ಮ ಮನಸ್ಸಿಗೆ ನಿಕಟ ಸಂಬಂಧವಿರುತ್ತದೆ. ನಾವು ಯಾವಾಗಲೂ ಬ್ಯುಸಿಯಾಗಿ ಬಿಟ್ಟರೆ ಮನಸ್ಸು ಭಾವರಹಿತವಾಗಿ ಬಿಡುತ್ತದೆ. ಎಲ್ಲವೂ ಇದ್ದರೂ ಒಂದಷ್ಟು ಸಮಾಧಾನದವಿರುವುದಿಲ್ಲ. ನಾವು ಕೂಡಿಡಬಹುದಾದ ವಸ್ತು, ಒಡವೆ, ಆಸ್ತಿ ಅಂತಸ್ತು, ನಮ್ಮ ಅಪರಿಮಿತ ಆಸೆಗಳಿಗೆ ಒಂದಷ್ಟು ಕಡಿವಾಣ ಹಾಕಬೇಕು.
ಬದುಕಿಗೆ ಎಷ್ಟು ಅತ್ಯಗತ್ಯವೋ ಅಷ್ಟಕ್ಕೆ ಮನ್ನಣೆ ಕೊಟ್ಟು ಸರಳತೆಯನ್ನು ರೂಢಿಸಿಕೊಳ್ಳಬೇಕು. ಇದರಲ್ಲಿ ನೈಜ ಆನಂದವಿದೆ. ಇಂತಹ ಆನಂದದ ಅನುಭೂತಿಯನ್ನು ನಮ್ಮದಾಗಿಸಿ ಕೊಂಡರೆ ಅದು ನಮ್ಮ ಮಾನಸಿಕ ಸ್ಥಿತಿಯ ಸ್ಥಿರತೆಯನ್ನು ನೂರ್ಮಡಿಗೊಳಿಸುತ್ತದೆ. ನಮ್ಮನ್ನು ಜಾಗೃತಗೊಳಿಸಿ ನಮ್ಮನ್ನು ಸಂಸ್ಕಾರವಂತರನ್ನಾಗಿ ಮಾಡುತ್ತದೆ. ನಮ್ಮಲ್ಲಿ ಅಂತರ್ಗತವಾಗಿರುವ ಅಂತಃಶಕ್ತಿಗಳ ಅನಾವರಣ ಗೊಳಿಸುತ್ತದೆ. ಇನ್ನೊಬ್ಬರ ದೃಷ್ಟಿಯಲ್ಲಿ ನಮ್ಮ ಬದುಕಿನ ಘನತೆ ಹೆಚ್ಚುತ್ತದೆ ಮಾತ್ರವಲ್ಲದೇ ನಮ್ಮ ಬದುಕನ್ನು ಸಾರ್ಥಕತೆಯ ಕಡಲಿನಲಿ ತೇಲಿಸುತ್ತದೆ.

● ಮಹಾದೇವ ಬಸರಕೋಡ

ಇತಿಹಾಸಕ್ಕೆ ಒಂದು ಕಿಂಡಿ

ಆಧುನಿಕ ಒಲಿಂಪಿಕ್ಸ್ ಆರಂಭಗೊಂಡದ್ದು 1896ರಲ್ಲಿ. ಇದಕ್ಕೆ ಸ್ಫೂರ್ತಿ ಎಂದರೆ ಪುರಾತನ ಒಲಿಂಪಿಕ್ಸ್ ಆಚರಣೆ. ಪುರಾತನ ಗ್ರೀಸ್‌ನಲ್ಲಿ, ಧಾರ್ಮಿಕ ಆಚರಣೆಯ ಅಂಗವಾಗಿ, ಒಲಿಂಪಿಯಾ ಎಂಬಲ್ಲಿ ಕ್ರೀಡಾ ಸ್ಪರ್ಧೆಗಳು ನಡೆಯುತ್ತಿದ್ದವು. ಮೊದಲ ಪುರಾತನ ಒಲಿಂಪಿಕ್ಸ್ ನಡೆದದ್ದು ಕ್ರಿಪೂ 776ರಲ್ಲಿ ಎಂದು ಲೆಕ್ಕ ಹಾಕಲಾಗಿದೆ. ಗ್ರೀಕ್ ಸಾಮ್ರಾಜ್ಯದ ಎರಡು ಪ್ರಮುಖ ದಾರ್ಮಿಕ ಆಚರಣೆಗಳಲ್ಲಿ ಒಲಿಂಪಿಕ್ಸ್ ಕ್ರೀಡೆಯೂ ಒಂದಾಗಿತ್ತು. ಗ್ರೀಕ್ ದೇವತೆ ಝುವಸ್‌ನ ಗೌರವಾರ್ಥನಡೆಯುತ್ತಿದ್ದ ಈ ಕ್ರೀಡಾ ಕೂಟದಲ್ಲಿ ಕೆಲವೇ ಕ್ರೀಡೆಗಳನ್ನು ಆಡಲಾಗುತ್ತಿತ್ತು. ಓಟ, ಕುಸ್ತಿ, ಕುದುರೆ ಗಾಡಿ ಓಟ, ಬಾಲಕರ ಓಟ ಮತ್ತಿತರ ಕ್ರೀಡೆಗಳು ನಡೆಯುತ್ತಿದ್ದವು ಮತ್ತು ಧಾರ್ಮಿಕ ಕಾರಣಗಳಿಂದಾಗಿ, ಇದಕ್ಕೆ ಮಹಿಳೆಯರಿಗೆ ಪ್ರವೇಶವಿರಲಿಲ್ಲ. ನಂತರ ರೋಮನ್ ಸಾಮ್ರಾಜ್ಯದ ಕಾಲದಲ್ಲೂ ಒಲಿಂಪಿಕ್ಸ್ ಮುಂದುವರಿಯಿತು. ನಾಲ್ಕನೆಯ ಶತಮಾನದಲ್ಲಿ ಒಲಿಂಪಿಕ್ಸ್ ಆಚರಣೆ ನಿಂತುಹೋಯಿತು.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಜಪಾನಿನಲ್ಲಿದೆ ಮೇಡ್ ಇನ್ ಇಂಡಿಯಾ ಕಾರು!

ಜೋಶ್ ಮಾತು

ನಮ್ಮ ದೇಶದಲ್ಲಿ ತಯಾರಿಸಿದ ಕಾರುಗಳು ಜಪಾನಿನಲ್ಲಿ ಜನಪ್ರಿಯತೆಯನ್ನು ಪಡೆದ ವಿಚಾರವಂತೂ, ಈ ಕಾಲಮಾನದ ವಿಸ್ಮಯ ಎಂದೇ ಹೇಳಬಹುದು.

ಭಾರತದಲ್ಲಿ 'ಮೇಡ್ ಇನ್ ಜಪಾನ್' ವಸ್ತಗಳು ಮೆರೆಯುತ್ತಿದ್ದ ಕಾಲವೊಂದಿತ್ತು. ವಿಶೇಷವಾಗಿ ಜಪಾನಿನಿಂದ ಬರುತ್ತಿದ್ದ ಇಲೆಕ್ಟ್ರಾನಿಕ್ ಸಾಧನಗಳು ಹಾಗೂ ಆಟೋಮೊಬೈಲ್‌ಗಳ ಗಮ್ಮತ್ತೇ ಬೇರೆ ಇರುತ್ತಿತ್ತು. ಅದೂ, ಕಾರು ಮತ್ತು ಬೈಕುಗಳ ವಿಷಯದಲ್ಲಂತೂ, ಜಪಾನಿನ ಕಂಪನಿಯಲ್ಲಿ ತಯಾರಾದರೆ ಮಾತ್ರ ಅದು ಒಳ್ಳೆಯ ಗುಣಮಟ್ಟದ ವಾಹನ ಎನ್ನುವ ನಂಬಿಕೆ. ನಾನಂತೂ ಜಪಾನಿಯರು ತಯಾರಿಸಿದ್ದು ಎಂದಮೇಲೆ ಅದು ದೇವ ನಿರ್ಮಿತ ವಸ್ತುಗಳೇ ಎಂಬ ಭ್ರಮಾಲೋಕದಿಂದ ಬೆಳೆದು ಬಂದವನು. ಇವತ್ತಿಗೂ ಆ ಗೌರವ ಕಮ್ಮಿಯಾಗಿಲ್ಲ! ಹೋಂಡಾ, ಕವಾಸಾಕಿ, ಸುಜುಕಿ ಇವೆಲ್ಲ ಆಗ ಹಳ್ಳಿಯಲ್ಲೂ ಮನದ ಹಾಗೂ ಮನೆಮಾತಾದ ಹೆಸರುಗಳು.

● ವಿಕ್ರಮ ಜೋಶಿ

ಇವತ್ತು ಭಾರತೀಯ ಕಂಪನಿಗಳಾದ ಬಜಾಜ್, ಹೀರೋ, ಟಿವಿಎಸ್, ಟಾಟಾ ಮತ್ತು ಮಹೀಂದ್ರಾ, ಹೇಗೋ ಆವಾಗ ಜಪಾನಿನ ಕಂಪನಿಗಳ ಹೆಸರುವಾಸಿಯಾಗಿದ್ದವು. ಉತ್ಕೃಷ್ಟತೆಯ ವಿಷಯಕ್ಕೆ ಬಂದರೆ ಇಂದಿಗೂ ಜಪಾನೀಯರನ್ನು ಮೀರಿಸುವವರಿಲ್ಲ. ಅವರ ಕೈಗುಣವೇ ಹಾಗೆನೋ ಎನ್ನಬಹುದು. ಅಂತಹ ದೇಶದಲ್ಲಿ ಭಾರತೀಯರು ತಯಾರಿಸಿದ 'ಮೇಡ್ ಇನ್ ಇಂಡಿಯಾ' ವಸ್ತುಗಳಿಗೆ ಮೆಚ್ಚುಗೆ ಸಿಗಬಹುದೆ? ಇಂತಹ ಪ್ರಶ್ನೆ ಕೇಳುವುದನ್ನು ಬಿಡಿ, ಕನಸನ್ನೂ ಕಾಣುವ ಸ್ಥಿತಿ ಮೊದಲಿರಲಿಲ್ಲ. ಅದು ಯಾವಾಗ, ಯಾರು ಈ ಕನಸನ್ನು ಕಾಣುವ ಧೈರ್ಯ ಮಾಡಿದರೋ? ನೋಡು ನೋಡುತ್ತ ಇದು ಇಂದು ನನಸಾಗಿದೆ!

ಈ ವರ್ಷ ಜಪಾನ್ ಆಮದು ಮಾಡಿಕೊಂಡ ಕಾರುಗಳಲ್ಲಿ ಹೋಂಡಾ ಕಂಪನಿಯ ಭಾರತದ ಘಟಕದಲ್ಲಿನ 'ಮೇಡ್ ಇನ್ ಇಂಡಿಯಾ' ಕಾರು ಆ ದೇಶದಲ್ಲಿ ಜನಪ್ರಿಯತೆಯನ್ನು ಪಡೆದಿದೆ. ಭಾರತೀಯರು ಜಪಾನ್ ನೆಲದಲ್ಲಿ ಮೆಚ್ಚುಗೆ ಪಡೆಯುವಷ್ಟು ಉತ್ಕೃಷ್ಟ ಮಟ್ಟದ ಉತ್ಪನ್ನಗಳನ್ನು ತಯಾರಿಸಬಲ್ಲರು ಎಂಬುದು ಈಗ ಋಜುವಾತಾಗಿದೆ. ಮರ್ಸಿಡಿಸ್ ಬೆಂಝ್, ಫೋಕ್ಸ್ ವಾಗೆನ್, ಬಿಎಂಡಬ್ಲ್ಯು ಈ ಬ್ರಾಂಡ್‌ಗಳ ಆಮದು ಕಾರುಗಳೇ ಕಳೆದ ಮೂವತ್ತು ವರ್ಷಗಳಿಂದ ಅಲ್ಲಿ ಅತ್ಯಂತ ಹೆಚ್ಚು ಮಾರಾಟವಾಗುತ್ತಿದ್ದವು.

ನಿರಂತರ ಇರಲಿ ಗುಣಮಟ್ಟ

ಗುಣಮಟ್ಟವನ್ನು ಕಾಯ್ದುಕೊಳ್ಳುವುದು ತೀರಾ ಅಗತ್ಯ; ಹಾಗಿದ್ದಾಗ ಮಾತ್ರ, ವಿದೇಶಗಳಲ್ಲಿ ನಮ್ಮ ಉತ್ಪನ್ನಗಳನ್ನು ಮಾರಲು ಸಾಧ್ಯ. ಆದರೆ ಇತ್ತೀಚೆಗೆ ಬಂದ ಕೆಲವು ಸುದ್ದಿಗಳು ಬಹಳ ನಿರುತ್ತೇಜನಕಾರಿಯಾಗಿದೆ. ನಮ್ಮ ದೇಶದಿಂದ ಕೆಲವು ಆಫ್ರಿಕಾ ದೇಶಗಳಿಗೆ ರಫ್ತಾದ ಕೆಮ್ಮಿನ ಔಷಧಗಳನ್ನು ಸೇವಿಸಿದ ನೂರಾರು ಮಕ್ಕಳು ಸಾವಿಗೀಡಾಗಿದ್ದಾರೆ. ಹೀಗೆ ಆಗಲೇಬಾರದು. ಒಮ್ಮೆ ನಂಬಿಕೆ ಹೋದರೆ ಮತ್ತೆ ಅದನ್ನು ಗೆಲ್ಲುವುದು ಬಹಳ ಕಷ್ಟ. ದಿನೇ ದಿನೇ ನಮ್ಮ ಉತ್ಕೃಷ್ಟತೆಯ ಸಹಿಯನ್ನು ನಾವು ತಯಾರಿಸುವ ಉತ್ಪನ್ನಗಳ ಮೇಲೆ ಮುದ್ರಿಸಬೇಕು.. ನಾವು ತಯಾರಿಸುವ ಪ್ರತಿಯೊಂದು ಉತ್ಪನ್ನದಲ್ಲೂ - ಭಾರತಕ್ಕೇ ಇರಲಿ, ದಕ್ಷಿಣ ಆಫ್ರಿಕಾಕ್ಕೇ ಹೋಗಲಿ, ಅಥವಾ ಜಪಾನಿಗೇ ಅಂತ ಮಾಡಿದ್ದಿರಲಿ ಅದರಲ್ಲಿ ಕ್ವಾಲಿಟಿಯು ಅತ್ಯುತ್ತಮವಾಗಿರಬೇಕು. ಇದನ್ನು ಸಾಧಿಸುವುದರಲ್ಲಿ ಎಡವಿದರೆ ನಮ್ಮ ಕೈಯಲ್ಲಿರುವ ಅದ್ಭುತ ಅವಕಾಶವನ್ನು ಕೈಯಿಂದ ಚೆಲ್ಲಿದಂತೆ!

ಮೂರು ದಶಕಗಳ ನಂತರ

ಈಗ ಮೂರು ದಶಕಗಳ ನಂತರ ಹೋಂಡಾ ಕಂಪನಿಯ ಕಾರು, ಅದೂ 'ಮೇಡ್ ಇನ್ ಇಂಡಿಯಾ' ಕಾರು, ಮೊದಲ ಸ್ಥಾನ ಪಡೆದಿದೆ ಎಂದು ಜಪಾನ್ ಆಟೋಮೊಬೈಲ್ ಇಂಪೋರ್ಟ್ ಅಸೋಸಿಯೇಷನ್ ಹೇಳುತ್ತದೆ. ಅವರು ಭಾರತದ ಉತ್ಪನ್ನವನ್ನು ಒಪ್ಪಿಕೊಂಡಿದ್ದು, ನಾವು ತಯಾರಿಸಿದ ಉತ್ಪನ್ನಗಳು ಅಲ್ಲಿ ಜನಪ್ರಿಯತೆ ಪಡೆದಿದ್ದು ಒಂದಾದರೆ ಇನ್ನೊಂದು ವಿಷಯ ಅದಕ್ಕೆ ಸಿಕ್ಕಿರುವ ಬೇಡಿಕೆಯ ಗಾತ್ರ. ಭಾರತಕ್ಕೇ ಎಂದು ವಿನ್ಯಾಸಗೊಳಿಸಿದ ಎಲಿವೇಟ್ ಹೆಸರಿನ ಈ ಕಾರು ಜಪಾನಿನ ಮಾರುಕಟ್ಟೆಯನ್ನು ತಲುಪಿದಾಗ ಅಲ್ಲೊಂದು ಅಚ್ಚರಿಯು ಕಾದಿತ್ತು. ಅದೇನೆಂದರೆ - ಹೋಂಡಾ ಕಂಪನಿಯ ಜಪಾನ್ ತಂಡದವರು ಪ್ರತಿ ತಿಂಗಳೂ ತಾವಿಷ್ಟು ಮಾರಾಟ ಮಾಡಬಲ್ಲೆವು ಎಂಬ ಲೆಕ್ಕಾಚಾರ ಹಾಕಿದ್ದರು. ಆದರೆ ಭಾರತದಿಂದ ಆಮದು ಮಾಡಿಕೊಂಡ ಕಾರಿನ ಕ್ವಾಲಿಟಿ ಮತ್ತು ದರವು ಎಷ್ಟು ಆಕರ್ಷಕವಾಗಿತ್ತೆಂದರೆ ಕೆಲವೇ ತಿಂಗಳುಗಳಲ್ಲಿ ಈ ಕಾರಿನ ಬೇಡಿಕೆಯು ಅವರು ಹಾಕಿದ ಲೆಕ್ಕಾಚಾರಕ್ಕಿಂತ ನಾಲ್ಕು ಪಟ್ಟು ಹೆಚ್ಚಾಗಿಬಿಟ್ಟಿತು. ಹೀಗೆ ಜನರ ಬೇಡಿಕೆಯನ್ನು ಪೂರೈಸಲಾಗದೆ ಕಾರಿನ ಒಂದಿಷ್ಟು ಮಾದರಿಗಳ ಬುಕಿಂಗ್ ತಗೆದುಕೊಳ್ಳುವುದನ್ನು ಕೆಲ ಕಾಲ ನಿಲ್ಲಿಸಿದ್ದರಂತೆ!

ನಾವು ಇಲ್ಲಿಂದ ತಯಾರಿಸಿ ಕಳುಹಿಸಿದ ಕ್ವಾಲಿಟಿಯು ಅಲ್ಲಿಯ ಉತ್ಪನ್ನಗಳ ಮಟ್ಟಕ್ಕಿದ್ದು ಮತ್ತು ಅದರ ಜೊತೆ ದರವೂ ಕಡಿಮೆ ಇದ್ದರೆ ಮಾತ್ರ, ನಾವು ಇಲ್ಲಿ ತಯಾರಿಸಿದ ಉತ್ಪನ್ನಗಳು ಆಕರ್ಷಣೀಯವಾಗಿ ಹೆಚ್ಚು ಮಾರಾಟವಾಗಬಲ್ಲದು. ಕ್ವಾಲಿಟಿಯನ್ನು ಅವರ ಮಟ್ಟಕ್ಕೆ ತರಲು ಭಾರತದಲ್ಲಿ ಇಂದು ತಂತ್ರಜ್ಞಾನದ ಅಭಿವೃದ್ಧಿ ಆಗಿದೆ. ಜಪಾನಿನವರೇ ಬಂದು ನಮ್ಮೊಡನೆ ಕಲೆತು ಬೆರೆತು ನಮಗೆ ಕಲಿಸಿದ್ದಾರೆ. ಅವರಿಗೆ ಚೀನಾದವರಿಗಿಂತ ನಮ್ಮ ಮೇಲೆಯೇ ಹೆಚ್ಚು ನಂಬಿಕೆಯಿದ್ದಂತೆ ಕಾಣುತ್ತದೆ. ಪ್ರಾಡಕ್ಟ್ ಕ್ವಾಲಿಟಿಯನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಕಾಪಾಡಬಲ್ಲ ಕಲೆಯನ್ನು ಕಲಿಯುತ್ತಿದ್ದೇವೆ, ಕಲಿಯುವುದು ಸಾಕಷ್ಟಿದೆ.

ಜಪಾನಿನಲ್ಲಿ ತೆರಿಗೆ ವಿನಾಯಿತಿ!

ಹಾಗೆಯೇ ದರವು ಕಡಿಮೆಯಾಗಲೂ ಹಲವಾರು ಕಾರಣಗಳಿವೆ. ಮೊದಲನೆಯದು ಜಪಾನ್ ನಂತಹ ಮುಂದುವರಿದ ದೇಶಗಳಲ್ಲಿ ಮನ್ನಣೆ ದೊರಕಬಲ್ಲ ಉತ್ಕೃಷ್ಟ ಮಟ್ಟದ ಬಿಡಿ ಭಾಗಗಳನ್ನು ಭಾರತದಲ್ಲೇ ತಯಾರಿಸುವುದು. ಇದು ಕಂಪನಿಗಳ ಹಾಗೂ ಅಲ್ಲಿ ಕೆಲಸ ಮಾಡುತ್ತಿರುವವರ ಸಾಧನೆ. ಇನ್ನೊಂದು ಭಾರತದ ಆರ್ಥಿಕ ಬೆಳವಣಿಗೆಗೆ ಈಗಿನ ಸರಕಾರ ಕೊಡುತ್ತಿರುವ ಒತ್ತು. ಭಾರತ ಹಾಗೂ ಜಪಾನ್ ನಡುವೆ ನಡೆದ ಹೊಸ ಒಪ್ಪಂದದ ಪ್ರಕಾರ ಭಾರತದಲ್ಲಿಂದ ಆಮದು ಮಾಡಿಕೊಂಡ ವಸ್ತುಗಳ ಮೇಲೆ ಜಪಾನಿನಲ್ಲಿ ತೆರಿಗೆ ವಿನಾಯಿತಿ ಸಿಗುತ್ತಿದೆ. ಇದರಿಂದಾಗಿ ಉಳಿದ ದೇಶಗಳು ತಯಾರಿಸಿದ ವಸ್ತುಗಳಿಗಿಂತ ನಮ್ಮದು ಅಗ್ಗವಾಗುತ್ತದೆ. ಇವೆಲ್ಲ ರಾತ್ರಿ ಬೆಳಗಾಗುವುದರೊಳಗೆ ಆಗುವುದಲ್ಲ, ಹಲವಾರು ವರ್ಷಗಳ ರಾಜಕೀಯ, ತಾಂತ್ರಿಕ, ವೈಜ್ಞಾನಿಕ ಹಾಗೂ ಸಾಮಾಜಿಕ ಬೆಳವಣಿಗೆಯ ಫಲ!

ಭಾರತವು ಇದೇ ತರಹದ ಒಂದೊಂದೇ ಹೆಜ್ಜೆಗಳನ್ನಿಡುತ್ತ ಜಾಗತಿಕ ಕೈಗಾರಿಕಾ ಕೇಂದ್ರವಾಗಲು ಸಾಧ್ಯವಿದೆ.

ಗಂಗಾ ಜಲವನ್ನು ಹೊತ್ತು, ನೂರಾರು ಕಿ.ಮೀ. ನಡೆದು, ಶಿವನಿಗೆ ಅರ್ಪಿಸುವುದು, ಅಭಿಷೇಕ ಮಾಡುವುದು ಒಂದು ವಿಶೇಷ ಯಾತ್ರೆ ಎನಿಸಿದೆ. ಇದು ನಡೆಯುವುದು ಶ್ರಾವಣದಲ್ಲಿ.

ಕನ್ವರ್ ಯಾತ್ರಾ

● ಶಾಮಲಾ ಆರ್. ರಾವ್

ನಮ್ಮ ದೇಶದ ಹಬ್ಬಗಳ ಆಚರಣೆ ವೈವಿಧ್ಯ ಎನಿಸಿದೆ. ಒಂದೆಡೆ ನಿಶ್ಚಲವಾಗಿ ಕುಳಿತು ಚಾತುರ್ಮಾಸವನ್ನಾಚರಿಸುವಂತೆಯೇ ಕಾಲ್ನಡಿಗೆಯಲ್ಲಿ ಯಾತ್ರೆ ಹೋಗುವುದೂ ಆಧ್ಯಾತ್ಮಿಕ ಜಾಗೃತಿಗೆ ಉತ್ತಮ ಮಾರ್ಗ ಎಂದು ನಂಬುತ್ತದೆ. ಇದರಿಂದ ಲೋಕಜ್ಞಾನವು ಹೆಚ್ಚುತ್ತದೆ. ಪಾಪ ಕಳೆಯುತ್ತದೆ. ಆದ್ದರಿಂದಲೇ ಕೋಶ ಓದು, ದೇಶ ಸುತ್ತು ಎಂಬಂಥ ನಲ್ನುಡಿ ಹುಟ್ಟಿಕೊಂಡಿದೆ.

ಕನ್ವರ್ (ಕಾವಡ್) ಎನ್ನುವುದು ಒಂದು ಯಾತ್ರಾ ಹಬ್ಬ. ಅನಾದಿ ಕಾಲದಿಂದಲೂ ನಡೆದುಕೊಂಡು ಬಂದ ಶಿವ ಭಕ್ತರ ವ್ರತ. ಶ್ರಾವಣದಲ್ಲಿ ನಡೆಯುವುದರಿಂದ ಇದನ್ನು 'ಸಾವನ್ ಯಾತ್ರಾ' ಎಂದು ಕರೆಯುತ್ತಾರೆ. ಕನ್ವರ್ ಎಂದರೆ ಬಿದಿರಿನ ಕೋಲು. ಎರಡು ಮಡಿಕೆಗಳನ್ನು ಈ ಕೋಲಿನ ಎರಡು ತುದಿಯಲ್ಲಿ ಕಟ್ಟಿ, ಅದರೊಳಗೆ ಹರಿದ್ವಾರ, ಗೋಮುಖ, ಗೋಮತೀ ನದಿಗಳಿಂದ ತಂದ ಗಂಗಾಜಲವನ್ನು ತುಂಬಿಸಿಕೊಂಡು ಭುಜದ ಮೇಲಿರಿಸಿ ಬರಿಗಾಲಲ್ಲಿ ನಡೆಯುತ್ತಾ ಹೋಗಿ ಹರಿದ್ವಾರ, ಕಾಶಿ ಇತ್ಯಾದಿ ಪುರಾಣ ಪ್ರಸಿದ್ಧ ಶಿವಲಿಂಗಕ್ಕೆ ಅಭಿಷೇಕ ಮಾಡುತ್ತಾರೆ. ಮತ್ತು ಶಿವನ ಒಲುಮೆಯನ್ನೂ ರೋಗವಿಮುಕ್ತಿಯನ್ನೂ ಬೇಡುತ್ತಾರೆ.

ಹರಿದ್ವಾರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯಾತ್ರಾರ್ಥಿಗಳು ಸೇರಿ ಅಲ್ಲಿನ ಗಂಗಾಜಲವನ್ನು ಹೊತ್ತು ತಂದು, ಹೃಷಿಕೇಶದಲ್ಲಿ ನೆಲೆನಿಂತ ನೀಲಕಂಠ ಮಹದೇವನಿಗೆ ಎರೆಯುತ್ತಾರೆ. ಇಲ್ಲಿಯೇ ಶಿವನ ಜಟೆಯಿಂದ ಗಂಗೆ ಭೂಮಿಗಿಳಿದು ಬಂದಳು ಎಂಬುದು ಪ್ರತೀತಿ. ಸಮುದ್ರ ಮಥನ ಕಾಲದಲ್ಲಿ ಉದ್ಭವಿಸಿದ ವಿಷವನ್ನು ಶಿವ ಇಲ್ಲಿಯೇ ಗಂಟಲಲ್ಲಿ ಧರಿಸಿದ ಎಂಬ ನಂಬಿಕೆ. ಆಗ ಇಡೀ ದೇಹ ಉರಿಯತೊಡಗಿತು. ದೇವತೆಗಳೂ ರಾಕ್ಷಸರೂ ಗಂಗಾಜಲವನ್ನು ಶಿವನಿಗೆ ಅಭಿಷೇಕ ಮಾಡುತ್ತಾರೆ. ಅಂದಿನಿಂದ ಶಿವನು ಅಭಿಷೇಕ ಪ್ರಿಯನಾದನು. ಜಲಾಭಿಷೇಕವೇ ಶಿವನಿಗೆ ಸಮರ್ಪಿಸುವ ದೊಡ್ಡ ಪೂಜೆ. ರಾವಣನೂ ಶಿವಲಿಂಗಕ್ಕೆ ವಿಷದ ಉರಿ ಕಡಿಮೆಯಾಗಲು ಗಂಗೆಯನ್ನು ಎರೆಯುತ್ತಾನೆ. ಪರಶುರಾಮನೂ ಕನ್ವರ್ ಯಾತ್ರೆಯನ್ನು ಮಾಡಿ ಶಿವನಿಗೆ ಗಂಗೋದಕ ಅಭಿಷೇಕ ಮಾಡಿದ್ದನು ಎನ್ನಲಾಗಿದೆ. ತ್ರೇತಾಯುಗದಲ್ಲಿ ಶ್ರವಣಕುಮಾರನು ಪ್ರಥಮವಾಗಿ ಕನ್ವರ್ ಯಾತ್ರೆಯನ್ನು ಮಾಡಿದನು. ತನ್ನ ಅಂಧ ಮಾತಾಪಿತೃಗಳು ಹರಿದ್ವಾರದಲ್ಲಿ ಗಂಗಾಸ್ನಾನ ಮಾಡಲು ಇಚ್ಛಿಸಿದ್ದರಿಂದ ಅವರನ್ನು ತೂಗುಬುಟ್ಟಿಯಲ್ಲಿ ಕೂರಿಸಿಕೊಂಡು ಹೊತ್ತೊಯ್ದು ಹೃಷಿಕೇಶ ತಲುಪಿ, ಅಲ್ಲಿ ನೀಲಕಂಠ ಮಹಾದೇವನಿಗೆ ಅಭಿಷೇಕ ಮಾಡಿಸುತ್ತಾನೆ.

ಉತ್ತರ ಭಾರತದ ದೆಹಲಿ, ಉತ್ತರ ಪ್ರದೇಶ, ಹರ್ಯಾಣ,ರಾಜಸ್ಥಾನ್, ಪಂಜಾಬ್, ಬಿಹಾರ್, ಜಾರ್ಖಂಡ್, ಛತ್ತೀಸ್ ಗಡ್, ಮಧ್ಯಪ್ರದೇಶ ಹೀಗೆ ಗಂಗೆ ಹರಿಯುವ ಸುತ್ತ ಮುತ್ತಿನ ಪ್ರದೇಶದಲ್ಲೆಲ್ಲ ಲಕ್ಷಗಟ್ಟಲೆ ಜನರು ಈ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಯಾತ್ರೆ ಮಾಡುವವರು 48 ದಿನಗಳ ವ್ರತಾಚರಣೆಯಲ್ಲಿದ್ದು, ಮಾನಸಿಕ ದೈಹಿಕ ಶುದ್ಧಿಗೊಳಪಟ್ಟು, ಅಂತ:ಶುದ್ಧಿಯ ಪ್ರತೀಕವಾದ ಕೇಸರಿ ಬಟ್ಟೆಯನ್ನುಟ್ಟು ಕಾವಾಡಿಯನ್ನು ಹೊತ್ತು, ಬರಿಗಾಲಲ್ಲಿ ನಡೆಯುವ ಪದ್ಧತಿ ಇದೆ. ಮತ್ತು ದಾರಿಯ ನಡುವೆ, ಗಂಗಾ ಜಲವನ್ನು ನೆಲದ ಮೇಲೆಲ್ಲೂ ಇರಿಸ ಕೂಡದು. ಅಲ್ಲಿನ ಸ್ಥಳೀಯ ಆಡಳಿತ ವ್ಯವಸ್ಥೆಯು, ಯಾತ್ರಾಮಾರ್ಗವನ್ನು ಗುರುತಿಸಿ, ಆಹಾರ, ಪಾನೀಯ, ವಸತಿ ವ್ಯವಸ್ಥೆಗಳನ್ನು ಮಾಡುತ್ತದೆ. ಕನ್ವರ್ ಯಾತ್ರೆಯು ಭಾರತೀಯರ ಅತೀ ಪ್ರಾಚೀನ ವ್ರತ ಯಾತ್ರೆ ಎಂದರೆ ತಪ್ಪಾಗದು. ತಮಿಳುನಾಡಿನಲ್ಲಿ ಇದೇ ರೀತಿಯಲ್ಲಿ ನಡೆಯುವ ಕಾವಡಿ ಹಬ್ಬವು ಸುಬ್ರಹ್ಮಣ್ಯನ ಪೂಜೆಗೆ ಮೀಸಲು. ಕಾವಡಿಯನ್ನು ಹಳದಿ ಬಟ್ಟೆಯಿಂದ ಸುತ್ತಿ, ವಿಧ ವಿಧವಾಗಿ ಅಲಂಕರಿಸಿ ನಂತರ ಮುರುಗನ ವಾಹನ ನವಿಲಿನ ಗರಿಗಳನ್ನು ಕಾವಡಿಗೆ ಕಟ್ಟುತ್ತಾರೆ. ಇದೇ ರೀತಿಯ ಯಾತ್ರೆಗಳು ನಮ್ಮ ದೇಶದ ಇತರ ಭಾಗಗಳಲ್ಲೂ ಇವೆ. ಶ್ರಾವಣ ಮಾಸ ಬಂದಾಗ ನಡೆಯುವ ಈ 'ಸಾವನ್ ಯಾತ್ರಾ'ವನ್ನು ನೋಡುವುದೇ ಒಂದು ವಿಶೇಷ ಅನುಭೂತಿ. ಈ ರೀತಿ ಯಾತ್ರೆ ಬಂದವರು, ಶ್ರಾವಣದಲ್ಲಿ ಕಾಶಿಯಲ್ಲಿ ಸಾಲಾಗಿ ನಿಂತು ದೇಗುಲ ಪ್ರವೇಶಕ್ಕಾಗಿ ಕಾಯುವುದನ್ನು ನೋಡಬಹುದು.

"ನಾವು ಲೆಕ್ಕಕ್ಕೇ ಇಲ್ಲದವರು ಎನಿಸಿಕೊಳ್ಳುವ ಬದಲು, ಲೆಕ್ಕದವರು ಎನಿಸಿಕೊಳ್ಳುವುದು ಒಳ್ಳೆಯದು

ಇದು ಲೆಕ್ಕದ ವಿಷಯ

ಸ್ಕೂಲಿನಲ್ಲಿ ಓದುವಾಗ ಕ್ಯಾಲುಕ್ಯುಲೇಟರ್ ಎನ್ನುವ ಪದವೇ ತಿಳಿದಿರಲಿಲ್ಲ. ನಮಗೆಲ್ಲಾ ಮಗ್ಗಿ ಹೇಳಿಸೋರು. ಎರಡೊಂದ್ಲ ಮಗ್ಗಿ ಬಹಳ ಸುಲಭವಾಗಿ ಬರೋದು. ಹಾಗೆ ನೋಡಿದರೆ ಸಮ ಸಂಖ್ಯೆಯ ಮಗ್ಗಿ ಸುಲಭ. ಬೆಸ ಸಂಖ್ಯೆಯ ಮಗ್ಗಿಗೆ ಸ್ವಲ್ಪ ತಿಣುಕಬೇಕು. ಇನ್ನೊಂದು ವಿಧಾನ ಎಂದರೆ ಮನೆಯಲ್ಲಿ ಸ್ಲೇಟಿನಲ್ಲಿ ಬರೆದು ಮಗ್ಗಿಯನ್ನು ಅಭ್ಯಾಸ ಮಾಡುವುದು. ಗುಣಿಸುವುದು, ಭಾಗಿಸುವುದು, ಇವೆರಡಕ್ಕಿಂತ ಕೂಡುವುದು ಮತ್ತು ಕಳೆಯುವುದು ಸ್ವಲ್ಪ ಸುಲಭ ಎನಿಸಿತ್ತು.

ನಮಗೆ ಮನೆಯಲ್ಲಿ ನಮ್ಮ ಹಿರಿಯರು ಕೂಡೋದನ್ನು ಅಭ್ಯಾಸ ಮಾಡಿಕೋ ಎಂದು ಹೇಳುತ್ತಿದ್ದರು. ಇದರ ಅಭ್ಯಾಸ ಹೇಗೆಂದರೆ ಎರಡು ಮೂರು ಐದು, ಐದು ನಾಲ್ಕು ಒಂಭತ್ತು, ಒಂಭತ್ತು ಆರು ಹದಿನೈದು ಹೀಗೆ. ಎಲ್ಲವೂ ಮನಸಿನಲ್ಲಿಯೇ ನಡೆಯಬೇಕು. ಇನ್ನು ಕಳೆಯುವುದು ಎಂದರೆ ಹತ್ತರಲ್ಲಿ ನಾಲ್ಕು ಹೋದರೆ ಆರು, ಎಂಟರಲ್ಲಿ ಎರಡು ಹೋದರೆ ಆರು ಹೀಗೆ ಸಣ್ಣ ಪುಟ್ಟ ಲೆಕ್ಕಗಳು ಬಂದುಬಿಡೋವು. ಆದರೆ ನಲವತ್ತಾರರಲ್ಲಿ ಮೂವತ್ತೆರಡು ಕಳೆದರೆ ಎಷ್ಟು ಎನ್ನೋದು ಬಾಯಿಗೆ ಬರುತ್ತಿರಲಿಲ್ಲ. ಅದನ್ನು ಹಾಳೆಯಲ್ಲಿ ಇಲ್ಲಾ ಸ್ಲೇಟಿನಲ್ಲಿ ಬರೆದುಕೊಂಡು ಉತ್ತರ ಹೇಳಬೇಕಿತ್ತು.

ಐವತ್ತರ ವರೆಗೆ ಮಗ್ಗಿ!

ನಮ್ಮ ಅಧ್ಯಾಪಕರ ಗುರಿ ಏನಿತ್ತು ಎಂದರೆ ಹಾಳೆ, ಸ್ಲೇಟು ಏನೂ ಇಲ್ಲದೇ ಐವತ್ತರ ವರೆಗೆ ಮಗ್ಗಿ ಹೇಳಬೇಕು ಎಂದು. ಇನ್ನು ಭಾಗಾಕಾರವಂತೂ ಹಾಳೆ ಅಥವಾ ಸ್ಲೇಟ್ ಇಲ್ಲದೇ ಮಾಡೋಕೆ ಆಗುತ್ತಲೇ ಇರಲಿಲ್ಲ. ನಾವೆಲ್ಲಾ ಚಿಕ್ಕವರಿದ್ದಾಗ ಮನೆಗೆ ಬೇಕಾದ ಪದಾರ್ಥಗಳನ್ನು ಒಂದು ಹಾಳೆಯಲ್ಲಿ ಬರೆಸೋರು. ಇದರಿಂದ ಕಾಗುಣಿತವೂ ಉತ್ತಮಗೊಳ್ಳುತ್ತಿತ್ತು. ನಾವು ಬರೆದ ಪದಾರ್ಥದ ಮಗ್ಗುಲಿಗೆ ಅಂಗಡಿಯವರು ಅದರ ದರ ಬರೆದು ಒಟ್ಟು ಮಾಡಿ ಇಷ್ಟು ದುಡ್ಡು ಎಂದು ಹೇಳುತ್ತಿದ್ದರು. ಆಮೇಲೆ ಆ ಚೀಟಿಯನ್ನು ನಮಗೆ ಕೊಟ್ಟು 'ಲೆಕ್ಕ ಹಾಕಿರುವುದು ಸರಿಯಾಗಿದೆಯಾ ನೋಡು' ಎಂದು ನಮಗೆ ಕೆಲಸ ಕೊಡುತ್ತಿದ್ದರು. ಇದರಂತೆ ಇನ್ನಿತರ ಪದಾರ್ಥಗಳಿಗೆ ದರ ಬರೆದಿರುವ ಸಾಲನ್ನು ಒಟ್ಟುಗೂಡಬೇಕು. ಅಂಗಡಿಯವರು ಒಂದು ರೂಪಾಯಿ ಎಪ್ಪತ್ತು ಪೈಸೆ, ಎಂಭತ್ತು ಪೈಸೆ, ಅರವತ್ತೈದು ಪೈಸೆ, ಮೂರು ರೂಪಾಯಿ ಹತ್ತು ಪೈಸೆ, ಹತ್ತು ರೂಪಾಯಿ ಇಪ್ಪತ್ತು ಪೈಸೆ ಹೀಗೆ ಬರೆದಿರುವುದನ್ನು ಒಟ್ಟುಗೂಡಿಸಬೇಕು. ಆಗ, ಸಂಜೆಯ ಹೊತ್ತಿನಲ್ಲಿ ಕಾಲ ಕಳೆಯಲು, ದೂರದರ್ಶನ ರೇಡಿಯೋ ಇವುಗಳು ಇಲ್ಲದಿದ್ದುದರಿಂದ, ನಮ್ಮ ಹಿರಿಯರು ಕೆಲವು ಲೆಕ್ಕಗಳನ್ನು ಹಾಕಿಕೊಟ್ಟು ಮಾಡಿ ಎನ್ನೋರು. ಇವು ನಮ್ಮ ಮೆದುಳಿಗೆ ಒಳ್ಳೆ ಕಸರತ್ತು ಕೊಡುತ್ತಿತ್ತು.

● ಬೇಲೂರು ರಾಮಮೂರ್ತಿ

ಕ್ಯಾಲುಕೇಟರ್ ದಾಸ!

ಆದರೆ ಈಗ ಏನಾಗಿದೆ ನೋಡಿ. ನಾವೆಲ್ಲಾ ಕೂಡುವ ಯಂತ್ರದ ಅಂದರೆ ಕ್ಯಾಲುಕ್ಯುಲೇಟರ್ ದಾಸರಾಗಿದ್ದೇವಿ. ಕ್ಯಾಲುಕ್ಯುಲೇಟರ್ ಇಲ್ಲದೇ ಕೂಡುವುದು ಕಳೆಯುವುದು ಆಗುವುದೇ ಇಲ್ಲ. ನೀವು ಯಾವುದೇ ಅಂಗಡಿಗೆ ಹೋಗಿ ಎರಡೇ ಪದಾರ್ಥ ತಗೊಳಿ, ಅವುಗಳ ದರ ಒಂದಕ್ಕೆ ಹತ್ತು ಇನ್ನೊಂದಕ್ಕೆ ಮೂವತ್ತು ಇದ್ದರೆ ಅಂಗಡಿಯವರು ನಲವತ್ತು ರೂಪಾಯಿ ಕೊಡಿ ಎಂದು ಕೇಳುವುದಿಲ್ಲ, ಬದಲಿಗೆ ಕ್ಯಾಲುಕ್ಯುಲೇಟರ್‌ನಲ್ಲಿ ಕುಟ್ಟಿ, 'ಹಾ ನಲವತ್ತು ಕೊಡಿ' ಅಂತಾರೆ. ಒಂದು ಸಣ್ಣ ಲೆಕ್ಕ ಮಾಡಲು ಕೂಡಾ ನಾವು ಕ್ಯಾಲುಕ್ಯುಲೇಟರ್ ಅವಲಂಬಿಸಿರುವುದರಿಂದ ನಮ್ಮ ಮೆದುಳಿನಲ್ಲಿ ಲೆಕ್ಕ ಮಾಡುವ ನರವೇ ಇಲ್ಲವೇನೋ ಎನಿಸಿಬಿಟ್ಟಿದೆ. ತಳ್ಳುವ ಗಾಡಿಯಲ್ಲಿ ತರಕಾರಿ ಮಾರೋರು ಸಹ ಈಗ ಕ್ಯಾಲುಕ್ಯುಲೇಟರ್ ಇಟ್ಟುಕೊಂಡಿದ್ದಾರೆ.

ಇದೆಲ್ಲಾ ನೆನಪಾಗಿದ್ದು ಯಾಕೆ ಎಂದರೆ ದೂರದರ್ಶನದಲ್ಲಿ ಪ್ರಸಾರವಾಗುವ ಥಟ್ಟಂತ ಹೇಳಿ ಕಾರ್ಯಕ್ರಮದಲ್ಲಿ ಕೂಡು, ಕಳೆ, ಗುಣಿಸು, ಭಾಗಿಸು ಎಂದು ಕೊಡುವ ಲೆಕ್ಕ ಬಹಳ ಸರಳವಾಗಿರುತ್ತದೆ.

ನಾವು ಮನೆಯಲ್ಲಿ ಕೂತು ಆ ಲೆಕ್ಕವನ್ನು ಹತ್ತು ಅಥವಾ ಇಪ್ಪತ್ತು ಸೆಕೆಂಡುಗಳಲ್ಲಿ ಸರಿಯಾಗಿ ಮಾಡಿರುತ್ತೇವೆ. ಆದರೆ ಸ್ಪರ್ಧೆಗೆ ಬಂದಿರುವ ಅಭ್ಯರ್ಥಿಗಳು ಅವರ ಪರಿಚಯ ಮಾಡಿಕೊಳ್ಳುವಾಗ ನಾನು ಸ್ಕೂಲಲ್ಲಿ ಮೇಡಂ ಆಗಿದೀನಿ ಎಂದೋ, ಸಾಫ್ಟ್‌ವೇರ್ ಇಂಜಿನಿಯರ್ ಎಂದೋ ಪರಿಚಯ ಮಾಡಿಕೊಂಡಿರುತ್ತಾರೆ. ಇಂಥವರೂ ಕೂಡಾ ಈ ಸರಳ ಲೆಕ್ಕಗಳನ್ನು ಮಾಡುವುದರಲ್ಲಿ ಹಿಂದೆ ಬೀಳುವುದನ್ನು ನೋಡಿರಬಹುದು. ಯಾಕೆ ಇಂಥಾ ಸರಳ ಲೆಕ್ಕಗಳನ್ನೂ ಮಾಡೋಕೆ ಆಗಲ್ಲ ಎಂದರೆ ನಮ್ಮಲ್ಲಿ ಲೆಕ್ಕ ಮಾಡುವ ತಯಾರಿಯೇ ಇಲ್ಲ. ಎಲ್ಲಕ್ಕೂ ಕ್ಯಾಲುಕ್ಯುಲೇಟರ್ ಅವಲಂಬಿಸಿಕೊಂಡಿರುವಾಗ ಇನ್ನು ಬಾಯಿ ಲೆಕ್ಕ ಬಾಯಿ ಬಡ್ಕೊಂಡ್ರೂ ಬರೋಲ್ಲ.

ನನ್ನ ಕಳಕಳಿ ಏನೆಂದರೆ ಆಧುನಿಕ ಸಲಕರಣೆಗಳನ್ನು ಉಪಕರಣಗಳನ್ನು ನಾವು ಉಪಯೋಗಿಸಬೇಕು ನಿಜ, ಆದರೆ ಇದರಿಂದ ನಮ್ಮ ಮೆದುಳು ತುಕ್ಕು ಹಿಡಿಯಬಾರದಲ್ವಾ. ಆದಷ್ಟೂ ನಮ್ಮ ಮೆದುಳಿಗೆ ಕೆಲಸ ಕೊಟ್ಟರೆ ಅದು ಚೂಪಾಗಿರುತ್ತದೆ. ಯಾವುದೇ ಒಂದು ಕೆಲಸ ಮೊದಲು ಮಾಡುವಾಗ ಹೆಚ್ಚು ಸಮಯ ತೆಗೆದುಕೊಂಡರೆ ಮೆದುಳು ಚುರುಕಾದಂತೆಲ್ಲಾ ಮುಂದೆ ಮಾಡುವ ಕೆಲಸಗಳು ಬೇಗ ಬೇಗ ಆಗುತ್ತದೆ. ನಾವು ಲೆಕ್ಕಕ್ಕೇ ಇಲ್ಲದವರು ಎನಿಸಿಕೊಳ್ಳುವ ಬದಲು, ಲೆಕ್ಕದವರು ಎನಿಸಿಕೊಳ್ಳುವುದು ಒಳ್ಳೆಯದು.

ದಿನ ದರ್ಶಿಕೆ

ತಿಥಿ ತ್ರಯೋದಶಿ, ಕೃಷ್ಣ ಪಕ್ಷ, ಆದ್ರಾ ನಕ್ಷತ್ರ, ಹರ್ಷನ್ ಯೋಗ, ವಣಿಜ, ವೃಷ್ಟಿ ಕರಣ, ಚಂದ್ರ ರಾಶಿ ತುಲಾ, 1946 ಕ್ರೋಧಿನಾಮ ಶಕ ಸಂವತ್ಸರ, ಅಭಿಜಿತ್ ಲಗ್ನ

ಮನೆಮದ್ದು

ಆಸ್ತಮಾ ಮತ್ತು ಬ್ರಾಂಕೈಟಿಸ್ ಮತ್ತು ನಾಯಿಕೆಮ್ಮಿಗೆ ಚಿಕಿತ್ಸೆಗೆ ಈರುಳ್ಳಿಯನ್ನು ಶತಮಾನಗಳಿಂದ ಬಳಸಲಾಗುತ್ತದೆ. ಈರುಳ್ಳಿಯು ಉರಿಯೂತ, ಅಲರ್ಜಿ-ವಿರೋಧಿ ಮತ್ತು ಆಂಟಿ-ಕಾರ್ಸಿನೋಜೆನಿಕ್ ಮತ್ತು ಉತ್ಕರ್ಷಣ ನಿರೋಧಕ ಗುಣಲಕ್ಷಣ ಹೊಂದಿದೆ. ಇದು ಬ್ಯಾಕ್ಟೀರಿಯಾವನ್ನು ನಾಶಮಾಡುತ್ತದೆ. ಕೆಮ್ಮು ನಿರಂತರವಾಗಿದ್ದರೆ, ಹುರಿದ ಈರುಳ್ಳಿಯನ್ನು ಒಂದು ಚಮಚ ಜೇನುತುಪ್ಪದೊಂದಿಗೆ ಸೇವಿಸಿ. ನೀವು ಶೀಘ್ರದಲ್ಲೇ ಕೆಮ್ಮಿನಿಂದ ಪರಿಹಾರವನ್ನು ಪಡೆಯುವಿರಿ.



ಸೌಂದರ್ಯ ಸೂತ್ರ

ಒಣ ಚರ್ಮಕ್ಕೆ ಚಿಕಿತ್ಸೆ ನೀಡಲು ಅಕ್ಕಿ ನೀರು ಅತ್ಯುತ್ತಮ ಉಪಾಯವಾಗಿದೆ. ಜಪಾನಿಯರು ಇದನ್ನು ಶತಮಾನಗಳಿಂದ ಅಕ್ಕಿ ನೀರನ್ನು ತಮ್ಮ ಸೌಂದರ್ಯದ ದಿನಚರಿಯಲ್ಲಿ ಬಳಸುತ್ತಿದ್ದಾರೆ. ಇದು ಚರ್ಮದ ಪಿಎಚ್ ಮಟ್ಟವನ್ನು ಸಮತೋಲನಗೊಳಿಸುತ್ತದೆ ಮತ್ತು ಚರ್ಮಕ್ಕೆ ಕಾಂತಿ ನೀಡುತ್ತದೆ. ಇದನ್ನು ನಿಮ್ಮ ಮುಖ ಮತ್ತು ದೇಹಕ್ಕೆ ಚರ್ಮದ ಟೋನರ್ ಆಗಿ ಬಳಸಬಹುದು.

ದಿನ ಭವಿಷ್ಯ

ಮೇಷ ನೀವು ಕೆಲವು ಉನ್ನತ ವ್ಯಕ್ತಿಗಳನ್ನು ಭೇಟಿಯಾಗಬಹುದು. ಇದು ವ್ಯಾಪಾರಕ್ಕೆ ಬಂಡವಾಳದಂತೆ ಉತ್ತಮ ಆರೋಗ್ಯಕ್ಕೆ ಅಗತ್ಯವಾಗಿದೆ.

ವೃಷಭ ನಿಮ್ಮನ್ನು ಫಿಟ್ ಆಗಿರಲು ಹೆಚ್ಚಿನ ಕ್ಯಾಲೊರಿಯ ಆಹಾರವನ್ನು ತಪ್ಪಿಸಿ. ಇಂದು ಷೇರು ಮಾರುಕಟ್ಟೆಯಲ್ಲಿ ಲಾಸ್ ಆಗಬಹುದು.

ಮಿಥುನ ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ.

ಕಟಕ ಚಾಲನೆ ಮಾಡುವಾಗ ಎಚ್ಚರ ವಹಿಸಿ. ನಿಮ್ಮ ನಾಲಗೆ ನಿಮ್ಮ ಅಜ್ಜ ಅಜ್ಜಿಯಂದಿರ ಭಾವನೆಗಳಿಗೆ ಘಾಸಿ ಮಾಡುವುದರಿಂದ ನಿಮ್ಮ ಭಾಷೆಯನ್ನು ನಿಯಂತ್ರಿಸಿ.

ಸಿಂಹ ನಗು ಎಲ್ಲ ಸಮಸ್ಯೆಗಳಿಗೆ ಪರಿಹಾರ. ಇಂದು ದಿನ ಯಾರಿಗೂ ಸಾಲ ನೀಡಬೇಡಿ. ಅದಾಗ್ಯೂ, ನೀಡಿದರೆ, ಯಾವಾಗ ಮರುಪಾವತಿ ಮಾಡುತ್ತಾರೆಂದು ಬರೆದಿಟ್ಟುಕೊಳ್ಳಿ.

ಕನ್ಯಾ ನಿಮ್ಮ ದೀರ್ಘಕಾಲೀನ ಅನಾರೋಗ್ಯದ ಚೇತರಿಸಿಕೊಳ್ಳುತ್ತೀರಿ. ಆದರೆ ಸ್ವಾರ್ಥಿಗಳಾದ, ಮುಂಗೋಪಿ ವ್ಯಕ್ತಿಯ ಸಹವಾಸವನ್ನು ತಪ್ಪಿಸಿ.

ತುಲಾ ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನವಾಗುತ್ತದೆ.

ವೃಶ್ಚಿಕ ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ಹೂಡಿಕೆ ಮಾಡಿದ್ದರೆ, ಇಂದಿನ ದಿನ ಅವರಿಗೆ ಆರ್ಥಿಕ ನಷ್ಟ ಸಂಭವಿಸಬಹುದು.

ಧನು ನಿಮ್ಮ ದೇಹದ ಪುನಃಶ್ಚೇತನಕ್ಕಾಗಿ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳದಿದ್ದರೆ ನೀವು ಆಯಾಸ ಹಾಗೂ ನಿರಾಸೆಯಲ್ಲಿ ಸಿಲುಕುತ್ತೀರಿ.

ಮಕರ ವಿಶೇಷವಾಗಿ ತಿರುವು ಗಳಲ್ಲಿ ವಾಹನ ಚಾಲನೆ ಮಾಡುವಾಗ ಎಚ್ಚರಿಕೆ ಯಿಂದಿರಿ. ಬೆರೆಯವರ ಉದಾಸೀನತೆ ನಿಮಗೆ ಸಮಸ್ಯೆಗಳನ್ನು ಉಂಟುಮಾಡಬಹುದು.

ಕುಂಭ ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ನಿಮ್ಮ ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ.

ಮೀನ ನಿಮ್ಮ ಮನದನ್ನೆಯ ವಿಚಿತ್ರ ನಡವಳಿಕೆ ಇಂದು ನಿಮ್ಮ ಪ್ರೇಮವನ್ನು ಘಾಸಿಗೊಳಿಸುತ್ತದೆ.ಇಂದು ಪ್ರಮುಖ ಸಲಹೆಯನ್ನು ನೀಡುವ ವ್ಯಕ್ತಿಯನ್ನು ಭೇಟಿ ಮಾಡಬಹುದು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1934 ಅಡಾಲ್ಫ್ ಹಿಟ್ಲರನು ಜರ್ಮನಿಯ ಸರ್ವಾಧಿಕಾರಿಯಾಗಿ ಆದರು.
- ಅಂತಾರಾಷ್ಟ್ರೀಯ ಬಿಯರ್ ದಿನ
- 1876: ಸ್ವಾತಂತ್ರ್ಯ ಹೋರಾಟಗಾರ, ಭಾರತದ ತಿರಂಗವನ್ನು ರಚಿಸಿದ ಪಿಂಗಳಿ ವೆಂಕಯ್ಯ ಜನ್ಮದಿನ
- ಖ್ಯಾತ ಬಾಲಿವುಡ್ ನಟ ಸಿದ್ದಾರ್ಥ್ ರಾಯ್ ಕಪೂರ್ ಜನ್ಮದಿನ

ಚಿತ್ರಸ್ಫೂರ್ತಿ



ಇಸ್ರೇಲಿ ಫೋಟೋಗ್ರಾಫರ್ ತ್ಜಾಹಿ ಫಿಂಕೆಲ್‌ಸ್ಟೇನ್ ಅವರು ಇಸ್ರೇಲ್‌ನ ಜೆಝ್ರೀಲ್ ಕಣಿವೆಯಲ್ಲಿ ಪಕ್ಷಿಗಳ ಫೋಟೋಗಳನ್ನು ಸೆರೆಹಿಡಿಯಲು ಹೋದಾಗ, ಅವರು ಒಂದು ಆಮೆ ನಿಧಾನವಾಗಿ ಚಲಿಸುವುದನ್ನು ನೋಡಿದರಂತೆ, ಹಾಗೇ ನೋಡುತ್ತಾ ಕುಳಿತಾಗ, ಆಮೆ ನೀರಿನ ಮೇಲೆ ತೇಲುತ್ತಿದ್ದಾಗ ಡ್ರ್ಯಾಗನ್‌ಫ್ಲೈ ಸುಮ್ಮನೆ ಬಂದು ಅದರ ಮೂಗಿನ ಮೇಲೆ ಕೂರಿತಂತೆ. ಆಗ ಫಕ್ಕನೆ ಕ್ಯಾಮೆರಾ ಹಿಡಿದ ಇವರು, ಈ ಫೋಟೋವನ್ನು ಕ್ಲಿಕ್ಕಿಸಿದರಂತೆ.

ನಿಜವಾದ ಸಂತರ ಲಕ್ಷಣ

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಜಪಾನಿನಲ್ಲಿ ಒಬ್ಬ ಯುವ ಸಂತರಿದ್ದರು. ಅಲ್ಲಿಯ ಜನರು ಅವರನ್ನು ಬಹಳ ಆದರ, ಗೌರವದಿಂದ ಕಾಣುತ್ತಿದ್ದರು. ಒಂದು ಸಲ ಇವೆಲ್ಲವೂ ತಲೆಕೆಳಗಾಗುವಂತ ಪ್ರಸಂಗ ಒದಗಿಬಂದಿತು. ಆ ಊರಿನಲ್ಲಿ ಮದುವೆಯಾಗದ ಯುವತಿಯೊಬ್ಬಳು, ಒಂದು ಮಗುವಿಗೆ ಜನ್ಮವಿತ್ತಳು. ಆಕೆಯ ಮನೆಯವರು ಈ ಮಗುವಿನ ತಂದೆ ಯಾರು ಎಂದು ಅವಳನ್ನು ಪ್ರಶ್ನಿಸಲು, ಈ ಯುವತಿ, ಯುವ ಸಂತರ ಕಡೆ ಬೊಟ್ಟು ಮಾಡಿ ತೋರಿಸಿದಳು.

ಊರಿನ ಜನರೆಲ್ಲ ಈ ಸಂತರ ಗುಡಿಸಲಿಗೆ ಮುತ್ತಿಗೆ ಹಾಕಿ, ಅವರನ್ನು ಅವಾಚ್ಯ ಶಬ್ದಗಳಿಂದ ಬೈದು, ಮೋಸಗಾರನೆಂದು ಜರಿದು, ಅವರ ಗುಡಿಸಲಿಗೆ ಬೆಂಕಿ ಹಚ್ಚಿದರು. ಯುವತಿಗೆ ಹುಟ್ಟಿದ ಮಗುವನ್ನು ತಂದು ಅವರ ಬಳಿಗೆ ಬಿಟ್ಟರು. ಸಂತರು ಒಂದಿಷ್ಟೂ ವಿಚಲಿತರಾಗಲಿಲ್ಲ, ಹೌದೇನು? ಹಾಗಾದರೆ ಈ ಮಗು ನನ್ನದೇನು? ಎಂದು ಅಳುತ್ತಿದ್ದ ಮಗುವನ್ನು ಎತ್ತಿಕೊಂಡು ಸಮಾಧಾನ ಪಡಿಸತೊಡಗಿದರು.

ಸಂತರು ದಿನನಿತ್ಯದಂತೆ ಭಿಕ್ಷೆಗಾಗಿ ತನ್ನೊಂದಿಗೆ ಮಗುವನ್ನು ಎತ್ತಿಕೊಂಡು ಊರೊಳಗೆ ಹೊರಟರು. ಆದರೆ ಅವರಿಗೆ ಯಾರೂ ಭಿಕ್ಷೆಯನ್ನು ನೀಡಲಿಲ್ಲ, ಎಲ್ಲರೂ ಸಿಟ್ಟಿನಿಂದ ಬಾಗಿಲ ಮುಚ್ಚುವವರೇ! ಕೆಲ ಜನರು, ಸಣ್ಣ ಮಕ್ಕಳು ಕೂಡಾ, ಅವರನ್ನು ಕೆಟ್ಟದಾಗಿ ಅಣಕಿಸತೊಡಗಿದರು. ಸಂತರು ಮಾತ್ರ ಇದ್ಯಾವುದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ, ಮನೆಯಿಂದ ಮನೆಗೆ ಮುಂದಕ್ಕೆ ಹೋಗುತ್ತಾ, ಹಾಗೆಯೇ ಮಗುವಿನ ತಾಯಿಯಿದ್ದ ಮನೆಗೆ ಬಂದರು. ಅವರ ಮನೆಯವರನ್ನು ನೋಡಿ, 'ನಾನು ತಪ್ಪಿತಸ್ಥನಿರಬಹುದು, ನನಗೇನು ಆಹಾರ ಕೊಡಬೇಡಿ, ಆದರೆ ಈ ಪುಟ್ಟ ಮಗುವಿಗಾದರೂ, ಸ್ವಲ್ಪ ಹಾಲು ಕೊಡಿ! ಪಾಪ, ಈ ಮಗು ಏನು ತಪ್ಪು ಮಾಡಿದೆ? ಅದು ಹೊಟ್ಟೆ ಹಸಿವಿನಿಂದ ಅಳುತ್ತಿದೆ' ಎಂದು ಹೇಳಿದರು.

ಮಗು ಜೋರಾಗಿ ಅಳುತ್ತಿತ್ತು, ಅವರ ಮನೆಯ ಮುಂದೆ ತುಂಬಾ ಜನರು ನೆರೆದಿದ್ದರು. ಆ ಮಗುವಿನ ತಾಯಿಗೆ, ಸಂತರ ಮಾತನ್ನು ಕೇಳಿ ತಡೆದುಕೊಳ್ಳಲು ಆಗಲಿಲ್ಲ, ಆಗ ಆಕೆ, ತನ್ನ ತಂದೆಯ ಕಾಲಿಗೆ ಬಿದ್ದು, 'ನನ್ನನ್ನು ಕ್ಷಮಿಸಿಬಿಡಿ ಅಪ್ಪಾ, ನಾನು ಹೇಳಿದ್ದೆಲ್ಲ ಸುಳ್ಳು, ಈ ಸಂತರಿಗೂ ಈ ಮಗುವಿಗೂ ಯಾವುದೇ ಸಂಬಂಧವಿಲ್ಲ, ಈ ಮಗುವಿನ ನಿಜವಾದ ತಂದೆಗೆ ನೀವು ತೊಂದರೆ ಮಾಡಬಹುದೆಂದು ತಿಳಿದು, ಅವರನ್ನು ಉಳಿಸಲಿಕ್ಕಾಗಿ ನಾನೇ ಈ ಸಂತರ ಹೆಸರನ್ನು ಹೇಳಿ, ತಪ್ಪು ಮಾಡಿದೆ, ನನಗೆ ಈ ಸಂತರ ಪರಿಚಯವೂ ಇಲ್ಲ' ಎಂದು ತಪ್ಪೊಪ್ಪಿಕೊಂಡಳು.

ಇದನ್ನು ಕೇಳಿದ ಅವಳ ತಂದೆಗೆ ಬಹಳ ಅವಮಾನವಾಯಿತು ಹಾಗೂ ಭಯವೂ ಆಯಿತು. ನನ್ನಿಂದ ದೊಡ್ಡ ಅಪರಾಧವಾಯಿತು, ಎಂದು ಆತ ಓಡಿ ಬಂದು ಸಂತರ ಕಾಲಿಗೆ ಬಿದ್ದು ಕ್ಷಮೆ ಯಾಚಿಸುತ್ತಾ, ಆ ಮಗುವನ್ನು ವಾಪಸ್ಸು ಕೊಡಿ, ಎಂದು ಬೇಡಿದ. ಅಷ್ಟೇ ಸಮಾಧಾನದಿಂದ ಸಂತರು ಮಗುವನ್ನು ಅವರ ಮಡಿಲಿಗೆ ಹಾಕಿದರು.

ಆಗ ಜನರು ಹೇ ಪರಮಪೂಜ್ಯ ಸಂತನೇ ಕೊನೆಯ ಪಕ್ಷ ನಿಮ್ಮ ಗೌರವದ ಬಗೆಯಾದರೂ ನೀವು ಚಿಂತಿಸಬೇಕಿತ್ತಲ್ಲವೇ? ಎಂದರು.

'ಆಗ ಸಂತರು, ನಾನು ಸಜ್ಜನನೂ ಅಲ್ಲ ದುರ್ಜನನೂ ಅಲ್ಲ. ನನಗೆ ಗೌರವ, ಅಗೌರವಗಳ ವ್ಯತ್ಯಾಸವಿಲ್ಲ .ನಾನು ಕೇವಲ ನಾನಷ್ಟೇ, ನನಗೆ ಯಾರ ಹೊಗಳಿಕೆಗಾಗಲಿ, ತೆಗಳಿಕೆಗಾಗಲಿ ಯಾವ ವ್ಯತ್ಯಾಸವೂ ಇಲ್ಲ' ಎಂದರು.

ಕೆಲವೊಮ್ಮೆ ನಾವು ಮಾಡಿದ ತಪ್ಪಿನ ಆಪಾದನೆ ನಮ್ಮ ಮೇಲೆ ಬಂದುಬಿಡುತ್ತದೆ. ಆಗ ನಾವು ಎಷ್ಟೇ ಸಮಜಾಯಿಸಿ ಕೊಟ್ಟರೂ ಕೇಳುವ ಮನಸ್ಥಿತಿಯಲ್ಲಿ ಆಪಾದಿಸುವವರು ಇರುವುದಿಲ್ಲ, ಸಮಯವೇ ಕೆಲವಕ್ಕೆ ಉತ್ತರ. ತಾಳ್ಮೆ ಕಳೆದುಕೊಳ್ಳದೆ ನಮ್ಮ ಒಳ್ಳೆಯತನವನ್ನು ಕಾಯ್ದಿರಿಸಿಕೊಂಡರೆ, ಒಳ್ಳೆಯ ದಿನಗಳು ಕೂಡ ನಮಗಾಗಿ ಬಂದೇ ಬರುತ್ತದೆ.

ಒಳ್ಳೆಯ ವ್ಯಕ್ತಿತ್ವ, ಗುಣಗಳಿಗೆ ಸದಾ ಬದುಕಿನಲ್ಲಿ ಒಳ್ಳೆಯ ಪ್ರತಿಫಲ ಸಿಗುವುದರಲ್ಲಿ ಯಾವುದೇ ಸಂಶಯವಿಲ್ಲ. ಕಾಯುವ ತಾಳ್ಮೆ ನಮಗಿರಬೇಕಷ್ಟೆ.

ಒಂದೊಳ್ಳೆ ಮಾತು

ಪ ದ ಬಂ ಧ



ಎಡದಿಂದ ಬಲಕ್ಕೆ

2. ಆಜುಬಾಜು ನೋಡುವಾಗ ಆದ ದಾಕ್ಷಿಣ್ಯ (3)
5. ಕಚೇರಿ ಕೆಲಸಗಳಲ್ಲಿ ನೀಡುವ ಲಂಚ (4)
6. ಸೋಲು ಅಥವಾ ಪಲ್ಟಿ ಹೊಡೆ (4)
7. ಉಡಿ ತಿರುಗಿ ಬಂದಿದೆ (3)
10. ಮನದ ಮೂಲೆಯಲ್ಲಿರುವ ಭಯ (3)
11. ಬೆಲೆಬಾಳುವ, ಕುರಿಯ ತುಪ್ಪಳದಿಂದ ಮಾಡಿದ ದಪ್ಪ ಬಟ್ಟೆ (5)
12. ಧಾನ್ಯಗಳನ್ನು ಶೇಖರಿಸಿಡುವ ಸ್ಥಳ (3)
13. ಜೋಡಿ ಮೃತ್ಯು ದೇವತೆಯಿಂದ ಆರಂಭವಾಗಿದೆ (3)
17. ನೀರಿನಿಂದ ಆರಂಭವಾಗಿರುವ ಕಸಗುಡಿಸುವವನು (4)
18. ಸೂಕ್ಷ್ಮವಾಗಿ ಪರಿಶೀಲಿಸುವವನು (4)
19. ನೀರಿನೊಂದಿಗೆ ಬೆರೆತಿರುವ ಮಣ್ಣು, ರಾಡಿ (3)

ಎಡದಿಂದ ಬಲಕ್ಕೆ

1. ಕಟ್ಟಿಗೆ, ಸೌದೆ ಮೊದಲಾದುವುಗಳು (4)
2. ಒಂದು ಬಗೆಯ ಮರ (3)
3. ಇಂಗ್ಲಿಷ್ ಕ್ಯಾಲೆಂಡರ್‌ನ ಏಳನೆಯ ತಿಂಗಳು (3)
4. ಕಬ್ಬು ಹೀಗೆ ಓರೆ-ಕೋರೆ (4)
8. ಸಾವು ಅಥವಾ ಮೃತ್ಯು (3)
9. ಚಂದನದ ಮರ (3)
10. ಉಳಿಯಲು ಬಂದ ಮಗಳ ಗಂಡ (3)
12. ಜನಕ್ಕೆ ಸಿಕ್ಕಿದ ಪ್ರೋತ್ಸಾಹ (4)
14. ಸಾಕ್ಷಿ ಹೇಳಲು ನಿಂತ ಕಟಾಂಜನ (4)
15. ಕಸ ಗುಡಿಸುವ ಸಾಧನ (3)
16. ಜಿನುಗು ಎಂದರ್ಥ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಉತ್ಥಾನ 3. ಹರಾಜು 6. ಸುಲಿಗೆ 7. ನೆರಳು 9. ಆನಕ 11. ಕಾಳಗ 12. ನನಸು 13. ಸಚಿವ 16. ಆಣತಿ 19. ಗುಮ್ಮಟ 20. ನಿರ್ಲಿಪ್ತ 21. ನೆರವು

ಮೇಲಿನಿಂದ ಕೆಳಕ್ಕೆ: 1. ಉದಾಸೀನ 2. ನಸುಕು 3. ಹಗೆತನ 4. ಜುಲ್ಮಾನೆ 5. ಕೊರಳು 8. ರಕ್ಷಿಸು 9. ಆಗಸ 10. ಕನವ 11. ಕಾಜಾಣ 14. ಚಿತ್ರಗುಪ್ತ 15. ತಲೆನೋವು 16. ಆಪಣ 17. ತಿಯನಿ 18. ನಟನೆ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಭೂಮಿ ಮುಚ್ಚುವ ಬಂಗಾರ

ಇವತ್ತಿಗೆ ಏನಿಲ್ಲವೆಂದರೂ 10 ಗ್ರಾಂ ಬಂಗಾರಕ್ಕೆ 80 ಸಾವಿರ ರುಪಾಯಿ ಇರಬಹುದು. ಭಾರತದಲ್ಲಿ ಎಂಥ ಬಡವನ ಮನೆಗೆ ಹೋದರೂ ಸ್ವಲ್ಪನಾದರೂ ಚಿನ್ನ ಇದ್ದೇ ಇರುತ್ತೆ. ಹೆಂಗಸರಿಗೂ ಅಷ್ಟೇ ಮನೆಯಲ್ಲಿ ಎಷ್ಟು

ಚಿನ್ನವಿದ್ದರೂ ಮತ್ತಷ್ಟು ಆಭರಣವನ್ನು ಕೊಳ್ಳುವ ಆಸೆಯೂ ಇದೆ. ಇನ್ನೂ ಕೆಜಿಎಫ್ 2 ಚಿತ್ರದಲ್ಲಿ ಯಶ್ ತೆಗೆದುಕೊಂಡು ಹೋಗುವ ಬಂಗಾರದ ಗಟ್ಟಿಗಳನ್ನು ನೋಡಿದ ಮೇಲಂತೂ, ಅಷ್ಟು ಬಂಗಾರ ನಮ್ಮ ಹತ್ತಿರ ಇದ್ದರೆ ಹೇಗಿರುತ್ತಿತ್ತು ಎಂದು ಚಿಂತಿಸುವವರಿದ್ದಾರೆ. ಬಂಗಾರದ ಗಣಿಯಿಂದಲೇ ಖ್ಯಾತವಾಘಿದ್ದ ಕೆಜಿಎಫ್‌ನಲ್ಲಿ ಈಗ ಅಷ್ಟೊಂದು ಬಂಗಾರವೂ ಇಲ್ಲ. ಆದರೆ ಎಂದಾದರೂ ಯೋಚಿಸಿದ್ದೀರಾ? ಭೂಮಿಯ ಮೇಲೆ, ಭೂಮಿಯ ಪದರಗಳಲ್ಲಿ ಎಷ್ಟು ಬಂಗಾರವಿದೆ ಎಂದು? ಡಿಸ್ಕವರ್ ಮ್ಯಾಗಜೀನ್‌ನ ರಿಪೋರ್ಟ್‌ಗಳ ಪ್ರಕಾರ, ಸರಾಸರಿ 99 ರಷ್ಟು ಚಿನ್ನ ಭೂ ಮಧ್ಯಭಾಗದಲ್ಲಿ ಅಡಗಿದೆ ಅಂತೆ, ಅದು ಎಷ್ಟಾಗಬಹುದು ಎಂದರೆ, ಎಲ್ಲ ಚಿನ್ನವನ್ನು ಸೇರಿಸಿದರೆ, 1.5 ಫೀಟ್ ದಪ್ಪದ ಚಿನ್ನದ ಹೊದಿಕೆಯನ್ನು ಭೂಮಿಯ ಮೇಲೆ ಹಾಕಿಸಬಹುದಂತೆ. ಅದು ನಿಜವಾದರೆ, ಚಿನ್ನದ ರೋಡ್‌ಗಳ ಮೇಲೆ ವಾಹನಗಳನ್ನು ತೆಗೆದುಕೊಂಡು ಹೋಗುವ ದಿನ ದೂರವಿಲ್ಲ ಎಂದೆನಿಸುತ್ತದೆ!

ಪುಸ್ತಕ ಲೋಕ

ಮರಳಿ ಮಣ್ಣಿಗೆ

ಜ್ಞಾನಪೀಠ ಪುರಸ್ಕೃತ ಶಿವರಾಮ ಕಾರಂತರು ಬರೆದ, ಮರಳಿ ಮಣ್ಣಿಗೆ ಕಾದಂಬರಿಯಲ್ಲಿ, ಲೇಖಕ, ಮರಳಲೇ ಬೇಕು ಎಷ್ಟೇ ಎತ್ತರಕ್ಕೆ ಹಾರಿದರೂ ಮತ್ತೆ ಗೂಡಿಗೆ. ಮನುಷ್ಯ ಎಷ್ಟೇ ಸಾಧಿಸಿರಲಿ ಯಾವದೇ ಊರಿಗೆ ಹೋಗಲಿ ಅಥವಾ ವಿದೇಶದಲ್ಲಿಯೇ ಕೆಲಸವಾಗಿ ಕೈ ತುಂಬಾ ಸಂಬಳ ಸಿಕ್ಕರೂ ತನ್ನೂರಿನ ಮಣ್ಣಿನ



ಘಮದ ವಾಸನೆ ಅದರ ಆನಂದ ಬೇರೆ ಎಲ್ಲಿಯೂ ಇಲ್ಲ. ಆ ನೆಮ್ಮದಿ ಪರ ಊರಿನಲ್ಲಿಲ್ಲಾ ಕೋನೆಗೂ ನಾವು ಮರಳಿ ನಮ್ಮ ಊರಿನ ಮಣ್ಣನ್ನೇ ಪ್ರೀತಿ ಮಾಡೊದು. ಅದರ ಸೊಗಡಲ್ಲೆ ನೆಮ್ಮದಿಯನ್ನು ಕಾಣೋದು. ಅಂತಹದೇ ಪ್ರೀತಿ ನೆಮ್ಮದಿ ನಂಬಿಕೆಯನ್ನು ಕೊಡುವಂತಹ ಕಥನವೇ ಈ ಕಾದಂಬರಿ ಇದು ಮರಳಿ ಮಣ್ಣಿಗೆ. ಸುಮಾರು 1850 ರಿಂದ 1940 ರ ಆಸುಪಾಸಿನಲ್ಲಿ ನಡೆಯುವ ಕಥೆ. ಮೂರು ತಲೆಮಾರುಗಳ ಪಯಣದಲ್ಲಿ ಒಂದಷ್ಟು ಜನ ಬಂದು ಪಯಣದಲ್ಲಿ ಜೊತೆ ಯಾಗಿ ನೆಡೆದು ಪಯಣವನ್ನು ನಿಲ್ಲಿಸುತ್ತಾರೆ. ತಮ್ಮ ನಿಲ್ದಾಣದಲ್ಲಿ ಇಳಿದು ಹೋಗುತ್ತಾರೆ ಮತ್ತೆ ಹೊಸಬರು ಈ ಪಯಣಕ್ಕೆ ಜೊತೆಯಾಗಿ ಸಾಗುತ್ತಾರೆ. ಭೋರ್ಗರೆಯುವ ಸಂಸಾರ ಸಾಗರದಲ್ಲಿ ಏಳು ಬೀಳಿನ ಒಂದು ಸಾಂಸಾರಿಕ ಕಥನ. ಈ ಕಾದಂಬರಿಯಲ್ಲಿ ಎಲ್ಲವೂ ಇದೆ ಪ್ರೀತಿ, ನಂಬಿಕೆ, ಸ್ವಾರ್ಥ, ನೋವು, ನಲಿವು, ಕಷ್ಟ, ಸುಖ, ಆಸೆ ಜೀವನದ ಪ್ರತೀ ಹೆಜ್ಜೆ ಎಲ್ಲವೂ ಇದೆ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಇತ್ತೀಚೆಗೆ ಸುದ್ದಿಯಲ್ಲಿ ಕಂಡುಬಂದ ಮಾರ್ತಾಂಡ ಸೂರ್ಯ ದೇವಾಲಯವು ಯಾವ ರಾಜ್ಯ/ಕೇಂ.ಪ್ರ ದಲ್ಲಿದೆ?

- ಎ. ದೆಹಲಿ.
- ಬಿ. ಜಮ್ಮು ಮತ್ತು ಕಾಶ್ಮೀರ.
- ಸಿ. ಕೇರಳ.
- ಡಿ. ಲಡಾಖ್.

ಉತ್ತರ: ಬಿ. ಜಮ್ಮು ಮತ್ತು ಕಾಶ್ಮೀರ.

ಮಾಹಿತಿ

ಹಿಂದುತ್ವ ಗುಂಪಿನ ಸದಸ್ಯರು ಇತ್ತೀಚೆಗೆ ಕಾಶ್ಮೀರ ಕಣಿವೆಯ ಅನಂತನಾಗ್ ಬಳಿಯ ಐತಿಹಾಸಿಕ ಹಿಂದೂ ದೇವಾಲಯವಾದ ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ (ಅಖಐ)-ಸಂರಕ್ಷಿತ ಮಾರ್ತಾಂಡ್ ಸೂರ್ಯ ದೇವಾಲಯವನ್ನು ಉಲ್ಲಂಘಿಸಿದ್ದಾರೆ. 8 ನೇ ಶತಮಾನದಲ್ಲಿ ರಾಜ ಲಲಿತಾದಿತ್ಯ ಮುಕ್ತಾಪಿಡಾ ನಿರ್ಮಿಸಿದ, ಇದು ಕಾಶ್ಮೀರಿ, ಗುಪ್ತ, ಚೈನೀಸ್, ಗಾಂಧಾರ, ರೋಮನ್ ಮತ್ತು ಗ್ರೀಕ್ ವಾಸ್ತುಶಿಲ್ಪದ ಶೈಲಿಗಳನ್ನು ಸಂಯೋಜಿಸುತ್ತದೆ. 32,000 ಚದರ ಅಡಿ ವಿಸ್ತೀರ್ಣದ ಕಲ್ಲಿನ ದೇವಾಲಯವು 86-ಸ್ತಂಭಗಳ ಪ್ರಾಂಗಣ, ಸಂಕೀರ್ಣವಾದ ಕೆತ್ತನೆಗಳೊಂದಿಗೆ 60-ಅಡಿ ವಿಮಾನ ಮತ್ತು 84 ಸಣ್ಣ ದೇವಾಲಯಗಳನ್ನು ಒಳಗೊಂಡಿದೆ. ಸುಲ್ತಾನ್ ಸಿಕಂದರ್ ಶಾ ಮಿರಿ ಇದನ್ನು 14 ನೇ ಶತಮಾನದಲ್ಲಿ ಕೆಡವಿದರು ಎಂದು ನಂಬಲಾಗಿದೆ.

ಅಮೆರಿಕದಲ್ಲೊಂದು ಗ್ರ್ಯಾಜ್ಯುಯೇಷನ್ ಡೇ!

● ಸವಿತಾ ನಾಗೇಶ್

ಅದೊಂದು ಕಾಲವಿತ್ತು. ಕೇವಲ ಬೆರಳೆಣಿಕೆಯಷ್ಟು ಮಾತ್ರ ವಿದ್ಯಾರ್ಥಿಗಳು ಪದವೀಧರರಾಗಿ ಕರಿಕೋಟು ತಲೆಗೊಂದು ಗ್ರ್ಯಾಜ್ಯುಯೇಷನ್ ಟೋಪಿ ಕೈಯಲ್ಲೊಂದು ಟಪಾಲು ಹಿಡಿದು ಪದವಿ ಸ್ವೀಕರಿಸುತ್ತಿದ್ದರು. ಹಳೆಯ ಸಿನಿಮಾಗಳಲ್ಲಿ ಇಂಥಹ ದೃಶ್ಯಗಳನ್ನು ನೋಡುತ್ತಿದ್ದೆವು. ಆದರೆ ಇತ್ತೀಚಿನ ಕೆಲ ವರ್ಷಗಳಿಂದ ಈ ಒಂದು ಸಂಪ್ರದಾಯ ಕಿಂಡರ್ ಗಾರ್ಡನ್ ಮಕ್ಕಳಿಂದಲೇ ಪ್ರಾರಂಭವಾಗುತ್ತಿದ್ದು ಕಣ್ಣಿಗೆ ಹಬ್ಬ ಎಂದೆನಿಸುತ್ತಿದೆ. ನಮ್ಮ ಮಗಳು ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಟಾಪರ್ ಆಗಿ, ಬಿಇ ಪದವೀಧರಳಾದಾಗ, ಗ್ರ್ಯಾಜುಯೇಷನ್ ಡೇ ಅನ್ನು ಕಾರಣಾಂತರಗಳಿಂದ ಕಾಲೇಜು ಮಟ್ಟದಲ್ಲೇ ನಡೆಸಿ, ಲೈವ್ ಲಿಂಕ್ ಕೊಟ್ಟು, ಮನೆಯಲ್ಲೇ ಕೂತು ನೋಡುವಂತೆ ವ್ಯವಸ್ಥೆ ಮಾಡಿದ್ದರು. ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಕೊಂಚ ಸ್ಕಾಲರ್‌ಶಿಪ್‌ನೊಂದಿಗೆ ಹೆಸರಾಂತ ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಮಗಳಿಗೆ ಸೀಟು ದೊರೆತಾಗ ನಮಗಾದ ಸಂತಸ ಅಷ್ಟಿಷ್ಟಲ್ಲ. ಅವಳು ನಮಗೆ ಹೆಮ್ಮೆಯ ಸರಸ್ವತಿ ಪುತ್ರಿ ಎನಿಸಿಕೊಂಡಳು. ಎರಡು ವರ್ಷಗಳ ಪರಿಶ್ರಮದಿಂದ ಎಂ ಎಸ್ ಪದವೀಧರಳಾದಳು. ಅದರ ಸಲುವಾಗಿ ಬಂದ ಆಮಂತ್ರಣ ಪತ್ರಿಕೆಯ ಆಧಾರದ ಮೇಲೆ ನಮಗೆ ವೀಸಾ ಹೂವೆತ್ತುವಂತೆ ದೊರಕಿತು. ಈ ನೆಪದಿಂದಾಗಿ ಅಮೇರಿಕಾಗೆ ಪ್ರಯಾಣ ಬೆಳೆಸಿದೆವು.

ಮೂರುದಿನಗಳ ವರ್ಣರಂಜಿತ ಗ್ರ್ಯಾಜ್ಯುಯೇಷನ್ ಕಾರ್ಯಕ್ರಮವದು. ನಾವು ನೋಡಿರಲಿಲ್ಲ ಮುಂದೆ ನೋಡುತ್ತೇವೋ ಇಲ್ಲವೋ ಗೊತ್ತಿಲ್ಲ. ಅಂತಹ ಅದ್ಭುತ ಅನುಭವ ನೀಡಿದ ದಿನಗಳವು. ಯಾವುದೇ ರೆಸ್ಟ್ರಿಕ್ಷನ್ಸ್ ಹಾಕದೆ ಮಗಳು ನಮ್ಮನ್ನು ಬಿಟ್ಟಿದ್ದು ಮಾತ್ರ ಗ್ರೇಟ್ ಎನಿಸಿತು! ನಾನಂತೂ ಬಹಳವೇ ಎಂಜಾಯ್ ಮಾಡಿದೆ. ಮ್ಯಾನ್‌ಹ್ಯಾಟನ್‌ನಲ್ಲಿ ಮುಖ್ಯ ಕ್ಯಾಂಪಸ್ ಇದ್ದು, ಇಡೀ ಒಂದು ನಗರವನ್ನೇ ಈ ವಿಶ್ವವಿದ್ಯಾಲಯ ಆವರಿಸಿಕೊಂಡಿತ್ತು. ಬ್ಯಾಚುಲರ್ಸ್ ವಿದ್ಯಾರ್ಥಿಗಳು ಚೀನಾ, ಜಪಾನಿನವರು, ಕಪ್ಪು ಜನರು ಬಹಳವೇ ಇದ್ದರು. ತುಂಬಿ ತುಳುಕುತ್ತಿದ್ದ ಜನಸಂದಣಿ! ಯಾವುದೇ ನಿರ್ಬಂಧಗಳಿರಲಿಲ್ಲ. ಮಕ್ಕಳ ಹಾಗೂ ಪೋಷಕರದೇ ಕಾರುಬಾರು. ನಾವುಗಳು ಕನ್ನಡದಲ್ಲಿ ಮಾತಾಡುತ್ತಿದ್ದನ್ನು ಕೇಳಿಸಿಕೊಂಡು ಪರಸ್ಪರ ಪರಿಚಯ ಮಾಡಿಕೊಳ್ಳುತ್ತಿದ್ದೆವು. ಟ್ಯಾಟು ಸ್ಟಿಕ್ಕರ್ ನೆರೆದಿದ್ದವರಿಗೆ ಹಾಕುತ್ತಿದ್ದರು. ವಿವಿಧ ರೀತಿಯ ಆಹಾರ ಮಳಿಗೆಗಳಿದ್ದವು. ಜಾತ್ರೆ ಎನ್ನುವಂತೆಯೇ ಭಾಸವಾಗುತಿತ್ತು. ತರಹೇವಾರಿ ಹಣ್ಣುಗಳು, ಪಾಪ್ ಕಾರ್ನ್‌ಗಳು, ಐಸ್‌ಕ್ರೀಂಗಳು ತಿಂದಷ್ಟು ಕುಡಿದಷ್ಟೂ ಇದ್ದವು. ಎನ್ ವೈ ಯು ಕಾಲೇಜಿನ ಬ್ಯಾಗುಗಳನ್ನೂ ನೀಡುತ್ತಿದ್ದರು, ಅದರಲ್ಲಿ ಕೊಟ್ಟಿದ್ದನ್ನೆಲ್ಲಾ ತುಂಬಿಕೊಳ್ಳುತ್ತ ಸಾಗಿದೆವು. ಜೋಕರ್ ವೇಷಧಾರಿಗಳ ನೃತ್ಯಗಳು, ಲಿಬರ್ಟಿಯ ವೇಷಧಾರಿ, ಉದ್ದನೆಯ ಮನುಷ್ಯರು, ನಗಿಸುವ, ಹಾಡು, ನೃತ್ಯ ಮಾಡುತ್ತಿದ್ದ ಕಲಾವಿದರು ಅಲ್ಲಲ್ಲಿ ನಿಂತು ಬಂದವರನ್ನು ಆಕರ್ಷಿಸುತ್ತ ಮನರಂಜಿಸುತ್ತಿದ್ದರು. ನನ್ನ ಫೋಟೋ ಹುಚ್ಚಿಗಂತೂ ಹೇಳಿ ಮಾಡಿಸಿದಂತಹ ಸ್ಥಳವಾಗಿತ್ತು.

ಇನ್ನು ಎರಡನೇ ದಿನ, ಪ್ರಸಿದ್ಧ ಓಪನ್ ಸ್ಟೇಡಿಯಂ ಆದ ಯಾಂಕಿ ಸ್ಟೇಡಿಯಂನಲ್ಲಿ ಕಾರ್ಯಕ್ರಮ! ಪೂರ್ಣ ತಪಾಸಣೆಯಾದ ನಂತರ ಒಳಗೆ ಬಿಟ್ಟರು. ನಾವು ತೆಗೆದುಕೊಂಡು ಹೋಗಿದ್ದ ಊಟದ ಡಬ್ಬಿಯನ್ನು ಏನೆಂದು ಕೇಳಿದರು ಡಯಟ್ ಫುಡ್ ಎಂದಾಗ, ಒಂದಿಬ್ಬರು ಅವರ ಭಾಷೆಯಲ್ಲಿ ಚರ್ಚಿಸಿ ಒಳಗೆ ತೆಗೆದುಕೊಂಡು ಹೋಗಲು ಅನುಮತಿ ನೀಡಿದಾಗ ಬದುಕಿದೆಯಾ ಬಡ ಜೀವಿ ಎಂಬಂತಾಯಿತು. ಅದೆಷ್ಟು ದೊಡ್ಡ ಸ್ಟೇಡಿಯಂ! ಕಣ್ಣು ಹಾಯಿಸಿದಷ್ಟೂ ಜನ ಸಾಗರ! ವಿದ್ಯಾರ್ಥಿಗಳೆಲ್ಲರೂ ನೇರಳೇ ಬಣ್ಣದ ಗೌನ್ ಧರಿಸಿದ್ದರು. ಗ್ರ್ಯಾಜುಯೇಷನ್ ಡ್ರೆಸ್ ಕೋಡ್ ಅದೇ ಆಗಿತ್ತು. ಇಂದಿನ ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ವಿಶ್ವದ ಅತ್ಯಂತ ಕಿರಿಯ, ಫಿನ್‌ಲ್ಯಾಂಡ್‌ನ 46ನೇ ಮಹಿಳಾ ಪ್ರಧಾನಿ ಸನ್ನಮರೀನ್ ಆಗಮಿಸಿದ್ದರು. ಅಮೆರಿಕದ ರಾಷ್ಟ್ರಗೀತೆಯೊಂದಿಗೆ ವೇದಿಕೆ ಕಾರ್ಯಕ್ರಮ ಪ್ರಾರಂಭವಾಯಿತು. ವಿಶ್ವವಿದ್ಯಾಲಯದ ಸಾಧಕ ಹಳೆಯ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಪ್ರತಿಯೊಂದಕ್ಕೂ ನೆರೆದಿದ್ದ ವಿದ್ಯಾರ್ಥಿಗಳ ಹರ್ಷೋದ್ಘಾರ ಮುಗಿಲು ಮುಟ್ಟಿತ್ತು. ಕಾಲೇಜಿನ ಅಧ್ಯಕ್ಷರಾದ ಆಂಡ್ರ್ಯೂ ಡಿ ಹ್ಯಾಮಿಲ್ಟನ್ ತಮ್ಮ ಕಾಲೇಜಿನ ಹಿರಿಮೆಯ ಬಗಗೆ ವಿವರಿಸಿದರು. ಫೋಟೋಶೂಟ್‌ಗಳ ಸಡಗರ ಸಂಭ್ರಮ ಸಾಗುತಿತ್ತು. ಹೂಬೊಕ್ಕೆಗಳು, ಬೊಂಬೆಗಳು, ಕಾರ್ಡ್‌ಗಳ ವಿನಿಮಯ ದೃಶ್ಯಗಳು ಸರ್ವೇಸಾಮಾನ್ಯವಾಗಿತ್ತು.

ಮೂರನೆಯ ದಿನವೇ ಮುಖ್ಯ ಘಟ್ಟ. ಮಕ್ಕಳಿಗೆ ಪದವಿಪ್ರಧಾನ ಸಮಾರಂಭ. ಶಿಸ್ತಾಗಿ ವಿದ್ಯಾರ್ಥಿಗಳು ಕುಳಿತಿದ್ದರು. ವೇದಿಕೆಗೆ ಅವರುಗಳನ್ನು ಆಹ್ವಾನಿಸಿ ಗೌರವಿಸುತ್ತಿದ್ದರು. ವೇದಿಕೆಯಲ್ಲಿ ವಿದ್ಯಾರ್ಥಿಗಳ ತರಹೇವಾರಿಯ ನಡಾವಳಿಗಳನ್ನು ನೋಡಿ ನಾವು ಅವಾಕ್ಕಾದೆವು. ನಮ್ಮ ಭಾರತದ ಹುಡುಗರು ತೊಡೆತಟ್ಟುತ್ತ ವೇದಿಕೆಗೆ ಬಂದದ್ದು, ಕೈಯಲ್ಲಿ ಹೃದಯದ ಸಿಂಬಲ್ ತೋರಿಸುತ್ತ ಸಂತಸ ವ್ಯಕ್ತಪಡಿಸುತ್ತಿದ್ದ ಹಲವರು, ವೇದಿಕೆಗೆ ಹಾರುತ್ತ ಬಂದ ಮಗದೊಂದು ಗುಂಪಿನವರು, ತರಹೇವಾರಿ ಪೋಸುಗಳನ್ನು ನೀಡುತ್ತಾ ಬಂದವರು ಮತ್ತಷ್ಟು ಮಂದಿ! ಗಂಭೀರವಾಗಿ ಬಂದ ಮತ್ತಷ್ಟು ಮಕ್ಕಳು, ಸಭಿಕರೆಡೆಗೆ ಕೈಬೀಸಿ ಗಾಳಿಯಲ್ಲಿ ಮುತ್ತು (ಫ್ಲೈಯಿಂಗ್ ಕಿಸ್)ಗಳನ್ನು ನೀಡುತ್ತಾ ಸಾಗಿದ ಮತ್ತಷ್ಟು ವಿದ್ಯಾರ್ಥಿಗಳನ್ನು ನೋಡಿ ದಂಗಾದೆವು!

ಒಟ್ಟಿನಲ್ಲಿ ಮೂರುದಿನಗಳ ಅತ್ಯದ್ಭುತ ವರ್ಣರಂಜಿತ ಗ್ರ್ಯಾಜ್ಯುಯೇಷನ್ ಕಾರ್ಯಕ್ರಮ ಮುಗಿದಾಗ ನೆನಪುಗಳ ಸರಮಾಲೆಯನ್ನೇ ಹೊತ್ತು ಬಂದೆವು.

ಪ್ರವಾಹ

● **ಚೇತನ ಭಾರ್ಗವ** ಬೆಂಗಳೂರು

ಬಿಸಿಲ ಝಳಕೆ ಬಳಲಿ
ಮೊರೆಯಿಟ್ಟೆವು ಮಳೆ ಬರಲಿ
ಪ್ರಾರ್ಥನೆಯು ಅತಿಯಾಗಿ
ಬರುತಿದೆ ಮಳೆ ಬಿರುಸಾಗಿ
ಕೆರೆ ಹಳ್ಳಕೊಳ್ಳಗಳು ತುಂಬಿ
ಹರಿದಿದೆ ನದಿಯು ಮೈದುಂಬಿ
ಎದುರಾಗಿದೆ ಪ್ರವಾಹ ಭೀತಿ
ತಂದಿದೆ ಬಹಳ ಫಜೀತಿ
ಕುಸಿದಿದೆ ಬೆಟ್ಟದ ಗುಡ್ಡಗಳು
ಉರುಳಿದೆ ಗಿಡ ಮರಗಳು

ಸುರಿದಿದೆ ಬಾರಿ ಮಳೆಯು
ಹಾಳಾಗುತ್ತಿದೆ ರೈತರ ಬೆಳೆಯು
ಮುಳುಗಿತು ಇದ್ದ ನೆಲೆ
ನಡೆದಿದೆ ಜನರ ಗುಳೆ
ಕವಿದಿದೆ ಪ್ರಾಣದ ಭಯವು
ಕತ್ತಲು ತಂದಿದೆ ಪ್ರವಾಹವು

ಪ್ಯಾರಿಸ್ ರಂಗು

ವಿಶ್ವವಾಣಿ
vishwavani.news
02.08.2024
ಶುಕ್ರವಾರ



ಸ್ವಪ್ನಿಲ್ ಕುಸಾಲೆ ಅವರು ನಿರೀಕ್ಷಿತ ಪ್ರದರ್ಶನ ತೋರಿದ್ದಾರೆ. 50 ಮೀಟರ್ ರೈಫಲ್ 3ಪಿ ಈವೆಂಟ್‌ನಲ್ಲಿ ಕಂಚಿನ ಪದಕ ಗದ್ದ ಅವರಿಗೆ ಅಭಿನಂದನೆಗಳು. ಸ್ವಪ್ನಿಲ್ ಅವರು ಅದ್ಭುತ ಕೌಶಲ್ಯವನ್ನು ತೋರಿಸಿದ್ದಾರೆ. ಈ ವಿಭಾಗದಲ್ಲಿ ಮೊದಲ ಆಟಗಾರರಾಗಿದ್ದು ಇನ್ನೂ ವಿಶೇಷ. ಅವರ ಸಾಧನೆಗೆ ಇಡೀ ದೇಶವೇ ಹೆಮ್ಮೆ ಪಡುತ್ತದೆ.
-ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಪುರುಷರ 50ಮೀ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ಭಾರತಕ್ಕೆ ಕಂಚಿನ ಪದಕ ಗೆದ್ದಿದ್ದಕ್ಕಾಗಿ ಸ್ವಪ್ನಿಲ್ ಕುಸಾಲೆ ಅವರಿಗೆ ಅಭಿನಂದನೆಗಳು. ನಿಮ್ಮ ನಿಖರತೆ, ಮತ್ತು ಸಾಧನೆಯು ಆಟದಲ್ಲಿ ಹಾಗೂ ಮತ್ತು ನಮ್ಮ ಹೃದಯದಲ್ಲಿ ಸ್ಥಾನವನ್ನು ತಂದುಕೊಟ್ಟಿದೆ. ನಿಮ್ಮ ಅತ್ಯುತ್ತಮ ಸಾಧನೆಗಾಗಿ ಭಾರತವು ಹೆಮ್ಮೆ ಪಡುತ್ತದೆ! ಈ ಪದಕದಿಂದ ನಿಮ್ಮ ಯಶಸ್ಸಿನ ಕಥೆ ಪ್ರಾರಂಭವಾಗಲಿ.
-ಮಲ್ಲಿಕಾರ್ಜುನ್ ಖರ್ಗೆ, ಎಐಸಿಸಿ ಅಧ್ಯಕ್ಷ

50 ಮೀಟರ್ ರೈಫಲ್ 3ಪಿ ಈವೆಂಟ್‌ನಲ್ಲಿ ಪದಕ ಗೆದ್ದ ಸ್ವಪ್ನಿಲ್

ಸ್ವಪ್ನಿಲ್
50 ಮೀಟರ್ ರೈಫಲ್ 3ಪಿ ಈವೆಂಟ್‌ನಲ್ಲಿ ಪದಕ ಗೆದ್ದ ಮೊದಲ ವೀರ.

ಫೈನಲ್ ಪ್ರವೇಶಿಸಿದ ಬಳಿಕ ಮಾಧ್ಯಮದ ಜತೆ ಮಾತನಾಡಿದ ಸ್ವಪ್ನಿಲ್, ನನ್ನ ಮತ್ತು ಧೋನಿಯ ವರ ಜೀವನದಲ್ಲಿ ಹಲವು ಸಾಮ್ಯತೆಗಳು ಇವೆ. ನಾನು ಅವರ ಅಪ್ಪಟ ಅಭಿಮಾನಿ. ಅವರ ಬಯೋಪಿಕ್ ನೋಡಿಯೇ ನಾನು ಶೂಟಿಂಗ್‌ನಲ್ಲಿ ಏನಾದರೂ ಸಾಧನೆ ಮಾಡ ಬೇಕು ಎಂದು ನಿರ್ಧರಿಸಿದ್ದು. ಅವರಂತೆಯೇ ನನ್ನದೂ ಕೂಡ ಶಾಂತಚಿತ್ತದ ಸ್ವಾಭಾವ. ನಾನು ಕೂಡ ರೈಲ್ವೆ ಟಿಕೆಟ್ ಕಲೆಕ್ಟರ್ ಆಗಿದ್ದೇನೆ.

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	0	0	3	3
ಚೀನಾ	11	7	3	21
ಫ್ರಾನ್ಸ್	8	10	8	26
ಜಪಾನ್	8	3	4	15
ಆಸ್ಟ್ರೇಲಿಯಾ	7	6	4	17
ಅಮೆರಿಕ	6	13	12	31
ಗ್ರೇಟ್ ಬ್ರಿಟನ್	6	7	7	20
ದಕ್ಷಿಣ ಕೊರಿಯಾ	6	3	3	12
ಇಟಲಿ	3	6	4	13
ಕೆನಡಾ	2	2	3	7

ಮೈಕ್ರೋ ಮಾಹಿತಿ



ದೇಶಕ್ಕೆ ಮೂರನೇ ಕಂಚು!

ಪ್ಯಾರಿಸ್: ಒಲಿಂಪಿಕ್ಸ್‌ನಲ್ಲಿ ಶೂಟರ್ ಸ್ವಪ್ನಿಲ್ ಕುಸಾಲೆ ಅವರು 50 ಮೀಟರ್ ರೈಫಲ್ 3ಪಿ ಈವೆಂಟ್‌ನಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. ಆ ಮೂಲಕ ಶೂಟಿಂಗ್ ತಂಡವು ಮೂರನೇ ಪಕದಕ್ಕೆ ಮುತ್ತಿಟ್ಟಿದ್ದು, ಇತಿಹಾಸ ಬರೆದಿದೆ. ಈ ಹಿಂದೆ ಮನು ಭಾಕರ್ ಅವರು ಸಿಂಗಲ್ಸ್‌ನಲ್ಲಿ, ಸರಬ್ಜೋತ್ ಸಿಂಗ್ ಹಾಗೂ ಮನು ಭಾಕರ್ ಅವರು ಮಿಶ್ರ ವಿಭಾಗದಲ್ಲಿ ಗೆದ್ದಿದ್ದರು. ಇದೀಗ ಸ್ವಪ್ನಿಲ್ ಅವರು ಮತ್ತೊಂದು ಪದಕ ಗೆಲ್ಲುವ ಮೂಲಕ ಭಾರತಕ್ಕೆ ಮೂರನೇ ಪದಕ ತಂದುಕೊಟಿದ್ದಾರೆ. ಅಲ್ಲದೆ, ಈ ವಿಭಾಗದಲ್ಲಿ ಪದಕ ಗೆದ್ದ ಮೊದಲ ಭಾರತೀಯ ಶೂಟರ್ ಎಂಬ ಇತಿಹಾಸ ಬರೆದಿದ್ದಾರೆ. ಕುಸಾಲೆ 451.4 ಅಂಕ ಗಳಿಸಿ ಕಂಚು ಗೆದ್ದರೆ, ಚೀನಾದ ಯುಕುನ್ ಲಿಯು (ಚಿನ್ನ) ಮತ್ತು ಉಕ್ರೇನ್ನ ಸೆಹಿರ್ ಕುಲಿಶ್ ಬೆಳ್ಳಿ ಪದಕಕ್ಕೆ ಮುತ್ತಿಟ್ಟಿದ್ದಾರೆ. 8 ಮಂದಿ ಒಳಗೊಂಡಿದ್ದ ಫೈನಲ್ ಸುತ್ತಿನಲ್ಲಿ ಒಟ್ಟು 451.4 ಅಂಕಗಳನ್ನು ಕಲೆಹಾಕುವ ಮೂಲಕ ಭಾರತೀಯ ಶೂಟರ್ ಮೂರನೇ ಸ್ಥಾನ ಪಡೆದಿದ್ದಾರೆ. ಇನ್ನು 7ನೇ ಸ್ಥಾನದೊಂದಿಗೆ ಫೈನಲ್ ಪ್ರವೇಶಿಸಿದ್ದ ಸ್ವಪ್ನಿಲ್ ಕುಸಾಲೆ ಅಂತಿಮ ಸುತ್ತಿನಲ್ಲಿ ಅತ್ಯದ್ಭುತ ಪ್ರದರ್ಶನ ನೀಡಿದರು.


ಚೀನಾದ ಯುಕುನ್ ಲಿಯು ಚಿನ್ನ, ಉಕ್ರೇನ್‌ನ ಸೆಹಿರ್ ಕುಲಿಶ್ ಬೆಳ್ಳಿ, ಸ್ವಪ್ನಿಲ್ ಕಂಚು ಗೆದ್ದಿದ್ದಾರೆ.

ಗುರುವಾರ ನಡೆದ 50 ಮೀ. ರೈಫಲ್ 3 ಪೊಸಿಶನ್ ಫೈನಲ್‌ನಲ್ಲಿ ಸ್ವಪ್ನಿಲ್ ಅವರು 451.4 ಅಂಕ ಗಳಿಸಿ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಸ್ವಪ್ನಿಲ್ ಫೈನಲ್ ಪಂದ್ಯದ ಪ್ರೋನ್ನಲ್ಲಿ 156.8, ನೀಲಿಂಗ್‌ನಲ್ಲಿ 153.3 ಮತ್ತು ಸ್ಟ್ಯಾಂಡಿಂಗ್‌ನಲ್ಲಿ 195 ಅಂಕಗಳಿಸಿ ಮೂರನೇ ಸ್ಥಾನ ಪಡೆದು ಕಂಚಿನ ಪದಕ್ಕಕೆ ಕೊರಳೊಡ್ಡಿದರು. 463.6 ಅಂಕ ಗಳಿಸಿದ ಚೀನಾದ ಲಿಯು ಯುಕುನ್ ಚಿನ್ನ ಮತ್ತು ಉಕ್ರೇನ್‌ನ ಕುಲಿಶ್ ಸೆಹಿರ್(461.3) ಬೆಳ್ಳಿ ಪದಕ ಗೆದ್ದರು.

ಭೋಪಾಲ್‌ನಲ್ಲಿ ನಡೆದಿದ್ದ ಕೊನೆಯ ಅರ್ಹತಾ ಸುತ್ತಿನಲ್ಲಿ ಅವರು ಪ್ಯಾರಿಸ್ ಒಲಿಂಪಿಕ್ಸ್ ಅರ್ಹತೆ ಪಡೆದಿದ್ದರು.

2015ರ ಕುವೈತ್ ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್ ಜೂನಿಯರ್ ವಿಭಾಗದಲ್ಲಿ ಚಿನ್ನ, 59ನೇ ಹಾಗೂ 61ನೇ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲೂ ಚಿನ್ನ ಗೆದ್ದ ಸಾಧನೆ ಮಾಡಿದ್ದಾರೆ.

ದಾಖಲೆ ಬರೆದ ಸ್ವಪ್ನಿಲ್: 50 ಮೀ. ರೈಫಲ್ 3ಪಿ ಈವೆಂಟ್‌ನಲ್ಲಿ ಸ್ವಪ್ನಿಲ್ ಕಂಚು ಗೆಲ್ಲುವ ಮೂಲಕ ದಾಖಲೆ ಬರೆದಿದ್ದಾರೆ. ಈ ಬಾರಿಯ ಒಲಿಂಪಿಕ್ಸ್ ನಲ್ಲಿ ಶೂಟರ್‌ಗಳು ಒಂದಾದ ಮೇಲೊಂದು ದಾಖಲೆ ಬರೆಯುತ್ತಿದ್ದು, ಈ ಹಿಂದೆ ಮನು ಭಾಕರ್ 124 ವರ್ಷ ಹಿಂದಿನ ದಾಖಲೆ ಸರಿಗಟ್ಟಿದ್ದರು. ಅಲ್ಲದೆ ಸಿಂಗಲ್ಸ್‌ನಲ್ಲಿ ಕಂಚು ಗೆಲ್ಲುವ ಮೂಲಕ 10ಮೀ. ಏರ್ ಪಿಸ್ತೂಲ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಶೂಟರ್ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದರು. ಇದೀಗ ಅಂತಹದ್ದೇ ದಾಖಲೆಯೊಂದನ್ನು ಸ್ವಪ್ನಿಲ್ ಅವರು ಬರೆದಿದ್ದಾರೆ. ಗುರುವಾರ 50 ಮೀಟರ್ ರೈಫಲ್ 3ಪಿ ಈವೆಂಟ್‌ನಲ್ಲಿ ಕಂಚು ಗೆದ್ದ ಅವರು, ಈ ವಿಭಾಗದಲ್ಲಿ ಪದಕ ಗೆದ್ದ ಮೊದಲ ಭಾರತೀಯರಾಗಿದ್ದಾರೆ.

ಥಲಾ ಫಾರ್ ಎ ರೀಸನ್

ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರದ ಕಂಬಳವಾಡಿ ಗ್ರಾಮದ 28 ವರ್ಷದ ಸ್ವಪ್ನಿಲ್ ಕುಶಲೆ, ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಹಾಗೂ ಆಟಗಾರ ಮಹೇಂದ್ರ ಸಿಂಗ್ ಧೋನಿ ಅವರ ಅಪಟ್ಟ ಅಭಿಮಾನಿ. ಜತೆಗೆ ಧೋನಿಯಂತೆಯೇ ಇವರು ಕೂಡ ರೇಲ್ವೆ ಟಿಕೆಟ್ ನಿರೀಕ್ಷಕರಾಗಿ ಕಾರ್ಯನಿರ್ವಹಿಸಿದ್ದರು. ಧೋನಿಯವರ ಬಯೋಪಿಕ್ ಸಿನೆಮಾವನ್ನು ಪದೇ ಪದೇ ವೀಕ್ಷಿಸಿದ ಬಳಿಕ ಸ್ವಪ್ನಿಲ್ ಕೂಡ ಪೂರ್ಣಪ್ರಮಾಣದಲ್ಲಿ ಶೂಟಿಂಗ್‌ನಲ್ಲಿ ತೊಡಗಿಕೊಂಡರು. ಧೋನಿಯವರಂತೆ ಶಾಂತ ಸ್ವಾಭಾವದ ಈ ಶೂಟರ್ ಇದೀಗ ಒಲಿಂಪಿಕ್ಸ್ ಪದಕವೊಂದನ್ನು ಗೆದ್ದು ಇತಿಹಾಸದ ಪುಟ ಸೇರಿದ್ದಾರೆ.

ಸಮಾಚಾರ ಸಣ್ಣದಲ್ಲ

ಗಾಲ್ಫ್ ಆಟಗಾರ್ತಿಯ ಕಾರು ಅಪಘಾತ

ಪ್ಯಾರಿಸ್: ಒಲಿಂಪಿಕ್ಸ್‌ಗಾಗಿ ಫ್ರಾನ್ಸ್‌ಗೆ ತೆರಳಿದ್ದ ಭಾರತೀಯ ಗಾಲ್ಫ್ ಆಟಗಾರ್ತಿ ದೀಕ್ಷಾ ದಾಗರ್ ಪ್ಯಾರಿಸ್‌ನಲ್ಲಿ ಕಾರು ಅಪಘಡಕ್ಕೆ ಒಳಗಾಗಿದ್ದು, ಅನಾಹುತದಿಂದ ಪಾರಾಗಿದ್ದಾರೆ. ಮಂಗಳವಾರ ಅವಘಡ ಸಂಭವಿಸಿದ್ದು, ಈ ವೇಳೆ ಅವರ ಪೋಷಕರು ಮತ್ತು ಸಹೋದರ ಕಾರಿನಲ್ಲಿದ್ದರು ಎಂದು ಮೂಲ ಗಳು ತಿಳಿಸಿವೆ. ದೀಕ್ಷಾ ಮತ್ತು ಆಕೆಯ ತಂದೆ ಸ್ವಲ್ಪವೂ ಗಾಯ ಗಳು ಇಲ್ಲದೇ ಪಾರಾಗಿದ್ದಾರೆ. ಆದರೆ ತಾಯಿ ಬೆನ್ನುನೋವಿಗೆ ಒಳಗಾಗಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ. ಅಪಘಾತದ ಸಮಯದಲ್ಲಿ ದೀಕ್ಷಾ ಅವರ ಸಹೋದರನಿಗೆ ತರಚು ಗಾಯಗಳಾಗಿವೆ. ಅನಾಹುತದಿಂದ ದೀಕ್ಷಾ ಅವರು ಪಾರಾಗಿದ್ದು, ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳಾ ವೈಯಕ್ತಿಕ ಗಾಲ್ಫ್ ಸ್ಪರ್ಧೆಗೆ ಇಳಿಯುವುದಾಗಿ ಹೇಳಿದ್ದಾರೆ. ದೀಕ್ಷಾ ಅವರ ಸ್ಪರ್ಧೆ ಆ.7ರಂದು ಪ್ರಾರಂಭವಾಗಲಿದೆ.

ಕ್ರೀಡಾಗ್ರಾಮಕ್ಕೆ ಕಳ್ಳರ ಭೀತಿ

ಪ್ಯಾರಿಸ್: ಒಲಿಂಪಿಕ್ಸ್ ಕ್ರೀಡಾಗ್ರಾಮದಲ್ಲಿ ಕಳ್ಳರ ಹಾವಳಿ ಹೆಚ್ಚಾಗಿದ್ದು, ನಗರದ ಉತ್ತರಭಾಗದಲ್ಲಿರುವ ಕ್ರೀಡಾಗ್ರಾಮದಲ್ಲಿದ್ದ ಜಪಾನ್‌ನ ರಗ್ಬಿ ಸೆವೆನ್ ಆಟಗಾರನೊಬ್ಬನ ಕೊಠಡಿಯಿಂದ ಉಂಗುರ, ಸರ ಮತ್ತು ನಗದು ಕಳವು ಮಾಡಲಾ ಗಿದೆ ಎಂದು ಕ್ಯೊಡೊ ನ್ಯೂಸ್ ಏಜನ್ಸಿ ವರದಿ ಮಾಡಿತ್ತು. ಜುಲೈ 24ರಂದು ಮೊದಲ ಫುಟ್‌ಬಾಲ್ ಪಂದ್ಯ ಆಡುವ ಹಿಂದಿನ ದಿನ ತಮ್ಮ ಕೆಲವು ಆಟಗಾರರ ವಸ್ತುಗಳನ್ನು ದೋಚಲಾಗಿತ್ತು ಎಂದು ಅರ್ಜೆಂಟೀನಾ ಫುಟ್‌ಬಾಲ್ ತಂಡದ ಹೆಡ್ ಕೋಚ್ ಜೇವಿಯರ್ ಮಸ್ಕರೇನೊ ದೂರಿದ್ದರು. ಈ ಬಗ್ಗೆ ಕ್ರಮ ಕೈಗೊಂಡಿದ್ದು, ಈ ಪ್ರಕರಣಗಳನ್ನು ಪೊಲೀಸರಿಗೆ ಒಪ್ಪಿಸಲಾಗಿದೆ' ಎಂದು ಪ್ಯಾರಿಸ್ ವಕ್ತಾರ ಆಯನ್ ಡೆಷಾಂಪ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ನಾವು ಅಥ್ಲೀಟ್‌ಗಳ, ವಿದೇಶಿ ನಿಯೋಗಗಳ ಪರ ನಿಲ್ಲುತ್ತೇವೆ. ಕ್ರೀಡಾ ಗ್ರಾಮ ಸುರಕ್ಷಿತ ಸ್ಥಳವಾಗಿದೆ. 180 ಸೆಕ್ಯುರಿಟಿ ಕ್ಯಾಮೆರಾಗಳಿವೆ ಎಂದರು. ಆದರೆ ಎಷ್ಟು ಮಂದಿ ಭದ್ರತಾ ಸಿಬ್ಬಂದಿ ಇದ್ದಾರೆ ಎಂದು ತಕ್ಷಣಕ್ಕೆ ತಿಳಿಸಲಿಲ್ಲ. 128.5 ಎಕರೆ ಪ್ರದೇಶದಲ್ಲಿರುವ ಕ್ರೀಡಾ ಗ್ರಾಮದಲ್ಲಿ 14,000 ಮಂದಿ ವಾಸ್ತವ್ಯ ಹೂಡಿದ್ದಾರೆ.

ಇಂದು ಕಣದಲ್ಲಿ

- ಅಥ್ಲೆಟಿಕ್ಸ್: ಮಹಿಳೆಯರ 5000ಮೀ: ಬೆಳಿಗ್ಗ 9.40 ಗಂಟೆಗೆ
- ಪುರುಷರ ಶಾಟ್ಪುಟ್: ಬೆಳಿಗ್ಗ 11.40, ಪುರುಷರ ಗಾಲ್ಫ್: 12:30
- ಶೂಟಿಂಗ್: ಮಹಿಳೆಯರ 25 ಮೀ ಪಿಸ್ತೂಲ್: 12.30
- ಆರ್ಚರಿ: ಮಿಶ್ರ ಡಬಲ್ಸ್: 1.20
- ರೋಯಿಂಗ್: ಪುರುಷರ ಫೈನಲ್: 1:48
- ಕುಸ್ತಿ: ಮಹಿಳೆಯರ 78 ಕೆಜಿ: 2.12
- ಹಾಕಿ: ಭಾರತ ಹಾಗೂ ಆಸ್ಟ್ರೇಲಿಯಾ: ಸಂಜೆ 4.30
- ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್: 6.3

ಹರ್ಮನ್‌ಪ್ರೀತ್ ಪಡೆಗೆ ಬೆಲ್ಜಿಯಂ ವಿರುದ್ಧ 2-1 ಗೋಲುಗಳಿಂದ ಸೋಲು

ಹಾಕಿ: ಮೊದಲ ಸೋಲುಂಡ ಭಾರತ

ಪ್ಯಾರಿಸ್: ಲೀಗ್ ಹಂತದ ಪಂದ್ಯದಲ್ಲಿ 2 ಗೆಲುವು ಹಾಗೂ 1 ಡ್ರಾ ಮಾಡಿಕೊಂಡ ಭಾರತದ ಪುರುಷರ ಹಾಕಿ ತಂಡ ಮೊದಲ ಸೋಲು ಕಂಡಿದೆ. ಗುರುವಾರ ನಡೆದ ಪೂಲ್-ಬಿ ಗುಂಪು ಹಂತದ ಪಂದ್ಯದಲ್ಲಿ ಬೆಲ್ಜಿಯಂ ವಿರುದ್ಧ 2-1 ಗೋಲುಗಳ ಅಂತರದಿಂದ ಭಾರತ ಸೋತಿದೆ. 2020ರ ಟೋಕಿಯೊ ಕಂಚಿನ ಪದಕ ವಿಜೇತ ಭಾರತ ಹಾಕಿ ತಂಡ ಈ ಹಿಂದಿನ 3 ಪಂದ್ಯಗಳಲ್ಲಿ 2 ಅನ್ನು ಗೆದ್ದಿತ್ತು. ಮೊದಲು ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ 3-2 ರಿಂದ ಗೆದ್ದಿತ್ತು. ಇದಾದ ಬಳಿಕ ಐರ್ಲೆಂಡ್ ವಿರುದ್ಧ 2-0 ಅಂತರದಿಂದ ಗೆಲುವು ಸಾಧಿಸಿದರೆ, ಅರ್ಜೆಂಟೀನಾ ಎದುರು 1-1 ಗೋಲುಗಳಿಂದ ಪಂದ್ಯವನ್ನು ಭಾರತ ಡ್ರಾ ಮಾಡಿಕೊಂಡಿತ್ತು.

ಆದರೆ ಇದೀಗ ಸೋಲನುಭವಿಸಿದ ಭಾರತ ಬೆಲ್ಜಿಯಂ ವಿರುದ್ಧದ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಮೊದಲಾರ್ಧದಲ್ಲಿ 1-0 ಗೋಲುಗಳಿಂದ ಮುನ್ನಡೆ ಸಾಧಿಸಿತ್ತು. ಸ್ಟಾರ್ ಫಾರ್ವಡ್‌ರ್ ಅಭಿಷೇಕ್ 18ನೇ ನಿಮಿಷದಲ್ಲಿ ಮೊದಲ ಗೋಲು ಗಳಿಸುವ ಮೂಲಕ ಭಾರತಕ್ಕೆ ಮುನ್ನಡೆ ತಂದು ಕೊಟ್ಟರು. ಆದರೆ, ಭಾರತ ತನ್ನ ಮುನ್ನಡೆ ಕಾಯ್ದು ಕೊಳ್ಳುವಲ್ಲಿ ವಿಫಲವಾಯಿತು. ಮೂರನೇ ಕ್ವಾರ್ಟರ್‌ನಲ್ಲಿ ಬೆಲ್ಜಿಯಂನ ಥಿಬ್ಯೂ ಮತ್ತು ಜಾನ್-ಜಾನ್ ಡೊಹ್ಮೆನ್ ಎರಡು ಗೋಲು ಗಳಿಸಿದರು. ಪರಿಣಾಮ ಬೆಲ್ಜಿಯಂ ತಂಡವು 2-1 ಗೋಲುಗಳಿಂದ ಗೆಲುವು ಸಾಧಿಸಿತು. ಇದಾದ ಬಳಿಕ ಭಾರತ ಗೋಲು ಗಳಿಸುವಲ್ಲಿ ಯಶಸ್ವಿಯಾಗಲಿಲ್ಲ. ಕೊನೆಯಲ್ಲಿ ಬೆಲ್ಜಿಯಂ ಎದುರು ಭಾರತ ಸೋಲನ್ನು ಒಪ್ಪಿಕೊಳ್ಳಬೇಕಾಯಿತು. ಈ ಗೆಲುವಿನೊಂದಿಗೆ ಹಾಲಿ ಒಲಿಂಪಿಕ್ ಚಾಂಪಿಯನ್ ಬೆಲ್ಜಿಯಂ ತನ್ನ ಗೆಲುವಿನ ಓಟವನ್ನು ಮುಂದುವರಿಸಿದ್ದು, ಈ ಗೆಲುವು ದಾಖಲಿಸುವ ಮೂಲಕ ಕ್ವಾರ್ಟರ್‌ಫೈನಲ್ ಖಚಿತಪಡಿಸಿಕೊಂಡಿದೆ. ಮತ್ತೊಂದೆಡೆ ಬೆಲ್ಜಿಯಂ ವಿರುದ್ಧ ಸೋಲು ಕಂಡ ಭಾರತವು ಕ್ವಾರ್ಟರ್ ಫೈನಲ್‌ಗೆ ತಲುಪಿದೆ. ಬಿ ಗುಂಪಿನಲ್ಲಿ ಭಾರತವು ಅಗ್ರ4ರಲ್ಲಿ ಉಳಿಯುವುದು ಖಚಿತವಾಗಿದೆ.

ಬಾಕ್ಸಿಂಗ್‌ನಲ್ಲಿ ಮಿಂಚುತ್ತಿರುವ ಭಾರತೀಯರು | ಜರೀನ್‌ಗೆ ನಿರಾಸೆ

ಕ್ವಾ.ಫೈನಲ್‌ಗೆ ನಿಶಾಂತ್ ದೇವ್

ಪ್ಯಾರಿಸ್: ಭಾರತದ ಬಾಕ್ಸರ್ ನಿಶಾಂತ್ ದೇವ್ ಅವರು ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಭರ್ಜರಿ ಗೆಲುವು ಸಾಧಿಸಿದ್ದು, ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಆ ಮೂಲಕ ಭಾರತ ಇನ್ನೊಂದು ಪದಕಕ್ಕೆ ಹತ್ತಿರವಾಘಿದ್ದು ಒಂದುವೇಳೆ ಅವರು ಗೆಲುವು ಸಾಧಿಸಿದರೆ ಪದಕವೊಂದು ಖಾತ್ರಿಯಾಗಲಿದೆ. ಬುಧವಾರ ತಡರಾತ್ರಿ ನಡೆದ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜೋಸ್ ಗೇಬ್ರಿಯಲ್ ರೊಡ್ರಿಗಸ್ ಟೆನೊರಿಯೊ ಅವರನ್ನು 3-2 ಅಂತರದಿಂದ ಮಣಿಸಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟರು. ಇತ್ತೀಚೆಗೆ ನಡೆದಿದ್ದ ಕಾಮನ್ವೆಲ್ತ್, ವಿಶ್ವಚಾಂಪಿಯನ್‌ಶಿಪ್ ಪಂದ್ಯಗಳಲ್ಲಿ ಗೆಲುವು ಸಾಧಿಸಿ ನಿರೀಕ್ಷೆ ಮೂಡಿಸಿದ್ದ ಅವರು, ಇದೀಗ ಕ್ವಾರ್ಟರ್‌ಫೈನಲ್‌ಗೆ ತಲಪುವ ಮೂಲಕ ಪದಕದ ನಿರೀಕ್ಷೆ ಇನ್ನಷ್ಟು ಹೆಚ್ಚಿಸಿದ್ದಾರೆ. ಮುಂದಿನ ಪಂದ್ಯದಲ್ಲಿ ನಿಶಾಂತ್, ಮೊಜಾಂಬಿಕ್‌ನ ಟಿ ಮುಕಾಂಗಾ ಮತ್ತು ಮೆಕ್ಸಿಕೊದ ಎಂಎ ವರ್ಡೆ ಅಲ್ವಾರೆಜ್ ನಡುವಣ ವಿಜೇತರನ್ನು ಎದುರಿಸಲಿದೆ. ತೀವ್ರ ಪೈಪೋಟಿಯಿಂದ ಸಾಗಿದ ಈ ಪಂದ್ಯದಲ್ಲಿ ಉಭಯ ಬಾಕ್ಸರ್‌ಗಳು ಬಲಿಷ್ಠ ಪಂಚ್‌ಗಳ ಮೂಲಕ ಗೆಲುವಿಗಾಗಿ ಹೋರಾಟ ನಡೆಸಿದರು.

ಕೊನೆಗೂ ನಿಶಾಂತ್ ದೇವ್ 7ನೇ ಶ್ರೇಯಾಂಕದ ಆಟಗಾರರನ್ನು ಕೇವಲ 1(3-2) ಅಂಕದ ಅಂತರದಿಂದ ಮಣಿಸಿದರು.

ನಿರಾಸೆ ಮೂಡಿಸಿದ ನಿಖತ್ ಜರೀನ್

ವಿಶ್ವ ಚಾಂಪಿಯನ್, ನಿಖತ್ ಜರೀನ್ ಅವರು ಒಲಿಂಪಿಕ್ಸ್‌ನ ಮಹಿಳೆಯರ 50 ಕೆಜಿ ಬಾಕ್ಸಿಂಗ್ ವಿಭಾಗದ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸೋಲುಂಡಿದ್ದು, ತಮ್ಮ ಅಭಿಯಾನವನ್ನು ಮುಗಿಸಿದ್ದಾರೆ. ಗುರುವಾರ ನಡೆದ ಮಹಿಳೆಯರ 50 ಕೆಜಿ ಬಾಕ್ಸಿಂಗ್ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನಿಖತ್ ಜರೀನ್ ಅವರು ಅಗ್ರ ಶ್ರೇಯಾಂಕದ, ಚೀನಾದ ವು ಯು ವಿರುದ್ಧ 5-0 ಅಂತರದ ಹೀನಾಯ ಸೋಲು ಕಂಡರು. 32ರ ಘಟ್ಟದ ಪಂದ್ಯದಲ್ಲಿ ಜರೀನ್ ಜರ್ಮನಿಯ ಮ್ಯಾಕ್ಸಿ ಕ್ಯಾರಿನಾ ಕ್ಲೋಟ್ಜರ್ ಅವರನ್ನು 5-0 ಅಂತರದಿಂದ ಮಣಿಸಿ ಅಂತಿಮ 16ರ ಸುತ್ತಿಗೇರಿದ್ದರು. ಆದರೆ, ಈ ಸುತ್ತಿನಲ್ಲಿ ಇದೇ ಪ್ರಾಬಲ್ಯ ಮೆರೆಯುವಲ್ಲಿ ವಿಫಲರಾದರು. ಲವ್ಲಿನಾ ಮಾತ್ರ ಇನ್ನು ಭಾರತದ ಮಹಿಳಾ ಬಾಕ್ಸಿಂಗ್ ಪದಕ ಭರವಸೆ ಆಗಿದ್ದಾರೆ.

ಕ್ವಾ. ಫೈನಲ್‌ಗೇರಿದ ಲಕ್ಷ್ಯಸೇನ್ | ಸೋತ ಸಾತ್ವಿಕ್-ಚಿರಾಗ್ ಜೋಡಿಗೆ ಆಘಾತ

ಸೇನ್ ಪದಕಕ್ಕೆ ಒಂದೇ ಹೆಜ್ಜೆ ಬಾಕಿ

ಪ್ಯಾರಿಸ್: ಬ್ಯಾಡ್ಮಿಂಟನ್‌ನ 16 ನೇ ಸುತ್ತಿನ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಲಕ್ಷ್ಯ ಸೇನ್ ಅವರು 21-12, 21-6 ರಿಂದ ಎಚ್.ಎಸ್ ಪ್ರಣಯ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ್ದು, ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿದ್ದಾರೆ. ಈ ಹಿಂದಿನ ಪಂದ್ಯಗಳಲ್ಲಿ ಯಾವುದೇ ಪಂದ್ಯದಲ್ಲಿ ಸೋಲದೆ, ಗೆಲುವು ಸಾಧಿಸಿದ್ದ ಅವರು, ಸತತ ಮೂರನೇ ಪಂದ್ಯವನ್ನು ಗೆಲ್ಲುವ ಮೂಲಕ ಅಗ್ರ 8ರ ಘಟ್ಟಕ್ಕೆ ತಲುಪಿದ್ದಾರೆ.

ಎರಡು ಬಾರಿ ಯೂತ್ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದಿರುವ ಸೇನ್ ಅವರು, ಕ್ವಾರ್ಟರ್‌ಫೈನಲ್‌ನಲ್ಲಿ 12ನೇ ಶ್ರೇಯಾಂಕದ ಚೈನೀಸ್ ತೈಪೆಯ ಚೌ ಟಿಯೆನ್ ಚೆನ್ ಅವರನ್ನು ಎದುರಿಸಲಿದ್ದಾರೆ. ಗುರುವಾರ ನಡೆದ ಪಂದ್ಯದಲ್ಲಿ ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಪ್ರಣಯ್ ಅವರು ಸೇನ್ ಅವರಿಗೆ ಶರಣಾದರು. ಇದಕ್ಕೂ ಮುನ್ನ ಸೇನ್ ಎಲ್ ಗುಂಪಿನಲ್ಲಿ ಜೊನಾಟನ್ ಕ್ರಿಸ್ಟಿ ಮತ್ತು ಜೂಲಿಯನ್ ಕರಾಗ್ಗಿ ಅವರನ್ನು ಸೋಲಿಸಿದರು. ಮತ್ತೊಂದೆಡೆ, 28ರ ಹರೆಯದ ಪ್ರಣಯ್, ಕೆ ಗುಂಪಿನಲ್ಲಿ ಫ್ಯಾಬಿಯನ್ ರೋತ್ ಮತ್ತು ಲೆ ಡಕ್ ಫಾಟ್ ಅವರನ್ನು ಸೋಲಿಸಿದರು. ಇಬ್ಬರೂ ಗುಂಪು ವಿಜೇತರಾಗಿ ಪ್ರಿ ಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಇಟ್ಟಿದ್ದರು.

ಸ್ಕೋರ್: ಪುರುಷರ ಸಿಂಗಲ್ಸ್ 16ನೇ ಸುತ್ತಿನ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಲಕ್ಷ್ಯ ಸೇನ್ 21-12, 21-6 ರಿಂದ ಎಚ್.ಎಸ್.ಪ್ರಣಯ್ ಅವರನ್ನು ಸೋಲಿಸಿದರು.

ಸೋತ ಸಾತ್ವಿಕ್-ಚಿರಾಗ್ ಜೋಡಿ: ಲೀಗ್ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ತೋರುವ ಮೂಲಕ ಪುರುಷರ ಡಬಲ್ಸ್ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ್ದ 0ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ನಿರಾಸೆ ಅನುಭವಿಸಿದ್ದು, ಕ್ವಾರ್ಟರ್‌ಫೈನಲ್‌ನಲ್ಲಿ ಮಲೇಷ್ಯಾದ ಆರೋನ್ ಚಿಯಾ ಮತ್ತು ಸೊಹ್ ವೂಯಿ ಯಿಕ್ ವಿರುದ್ಧ 21-13, 14-21, 16-21 ರಿಂದ ಸೋಲನುಭವಿಸಿದ್ದಾರೆ.

ಟೋಕಿಯೊ 2020 ಕಂಚಿನ ಪದಕ ವಿಜೇತರಾದ ಮೂರನೇ ಶ್ರೇಯಾಂಕದ ಚಿಯಾ-ಸೋಹ್ ಸತತ ಎರಡನೇ ಬಾರಿಗೆ ಸೆಮಿಫೈನಲ್‌ಗೆ ಪ್ರವೇಶಿಸಿದ್ದಾರೆ. ಮೊದಲಿಗೆ ಭರ್ಜರಿ ಪ್ರದರ್ಶನ ತೋರುವ ಮೂಲಕ ಮುನ್ನಡೆ ಸಾಧಿಸಿದ್ದ ಸಾತ್-ಚಿ ಜೋಡಿ ಕೊನೆಯಲ್ಲಿ ನಿರಾಸೆ ಮೂಡಿಸಿತು. ಮೊದಲ ಸೆಟ್‌ನಲ್ಲಿ ಭಾರತದ ಜೋಡಿ ಮೇಲುಗೈ ಸಾಧಿಸಿತ್ತು. ಆದಾಗ್ಯೂ, ಚಿಯಾ-ಸೋಹ್, ಎರಡನೇ ಹಾಗೂ ಮೂರನೇ ಸೆಟ್‌ಗಳಲ್ಲಿ ಗೆಲ್ಲುವ ಮೂಲಕ ಪಂದ್ಯವನ್ನು ಗೆದ್ದರು. ಮೂಲಕ ಮಲೇಷ್ಯಾ ಜೋಡಿಯು ಸಾತ್ವಿಕ್-ಚಿರಾಗ್ ವಿರುದ್ಧ ತಮ್ಮ ಒಂಬತ್ತನೇ ಗೆಲುವನ್ನು ದಾಖಲಿಸಿತು. ಕಳೆದ ವರ್ಷ ಏಷ್ಯನ್ ಕ್ರೀಡಾಕೂಟದಲ್ಲಿ, ಸಾತ್ವಿಕ್-ಚಿರಾಗ್ ಸೆಮಿಫೈನಲ್‌ನಲ್ಲಿ ಚಿಯಾ-ಸೋಹ್ ಅವರನ್ನು ಸೋಲಿಸಿದರು. ಆದಾಗ್ಯೂ, ಈ ಮುಖಾಮುಖಿಯಲ್ಲಿ ಭಾರತದ ಜೋಡಿಯು ಗೆಲುವು ಸಾಧಿಸಲು ಸಾಧ್ಯವಾಗಲಿಲ್ಲ. ಚಿಯಾ-ಸೋಹ್ ಅವರು ಸೆಮಿಸ್‌ನಲ್ಲಿ ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದ ಅಗ್ರ ಶ್ರೇಯಾಂಕದ ಲಿಯಾಂಗ್ ವೀ ಕೆಂಗ್ ಮತ್ತು ವಾಂಗ್ ಚಾಂಗ್ ಅವರನ್ನು ಎದುರಿಸಲಿದ್ದಾರೆ.

ಸ್ಕೋರ್: ಪುರುಷರ ಡಬಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ-ಚಿರಾಗ್ ಶೆಟ್ಟಿ 21-13, 14-21, 16-21 ರಿಂದ ಆರೋನ್ ಚಿಯಾ-ಸೋಹ್ ವೂಯಿ ಯಿಕ್ ವಿರುದ್ಧ ಸೋತರು.

ಅಥ್ಲೆಟಿಕ್ಸ್: ಮೊದಲ ದಿನ ಭಾರತಕ್ಕೆ ನಿರಾಸೆ

ಪ್ಯಾರಿಸ್: ಒಲಿಂಪಿಕ್ಸ್‌ನಲ್ಲಿ ಅಥ್ಲೆಟಿಕ್ಸ್ ಕೂಟ ಶುರುವಾಗಿದ್ದು, ಮೊದಲ ದಿನದಲ್ಲಿ ಭಾರತ ನಿರಾಸೆ ಅನುಭವಿಸಿದೆ. ಕಳೆದ ಬಾರಿ ಮಿಂಚಿದ್ದ ಅಥ್ಲೀಟ್‌ಗಳು ಈ ಬಾರಿ ಹೆಚ್ಚಿನ ನಿರೀಕ್ಷೆ ಮೂಡಿಸಿದ್ದರು. ಭಾರತದ ಓಟಗಾರ ವಿಕಾಸ್ ಸಿಂಗ್ ಅವರು ಪುರುಷರ 20 ಕಿಮೀ ಓಟದ ನಡಿಗೆಯಲ್ಲಿ ನಿರಾಸೆ ಮೂಡಿಸಿದ್ದು, 1:22:36ರಲ್ಲಿ ನಡಿಗೆಯನ್ನು ಪೂರ್ಣಗೊಳಿಸುವ ಮೂಲಕ 30ನೇ ಶ್ರೇಯಾಂಕವನ್ನು ಪಡೆದರು. ಗುರುವಾರ ಟ್ರೊಕಾಡೆರೊದಲ್ಲಿ ನಡೆದ ಸ್ಪರ್ಧೆಯಲ್ಲಿ ಭಾರತದ ಮೂವರು ಅಥ್ಲೀಟ್‌ಗಳ ಪೈಕಿ ವಿಕಾಸ್ ಸಿಂಗ್ ಅತ್ಯಂತ ವೇಗದ ಓಟಗಾರ ರಾಗಿದ್ದಾರೆ. ಕಳೆದ ವರ್ಷ ಏಷ್ಯನ್ ಕ್ರೀಡಾಕೂಟದಲ್ಲಿ ಐದನೇ ಸ್ಥಾನ ಗಳಿಸಿದ್ದರು. ಪರಮ್‌ಜೀತ್ ಸಿಂಗ್ ಬಿಶ್ತ್ ತಮ್ಮ ಚೊಚ್ಚಲ ಒಲಿಂಪಿಕ್‌ನಲ್ಲಿ 1:23:48 ಸಮಯದೊಂದಿಗೆ 37 ನೇ ಸ್ಥಾನ ಗಳಿಸಿದ್ದಾರೆ. ಇನ್ನು ರಾಷ್ಟ್ರೀಯ ದಾಖಲೆ ಹೊಂದಿರುವ ಅಕ್ಷ ದೀಪ್ ಸಿಂಗ್ ಅವರು 6 ಕಿಲೋಮೀಟರ್ ದೂರದ ನಂತರ ತಲೆಬಾಗಿದ ಕಾರಣ ಪೂರ್ಣಗೊಳಿಸಲಿಲ್ಲ. ಈಕ್ವೆಡಾರ್ನ ಬ್ರಿಯಾನ್ ಡೇನಿಯಲ್ ಪಿಂಟಾಡೊ 1:18:55 ಸಮಯದೊಂದಿಗೆ ಚಿನ್ನದ ಪದಕ ಗೆದ್ದರು. ಬ್ರೆಜಿಲ್‌ನ ಕೈಯೊ ಬೊನ್ಫಿಮ್ (1:19:09) ಮತ್ತು ಸ್ಪೇನ್‌ನ ಅಲ್ವಾರೊ ಮಾರ್ಟಿನ್ (1:19:11) ಕ್ರಮವಾಗಿ ಬೆಳ್ಳಿ, ಕಂಚಿನ ಪದಕ ಗೆದ್ದಿದ್ದಾರೆ.

ಮಹಿಳಾ ವಿಭಾಗದಲ್ಲಿ

ಭಾರತದ ಮಹಿಳಾ ಓಟಗಾರ್ತಿ ಪ್ರಿಯಾಂಕಾ ಗೋಸ್ವಾಮಿ ಅವರು ನಿರಾಸೆ ಮೂಡಿಸಿದ್ದು, 20 ಕಿ.ಮೀ ಓಟದ ನಡಿಗೆಯಲ್ಲಿ 41ನೇ ಸ್ಥಾನ ಪಡೆದಿದ್ದಾರೆ. ಗುರುವಾರ ನಡೆದ ಸ್ಪರ್ಧೆಯಲ್ಲಿ ಅವರು, 1:39:55 ಸಮಯದಲ್ಲಿ ಓಟವನ್ನು ಪೂರ್ಣಗೊಳಿಸಿದರು. ಆ ಮೂಲಕ ಅವರು 41ನೇ ಶ್ರೇಯಾಂಕವನ್ನು ಪಡೆದುಕೊಂಡಿದ್ದಾರೆ.